ಕಲಬುರಗಿ Kalaburagi | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಮಂಗಳೂರು Mangaluru | ದಾವಣಗೆರೆ Davanagere | ಬಾಗಲಕೋಟೆ Bagalakote | ಬೆಳಗಾವಿ Belagavi | ಸಂಪುಟ Volume 28 | ಸಂಚಿಕೆ Issue 16 | ಪುಟ Pages 10 | ಮಂಗಳವಾರ 5 ಮೇ 2026 | RNI REGN NO. KARKAN/1999/2674 | www.epaper.samyukthakarnataka.com | Samyuktha Karnataka | @samyuktakarnat2 | ₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ

ಕನ್ನಡಿಗರ ಸಾಕ್ಷಿಪ್ರಜ್ಞೆ

samyuktha karnataka

ಪಂಚರಾಜ್ಯಗಳಲ್ಲಿ ಬಿಜೆಪಿಗೆ 3 ಕಾಂಗ್ರೆಸ್‌ಗೆ 1 ಟಿವಿಕೆಗೆ 1

ಮಮತಾ ಗರ್ವಭಂಗ | ಪಶ್ಚಿಮದಲ್ಲಿ ಅರಳಿದ ಅಪೂರ್ವ ಕಮಲ

ಬಂಗಾಳದಲ್ಲೂ SIR ಮೋದಿ!

3 ಪ್ರಯತ್ನ ಬಳಿಕ ವಂಗದೇಶದಲ್ಲಿ ಬಿಜೆಪಿ ಜಯಭೇರಿ | ನಿರ್ಣಾಯಕ ಪಾತ್ರವಹಿಸಿದ ಮತಪಟ್ಟಿ ಪರಿಷ್ಕರಣೆ

ತಮಿಳುನಾಡಿನಲ್ಲಿ ದಳಪತಿ ವಿಜಯ್ ದರ್ಬಾರ್ | ಹೀನಾಯ ಸೋಲುಂಡ ಸ್ಟಾಲಿನ್ ನೇತೃತ್ವದ ಡಿಎಂಕೆ

ಕೇರಳದಲ್ಲಿ ಪಿಣರಾಯಿ 10 ವರ್ಷಗಳ ಆಡಳಿತ ಅಂತ್ಯ | ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಗೆಲುವು

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್: ಹಿಮಂತ ಮ್ಯಾಜಿಕ್ | ಪುದುಚೇರಿಗೆ ಮತ್ತೆ ಎನ್‌ಡಿಎ: RX100 ರಂಗಸ್ವಾಮಿ ಕಮಾಲ್

ಸಂ.ಕ.ಸಮಾಚಾರ, ನವದೆಹಲಿ

ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಪುದುಚೆರಿ ಮತ್ತು ಅಸ್ಸಾಂ ವಿಧಾನಸಭೆಗೆ ನಡೆದ ಚುನಾವಣೆ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಜಯ ಸಾಧಿಸಿ ಅಚ್ಚರಿ ಮೂಡಿಸಿದೆ.

ತಮಿಳುನಾಡಿನಲ್ಲಿ ವಿಜಯ್ ನೇತೃತ್ವದ ಟಿವಿಕೆ ಕೂಡ ಅಚ್ಚರಿಯ ಜಯ ಸಾಧಿಸಿದ್ದರೆ, ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹಾಗೂ ಅಸ್ಸಾಂ ಮತ್ತು ಪುದುಚೆರಿಗಳಲ್ಲಿ ಎನ್‌ಡಿಎ ಗೆದ್ದಿದೆ.

ತಮಿಳುನಾಡಿನಲ್ಲಿ ನಟ ವಿಜಯ್ ನೇತೃತ್ವದ ಹೊಸ ಪಕ್ಷ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ. ಒಟ್ಟು 234 ಸ್ಥಾನಗಳ ತಮಿಳುನಾಡು ವಿಧಾನಸಭೆಯ ಬಹುಮತಕ್ಕೆ 118 ಸ್ಥಾನಗಳ ಅಗತ್ಯವಿದ್ದು, ಬಹುಮತಕ್ಕೆ ಟಿವಿಕೆಗೆ ಕೆಲವೇ ಸ್ಥಾನಗಳ ಕೊರತೆ ಇದೆ. ಆಡಳಿತವಿರೋಧಿ ಅಲೆಯ ಲಾಭ ಮಾಡಿಕೊಳ್ಳುವಲ್ಲಿ ವಿಜಯ್ ಯಶಸ್ವಿಯಾಗಿದ್ದಾರೆ. ಆಡಳಿತಾರೂಢ ಡಿಎಂಕೆ ಹೀನಾಯ ಸೋಲು ಕಂಡಿದೆ. ರಾಜಕೀಯ ಪಕ್ಷ ಸ್ಥಾಪಿಸಿದ ಎರಡೇ ವರ್ಷಗಳಲ್ಲಿ ಆಂಧ್ರ ಪ್ರದೇಶದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಯಶಸ್ವಿಯಾಗಿದ್ದ ನಟ ಎನ್‌ಟಿಆರ್ ರೀತಿಯಲ್ಲೇ ವಿಜಯ್ ಕೂಡ ಸಾಧನೆ ಮಾಡಿದ್ದಾರೆ ಎನ್ನುವುದು ವಿಶೇಷ. ಡಿಎಂಕೆ ಭದ್ರಕೋಟೆ ಎನ್ನಿಸಿದ್ದ ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ವಿ.ಎಸ್.ಬಾಬು ಎದುರು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ 8000 ಮತಗಳ ಅಂತರದಿಂದ ಸೋತಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಒಟ್ಟು 294 ಸ್ಥಾನಗಳ ಪೈಕಿ ಬಿಜೆಪಿ 200ಕ್ಕೂ ಹೆಚ್ಚು ಸ್ಥಾನಗಳಲ್ಲಿ ಭಾರೀ ಬಹುಮತದಿಂದ ವಿಜಯ ಸಾಧಿಸಿದ್ದು, ಐತಿಹಾಸಿಕ ದಾಖಲೆಯಾಗಿದೆ. ಸ್ವಾತಂತ್ರ್ಯ ಬಂದ ನಂತರ ಮೊದಲ ಬಾರಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಜನ ಅಧಿಕಾರ ನೀಡಿದ್ದಾರೆ. ನಂದಿಗ್ರಾಮ ಮತ್ತು ಭವಾನಿಪುರ ಕ್ಷೇತ್ರಗಳಿಂದ ಕಣಕ್ಕಿಳಿದಿದ್ದ ಬಿಜೆಪಿ ನಾಯಕ ಸುವೇಂದು ಅಧಿಕಾರಿ, ನಂದಿಗ್ರಾಮದಲ್ಲಿ ಜಯ ಗಳಿಸಿದ್ದಾರೆ. ಹಾಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಕ್ಷೇತ್ರದಲ್ಲೇ ಸೋಲನುಭವಿಸಿದ್ದಾರೆ.

ಕೇರಳದಲ್ಲಿ ಒಂದು ಬಾರಿ ಎಲ್‌ಡಿಎಫ್ ಮತ್ತೊಂದು ಬಾರಿ ಯುಡಿಎಫ್ ಗೆಲ್ಲಿಸುವ ಸಂಪ್ರದಾಯವನ್ನು ಈ ಬಾರಿಯೂ ಮತ ದಾರ ಪಾಲಿಸಿದ್ದಾನೆ. ಅಧಿಕಾರಾರೂಢ ಎಡರಂಗವನ್ನು ಸೋಲಿಸಿ, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಈ ಬಾರಿ ಅಧಿಕಾರಕ್ಕೆ ಬಂದಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಧರ್ಮಾಧಂ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಯುಡಿಎಫ್ ಅಂಗಪಕ್ಷಗಳಾದ ಕಾಂಗ್ರೆಸ್ 62 ಸ್ಥಾನಗಳಲ್ಲಿ ಗೆದ್ದಿದ್ದರೆ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ 22 ಸ್ಥಾನ ದಕ್ಕಿಸಿಕೊಂಡಿದೆ. ಇದೇ ಮೊದಲ ಬಾರಿ ಬಿಜೆಪಿ ಮೂರು ಸ್ಥಾನಗಳನ್ನು ಗೆದ್ದಿದೆ. ಈ ಹಿಂದೆ 2016ರಲ್ಲಿ ಬಿಜೆಪಿಯ ಹಿರಿಯ ನಾಯಕ ಒ.ರಾಜಗೋಪಾಲ್ ಜಯಗಳಿಸಿದ್ದ ನೆಮೋಮ್ ಕ್ಷೇತ್ರದಿಂದ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಜಯ ಗಳಿಸಿದ್ದಾರೆ.

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೂರನೇ ಬಾರಿ ಅಧಿಕಾರಕ್ಕೆ ಬಂದು ಹ್ಯಾಟ್ರಿಕ್ ಸಾಧಿಸಿದೆ. ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಸರ್ಮಾ ಜಲುಕ್ಬರಿ ಕ್ಷೇತ್ರದಿಂದ 80 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ. ಎನ್‌ಡಿಎ 100 ಸ್ಥಾನಗಳಲ್ಲಿ ಜಯ ಸಾಧಿಸಿದೆ.

ಪುದುಚೆರಿಯಲ್ಲಿ ಮತ್ತೆ ಎನ್‌ಡಿಎ ಗೆದ್ದು ಬರಲು ಯಶಸ್ವಿಯಾಗಿದೆ. ಒಟ್ಟು 30 ಸ್ಥಾನಗಳ ಪೈಕಿ 18 ಸ್ಥಾನಗಳಲ್ಲಿ ಎನ್‌ಡಿಎ ಜಯ ಗಳಿಸಿದರೆ, ಕಾಂಗ್ರೆಸ್ ಕೇವಲ 6 ಸ್ಥಾನಗಳಲ್ಲಿ ಮಾತ್ರ ಜಯ ಗಳಿಸಲು ಯಶಸ್ವಿಯಾಗಿದೆ.

ಗೆದ್ದು ಬೀಗಿದವರು

ನರೇಂದ್ರ ಮೋದಿ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವಿಗೆ ಮೋದಿ ಮತ್ತು ಅಮಿತ್ ಶಾ ರಣತಂತ್ರ ಪ್ರಮುಖ ಕಾರಣ

ಹಿಮಂತ ಬಿಸ್ವಾ ಸರ್ಮಾ

ಅಸ್ಸಾಂನಲ್ಲಿ ಸತತ ಮೂರನೇ ಬಾರಿಗೆ ಬಿಜೆಪಿ ಗೆಲ್ಲಿಸಿದ ಖ್ಯಾತಿ. ಎರಡನೇ ಬಾರಿ ಮುಖ್ಯಮಂತ್ರಿ ಆಗುತ್ತಿದ್ದಾರೆ.

ರಾಹುಲ್ ಗಾಂಧಿ

ಕೇರಳದಲ್ಲಿ ಎಲ್‌ಡಿಎಫ್ ಮಣಿಸಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲ್ಲಿಸುವಲ್ಲಿ ರಾಹುಲ್ ಪಾತ್ರ ದೊಡ್ಡದು

ದಳಪತಿ ವಿಜಯ್

ತಮಿಳುನಾಡಿನಲ್ಲಿ ಚುನಾವಣೆಗೂ ಸ್ವಲ್ಪ ಮೊದಲು ಟಿವಿಕೆ ಪಕ್ಷ ಕಟ್ಟಿ ಅದನ್ನು ಅಧಿಕಾರಕ್ಕೇರಿಸುವ ಹಂತಕ್ಕೆ ತಂದಿದ್ದು, ದಿಗ್ಗಜ ಸ್ಟಾಲಿನ್‌ಗೆ ಸೋಲುಣಿಸಿದ್ದು ದೊಡ್ಡ ಸಾಧನೆ

ಸುವೇಂದು ಅಧಿಕಾರಿ

ಮೋದಿ, ಅಮಿತ್ ಶಾ ರಣ ತಂತ್ರವನ್ನು ಬಂಗಾಳದಲ್ಲಿ ಜಾರಿಗೊಳಿಸಿ ಮಮತಾಗೆ ಟಕ್ಕರ್ ನೀಡಿದ್ದು ಸುವೇಂದು

ಎನ್. ರಂಗಸ್ವಾಮಿ

ಎನ್‌ಡಿಎ ಜೊತೆ ಮೈತ್ರಿ ಮಾಡಿಕೊಂಡು ಪುದುಚೇರಿಯಲ್ಲಿ ಗೆಲುವಿನ ನಗು ಬೀರಿದವರು ರಂಗಸ್ವಾಮಿ. ಕೇಂದ್ರಾಡಳಿತ ಪ್ರದೇಶಕ್ಕೆ 5ನೇ ಬಾರಿ ಸಿಎಂ ಆಗುವ ಸಾಧ್ಯತೆಯಿದೆ.

ಸೋತು ನೆಲಕಚ್ಚಿದವರು

ಎಂ.ಕೆ.ಸ್ಟಾಲಿನ್

ಅತಿಯಾದ ಆತ್ಮವಿಶ್ವಾಸದಿಂದ ಸೋತ ಕರುಣಾನಿಧಿ ಪುತ್ರ. ಚಿತ್ರನಟನ ಜನಪ್ರಿಯತೆ, ಎನ್‌ಡಿಎ ಎದುರು ಮಂಕಾದ ವರ್ಚಸ್ಸು.

ಮಮತಾ ಬ್ಯಾನರ್ಜಿ

ಬಂಗಾಳಕ್ಕೆ ಸತತ 4ನೇ ಬಾರಿ ಸಿಎಂ ಆಗುವ ಕನಸು ಭಗ್ನ. ಹೊಡಿ–ಬಡಿ ರಾಜಕಾರಣಕ್ಕೆ ಮತದಾರರಿಂದ ಸ್ಪಷ್ಟ ತಿರಸ್ಕಾರ.

ಪಿಣರಾಯಿ ವಿಜಯನ್

ಆಡಳಿತ ವಿರೋಧಿ ಅಲೆಯಿಂದ ಸೋತ ಕಮ್ಯುನಿಸ್ಟ್ ನಾಯಕ. ಕಾಂಗ್ರೆಸ್ ಅಬ್ಬರದಿಂದಾಗಿ ಹ್ಯಾಟ್ರಿಕ್ ಸಿಎಂ ಆಗುವ ಕನಸು ಭಗ್ನ.

ತಮಿಳ್ನಾಡು: ಅಚ್ಚರಿ ವಿಜಯ

ಹಾಲಿ ಸಿಎಂ ಸ್ಟಾಲಿನ್‌ಗೇ ಸೋಲು

ಒಟ್ಟು ಸ್ಥಾನ: 234 ಬಹುಮತಕ್ಕೆ 118

ಮೈತ್ರಿಕೂಟ	2026	2021
ಟಿವಿಕೆ	107	–
ಡಿಎಂಕೆ	74	159
ಎಡಿಎಂಕೆ	52	75
ಇತರ	1	0

ವಿಜಯ್ ಸಿಎಂ?

ಕೇವಲ 2 ವರ್ಷಗಳ ಹಿಂದೆ ಪಕ್ಷ ಕಟ್ಟಿ ರಾಜಕೀಯಕ್ಕಿಳಿದ ನಟ ವಿಜಯ್ ಮುಖ್ಯಮಂತ್ರಿಯಾಗುವುದು ಬಹುತೇಕ ಖಚಿತ. ಬಹುಮತಕ್ಕೆ ಕೆಲವೇ ಸ್ಥಾನಗಳ ಕೊರತೆ ಇದ್ದು, ಅದನ್ನು ತೂಗಿಸಿಕೊಳ್ಳುವುದು ಈಗ ಅವರ ಮುಂದಿರುವ ಸವಾಲು.

- ಡಿಎಂಕೆ ಭದ್ರಕೋಟೆ ಎನ್ನಿಸಿರುವ ಕೊಳತ್ತೂರು ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸ್ಟಾಲಿನ್‌ಗೆ ಸೋಲು
- ಚೇಪಾಕ್‌ನಲ್ಲಿ ಹಾಲಿ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ 7140 ಮತಗಳ ಅಂತರದಲ್ಲಿ ಗೆಲುವು
- ಸ್ಥಾಪನೆಯಾಗಿ ಎರಡೇ ವರ್ಷದಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ವಿಜಯ್ ನೇತೃತ್ವದ ಟಿವಿಕೆ
- ಪೆರಂಬೂರ್ ಮತ್ತು ಟ್ರಿಚಿ ಎರಡೂ ಕ್ಷೇತ್ರಗಳಲ್ಲಿ ಜಯ ಗಳಿಸಿದ ಟಿವಿಕೆ ಮುಖ್ಯಸ್ಥ ನಟ ಜೋಸೆಫ್ ವಿಜಯ್
- ಬಿಜೆಪಿಗೆ 1 ಸ್ಥಾನದಲ್ಲಿ ಜಯ

ಬಂಗಾಳ: ಕಮಲ ಚಮತ್ಕಾರ

ಹಾಲಿ ಸಿಎಂ ಮಮತಾಗೇ ಪರಾಭವ

ಒಟ್ಟು ಸ್ಥಾನ: 293 ಬಹುಮತಕ್ಕೆ 147

ಪಕ್ಷ	2026	2021
ಬಿಜೆಪಿ	208	77
ಟಿಎಂಸಿ	79	214
ಕಾಂಗ್ರೆಸ್	2	0
ಸಿಪಿಐ	2	0

ಸುವೇಂದು ಸಿಎಂ

ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರ ಒಂದು ಕಾಲದ ಆಪ್ತರಾಗಿದ್ದ ಸುವೇಂದು ಅಧಿಕಾರಿ ಈಗ ಬಿಜೆಪಿಯ ಮುಖ್ಯಮಂತ್ರಿ ಆಗುವುದು ಬಹುತೇಕ ಖಚಿತ. ಮೋದಿ, ಅಮಿತ್ ಶಾ ಅವರ ಕನಸಿನಂತೆ ಬಂಗಾಳದಲ್ಲಿ ಬಿಜೆಪಿ ಗೆಲ್ಲಿಸುವಲ್ಲಿ ಅವರ ಪಾತ್ರ ದೊಡ್ಡದು.

- ಸಿಎಂ ಮಮತಾ ಬ್ಯಾನರ್ಜಿಗೆ ಭವಾನಿಪುರದಲ್ಲಿ ಸೋಲು
- 200 ಸ್ಥಾನಗಳನ್ನು ಗಳಿಸಿ, 3ನೇ ಎರಡರಷ್ಟು ಬಹುಮತ ಸಾಧಿಸಿದ ಕೇಸರಿ ಪಕ್ಷ
- ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ನಂದಿ ಗ್ರಾಮದಲ್ಲಿ 3ನೇ ಸಲ ಗೆಲುವು
- 2011ರಿಂದ ಅಧಿಕಾರದಲ್ಲಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ನಾಲ್ಕನೇ ಬಾರಿ ಅಧಿಕಾರಕ್ಕೆ ಬರುವಲ್ಲಿ ವಿಫಲ
- ಕಳೆದ ಬಾರಿ ಶೂನ್ಯಕ್ಕೆ ತೃಪ್ತರಾಗಿದ್ದ ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ಈ ಬಾರಿ ತಲಾ 2 ಸ್ಥಾನದ ಭಾಗ್ಯ

ಕೇರಳ: ಕಾಂಗ್ರೆಸ್‌ಗೆ ಜಯ

ಕಮ್ಯುನಿಸ್ಟ್ ಪಿಣರಾಯಿ ಆಳ್ವಿಕೆ ಅಂತ್ಯ

ಒಟ್ಟು ಸ್ಥಾನ: 140 ಬಹುಮತಕ್ಕೆ 71

ಮೈತ್ರಿಕೂಟ	2026	2021
ಯುಡಿಎಫ್	89	40
ಎಲ್‌ಡಿಎಫ್	35	92
ಬಿಜೆಪಿ	3	0
ಇತರ	13	8

4ರಲ್ಲಿ ಯಾರು ಸಿಎಂ?

ಯುಡಿಎಫ್‌ಗೆ ಪೂರ್ಣ ಬಹುಮತ ಬಂದಿದ್ದು, ಕಾಂಗ್ರೆಸ್‌ನಿಂದ ಸಿಎಂ ಆಗಲು ಸ್ಪರ್ಧೆಯಲ್ಲಿದ್ದಾರೆ. ವಿ.ಡಿ.ಸತೀಶನ್, ರಮೇಶ್ ಚೆನ್ನಿತಾಲ, ಕೆ.ಸಿ.ವೇಣು ಗೋಪಾಲ್ ಮತ್ತು ಶಶಿ ತರೂರ್ ಪೈಕಿ ಸಿಎಂ ಯಾರಾಗಲಿದ್ದಾರೆ ಎನ್ನುವುದು ಸದ್ಯಕ್ಕೆ ಸಸ್ಪೆನ್ಸ್.

- 2 ಬಾರಿ ಅಧಿಕಾರ ನಡೆಸಿದ ಎಡರಂಗಕ್ಕೆ ಸೋಲುಣಿಸಿದ ಕಾಂಗ್ರೆಸ್ ಮೈತ್ರಿಕೂಟ
- 140 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ, ಮೊದಲ ಬಾರಿ 3 ಸ್ಥಾನಗಳಲ್ಲಿ ಗೆಲುವು
- 5 ದಶಕಗಳ ಬಳಿಕ ಮೊದಲ ಬಾರಿ ದೇಶದಲ್ಲಿ ಯಾವುದೇ ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಅಧಿಕಾರ ಇಲ್ಲ
- ಕಾಂಗ್ರೆಸ್ 63 ಸ್ಥಾನಗಳಲ್ಲಿ ಗೆಲುವು ಸಾಧಿಸಿದರೆ, ಮೈತ್ರಿ ಪಕ್ಷ ಐಯುಎಂಎಲ್‌ಗೆ 22 ಸ್ಥಾನಗಳಲ್ಲಿ ಜಯ
- ಪಿಣರಾಯಿ ವಿಜಯನ್ ಸರ್ಕಾರದ 21 ಸಚಿವರ ಪೈಕಿ 13 ಸಚಿವರಿಗೆ ಸೋಲು

ಅಸ್ಸಾಂ: ಬಿಜೆಪಿ ಹ್ಯಾಟ್ರಿಕ್

ಕಾಂಗ್ರೆಸ್ ಗೆಲುವಿನ ಕನಸು ಭಗ್ನ

ಒಟ್ಟು ಸ್ಥಾನ: 126 ಬಹುಮತಕ್ಕೆ 64

ಮೈತ್ರಿಕೂಟ	2026	2021
ಎನ್‌ಡಿಎ	102	73
ಕಾಂಗ್ರೆಸ್	21	31
ಎಐಯುಡಿಎಫ್	2	16
ಇತರ	11	6

ಹಿಮಂತ ಮತ್ತೊಮ್ಮೆ?

ಅಸ್ಸಾಂನಲ್ಲಿ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಸರ್ಮಾ ಬಿಜೆಪಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಬಾರಿ ಬಹುತೇಕ ಅವರೇ ಮತ್ತೊಮ್ಮೆ ಸಿಎಂ ಆಗುವುದು ಖಚಿತ. ಹಿಂದೆ ಕಾಂಗ್ರೆಸ್‌ನಲ್ಲಿದ್ದ ಹಿಮಂತ ಸರ್ಮಾರ ಅವರು ರಾಹುಲ್ ವಿರುದ್ಧ ಮುನಿಸಿಕೊಂಡು ಬಿಜೆಪಿ ಸೇರಿದ್ದರು.

- ಸತತ ಮೂರನೇ ಬಾರಿ ಅಧಿಕಾರಕ್ಕೆ ಬಂದ ಬಿಜೆಪಿ
- ಮೂರನೇ ಎರಡರಷ್ಟು ಬಹುಮತ ಗಳಿಸಿದ ಬಿಜೆಪಿ
- ಜಲುಕ್ಬರಿ ಕ್ಷೇತ್ರದಿಂದ ಆರನೇ ಬಾರಿ ಗೆದ್ದ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಸರ್ಮಾ
- ರಾಜ್ಯ ಕಾಂಗ್ರೆಸ್‌ನ ಮುಖ್ಯಸ್ಥ ಗೌರವ್ ಗೊಗೊಯಿಗೆ ಜೊರ್ಹಾಟ್ ಕ್ಷೇತ್ರದಲ್ಲಿ ಸೋಲಿನ ರುಚಿ
- ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಸಂಸದ ಪ್ರದ್ಯುತ್ ಬೊರ್ಡೊಲಾಯಿ ಗೆಲುವು
- ಬಿಜೆಪಿಯ ಬಹುತೇಕ ಹಾಲಿ ಸಚಿವರಿಗೆ ಈ ಬಾರಿ ಮತ್ತೆ ವಿಜಯದ ಮಾಲೆ

ಬಾಗಲಕೋಟೆ, ದಾವಣಗೆರೆ ಪುನಃ ಕಾಂಗ್ರೆಸ್‌ಗೆ

ಬೈಎಲೆಕ್ಷನ್: ಮೇಟಿ ಪುತ್ರ ಉಮೇಶ್, ಶಾಮನೂರು ಮೊಮ್ಮಗ ಸಮರ್ಥ್ ಜಯ

ಬಿಜೆಪಿಯ ವೀರಣ್ಣ ಚರಂತಿಮಠ, ಶ್ರೀನಿವಾಸ್ ದಾಸ್ ಕರಿಯಪ್ಪಗೆ ಸೋಲಿನ ಕಹಿ

ಸಂ.ಕ.ಸಮಾಚಾರ, ಬೆಂಗಳೂರು

ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಫಲಿತಾಂಶ ಹೊರಬಿದ್ದಿದ್ದು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಗೆಲ್ಲುವ ಮೂಲಕ ಅಜ್ಜ ಶಾಮನೂರು ಶಿವಶಂಕರಪ್ಪ ಅವರ ಅಖಾಡವನ್ನು ಮೊಮ್ಮಗ ಉಳಿಸಿಕೊಂಡಿದ್ದಾರೆ. ಆ ಮೂಲಕ ಕಿರಿಯ ವಯಸ್ಸಿಗೇ ಶಾಸನಸಭೆ ಪ್ರವೇಶಿಸುವ ಅವಕಾಶ ಒದಗಿ ಬಂದಿದೆ. ಪ್ರತಿಸ್ಪರ್ಧಿ ಬಿಜೆಪಿಯ ಶ್ರೀನಿವಾಸ್ ದಾಸಕರಿಯಪ್ಪ ಸಾಕಷ್ಟು ಪೈಪೋಟಿ ನೀಡಿಯೂ ಸೋಲುಂಡಿದ್ದಾರೆ. ಉಪಚುನಾವಣೆಯಲ್ಲಿ ಒಟ್ಟು 24 ಸುತ್ತುಗಳ ಮುಕ್ತಾಯದ ಬಳಿಕ ಕಾಂಗ್ರೆಸ್ ಗೆಲುವಿನ ನಗೆ ಬೀರಿದೆ. ಟಿಕೆಟ್ ಸಿಗದ ಕಾರಣಕ್ಕೆ ಅಲ್ಪಸಂಖ್ಯಾತ ಸಮುದಾಯ ಮುನಿಸಿಕೊಂಡಿದ್ದರೂ ಗೆಲುವಿನ ಅಂತರವನ್ನಷ್ಟೇ ಕಡಿಮೆಗೊಳಿಸಿದೆ.

ಕಾಂಗ್ರೆಸ್ | ಬಿಜೆಪಿ

ಉಮೇಶ್ ಮೇಟಿ

ವೀರಣ್ಣ ಚರಂತಿಮಠ

ಸಮರ್ಥ್

ಶ್ರೀನಿವಾಸ್

ದಾವಣಗೆರೆ

ಅಭ್ಯರ್ಥಿ	ಪಕ್ಷ	ಪಡೆದ ಮತ
ಸಮರ್ಥ್	ಕಾಂಗ್ರೆಸ್	69,578
ಶ್ರೀನಿವಾಸ್	ಬಿಜೆಪಿ	63,870

ಬಾಗಲಕೋಟೆ

ಅಭ್ಯರ್ಥಿ	ಪಕ್ಷ	ಪಡೆದ ಮತ
ಉಮೇಶ್	ಕಾಂಗ್ರೆಸ್	98,919
ವೀರಣ್ಣ	ಬಿಜೆಪಿ	76,587

ಬಾಗಲಕೋಟೆ: ಮೇಟಿ ಕುಟುಂಬಕ್ಕೆ ಜಯ

ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಹೈವೋಲ್ಟೇಜ್ ಉಪಸಮರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಜಯಭೇರಿ ಬಾರಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಮತ್ತೊಮ್ಮೆ ಸೋಲನುಭವಿಸಿದ್ದಾರೆ. ಮಾಜಿ ಸಚಿವ ಹೆಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರವನ್ನು ಪುತ್ರ ಉಮೇಶ್ ತುಂಬಿದ್ದು ಮೊದಲ ಬಾರಿಗೆ ಶಾಸನಸಭೆ ಪ್ರವೇಶಿಸುವ ಅದೃಷ್ಟ ಪಡೆದುಕೊಂಡಿದ್ದಾರೆ. ಎಣಿಕೆ ಆರಂಭದಿಂದ ಅಂತ್ಯದವರೆಗೂ ಸತತ ಮುನ್ನಡೆ ಕಂಡಿದ್ದ ಕೈ ಅಭ್ಯರ್ಥಿ ಗೆದ್ದು ಬೀಗಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರೇ ಖುದ್ದು ಆಸಕ್ತಿವಹಿಸಿ ಕ್ಷೇತ್ರದಲ್ಲಿ ನಿರಂತರ ಪ್ರಚಾರ ನಡೆಸಿ ಆಪ್ತನ ಪುತ್ರನನ್ನು ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಗೆಲುವಿನ ಬೆನ್ನಲ್ಲೇ ಡಿ.ಎನ್ ಜೀವರಾಜ್ ವಿರುದ್ಧ ಎಫ್‌ಐಆರ್

ಚಿಕ್ಕಮಗಳೂರು: ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ದೂರಿಗೆ ಸಂಬಂಧಿಸಿದಂತೆ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಸೇರಿದಂತೆ 3 ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿದೆ. ಬಿಜೆಪಿ ಅಭ್ಯರ್ಥಿ ಡಿ. ಎನ್. ಜೀವರಾಜ್, ಅಂದಿನ ಚುನಾವಣಾಧಿಕಾರಿ ವೇದಾಮೂರ್ತಿ ಮತ್ತು ಅಂದಿನ ಜಿಲ್ಲಾಧಿಕಾರಿ ರಮೇಶ್ ಕುಮಾರ್ ಅವರ ವಿರುದ್ಧ ದೂರಿಗೆ ಸಂಬಂಧಿಸಿದಂತೆ ಎಫ್ ಐಆರ್ ದಾಖಲಿಸಿಕೊಂಡು ತನಿಖೆ ಕೈಗೆತ್ತಿಕೊಂಡಿದ್ದಾರೆ.

ವಿವರ:10

‘ಹೊರ್ಮುಜ್‌ನಲ್ಲಿ ಕಾದು ನಿಂತ ಎಲ್ಲ ಹಡಗು ಬಿಡಿಸುವೆ’

ವಾಷಿಂಗ್ಟನ್: ಹೊರ್ಮುಜ್‌ಜಲಸಂಧಿಯಲ್ಲಿ ತಿಂಗಳುಗಳಿಂದ ಸಿಕ್ಕಿ ಹಾಕಿಕೊಂಡಿರುವ ಹಡಗುಗಳನ್ನು ಬಿಡಿಸಂವುದಾಗಿ ಅವ್ಂರಿಕ ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ. ಇದನ್ನು ಪ್ರಾಜೆಕ್ಟ್ ಫ್ರೀಡಂ ಎಂದು ಕರೆದಿದ್ದಾರೆ. 15,000 ಸಿಬ್ಬಂದಿ ಹಾಗೂ 100 ವಿಮಾನಗಳನ್ನು ಬಳಸಿ ಇದನ್ನು ಮಾಡುವುದಾಗಿ ಟ್ರಂಪ್ ತಿಳಿಸಿದ್ದಾರೆ.



ವಿವರ: 7

ಅಜಿತ್, ಶರದ್ ದಾಖಲೆ ಮುರಿದು 2 ಲಕ್ಷ ಮತಗಳ ಅಂತರದಿಂದ ಗೆದ್ದ ಸುನೇತ್ರಾ ಪವಾರ್

7

ಚುನಾವಣಾ ಫಲಿತಾಂಶ ವಿಶೇಷ ಪುಟಗಳು 4,5,6,7

ಸಂಯುಕ್ತ ಕರ್ನಾಟಕ
ಜಾಣರ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

ವಿಜಯ್ ವಿಕ್ಟರಿಯ ಅಸಲಿ ಗುಟ್ಟೇನು?
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

ಮೊಟ್ಟೆ ಧಾರಣೆ 100ಕ್ಕೆ-₹590, 10ಕ್ಕೆ- ₹64 | ಚಿಕನ್ ದರ ಕೆಜಿಗೆ ₹260 | ಶುದ್ಧ ಬಂಗಾರ (99.90) ₹1,47,600 | ಸ್ಟ್ಯಾಂಡರ್ಡ್ ಬಂಗಾರ (22 ಕ್ಯಾ.) ₹1,37,150 | ಶುದ್ಧ ಬೆಳ್ಳಿ (.999 ಶುದ್ಧತೆ) ₹2,40,100 | ಪ್ರತಿ ಡಾಲರ್‌ಗೆ ₹95.15

ಸುದ್ದಿ ಮಿಂಚು

ಬಿಜೆಪಿ ಜಯಭೇರಿ: ಸಂತಸ

ಯಾದಗಿರಿ: ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಆಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಭಾರತೀಯ ಜನತಾ ಪಾರ್ಟಿ ಅಭೂತಪೂರ್ವ ಗೆಲುವು ಸಾಧಿಸಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಈ ಐತಿಹಾಸಿಕ ವಿಜಯಕ್ಕೆ ಕಾರಣರಾದ ಪಕ್ಷದ ಅಭ್ಯರ್ಥಿಗಳಿಗೆ ಹಾಗೂ ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮತ ಚಲಾಯಿಸಿದ ಮತದಾರ ಪ್ರಭುಗಳ ನಿರ್ಣಯಕ್ಕೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಡಾ.ಶರಣಭೂಪಾಲರೆಡ್ಡಿ ನಾಯ್ಕಲ್ ಸಂತಸ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ಮೋದಿ ಅವರು ನೀವು ನಮಗೆ ಮತ ನೀಡಿ, ನಾವು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇವೆ ಎಂದು ನೀಡಿದ ಕರೆಗೆ ಜನತೆ ಅಭೂತಪೂರ್ವ ಬೆಂಬಲ ದೊರೆತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಬಂಗಾಳ ಗೆದ್ದೇ ಸಿದ್ಧ ಎನ್ನುವ ಶಪಥ ಹಾಗೂ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ. ಎಲ್. ಸಂತೋಷ್ ಅವರ ಬಂಗಾಳದ ಗೆಲುವು ಅಧಿಕಾರಕ್ಕಲ್ಲ, ನಮ್ಮ ನಾಗರಿಕತೆಯ ರಕ್ಷಣೆಗಾಗಿ ಎಂಬ ಘರ್ಜನೆ ಇಂದು ಸಾಕಾರಗೊಂಡಿದೆ.

ಪಶ್ಚಿಮ ಬಂಗಾಳದ ಕಠಿಣ ಚುನಾವಣಾ ಹೋರಾಟದಲ್ಲಿ ನಮ್ಮ ಕರ್ನಾಟಕದ ಇಬ್ಬರು ನಾಯಕರ ಪಾತ್ರ ಅತ್ಯಂತ ಶ್ಲಾಘನೀಯ. ವಿಧಾನ ಪರಿಷತ್ ಸದಸ್ಯರಾದ ಸಿ.ಟಿ. ರವಿ ಹಾಗೂ ಕಲಬುರಗಿ ವಿಭಾಗದ ನಿಕಟಪೂರ್ವ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಬಿನ್ನಡಿ ಅವರು ಕಳೆದ ಹಲವು ತಿಂಗಳುಗಳಿಂದ ಬಂಗಾಲದಲ್ಲಿ ನಿರಂತರ ಪ್ರವಾಸ ಮಾಡಿ, ಚುನಾವಣಾ ತಂತ್ರಗಾರಿಕೆಯನ್ನು ರೂಪಿಸಿ ಯಶಸ್ವಿಯಾಗಿದ್ದಾರೆ. ಇವರ ಶ್ರಮಕ್ಕೆ ಇಂದು ವಿಜಯದ ಪುರಸ್ಕಾರ ದೊರೆತಿದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು: ಹರ್ಷ

ಯಾದಗಿರಿ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕೆಪಿಸಿಸಿ ಸದಸ್ಯ ಶರಣಪ್ಪ ಮಾನೇಗಾರ ಹರ್ಷ ವ್ಯಕ್ತಪಡಿಸಿದ್ದಾರೆ. ಬಾಗಲಕೋಟೆಯಲ್ಲಿ ಉಮೇಶ ಮೇಟಿ ಹಾಗೂ ದಾವಣಗೆರೆಯಲ್ಲಿ ಸಮರ್ಥ ಶಾಮನೂರು ಗೆಲುವು ಸಾಧಿಸುವ ಮುಖಾಂತರ ಕರುನಾಡಿನಲ್ಲಿ ಕಾಂಗ್ರೆಸ್ ಪಕ್ಷ ಫುಲ್ ಸ್ಟ್ರಾಂಗ್ ಎಂಬುದು ಮತ್ತೊಮ್ಮೆ ಸಾಬೀತು ಮಾಡಿದಂತಾಗಿದೆ ಎಂದಿದ್ದಾರೆ.

ಉಪ ಚುನಾವಣೆಯ ಪ್ರಚಾರದ ಕಾರ್ಯಕ್ರಮಗಳು ಎದುರಾಳಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳು ನಮ್ಮ ವಿರುದ್ಧ ಎಷ್ಟೇ ಅಪಪ್ರಚಾರ ಮಾಡಿದರೂ ಸಹ ಅವರು ಗೆಲುವು ಸಾಧಿಸಲಾಗಿಲ್ಲ. ಪಂಚ ಗ್ಯಾರಂಟಿ ಯೋಜನಗಳನ್ನು ಅಧಿಕಾರಕ್ಕೆ ಬಂದ ಕೂಡಲೇ ಜನರಿಗೆ ತಲುಪಿಸಿರುವ ನುಡಿದಂತೆ ನಡೆದ ಸರಕಾರ ನಮ್ಮದಾಗಿದ್ದು ಸಮಾನತೆಯ ಹರಿಕಾರ ಸಿಎಂ ಸಿದ್ದರಾಮಯ್ಯ ನೇತೃತ್ವದ ಗ್ಯಾರಂಟಿ ಸರಕಾರ ಪರ ಜನಭಿಪ್ರಾಯ ವ್ಯಕ್ತವಾಗಿದೆ ಎಂದು ಹೇಳಿದ್ದಾರೆ.

ಚುನಾವಣೆ ಗೆಲುವು: ಗ್ಯಾರೆಂಟಿ ಕೈ ಹಿಡಿದಿವೆ

ಯಾದಗಿರಿ: ಸರ್ಕಾರದ ಅಭಿವೃದ್ಧಿ ಕೆಲಸಗಳು ಹಾಗೂ ಗ್ಯಾರೆಂಟಿ ಕೊಟ್ಟದ್ದನ್ನು ನೋಡಿದ ಬಾಗಲಕೋಟೆ, ದಾವಣಗೆರೆ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಗೆಲ್ಲಿಸಿದ್ದಾರೆ ಎಂದು ಕೆಪಿಸಿಸಿ ಸಂಯೋಜಕ ಹಾಗೂ ಕೆಪಿಸಿಸಿ ಕಿಸಾನ್ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜ್ ಮೈನುದ್ದಿನ್ ಜಮಾದಾರ ದೋರನಳ್ಳಿ ಹೇಳಿದ್ದಾರೆ. ಉಭಯ ಉಪ ಚುನಾವಣೆಗಳಲ್ಲಿ ಜನತೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವಾಗಿ ನಿಂತಿದ್ದು, ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ಕೊಟ್ಟ ಗ್ಯಾರೆಂಟಿಗಳು ಕೆಲಸ ಮಾಡಿವೆ ಮುಂದೆಯೂ ಕಾಂಗ್ರೆಸ್ ಪಕ್ಷ ಉತ್ತಮ ಆಡಳಿತ ನೀಡಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದ್ದಾರೆ.
ಉಪ ಚುನಾವಣೆಯಲ್ಲಿ ಸಿಎಂ, ಡಿಸಿಎಂ ಅವರಿಗೆ ಗೆಲುವಾಗಿದ್ದು ಸರ್ಕಾರಕ್ಕೆ ಇದು ಪೂರ್ಣ ಅಂಕಗಳು ನೀಡಿದಂತೆ ಆಗಿದೆ. ಮುಂದೆ 2028ರಲ್ಲಿಯೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬ ದಿಕ್ಸೂಚಿ ಇದಾಗಿದೆ ಎಂದಿದ್ದಾರೆ.

ಭವ್ಯ ಮೆರವಣಿಗೆ

ವಡಗೇರಾ: ತಾಲೂಕಿನ ಐಕೂರ ಗ್ರಾಮದಲ್ಲಿ ಶ್ರೀ ಅಂಬಾ ಮಹೇಶ್ವರಿ ಜಾತ್ರಾ ಮಹೋತ್ಸವ ಪ್ರಯುಕ್ತ ವಿವಿಧ ಕಲಾ ತಂಡಗಳು ಹಾಗೂ ಡೊಳ್ಳಿನ ಕಲಾವಿದರು ಪ್ರದರ್ಶನ ಮತ್ತು ಭವ್ಯ ಮೆರವಣಿಗೆ ನಡೆಯಿತು.



ಆಮದಿಹಾಳ ಗ್ರಾಮದ ವೆಂಕನಗೌಡ ಭೀಮನಗೌಡ ಪೊಲೀಸ್ ಪಾಟೀಲರು 2025 ನೇ ಸಾಲಿನಲ್ಲಿ ಪಿಎಸ್ಐ ಹುದ್ದೆಗೆ ನೇಮಕವಾದ ಹಿನ್ನೆಲೆಯಲ್ಲಿ ಲಿಂಗಸುಗೂರು ಶಾಸಕ ಮಾನಪ್ಪ ವಜ್ಜಲ್ ರವಿವಾರ ಸನ್ಮಾನಿಸಿ ಗೌರವಿಸಿದರು.

ಪಿಎಸೈ ಹುದ್ದೆಗೆ ನೇಮಕ : ಶಾಸಕರಿಂದ ಸನ್ಮಾನ

ಸಂ.ಕ. ಸಮಾಚಾರ, ಮುದಗಲ್ಲ: ಸಮೀಪದ ಆಮದಿಹಾಳ ಗ್ರಾಮದ ವೆಂಕನಗೌಡ ಭೀಮನಗೌಡ ಪೋ.ಪಾ ಇವರು 2025 ನೇ ಸಾಲಿನಲ್ಲಿ ಪಿಎಸ್ಐ ಹುದ್ದೆಗೆ ನೇಮಕವಾದ ಹಿನ್ನೆಲೆಯಲ್ಲಿ ಲಿಂಗಸುಗೂರು ಶಾಸಕ ಮಾನಪ್ಪ ವಜ್ಜಲ್ ಸನ್ಮಾನಿಸಿ ಗೌರವಿಸಿದರು.

ಗ್ರಾಮದ ಶ್ರೀ ಮಾರುತೇಶ್ವರ ಹಾಗೂ ಶ್ರೀ ಗದ್ದೆಮ್ಮ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ದೇವರ ದರ್ಶನ ಪಡೆಯಲು ಆಗಮಿಸಿದ ಹಿನ್ನಲೆಯಲ್ಲಿ ಅವರ ಮನೆಗೆ ಬೇಟಿ ನೀಡಿದರು. ನಂತರ ಮಾತನಾಡಿದ ಅವರು ಸತತ ಕಠಿಣ ಪರಿಶ್ರಮದಿಂದ ಹುದ್ದೆಗೆ ಆಯ್ಕೆಯಾಗಿರುವುದು ಬಹಳ ಸಂತೋಷ. ಇನ್ನೂ ಹೆಚ್ಚಿನ ಹುದ್ದೆಗೆ ಮುಂದುವರಿಯಲಿ ಗ್ರಾಮಕ್ಕೆ ಮತ್ತು ತಾಲೂಕಿಗೆ ಕೀರ್ತಿ ತಂದಿದ್ದಾರೆ. ಈ ವೇಳೆ ಮುಖಂಡರಾದ ಗಿರಿಮಲ್ಲನಗೌಡ ಕರಡಕಲ್, ನಾಗಭೂಷಣ ಸಾಹುಕಾರ, ನಿಂಗಣ್ಣ ದೇವಿಕೇರಿ, ಹನುಮಂತಪ್ಪ ಕಂದಗಲ್, ಮಂಜುನಾಥ ಪಾಟೀಲ್, ಪ್ರಕಾಶ್ ಮರಿಯಮ್ಮನಹಳ್ಳಿ , ಮಂಜುನಾಥ ಕಂದಗಲ್, ಮಲ್ಲಪ್ಪ ಬೊಮ್ಮನಾಳ, ಸೇರಿದಂತೆ ಇತರರಿದ್ದರು.

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ–ಬೆಂಗಳೂರು–ಕಲಬುರಗಿ
ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ
: ನೂತನ ವಿಳಾಸ :
ನಂ. 1–94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ
ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ – 585 102
ಮೊ: 9449985695-9481000249

'ಸುಸಜ್ಜಿತ ಭವನ ನಿರ್ಮಾಣಕ್ಕೆ ಬದ್ಧ'

ಸುರಪುರದಲ್ಲಿ ಎಐಟಿಯುಸಿ ಸಂಯೋಜಿತ ಕಟ್ಟಡ ಕಟ್ಟುವ, ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ 8ನೇ ವಾರ್ಷಿಕೋತ್ಸವ ಹಾಗೂ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಜರುಗಿತು. ಕಾರ್ಮಿಕರ ಸಂಘದ ವಾರ್ಷಿಕೋತ್ಸವದ ಸಂಭ್ರಮ, ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಭವ್ಯ ಮೆರವಣಿಗೆ, ಸನ್ಮಾನ

ಸಂ.ಕ. ಸಮಾಚಾರ ಸುರಪುರ: ಎಐ–ಟಿಯುಸಿ ಸಂಯೋಜಿತ ಕಟ್ಟಡ ಕಟ್ಟುವ, ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ 8ನೇ ವಾರ್ಷಿಕೋತ್ಸವ ಹಾಗೂ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ ನಗರದ ಕುಂಬಾರಪೇಟದ ಸಂಘದ ಭವನದ ಆವರಣದಲ್ಲಿ ಜರುಗಿ–ತು. ರಾಜ್ಯಾಧ್ಯಕ್ಷ ಹೆಚ್.ಜೆ ಉಮೇಶ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಜ್ಯದಲ್ಲಿನ ಕಾರ್ಮಿಕರ ಬೇಡಿಕೆಗಳನ್ನು ಈಡೇ–ರಿಸಲು ಸರಕಾರ ಮುಂದಾಗಬೇಕು. ನಮ್ಮ ಫೆಡರೇಶನ್ ವತಿಯಿಂದ ಅನೇಕ ವರ್ಷಗಳಿಂದ ಕಾರ್ಮಿಕರ ಬೇಡಿಕೆಗಳಿಗಾಗಿ ಪ್ರತಿಭಟನೆ ನಡೆಸಲಾಗುತ್ತಿದೆ. ಹಿಂದೆ ಎಚ್ ಡಿ ದೇವೇಗೌಡ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಮನವಿ ಸಲ್ಲಿಸಿದ್ದ–ರಿಂದ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆಯಾಗಿದೆ. ನಂತರ ಹಿಂದಿನ ಸರ್ಕಾರದಲ್ಲಿ ಶಿವರಾಂ ಹೆಬ್ಬಾರ್ ಅವರು ಕಾರ್ಮಿಕ ಸಚಿವರಾಗಿದ್ದಾಗ ಅನೇಕ ಬೇಡಿಕೆ ಸಲ್ಲಿಸಿದರು ಈಡೇರಿಸಿರಲಿಲ್ಲ. ಆಗ ನಮ್ಮೊಂದಿಗೆ ಈಗಿನ ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಅವರೇ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಆದರೆ ಈಗ ಸ್ವತಃ ಅವರೇ ಕಾರ್ಮಿಕ ಸಚಿವರಿದ್ದರೂ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುತ್ತಿಲ್ಲವೆಂದು ದೂರಿದರು. ಮಾಜಿ ಸಚಿವ ನರಸಿಂಹ ನಾಯಕ ಕಾರ್ಯಕ್ರಮ ಉದ್ಘಾಟಿಸಿ, ತಾವೆಲ್ಲರೂ ನನ್ನ ಮೇಲೆ ಅಪಾರ ಅಭಿಮಾನ ಮತ್ತು ಪ್ರೀತಿ–ವಿಶ್ವಾಸವಿಟ್ಟುಕೊಂಡಿದ್ದೀರಿ. ನಿಮ್ಮೆಲ್ಲರ ಆಶೀರ್ವಾದದಿಂದ ಮತ್ತೊಮ್ಮೆ ನಾನು ಶಾಸಕನಾದರೆ ಬರುವ ದಿನಗಳಲ್ಲಿ ಇದೇ ಸ್ಥಳದಲ್ಲಿಯೇ ಸುಸಜ್ಜಿತ ಭವನವನ್ನು ನಿರ್ಮಿಸಿ ಮುಂದಿನ ಬಾರಿ ಕಾರ್ಯಕ್ರಮವನ್ನು ಇಲ್ಲಿಯೇ ಮಾಡುವುದಾಗಿ ಭರವಸೆ ನೀಡಿದರು.

ಯುವ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ರಾಜಾ ಕುಮಾರ ನಾಯಕ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಮ್ಮಯ್ಯ ತಳವಾರ ಪ್ರಸ್ತಾವಿಕ ನುಡಿಗಳನ್ನಾಡಿದರು. ಸಂಘಟನೆಯ ರಾಜ್ಯ ಉಪಾಧ್ಯಕ್ಷ ಪ್ರಭುದೇವ ಯಳಸಂಗಿ, ಜಿಲ್ಲಾ ಅಧ್ಯಕ್ಷ ದೇವೇಂದ್ರಪ್ಪ ಪತ್ತಾರ ಮಾತನಾಡಿದರು. ವೇದಿಕೆಯಲ್ಲಿ ಕಾರ್ಮಿಕ ಇಲಾಖೆಯ ನಿರೀಕ್ಷಕ ಶಿವಪ್ಪ ಜಮಾದಾರ, ಮುಖಂಡರಾದ ಶಂಕರ ನಾಯಕ, ಭೀಮಣ್ಣ ಬೇವಿನಾಳ, ಸಿದ್ದಣ್ಣ ಸಾಹುಕಾರ್ ನರಸಿಂಗಪೇಟ, ಶರಣು ಸಾಹುಕಾರ ಮುಧೋಳ, ಶರಣು ಶಾಂತಪುರ, ಮಲ್ಲಿಕಾರ್ಜುನ ಸಜ್ಜನ್, ಸಂಘಟನೆಯ ಜಿಲ್ಲಾ ಅಧ್ಯಕ್ಷ ಭೀಮರಾಯ ಹೆಚ್ ಕದರಾಪುರ, ತಾಲೂಕ ಅಧ್ಯಕ್ಷ ದೇವೇಂದ್ರಪ್ಪ ನಗರಗುಂಡ, ಚಾಂದಪಾಶ ಡಿ.ಬಿ, ಹಣಮಂತ್ರಾಯ ಸತ್ಯಂಪೇಟೆ, ಮೆಹಬೂಬ್ ಗೌಂಡಿ ರುಕ್ಮಾಪುರ, ತಿಮ್ಮಯ್ಯ ದೊರೆ ಉಪಸ್ಥಿತರಿದ್ದರು. ತಿಮ್ಮಯ್ಯ ತಳವಾರ ವಂದಿಸಿದರು.

ಪಟ್ಟಣದ ವೇಣುಗೋಪಾಲ ಸ್ವಾಮಿ ದೇವಸ್ಥಾನದಿಂದ ಮಹಾತ್ಮ ಗಾಂಧಿ ವೃತ್ತ ದರ್ಬಾರ ರಸ್ತೆ ಮಾರ್ಗವಾಗಿ ಬೃಹತ್ ಮೆರವಣಿಗೆ ಜರುಗಿತು. ಹಿರಿಯ ಕಾರ್ಮಿಕರಿಗೆ ಸನ್ಮಾನ ಹಾಗೂ ಕಾರ್ಮಿಕರಿಗೆ ಕಟ್ಟಡ ಕಾರ್ಮಿಕ ಇಲಾಖೆಯ ನೋಂದಣಿಯ ಗುರುತಿನ ಚೀಟಿಗಳನ್ನು ವಿತರಿಸಲಾಯಿತು.

ಕೂಡಲಗಿ ಗ್ರಾಮದ ಶ್ರೀ ಶಾಂತಾನಂದ ಸರಸ್ವತಿ ಸ್ವಾಮಿ ಬಾಬಾ ಮಹಾರಾಜರ ಮಠದಲ್ಲಿ ನಡೆದ ಸಂಸ್ಕಾರ ಸುಧಾ ಶಿಬಿರವನ್ನು ಶ್ರೀ ಉಮಾಕಾಂತ ಸಿದ್ಧರಾಜ ಮಹಾರಾಜರು ಉದ್ಘಾಟಿಸಿದರು. ಮೃತ್ಯುಂಜಯ ಮಹಾರಾಜ, ವಿಶ್ವಂಬರ ಜೋಷಿ, ಮಾನಪ್ಪ ಇದ್ದರು.

ಭಗವಂತನ ಮೇಲೆ ಅಚಲ ಭಕ್ತಿಯಿರಲಿ

ಕೆಂಭಾವಿ: ಮಾನವರಾಗಿ ಹುಟ್ಟಿದ ಮೇಲೆ ಮೊದಲು ಉತ್ತಮ ಸಂಸ್ಕಾರ ಪಡೆಯಬೇಕು. ಆಯಾ ಧರ್ಮದ ಆಯಾ ಜಾತಿಗಳ ಅಣತಿಯಂತೆ ಉತ್ತಮ ಸಂಸ್ಕಾರ ದೊರೆತಾಗ ಮಾತ್ರ ಮನುಷ್ಯನ ಜನ್ಮ ಸಾರ್ಥಕ ಪಡೆಯುತ್ತದೆ ಎಂದು ಕೂಡಲಗಿ ಬಾಬಾ ಮಹಾರಾಜ ಮಠದ ಪೀಠಾದಿಪತಿ ಶ್ರೀ ಉಮಾಕಾಂತ ಸಿದ್ಧರಾಜ ಮಹಾರಾಜರು ಹೇಳಿದರು. ಕೂಡಲಗಿ ಗ್ರಾಮದ ಶ್ರೀ ಶಾಂತಾನಂದ ಸರಸ್ವತಿ ಸ್ವಾಮಿ ಬಾಬಾ ಮಹಾರಾಜರ ಮಠದಲ್ಲಿ ನಡೆದ ಸಂಸ್ಕಾರ ಸುಧಾ ಶಿಬಿರವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಸದಾಚಾರ ಸಂಪನ್ನ, ಸದ್ವಿಚಾರ, ಸಹೃದಯಿ ಜೀವನ ನಡೆಸಬೇಕಾದರೆ ಮೊದಲು ನಾವು ತಂದೆ–ತಾಯಿಗಳ, ಗುರುಗಳ, ಭಗವಂತನ ಮೇಲೆ ಅಚಲ ಭಕ್ತಿ ಹೊಂದಬೇಕು, ಅಂತಹ ಭಕ್ತಿ ನಮ್ಮಲ್ಲಿ ಹುಟ್ಟಬೇಕಾದರೆ ಉತ್ತಮ ಸಂಸ್ಕಾರ ಪಡೆಯಬೇಕು ಎಂದು ಹೇಳಿದರು.

ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳ ಆಜ್ಞಾನುಸಾರ ಇಂದಿನಿಂದ ಕೂಡಲಗಿ ಕ್ಷೇತ್ರದಲ್ಲಿ ಸಂಸ್ಕಾರ ಸುಧಾ ಎಂಬ ವಿಶೇಷ ಶಿಬಿರವನ್ನು 14 ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ. ಈ ಶಿಬಿರದಲ್ಲಿ ಯಾವುದೆ ಜಾತಿ, ಪಂಥ, ಮತಭೇದ ಇಲ್ಲದೆ ಎಲ್ಲ ಮಕ್ಕಳಿಗೆ ಉತ್ತಮ ಸಂಸ್ಕಾರಯುತವಾದ ದೈನಂದಿನ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಂಸ್ಕೃತ ಭಾಷೆಯ ಜ್ಞಾನ ಹೇಳಿ ಕೊಡಲಾಗುವುದು. ವಿಶ್ವಂಬರ ಜೋಶಿ ಅವರು ನಿತ್ಯ ಈ ಕುರಿತು ಮಕ್ಕಳಿಗೆ ಪಾಠ ಮಾಡಲಿದ್ದು ಎಲ್ಲ ಮಕ್ಕಳು ಇದರ ಲಾಭ ಪಡೆಯಬೇಕೆಂದು ಕರೆ ನೀಡಿದರು. ಮಠದವಕ್ತಾರ ಮೃತ್ಯುಂಜಯ ಮಹಾರಾಜ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಶ್ವಂಬರ ಜೋಷಿ, ಶಾಂತಾನಂದ ಇನಾಮದಾರ, ಮಾನಪ್ಪ ಬೆನಕನಳ್ಳಿ, ಮಲ್ಲಯ್ಯ ಕಲಾಲ ಸೇರಿ ಹಲವರಿದ್ದರು.

ಸೈದಾಪುರದಲ್ಲಿ ರಾಜ್ಯ ಮಟ್ಟದ ಜಾನಪದ ಸಂಭ್ರಮ ಕಾರ್ಯಕ್ರಮ ಜರುಗಿತು.

ಗ್ರಾಮೀಣ ಬದುಕಿನ ಪ್ರತೀಕ ಜಾನಪದ

ಶಹಾಪುರ (ಗ್ರಾ): ಗ್ರಾಮೀಣ ಜನರ ಬದುಕಿನ ಜೀವನ ರೀತಿ, ನೀತಿ, ರಿವಾಜುಗಳು ಬದುಕಿನ ಸಂಸ್ಕೃತಿ ಪ್ರತೀಕವಾಗಿವೆ. ಗ್ರಾಮೀಣ ಜೀವನ ಶೈಲಿಯಿಂದಲೇ ಜಾನಪದ ಉದ್ಭವವಾಗಿದೆ ಎಂದು ಹಿರಿಯ ಜಾನಪದ ಕಲಾವಿದೆ ದೇವಕ್ಕೆಮ್ಮ ಪೊಲೀಸ್ ಬಿರಾದರ ಹೇಳಿದರು. ಸಮೀಪದ ಸೈದಾಪುರ ಗ್ರಾಮದ ಯುನೈಟೆಡ್ ಪಬ್ಲಿಕ್ ಶಾಲಾ ಆವರಣದಲ್ಲಿ ಕರ್ನಾಟಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಶಹಾಪುರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ವಾದ್ಯ ಪರಿಕರಗಳನ್ನು ನುಡಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದರು.

ಹೊಲ ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡ ಸಮಯದಲ್ಲಿ ಲಾವಣಿ ಪದ, ಜನಪದಗೀತೆ, ಹಂತಿ ಪದ, ಒಗಟು, ಗಾದೆ, ಸಂಪ್ರದಾಯ ಪದಗಳು, ಸೋಬಾನೆ ಪದಗಳು, ಹಾಡುತ್ತಾ ಧಣಿವನ್ನ ಮರೆಯುತ್ತಿದ್ದೆವುಎಂದು ನುಡಿದರು. ಪ್ರಗತಿ ಪರ ಚಿಂತಕ ಮಲ್ಲಣ್ಣ ಹೊಸಮನಿ ಶಿರವಾಳ ಮಾತನಾಡಿದರು. ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶರಣಬಸವ ಪೊಲೀಸ್ ಪಾಟೀಲ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ರವಿಕುಮಾರ ಸದಬ, ಪ್ರತಿಷ್ಠಾನದ ಅಧ್ಯಕ್ಷ ಆನಂದ ಎಂ ಇನ್ನಿತರರು ಉಪಸ್ಥಿತರಿದ್ದರು. ನಂತರ ಬೂದಯ್ಯ ಹಿರೇಮಠತಂಡ ಸುಗಮ ಸಂಗೀತ, ಭೀಮರಾಯ ಗುಳೇದ ತಂಡ ತತ್ವಪದ, ಮುಖರಂಜಾ ಇನಮದಾರ ತಂಡ ವಚನ ಗಾಯನ, ಪ್ರದೀಪ್ ಪಾಟೀಲ್ ಮತ್ತು ತಂಡ ಜಾನಪದ ಸಂಗೀತ, ಮುದ್ದಮ್ಮ ತಂಡ ಜನಪದ ಸಂಗೀತ ಕಾರ್ಯಕ್ರಮಗಳು ಜರುಗಿದವು. ಕಾಶಿನಾಥ ವಂದಿಸಿದರು.

ಜನಪರ ಯೋಜನೆಗಳಿಗೆ ಸಂದ ಜಯ

ಯಾದಗಿರಿ: ದಾವಣಗೇರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿರುವದು ನಮ್ಮ ಸರ್ಕಾರದ ಜನಪರ ಯೋಜನೆಗಳಿಗೆ ಹಾಗೂ ಕಾರ್ಯಕರ್ತರ ಅವಿರತ ಶ್ರಮಕ್ಕೆ ಸಂದ ಜಯವಾಗಿದೆ ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಬಣ್ಣಿಸಿದ್ದಾರೆ. ದಾವಣಗೇರೆ ದಕ್ಷಿಣದಿಂದ ಆಯ್ಕೆಯಾದ ಸಮರ್ಥ ಶಾಮನೂರ ಅವರ ಅಜ್ಜನ ಹಾದಿಯಲ್ಲಿ ಜನಪರ ಆಡಳಿತ ನೀಡುವ ಅತ್ಯಂತ ಚಿಕ್ಕ ವಯಸ್ಸಿನ ಶಾಸಕರಾಗಿದ್ದಾರೆ. ಉಮೇಶ್ ಮೇಟಿ ಅವರು ಆಯ್ಕೆಯಾಗುವ ಮೂಲಕ ಅವರ ತಂದೆಯ ವರ್ಚಸ್ಸು, ಕಾಂಗ್ರೆಸ್ ಪಕ್ಷ ಕ್ಷೇತ್ರದಲ್ಲಿ ಇನ್ನಷ್ಟು ಗಟ್ಟಿಯಾಗಿದೆ ಎನ್ನುವುದು ಸಾಬೀತು ಮಾಡಿದ್ದಾರೆ ಎಂದಿದ್ದಾರೆ.

ಉಭಯ ಕ್ಷೇತ್ರದಲ್ಲಿ ಆ ಕುಟುಂಬ ಸದಸ್ಯರ ಒಮ್ಮತದ ಪ್ರಚಾರ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಆಕರ್ಷಿತರಾದ ಮಹಿಳಾ ಮತದಾರರ ಭಾರಿ ಬೆಂಬಲ ದೊರೆತಿದೆ. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನಪರ ಕಾಳಜಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ ಅವರ ಸಾರಥ್ಯವನ್ನು ಜನರ ಬೆಂಬಲಿಸಿದ್ದಾರೆ. ಈ ಕ್ಷೇತ್ರಗಳಲ್ಲಿಯ ಭರ್ಜರಿ ಗೆಲುವಿನ ಯಶಸ್ಸಿಗೆ ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ. ಆಡಳಿತ ಪಕ್ಷದ ವರ್ಚಸ್ಸು, ವ್ಯವಸ್ಥಿತ ರಾಜಕೀಯ ತಂತ್ರಗಾರಿಕೆ, ಗ್ಯಾರಂಟಿ ಯೋಜನೆಗಳು ಕೈ ಹಿಡಿದಿವೆ. ಮೂರು ವರ್ಷ ಕಳೆದರೂ ವಿಪಕ್ಷಗಳು ಎಷ್ಟೇ ಬೊಬ್ಬೆ ಹಾಕಿದರೂ ಜನರು ಪಕ್ಷವನ್ನು ಆಶೀರ್ವದಿಸಿದ್ದು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಗೆ ಮುಖಭಂಗವಾಗಿದೆ ಎಂದಿದ್ದಾರೆ.

ಶುಭ ವಿವಾಹ

ಸೃಷ್ಠಿ– ಶಿವಶಾಂತ

ಕಲಬುರಗಿ: ಇಲ್ಲಿಯ ಕರುಣೇಶ್ವರ ನಗರದ ಸುಧಾ ಮತ್ತು ಮಲ್ಲಿಕಾರ್ಜುನ ಹೊಸಮಠ ಅವರ ಪುತ್ರಿ ಹಾಗೂ ಕೃಷ್ಣಾ ಗ್ರಾಮೀಣ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕಿ ಸೃಷ್ಠಿ ವಿವಾಹವು, ಕೊಪ್ಪಳದ ಮಲ್ಲಮ್ಮ ಮತ್ತು ಪಂಪಯ್ಯಾ ಹಿರೇಮಠ ಅವರ ಪುತ್ರ ಹಾಗೂ ಕೃಷಿ ಇಲಾಖೆಯ ಶಿವಶಾಂತ ಜೊತೆ ಕೊಪ್ಪಳದ ಶ್ರೀ ಮಹಾಂತಯ್ಯನಮಠ ಕಲ್ಯಾಣ ಮಂಟಪದಲ್ಲಿ ದಿ. 3ರಂದು ಜರುಗಿತು.

ಶಿವಾನಂದ –ಗೌರಿ

ಕಲಬುರಗಿ: ಸಿಂದಗಿ ತಾಲೂಕಿನ ಯರಗಲ್ (ಬಿ.ಕೆ) ಗ್ರಾಮದ ದಿವ್ಯ ಮತ್ತು ದೇವಪ್ಪಯ್ಯ ಮಠ ಅವರ ಪುತ್ರ ಶಿವಾನಂದ ವಿವಾಹವು,
ಬೆಂಗಳೂರಿನ ಹೊಸಕೋಟೆಯ ಗೀತಾ ಮತ್ತು ಕೃಷ್ಣಾ ಜೋಶಿಯವರ ಪುತ್ರಿ ಗೌರಿ ಜೊತೆ ಬೆಂಗಳೂರಿನ ಉಪ್ಪಾರಹಳ್ಳಿಯ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ದಿ. 3ರಂದು ಜರಗಿತು.

ರಾಷ್ಟ್ರೀಯ ಆರೋಗ್ಯ ಮಿಷನ್ ಎನ್.ಕ್ಯೂ.ಎ.ಎಸ್ ಮಾನದಂಡ | ಶೇ 91.27ರಷ್ಟು ಅಂಕಗಳೊಂದಿಗೆ ಅಭೂತಪೂರ್ವ ಸಾಧನೆ

ಮಸರಕಲ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರಾಷ್ಟ್ರೀಯ ಗೌರವ

ಸಂ.ಕ.ಸಮಾಚಾರ ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಮಸರಕಲ್ ಪ್ರಾಥಮಿಕ ಆರೋಗ್ಯ ಕೇಂದ್ರವು ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿಯಲ್ಲಿ ಜಾರಿಯಲ್ಲಿರುವ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡಗಳ (ಎನ್.ಕ್ಯೂ.ಎ.ಎಸ್.) ಪರಿಶೀಲನೆಯಲ್ಲಿ ಶ್ರೇಷ್ಠ ಸಾಧನೆ ಮಾಡಿ ರಾಷ್ಟ್ರೀಯ ಮಟ್ಟದ ಗುಣಮಟ್ಟ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದು, ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು ಹರ್ಷ ವ್ಯಕ್ತಪಡಿಸಿದ್ದಾರೆ.

ಇತ್ತೀಚಿಗೆ ಕೇಂದ್ರ ತಂಡದ ಮಹಾರಾಷ್ಟ್ರದ ಡಾ.ಶ್ರೀಶೈಲ್ ಪಾಟೀಲ್ ಹಾಗೂ ತಮಿಳುನಾಡಿನ ಕಾವೇರಿ ಸೇಲ್ವಿ ಅವರ ತಂಡ ಕೈಗೊಂಡ ಸಮಗ್ರ ಮೌಲ್ಯಮಾಪನದಲ್ಲಿ ಮಸರಕಲ್ ಒಟ್ಟಾರೆ ಶೇ 91.27ರಷ್ಟು ಅಂಕಗಳನ್ನು ಗಳಿಸಿರುವುದು ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಯಾಗಿದೆ. ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮೂಲ ಸೌಕರ್ಯ, ರೋಗಿ ಸ್ನೇಹಿ ಸೇವೆಗಳು, ಆಸ್ಪತ್ರೆಯ ಸ್ವಚ್ಛತೆ, ಔಷಧಗಳ ಲಭ್ಯತೆ, ತುರ್ತು ಚಿಕಿತ್ಸಾ ವ್ಯವಸ್ಥೆ, ದಾಖಲೆ ನಿರ್ವಹಣೆ ಸೇರಿದಂತೆ ಹಲವು ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿತ್ತು. ಈ ಎಲ್ಲ ವಿಭಾಗಗಳಲ್ಲಿ ಉತ್ತಮ ಕಾರ್ಯನಿರ್ವಹಣೆ ತೋರಿದ ಪರಿಣಾಮ ಉನ್ನತ ಅಂಕಗಳನ್ನು ಪಡೆದುಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ. ಇದನ್ನು ಮಾನದಂಡವಾಗಿ ಪರಿಗಣಿಸಿ ಜಿಲ್ಲೆಯ ಉಳಿದ ಕೇಂದ್ರಗಳನ್ನು ಈ ದಿಶೆಯಲ್ಲಿ ರೂಪಿಸಲಾಗುವುದು. ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಗ್ರಾಮೀಣ ಪ್ರದೇಶಗಳಲ್ಲಿಯೂ ಉತ್ತಮ ಮತ್ತು ಮಾನದಂಡಗಳಿಗೆ ಅನುಗುಣವಾದ ಆರೋಗ್ಯ ಸೇವೆಗಳನ್ನು ಒದಗಿಸುವ ಸರ್ಕಾರದ ಉದ್ದೇಶವನ್ನು ಈ ಸಾಧನೆ ಸ್ಪಷ್ಟಪಡಿಸುತ್ತದೆ ಎಂದು ಹೇಳಿದ್ದಾರೆ.ನಿಗದಿತ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ, ಆಸ್ಪತ್ರೆಯ ಎಲ್ಲಾ ವಿಭಾಗಗಳಲ್ಲಿ ಗುಣಮಟ್ಟವನ್ನು ಕಾಪಾಡಿಕೊಂಡಿರುವುದರಿಂದಲೇ ಈ ಯಶಸ್ಸು ಸಾಧ್ಯವಾಗಿದೆ.ವೈದ್ಯರು, ನರ್ಸಿಂಗ್ ಸಿಬ್ಬಂದಿ ಹಾಗೂ ಇತರ ಆರೋಗ್ಯ ಸಿಬ್ಬಂದಿಯ ಪರಿಶ್ರಮ ಮತ್ತು ಸಮರ್ಪಣೆಯು ಅಡಗಿದೆ ಎಂದು ತಿಳಿಸಿದ್ದಾರೆ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಸರಕಲ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಎನ್‌ಕ್ಯೂಎಸ್‌ನ ರಾಷ್ಟ್ರೀಯ ಗೌರವ

ಸಾಧನೆ ಹೇಗೆ ಸಾಧ್ಯವಾಯಿತು.?

ಪ್ರತಿದಿನವೂ ರೋಗಿಗಳಿಗೆ ಗುಣಮಟ್ಟದ ಸೇವೆ ನೀಡುವ ದೃಷ್ಟಿಯಿಂದ ತಂಡವಾಗಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ನಿಷ್ಠೆ ಮತ್ತು ಸೇವಾಭಾವನೆ ಜೊತೆಗೆ ಸ್ಥಳೀಯ ಜನರ ಸಹಕಾರ, ಆರೋಗ್ಯ, ಜಾಗೃತಿ ಕಾರ್ಯಕ್ರಮಗಳಲ್ಲಿ ಅವರ ಸಕ್ರಿಯ ಭಾಗವಹಿಸುವಿಕೆ ಹಾಗೂ ಆಸ್ಪತ್ರೆಯ ಮೇಲಿನ ವಿಶ್ವಾಸವೂ ಈ ಸಾಧನೆಯನ್ನು ಸಾಧ್ಯವಾಗಿಸಿದೆ.

ಇದಲ್ಲದೆ ಜನಪ್ರತಿನಿಧಿಗಳು, ಶಾಸಕರು ಮತ್ತು ಸಂಸದರು, ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತದಿಂದ ದೊರೆತ ಮಾರ್ಗದರ್ಶನ ಮತ್ತು ಬೆಂಬಲವೂ ಈ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಇದಕ್ಕಾಗಿ ತಾಲುಕಾ ಆರೋಗ್ಯಾಧಿಕಾರಿ ಡಾ ಬನದೇಶ, ಆಡಳಿತ ವೈದ್ಯಾಧಿಕಾರಿ ಡಾ ಶಂಶುದ್ದೀನ್, ಜಿಲ್ಲಾ ಗುಣಮಟ್ಟ ಭರವಸೆ ಸಲಹೆಗಾರರಾದ ಹರೀಶ್ ಪತಂಗೆ, ಸತತ ನಿಗಾವಣೆ, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳ ಸಲಹೆ ಸಿಬ್ಬಂದಿಯವರಾದ ಮಲ್ಲಯ್ಯ ಹಿರೇಮಠ, ಪರವೇಜ್ ಸೇರಿದಂತೆ ಎಲ್ಲ ಸಿಬ್ಬಂದಿಗಳ ಕಠಿಣ ಪರಿಶ್ರಮದಿಂದ ಈ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ಸಾಧ್ಯವಾಯಿತು ಎಂದರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿವೃದ್ಧಿಗೆ ಮನ್ನಣೆ ನೀಡಿದ ಜನಾದೇಶ

ಮೂರು ರಾಜ್ಯಗಳಲ್ಲಿ ಬಿಜೆಪಿಗೆ ಭರ್ಜರಿ ಜಯ | ಪಟಾಕಿ ಸಿಡಿಸಿ, ಸಿಹಿ ಹಂಚಿ ಕಾರ್ಯಕರ್ತರ ವಿಜಯೋತ್ಸವ

ಸಂ.ಕ. ಸಮಾಚಾರ ಯಾದಗಿರಿ: ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಜಯ ಗಳಿಸಿದ ಹಿನ್ನೆಲೆ ಜಿಲ್ಲಾ ಬಿಜೆಪಿ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಸೇರಿ ಸಂಭ್ರಮಾಚ–ರಿಸಿದರು. ನಗರದ ನೇತಾಜಿ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿದರು. ಈ ವೇಳೆ, ಬಿಜೆಪಿ ಪಕ್ಷಕ್ಕೆ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರಿಗೆ ಜಯಘೋಷ ಹಾಕಿದರು. ಪಶ್ಚಿಮ ಬಂಗಾಳದಲ್ಲಿ ಪಡೆದ ಜಯಕ್ಕಾಗಿ ದೀದಿ ಹೋದ್ರು, ದುರ್ಗಾ ಬಂದ್ರು ಎಂಬ ಘೋಷ ಕೂಗಿದರು.

ಮುಖಂಡರು ಮಾತನಾಡಿ, ನಮ್ಮ ದೇಶದಲ್ಲಿ ನಡೆದ ಪಂಚ ರಾಜ್ಯಗಳ ಚುನಾವಣೆಯಲ್ಲಿ ಮತದಾರರು ಸ್ಪಷ್ಟವಾಗಿ ಮೋದಿ ನೇತೃತ್ವವನ್ನು ಅಪ್ಪಿಕೊಂಡಿದ್ದಾರೆ. ಭಾರತೀಯ ಜನತಾ ಪಾರ್ಟಿ ಪರವಾಗಿ ನಿಲುವನ್ನು ವ್ಯಕ್ತಪಡಿಸುವ ಮೂಲಕ ಅಭಿವೃದ್ಧಿಗೆ ಮನ್ನಣೆ ನೀಡಿದ್ದಾರೆ ಎಂದರು. ಐದು ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಎನ್‌ಡಿಎ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ರಚನೆ ಮಾಡಬಹುದಾಗಿದೆ. ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚನೆ ಸ್ಪಷ್ಟವಾಗಿ ಕಾಣುತ್ತಿದೆ. ಅಸ್ಸಾಂನಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿ ಮತ್ತೊಮ್ಮೆ ಸರ್ಕಾರ ರಚನೆ ಮಾಡುತ್ತಿದ್ದೇವೆ. ಪುದುಚೇರಿಯಲ್ಲಿ ಸಹ ಎರಡನೇ ಬಾರಿ ಸರ್ಕಾರ ರಚನೆ ಮಾಡುತ್ತಿದ್ದೇವೆ. ತಮಿಳುನಾಡಿನಲ್ಲಿಯೂ ಎನ್‌ಡಿಎ ಬೆಂಬಲದಿಂದ ಸರ್ಕಾರ ರಚನೆ ಮಾಡುವ ವಿಶ್ವಾಸವಿದೆ ಎಂದು ಹೇಳಿದರು.



ಯಾದಗಿರಿಯ ನೇತಾಜಿ ವೃತ್ತದಲ್ಲಿ ಬಿಜಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶರಡ್ಡಿ ಮುದ್ನಾಳ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಅಲೆಮಾರಿ ಅರೆಅಲೆಮಾರಿ ನಿಗಮದ ಮಾಜಿ ಅಧ್ಯಕ್ಷ ದೇವಿಂದ್ರನಾಥ ನಾದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರುಶುರಾಮ ಕುರುಕುಂದಿ, ವೆಂಕಟರೆಡ್ಡಿ ಅಬ್ಬೆತುಮಕೂರು, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ನಗರಸಭೆ ಮಾಜಿ ಅಧ್ಯಕ್ಷ ವಿಲಾಸ್ ಪಾಟೀಲ್, ಯುಡ ಮಾಜಿ ಅಧ್ಯಕ್ಷ ರುದ್ರುಗೌಡ ಪಾಟೀಲ್, ಡಾ. ಶರಣರಡ್ಡಿ ಕೊಡ್ಲ, ಶ್ರೀದೇವಿ ಶೆಟ್ಟಿಹಳ್ಳಿ, ರಮಾದೇವಿ ಕಾವಲಿ, ಸ್ವಾಮಿದೇವ ದಾಸನಕೇರಿ, ರಮೇಶ್ ದೊಡಮನಿ, ರಾಜುಸ್ವಾಮಿ ಅನಂಪಲೀ, ಅಪ್ಪಣ್ಣ ಜೈನ್, ಮಂಜುನಾಥ ಜಡಿ, ಗೊವಿಂದಪ್ಪ ಖಾನಾಪುರ, ಚನ್ನವಿರಯ್ಯ ಸ್ವಾಮಿ, ಲಕ್ಷ್ಮೀಪುತ್ರ ಮಾಲಿಪಾಟೀಲ, ಮೋನೇಶ ಬೇಳಿಗೇರ, ದೇವಿಂದ್ರಪ್ಪ ಯರಗೋಳ, ಮಹದೇವಪ್ಪ ಗಣಪುರ, ಸಾಬು ಬಗಲಿ, ಮಲ್ಲುಸ್ವಾಮಿ ಗುರುಸುಣಗಿ, ಶಿವರಾಜ ಗುತ್ತೇದಾರ್, ಸಾಲು ಯಡ್ಡಳ್ಳಿ ಅನೇಕ ಕಾರ್ಯಕರ್ತರು ಇದ್ದರು.

ಸುದ್ದಿ ಮಿಂಚು

ಕಾಂಗ್ರೆಸ್ ಗೆಲುವಿಗೆ ಎಂಎಲ್ಸಿ ಹರ್ಷ

ರಾಯಚೂರು: ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ 21800 ಮತಗಳ ಅಂತರದಿಂದ ಗೆಲವು ಸಾಧಿಸಿರುವದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷದ ಸರಕಾರಕ್ಕೆ ಜನತೆ ನೀಡಿದ ಬೆಂಬಲವಾಗಿದೆ ಎಂದು ಬಾಗಲಕೋಟ ವಿಧಾನಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾದ

ಎ.ವಸಂತಕುಮಾರ ಹರ್ಷ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರು 97000 ಮತಗಳನ್ನು ಪಡೆದು ಬರ್ಜರಿ ಗೆಲುವು ಸಾಧಿಸಿದ್ದಾರೆ. ಈ ಚುನಾವಣೆಯು ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ಎರಡು ವರ್ಷಗಳ ನಂತರದಲ್ಲಿ ನಡೆಯುವ ರಾಜ್ಯ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಮುನ್ನುಡಿಯಾಗಿದೆ. ರಾಜ್ಯದ ಜನತೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೀಡಿದ ಬೆಂಬಲವಾಗಿದೆ. 2028ರಲ್ಲಿಯೂ ಸಹ ಕಾಂಗ್ರೆಸ್ ಪಕ್ಷದ ಸರಕಾರವೇ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ ಎನ್ನುವದಕ್ಕೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ಗೆ ಹಗಲಿರುಳು ಶ್ರಮಿಸಿದ ಸತೀಶ ಜಾರಕಿಹೊಳಿ, ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪುರ, ಮುಖ್ಯ ಮಂತ್ರಿ ಸಿದ್ದರಾಮಯ್ಯನವರು, ಡಿ.ಕೆ.ಶಿವಕುಮಾರ, ಎಲ್ಲ ಸಚಿವರು, ಶಾಸಕರು ಹಾಗೂ ಎಲ್ಲಾ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಲಿಂಗಸುಗೂರ ಸಹಾಯಕ ಆಯುಕ್ತರಿಗೆ ಬೀದಿಬದಿ ಕಂಪ್ಯೂಟರ ಅಂಗಡಿ ವ್ಯಾಪರಸ್ಥರು ಮನವಿ ಪತ್ರ ಸಲ್ಲಿಸಿದರು.

ಅಂಗಡಿಗಳನ್ನು ತೆರವುಗೊಳಿಸದಂತೆ ವ್ಯಾಪಾರಸ್ಥರ ಒತ್ತಾಯ

ಸಂ.ಕ.ಸಮಾಚಾರ ಲಿಂಗಸುಗೂರ : ಪಟ್ಟಣದ ಬೀದಿಬದಿ ಕಂಪ್ಯೂಟರ ಅಂಗಡಿ ಇಟ್ಟುಕೊಂಡು 20-25ವರ್ಷಗಳಿಂದ ನಮ್ಮ ಕುಟುಂಬ ನಿರ್ವಹಣೆಯನ್ನು ಮಾಡುತ್ತಾ ಬಂದಿರುತ್ತೇವೆ ನಾವು ವಿದ್ಯಾವಂತ ನಿರುದ್ಯೋಗಿಗಳಾಗಿದ್ದು ದಿನಾಂಕ 30-04-2026ರಂದು ಜೇಸ್ಕಾಂ ಎಇಇ ಕಾರ್ಯನಿರ್ವಹಿಸುತಿರುವ ಸ್ಥಳದಲ್ಲಿ ವಿದ್ಯುತ್ ಕಡಿತಕ್ಕೆ ನೋಟಿಸ ನೀಡಿದ್ದು ಕಾರಣ ಅಂಗಡಿಗಳನ್ನು ತೆರವುಗೋಳಿಸದಂತೆ ಆದೇಶಿಸಬೇಕು ಎಂದು ಬೀದಿಬದಿ ಕಂಪ್ಯೂಟರ ಅಂಗಡಿ ವ್ಯಾಪರಸ್ಥರು ಸಹಾಯಕ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದರು.

ನಮಗೆ ಪುರಸಭೆಯಿಂದ ಬೀದಿಬದಿ ವ್ಯಾಪಾರಿಗಳ ಗುರುತಿನ ಪತ್ರವನ್ನು ನೀಡಿ ಪುರಸಭೆಯಿಂದ ಕೇಂದ್ರ ಸರಕಾರದಿಂದ ವಿದ್ಯಾವಂತ ನಿರುದ್ಯೋಗಿಗಳಾದ ನಮಗೆ ಬ್ಯಾಂಕಿನಿಂದ ಸಾಲ ಸೌಲಭ್ಯ ಮಂಜೂರು ಮಾಡಿದ್ದು, ಈಗ ನಾವು ಪಡೆದುಕೊಂಡ ಸಾಲವನ್ನು ನಮ್ಮ ದೈನಿಂದಿನ ವ್ಯವಹಾರದಲ್ಲಿ ಸಾಲದ ಕಂತುಗಳನ್ನು ಪ್ರತಿ ತಿಂಗಳು ತುಂಬಿ ಸಾಲವನ್ನು ಮರುಪಾವತಿ ಮತ್ತು ನಮ್ಮ ಕುಟುಂಬ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದೇವೆ.

ಏಕಾ ಏಕಿ ನಮ್ಮ ಅಂಗಡಿಯ ವಿದ್ಯುತ್ ಕಡಿತಗೊಳಿಸುವಂತೆ ನೋಟಿಸ್ ಜಾರಿ ಮಾಡಿದ್ದರಿಂದ ನಮ್ಮ ಕುಟುಂಬ ನಿರ್ವಹಣೆ ಮತ್ತು ತಾವು ನೀಡಿದ ಸಾಲವನ್ನು ಬ್ಯಾಂಕಿಗೆ ಮರು ಪಾವತಿ ಮಾಡುವದು ತುಂಬಾ ಸಮಸ್ಯೆಯಾಗುತ್ತದೆ. ನಮ್ಮ ಅಂಗಡಿಗಳನ್ನು ಇಲ್ಲಿಂದ ತೆರವುಗೊಳಿಸಲು ಮುಂದಾದರೆ ನಮಗೆ ಸರಕಾರದ ತಮ್ಮ ಅಧೀನಲ್ಲಿ ಬರುವ ಜಾಗವನ್ನು ನೀಡಿ ನಮ್ಮ ಕುಟುಂಬ ಮತ್ತು ಬ್ಯಾಂಕಿನಿಂದ ಪಡೆದ ಸಾಲವನ್ನು ಮರು ಪಾವತಿ ಮಾಡಲು ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಸಂಧರ್ಬದಲ್ಲಿ ಬೀದಿಬದಿ ಕಂಪ್ಯೂಟರ ಅಂಗಡಿ ವ್ಯಾಪರಸ್ಥರಾದ ಬಸವರಾಜ ಗುಂಟಿ, ಅಜಾರ, ಪ್ರತಾಪ ಸಿಮಗ, ವಿಜಯ ಸಿಂಗ, ನವೀನ ಕುಮಾರ, ನವಾಬ, ರಜಾಕ, ಸುರೇಶ ಹಾಗೂ ಇತರರು ಇದ್ದರು.

ಜಿಟಿಟಿಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ರಾಯಚೂರು: ಜಿಲ್ಲೆಯ ಲಿಂಗಸುಗೂರಿನ ಕರಡಕಲ್ ರಸ್ತೆಯ ಬಳಿ ಸ್ಥಾಪಿತವಾಗಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ದ ವತಿಯಿಂದ 2026-27ನೇ ಸಾಲಿನಲ್ಲಿ ವಿವಿಧ ಕೋರ್ಸಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಭಾಗದಲ್ಲಿನ ಪ್ರತಿಷ್ಠಿತ ತಾಂತ್ರಿಕ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದೆ. ನಮ್ಮ ಸಂಸ್ಥೆಯಿಂದ ನಡೆಸಲ್ಪಡುವ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಆಟೊಮೇಷನ್ ಅಂಡ್ ರೊಬೊಟಿಕ್ಸ್, ಡಿಪ್ಲೊಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ 3+1ವರ್ಷದ ಕೋರ್ಸ್‌ಗಳ ಪ್ರವೇಶಾತಿಗಾಗಿ ಮೇ.15ರೊಳಗಾಗಿ ಜಿಟಿಟಿಸಿ ವೆಬ್‌ಸೈಟ್:ಢಣಣಠಿ://ರಣಣಛಿ.ಇಚಿಡಿಟಿಚಿಣಚಿಞಚಿ.ರಠತ.ಟಿ ನಲ್ಲಿ ಅಥವಾ ನೇರವಾಗಿ ಸಂಸ್ಥೆಗೆ ಅಗತ್ಯ ದಾಖಲಾತಿಗಳೊಂದಿಗೆ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: 9902072101, 8762564872ಗೆ ಸಂಪರ್ಕ ಮಾಡಬಹುದು ಪ್ರಾಂಶುಪಾಲರು ತಿಳಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗಳಿಗೆ ಅರ್ಜಿ ಆಹ್ವಾನ

ರಾಯಚೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ವತಿಯಿಂದ 2022-23, 2023-24, 2024-25 ಮತ್ತು 2025-26ನೇ ಸಾಲಿಗೆ ಅಂಗನವಾಡಿ ಕಂ ಕ್ರಷ್‌ಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರಾರಂಭಿಸಲು ಸೂಚಿಸಲಾಗಿದೆ. ಜಿಲ್ಲೆಗೆ ಒಟ್ಟು 60 ಕೇಂದ್ರಗಳು ಮಂಜೂರಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಂಗನವಾಡಿ ಕಂ ಕ್ರಷ್ ಕೇಂದ್ರ್ರಗಳ ಕಾರ್ಯಕರ್ತೆ ಗೌರವಧನ 5,500 ರೂ. ಮತ್ತು ಸಹಾಯಕಿ ಗೌರವಧನ 3,000 ರೂ. ನೀಡಲಾಗುವುದು. ಅಭರ್ಥಿಯು ಸ್ಥಳಿಯ ಅಂಗನವಾಡಿ ಕಂ ಕ್ರಷ್ ಕೇಂದ್ರದ ಸರ್ವೆ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಪಟ್ಟ ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯಿಂದ ಸರ್ವೆವ್ಯಾಪ್ತಿಯಲ್ಲಿರುವ ಬಗ್ಗೆ ದೃಡೀಕರಣ ಪಡೆದು ಸಲ್ಲಿಸಬೇಕು. ಅಭ್ಯರ್ಥಿಯು ಮಹಿಳೆ ಆಗಿರಬೇಕು. ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆ ಆಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷ ಮಂಡಳಿ ನಡೆಸುವ 10ನೇ ತರಗತಿಯಲ್ಲಿ ತೇರ್ಗಡೆ ಆಗಿರುವವರನ್ನು ಅಥವಾ ತತ್ಸಮಾನ ವಿಧ್ಯಾರ್ಹತೆ ಹೊಂದಿರುವವರನ್ನು ಪರಿಗಣಿಸಬಹುದಾಗಿದೆ. ವಯೋಮಿತಿ ಅರ್ಜಿ ಸಲ್ಲಿಸಲು ನೇಮಕಾತಿ ಅಧಿಸೂಚನೆ ಹೊರಡೊಸಿದ ದಿನಾಂಕಕ್ಕೆ ಕನಿಷ್ಠ 18 ವರ್ಷ ಪೂರ್ಣಗೊಂಡಿರಬೇಕು. ಮತ್ತು ಗರಿಷ್ಠ 35 ವರ್ಷ ಮೀರಿರಬಾರದು. ವಿಧವೆಯರು ಮತ್ತು ಅಂಗವಿಕಲರಿಗೆ 10 ವರ್ಷ ವಯೋಮಿತಿಯಲ್ಲಿ ರಿಯಾಯಿತಿ ಇರುತ್ತದೆ. ಅಭ್ಯರ್ಥಿಯು 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಥವಾ ಕನ್ನಡವನ್ನು ಒಂದು ಬಾಷಾ ವಿಷಯವಾಗಿ ಓದಿರಬೇಕು. ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ 6 ತಿಂಗಳಿಂದ 6 ವರ್ಷದ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನಿಷ್ಠ 6 ತಿಂಗಳ ಅವಧಿಯ ವಿಷಯವನ್ನು ಅಥವಾ ತರಬೇತಿಯನ್ನು ಪಡೆದಿರಬೇಕು. ರಾಷ್ಟ್ರೀಯ ಶಿಶುಪಾಲನಾ ಕೇಂದ್ರದಲ್ಲಿ ಸೇವೆ ಸಲ್ಲಿಸಿರುವ ಶಿಕ್ಷಕಿ ಹಾಗೂ ಸಹಾಯಕಿ, ವಿಧವೆಯರು, ವಿಶೇಷಚೇತನರು (ಕನಿಷ್ಠಶೇ40 ಗರಿಷ್ಠ ಶೇ60 ರಷ್ಟು ವಿಕಲಚೇತನರು ಮಾತ್ರ ಪರಿಗಣಿಸತಕ್ಕದ್ದು, ಇಲಾಖಾ ಸಂಸ್ಥೆಯ ನಿವಾಸಿಗಳು 18-05-2026ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಿಂಧನೂರು, ತುರುವಿಹಾಳ, ಲಿಂಗಸುಗೂರು, ಮಾನವಿ, ದೇವದುರ್ಗ, ಸಿರವಾರ, ಗಿಲ್ಲೇಸುಗೂರು, ಮತ್ತು ರಾಯಚೂರು ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕ ಮಾಡಬಹುದು ಮೊಬೈಲ್ ಸಂಖ್ಯೆ: 7619281523ಗೆ ಸಂಪರ್ಕ ಮಾಡಬಹುದಾಗಿದೆ.

ಜಯಂತಿ ಆಚರಣೆಗಳು ಅರ್ಥಪೂರ್ಣವಾಗಿರಬೇಕು

ಗುರುಗುಂಟಾದಲ್ಲಿ ಬಸವ ಜಯಂತಿ ಆಚರಣೆಯಲ್ಲಿ ಅಭಿನವ ಶ್ರೀಗಳು ಸಲಹೆ

ಗುರುಗುಂಟಾ : ಜಯಂತಿ ಆಚರಣೆಗಳು ಕಾಟಾಚಾರಕ್ಕಾಗದೆ ಅರ್ಥಪೂರ್ಣವಾಗಿ ಆಚರಿಸಿ ಎಂದು ದೇವರ ಭೂಪೂರಿನ ಬೃಹನ್ಮಠದ ಅಮರೇಶ್ವರ ದೇವರ ಗುರು ಅಭಿನವ ಗಜದಂಡ ಶಿವಾಚಾರ್ಯರು ಕರೆ ನೀಡಿದರು. ಅವರು ಸ್ಥಳೀಯ ವೀರಶೈವ ಸಮಾಜದಿಂದ ಗ್ರಾಮದಲ್ಲಿ ಭಾನುವಾರ ಹಮ್ಮಿಕೊಂಡ ಬಸವ ಜಯಂತಿಯ ಮೆರವಣಿಗೆಗೆ ಚಾಲನೆ ನೀಡಿ ನಂತರ ಮಾತನಾಡಿದ ಅವರು, ಬಸವ ಜಯಂತಿಯ ರಜೆ ದಿನವನ್ನು ಮೋಜನ್ನಾಗಿ ಬಳಸಿಕೊಳ್ಳದೆ ಹೆಚ್ಚಿನ ಸಂಖ್ಯೆಯಲ್ಲಿ ಭಾಂಧವರು ಪಾಲ್ಗೊಂಡು ಅರ್ಥಪೂರ್ಣ ಆಚರಣೆಯಾಗಬೇಕಾದರೆ ಸಹಭಾಗಿತ್ವ ಅಗತ್ಯ ಎಂದರು. ಜಯಂತಿಗಳು ಮೆರವಣಿಗೆಗೆ ಸೀಮಿತವಾಗದೆ ಸಮಾಜದ ತಾತ್ವಿಕ ಕ್ರಾಂತಿಕಾರಿಯಾಗಿ ಅಧಿಕಾರಕ್ಕಿಂತ ಧರ್ಮ, ನೈತಿಕತೆ, ಸಮಾನತೆಯೇ ಮೂಲವೆಂದ ಬಸವಾದಿ ಶರಣ ವಿಚಾರಧಾರೆಗಳು ಪ್ರತಿ ಮನೆ, ಮನಗಳಿಗೆ ಮುಟ್ಟಿಸುವ ಕೆಲಸ ಆಗಬೇಕು. ಅಂದಾಗ ಆಚರಣೆಗೆ ಅರ್ಥ ಬಂದೀತು ಎಂದು ಅಭಿಮತ ವ್ಯಕ್ತಪಡಿಸಿದರು.

ನಂತರ ಶ್ರೀ ಬಸವೇಶ್ವರ ಬೃಹತ್ ಭಾವಚಿತ್ರವನ್ನು ಸರ್ವಾಲಂಕೃತಗೊಂಡ ಸಾರೋಟದಲ್ಲಿ ಪ್ರತಿಷ್ಠಾಪಿಸಿ, ಕಳಸದ ಗುಡಿಯಿಂದ ಅಪಾರ ಪ್ರಮಾಣದ ಬಸವ ಭಕ್ತರ, ಶರಣ ಶರಣೆಯರ, ಸುಮಂಗಲೆಯರ ಪೂರ್ಣ ಕುಂಭ ಕಳಸ ಮತ್ತು ಜನಪದ ವಾದ್ಯ ಮೇಳಗಳೊಂದಿಗೆ ಮೋಮಿನ್‌ಗಲ್ಲಿ,

ಗುರುಗುಂಟಾದಲ್ಲಿ ವೀರಶೈವ ಸಮಾಜ ಬಸವ ಜಯಂತಿಯನ್ನು ವೈಭವದೊಂದಿಗೆ ಆಚರಿಸಿದ ಮೆರವಣಿಗೆಯಲ್ಲಿ ರಾಜಾಸೋಮನಾಥ ನಾಯಕರೊಂದಿಗೆ ಸಮಾಜದ ಬಾಂಧವರು.

ಮರಾಠಗಲ್ಲಿ, ಸಂತೆಮಾರ್ಕೆಟ್, ಚಕ್ರ ಕಟ್ಟಿ, ಕುಂಬಾರ, ಮುಖ್ಯಬೀದಿ, ಚಿದಾನಂದಗುಡಿ ರಸ್ತೆ ಮೂಲಕ ಆಕರ್ಷಕ ಮೆರವಣಿಗೆ ನಡೆಸಿ ಕಲಶದ ಗುಡಿ ತಲುಪಿದರು.

ನಂತರ ಅತೀ ಹೆಚ್ಚು ಅಂಕ ಪಡೆದ ಒಟ್ಟು ಎಂಟು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದರು. ಅನ್ನಪ್ರಸಾದ ವ್ಯವಸ್ಥೆ ಕಲ್ಪಿಸಿದ್ದರು. ಈ ಸಂಧರ್ಭದಲ್ಲಿ ಮುಖಂಡರಾದ ಬಸವರಾಜ ನಂದಿಕೋಲಮಠ, ಗುಂಡಣ್ಣ ಅರಳಿ, ಅಮರಯ್ಯ ತಾತಾ ಕೋಟಾ, ಗುಂಡಪ್ಪ ಕುಂಬಾರ್,ಅಮರೇಶ ಜಾನೇಕಲ್, ವೇಮೂ॥ ಮಲ್ಲಿಕಾರ್ಜುನಸ್ವಾಮಿ, ರೇವಣಸಿದ್ಧ ಸ್ವಾಮಿ, ವಕೀಲ ಶರಣಬಸವ ಪಟ್ಟಣಶೆಟ್ಟಿ, ಸಂಗಮೇಶ ಪಟ್ಟಣಶೆಟ್ಟಿ, ದೇವರಾಜ್ ಎಲಿಗಾರ್, ಗ್ರಾಪಂ ಮಾಜಿ ಸದಸ್ಯ ಆದೇಶ ಹಡಪದ, ಆದಪ್ಪ ಕುಂಬಾರ, ಸಂಗಮೇಶ ಪಟ್ಟಣಶೆಟ್ಟಿ, ಶರಣಬಸವ ಬಲ್ಲಟಗಿ, ಸೋಮು ತಾತಾ, ಶರಣಬಸವ ಸಜ್ಜನ್, ಅಮರೇಶ ಹಡಪದ, ವಿರೇಶ್ ಕೋರ್ಟ್, ಶರಣಬಸವ ಸಾಲಿಮಠ, ವಿರೂಪಾಕ್ಷ ಗೌಡ, ಶಶಿ ಹಿರೇಮಠ, ಗಜ ಅರನೂರು, ಬಸವರಾಜ ಹೂಗಾರ್ ಇದ್ದರು.

ವ್ಯವಸ್ಥೆ : ಮೆರವಣಿಗೆಯ ಅಲ್ಲಲ್ಲಿ ಮಜ್ಜಿಗೆ,ತಂಪುಪಾನೀಯ ವ್ಯವಸ್ಥೆ ಕಲ್ಪಿಸಿದ್ದರು. ಬಂದ್:ವೀರಶೈವ ಸಮಾಜದ ಎಲ್ಲಾ ವ್ಯಾಪಾರ- ವಹಿವಾಟುಗಳು ಸ್ಥಗಿತಗೊಂಡಿದ್ದವು. ಮೆರಗು: ತೊಟ್ಟ ಒಂದೇ ವರ್ಣದ ಉಡುಪು ಮೆರವಣಿಗೆಗೆ ಮೆರಗು ತಂತು. ಬಂದೋಬಸ್ : ಮೆರವಣಿಗೆಗೆ ಹಟ್ಟಿ ಪಿಎಸ್‌ಐ ಧರ್ಮಣ್ಣ, ಪ್ರಭುಗೌಡ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಿದ್ದರು.

ಉಪಚುನಾವಣೆಯಲ್ಲಿ ಗೆಲುವು: ಬ್ಲಾಕ್ ಕಾಂಗ್ರೆಸ್ ನಿಂದ ಸಿಹಿ ಹಂಚಿಕೆ

ಅರಕೇರಾ : ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳಲ್ಲಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿದ್ದು ಎರಡು ಕಡೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ವಿಜಯ ಪತಾಕೆ ಹಾರಿಸಿದ್ದಾರೆಂದು ಎಂದು ಪರಿಶಿಷ್ಟ ಪಂಗಡ ಅರಕೇರಾ ತಾಲೂಕು ಕಾಂಗ್ರೆಸ್ ಅಧ್ಯಕ್ಷರ ಬಸವರಾಜ ಪೂಜಾರಿಯವರು ಹೇಳಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಸಮರ್ಥ ಶಾಮನೂರು ಅಂತರದಿಂದ ಕಾಂಗ್ರೆಸ್ ಜಯಬೇರಿ ಭಾರಿಸಿದೆ.ಬಾಗಲಕೋಟೆಯಲ್ಲಿಉಮೇಶ ಮೇಟಿಯವರು ಗೆಲುವು ಸಾಧಿಸಿದ್ದಾರೆ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಆಯ್ಕೆಯಾಗುವ ಮೂಲಕ ಕ್ಷೇತ್ರದಲ್ಲಿ ತನ್ನ ಬಲವನ್ನು ಮತ್ತೊಮ್ಮೆ ಸಾಭಿತಪಡಿಸಿದೆ. ಉಪಚುನಾವಣೆ ಫಲಿತಾಂಶ ಹಿನ್ನೆಯಲ್ಲಿ ಅರಕೇರಾ

ಪಟ್ಟಣದಲ್ಲಿ ಅರಕೇರಾ ಬ್ಲಾಕ್ಲ ಕಾಂಗ್ರೆಸ್ ಪಕ್ಷದವತಿಯಿಂದ ವಿಜಯೋತ್ಸವವನ್ನು ಸಿಹಿ ಹಂಚುವ ಮೂಲಕ ಆಚರಣೆ ಮಾಡಲಾಯಿತು ಎಂದು ಬಸವರಾಜ ಪೂಜಾರಿ ಹೇಳಿದರು. ಈ ಸಂದರ್ಭದಲ್ಲಿ ಅರಕೇರಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ವಿರೇಶಶಾಖೆ ಹೆಮನೂರು, ಪ್ರಚಾರ ಸಮಿತಿ ಅಧ್ಯಕ್ಷ ಹನುಮಂತ್ರಾಯ ನಾಯಕ ಆಕಳಕುಂಪಿ, ಕಾಂಗ್ರೆಸ್ ವಕ್ತಾರ ರಾಜುನಾಯಕ, ಯುವಮೋರ್ಚಾ ಅಧ್ಯಕ್ಷ ರಾಜುಗೌಡ ಗೆಜ್ಜೆಭಾವಿ, ಸಿದ್ದಪ್ಪಕಬ್ಬೇರ, ಹನುಮಂತ್ರಾಯ ಸಾತಲ್, ಹನುಮಂ ತ್ರಾಯಗೌರ್ನಮೆಂಟ್,ಸಿದ್ದಯ್ಯಮಠಪತಿ, ರಾಘವೇಂದ್ರಪೂಜಾರಿ ಮುಂತಾದವರು ಉಪಸ್ಥಿತರಿದ್ದರು.

ಹಟ್ಟಿ ಸಂಪರ್ಕ ರಸ್ತೆ ಅಭಿವೃದ್ಧಿಗೆ ಆಗ್ರಹ

ಹಟ್ಟಿಚಿನ್ನದಗಣಿ : ಸಮೀಪದ ಗುಡದನಾಳದಿಂದ ಹಟ್ಟಿ ಪಟ್ಟಣಕ್ಕೆ ಹಾಗೂ ಲಿಂಗಸಗೂರು ಪಟ್ಟಣಕ್ಕೆ ಸಂಪರ್ಕ ಹೊಂದಿದ ರಸ್ತೆಯು ತೀವ್ರ ಹದಗೆಟ್ಟು ಹೋಗಿದ್ದು, ಈ ರಸ್ತೆ ಅಭಿವೃದ್ಧಿಗೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹಟ್ಟಿ ಪಟ್ಟಣದಿಂದ ಗುಡದನಾಳ ಮಾರ್ಗವಾಗಿ ಲಿಂಗಸಗೂರು ಪಟ್ಟಣಕ್ಕೆ ತೆರಳುವ ರಸ್ತೆಯು ತೀವ್ರ ಹಾಳಾಗಿ ಹೋಗಿದ್ದರಿಂದ ಕಾರ್ಮಿಕರು, ಕೂಲಿಕಾರ್ಮಿಕರು ಮತ್ತು ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಪ್ರಯಾಣಿಕರಿಗೆ, ವಾಹನ ಸವಾರರಿಗೆ ಓಡಾಡಲು ತೀವ್ರ ಹರಸಾಹಸ ಪಡುತ್ತಿರುವದು ಕಾಣಲಾಗುತ್ತಿದೆ. ಹಟ್ಟಿ ಪಟ್ಟಣದಿಂದ ಗುಡದನಾಳ ಮಾರ್ಗವಾಗಿ ಲಿಂಗಸಗೂರು ಪಟ್ಟಣಕ್ಕೆ ತೆರಳಲು 15 ಕಿ.ಮೀ ರಸ್ತೆಯಿದ್ದು

ಹಟ್ಟಿಚಿನ್ನದಗಣಿ ಸಮೀಪದ ಹಟ್ಟಿ-ಗುಡದನಾಳ-ಲಿಂಗಸಗೂರು ರಸ್ತೆಯುವ ತೀವ್ರ ಹದಗೆಟ್ಟು ಹೋಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವದು.

ಇದರಲ್ಲಿ ಇತ್ತೀಚಿಗೆ ಮಧ್ಯದ 4 ಕಿ.ಮೀ ರಸ್ತೆ ಶಾಸಕರಾದ ಮಾನಪ್ಪ ವಜ್ಜಲ್‌ರು ನೀಡಿದ ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಮಾಡಲಾಗಿದೆ, ಇನ್ನುಳಿಗೆ ಗುಡದನಾಳದಿಂದ ಹಟ್ಟಿವರೆಗೆ ಹಾಗೂ ಗುಡದನಾಳದಿಂದ ಲಿಂಗಸಗೂರು ಪಟ್ಟಣದವರೆಗೆ ರಸ್ತೆಯು ತೀವ್ರ ಹದಗೆಟ್ಟು ಹೋಗಿದ್ದು ಸದರಿ ರಸ್ತೆಯನ್ನು ಇದಕ್ಕೆ ಸಂಬಂಧಿಸಿದ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿ ಆದಷ್ಟು ಬೇಗನೆ ರಸ್ತೆ ಅಭಿವೃದ್ಧಿಪಡಿಸಿ ಈ ಮಾರ್ಗವಾಗಿ ಸಂಚಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೂರು ದಿನದ ಮಹಾಧಿವೇಶನ ಆಯೋಜನೆಗೆ ತೀರ್ಮಾನ

ಸೆಪ್ಟಂಬರ್ ತಿಂಗಳಲ್ಲಿ ಸಿಪಿಐಎಂಎಲ್ ರೆಡ್‌ಸ್ಟಾರ್ ಪಕ್ಷದ ಆಯೋಜನೆ

ರಾಯಚೂರು: ನಗರದಲ್ಲಿ ಸೆಪ್ಟೆಂಬರ್ 16ರಿಂದ 20ರವರೆಗೆ ಸಿಪಿಐ(ಎಂಎಲ್) ರೆಡ್‌ಸ್ಟಾರ್ ಪಕ್ಷದ 13 ನೇ ಮಹಾಧಿವೇಶನ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಪಕ್ಷ ಪ್ರಧಾನ ಕಾರ್ಯದರ್ಶಿ ಪಿ.ಜೆ.ಜೇಮ್ಸ್ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ದೇಶ ಎದುರಿಸುತ್ತಿರುವ ಸಮಸ್ಯೆಗಳು ಮೂರು ದಿನಗಳ ಕಾಲ ನಡೆಯಲಿರುವ ಮಹಾಧಿವೇಶನದಲ್ಲಿ ಚರ್ಚೆ ನಡೆಯಲಿದೆ. ಅಲ್ಲದೇ ಸಾಮ್ರಾಜ್ಯಶಾಹಿ ಯುದ್ಧ, ಫ್ಯಾಸಿಸಂ ಹಾಗೂ ಜಾತಿ ವಿನಾಶದ ಕುರಿತು ವಿಚಾರಗೋಷ್ಠಿಗಳು ನಡೆಯಲಿವೆ. 20 ದೇಶಗಳ, 18 ರಾಜ್ಯಗಳ ಪ್ರತಿನಿಧಿಗಳು, ಕಮ್ಯುನಿಷ್ಟ ಪಕ್ಷದ ನಾಯಕರುಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಅಧಿವೇಶನದ ಯಶಸ್ವಿಗೆ 75 ಜನರ ಒಳಗೊಂಡ ಸ್ವಾಗತ ಸಮಿತಿ ರಚಿಸಲಾಗಿದೆ. ಆಡಳಿತ ವ್ಯವಸ್ಥೆ, ನ್ಯಾಯಾಂಗ, ಶಿಕ್ಷಣ, ಸಂಸ್ಕೃತಿಗಳೆಲ್ಲವೂ ಫ್ಯಾಸಿಸಂಗೆ ಹಿಡಿತಕ್ಕೆ ಸಿಲುಕಿವೆ. ಮುಸ್ಲಿಂರು

ರಾಯಚೂರಿನ ಪತ್ರಿಕಾಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಿಪಿಐಎಂಎಲ್ ರೆಡ್‌ಸ್ಟಾರ್ ಪಕ್ಷದ ಮಹಾಧಿವೇಶನದ ಲಾಂಛನ(ಲೋಗೊ)ವನ್ನು ಪಕ್ಷದ ಮುಖಂಡರು ಬಿಡುಗಡೆಗೊಳಿಸಿದರು.

ದೇಶ ವಿರೋಧಿಗಳೆಂದು ಬಿಂಬಿಸಲಾಗುತ್ತಿದೆ. ಚುನಾವಣಾ ಆಯೋಗವನ್ನು ದುರುಪಯೋಗ ಪಡೆಸಿಕೊಂಡು ಎಸ್‌ಐಆರ್ ಮೂಲಕ ಜನರ ಮೂಲಭೂತ ಹಕ್ಕು ಕಸಿದುಕೊಳ್ಳಲಾಗುತ್ತಿದೆ ಎಂದು ಆಪಾದಿಸಿದರು. ಆರ್‌ಎಸ್‌ಎಸ್ ಪ್ರೇರಿತವಾಗಿ ಮನುಸ್ಮೃತಿಯ ಚಿಂತನೆಗಳನ್ನು ಹೇರಲಾಗುತ್ತಿದೆ. ಕಮ್ಯೂನಿಷ್ಟ ಚಳುವಳಿ ಸೈದ್ದಾಂತಿಕ, ರಾಜಕೀಯ ಹಿನ್ನಡೆ ಎದುರಿಸುತ್ತಿದೆ. ಸಿಪಿಐ(ಎಂಎಲ್) ಸ್ಪಷ್ಟತೆಯೊಂದಿಗೆ ಮುಂದಿನ ನಿರ್ಧಾರ ಕೈಗೊಳ್ಳಲಿದೆ ಎಂದು ವಿವರಣೆ ನೀಡಿದರು.ಸಿಪಿಐ(ಎಂಎಲ್) ರೆಡ್‌ಸ್ಟಾರ್ ಪಕ್ಷ ಪಾಲಿಟ ಬ್ಯುರೋ ಸದಸ್ಯ ಆರ್.ಮಾನಸಯ್ಯ ಮಾತನಾಡಿ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ರಾಯಚೂರು ನಗರದಲ್ಲಿ ಮಹಾಧಿವೇಶನ ನಡೆಯಲಿದೆ. ಅಧಿವೇಶನದ ಯಶಸ್ವಿಗೆ ಎಲ್ಲ ಸಂಘಟನೆಗಳು, ಚಳುವಳಿಗಾರರ ಒಳಗೊಂಡ ಸ್ವಾಗತ ಸಮಿತಿ ರಾಘವೇಂದ್ರ ಕುಷ್ಟಗಿ, ಆರ್. ಮಾನಸಯ್ಯಯ ಪ್ರದಾನ ಸಂಚಾಲಕತ್ವದಲ್ಲಿ ರಚಿಸಲಾಗಿದೆ ಎಂದು ಹೇಳಿದರು.

ಎಂ.ಡಿ.ಇಕ್ಬಾಲ್, ಎಚ್.ಎನ್.ಬಡಿಗೇರ, ವೀರಭದ್ರಪ್ಪ, ರವಿಂದ್ರನಾಥ ಪಟ್ಟಿ, ಉಪಾಧ್ಯಕ್ಷರಾಗಿ, ಎಂ.ಡಿ.ಅಮೀರ ಅಲಿ, ಎಂ.ಗಂಗಾಧರ ಸ್ವಾಗತ ಸಮಿತಿ ಸಂಚಾಲಕರಾಗಿ, ಬಿ.ಬಸವರಾಜ, ನೂರಜಹಾನ್, ಖಾಜಾ ಅಸ್ಲಂ ಪಾಷಾ, ಜೆ.ಬಿ.ರಾಜು, ರಾಜುಪಟ್ಟಿ, ಬಾಬುಬಂಡಾರಿಗಲ್, ಗುರುರಾಜ ಗೌಡೂರು, ನಾರಾಯನ ಬೆಳಗುರ್ಕಿ, ಎಂ.ನಿರಂಜನ್, ಕಬೀರ್ ಸೇರಿ ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಗೊಂಡು ರಚಿಸಲಾಗಿದೆ ಎಂದು ತಿಳಿಸಿದರು. ಅಧಿವೇಶನದಲ್ಲಿ ದೇಶ ಎದುರಿಸುತ್ತಿರುವ ಸಂದ್ದಿಗ ಪರಿಸ್ಥಿತಿ ಕುರಿತು ಸಮಾಲೋಚಿಸಲಾಗುತ್ತದೆ. ಬಲತ್ಕಾರ ಚುನಾವಣೆ, ಚುನಾವಣಾ ಆಯೋಗವನ್ನು ಬಿಜೆಪಿ ಸಾಧನೆಯನ್ನಾಗಿ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು.

ಪಾಲಿಟ ಬ್ಯುರೋ ಮತ್ತೊಬ್ಬ ಸದಸ್ಯ ಕಬೀರ್ ಮಾತನಾಡಿ ಸಿಪಿಐ(ಎಂಎಲ್) ರೆಡ್‌ಸ್ಟಾರ್ ಮಹಾಧಿವೇಶನ ಮೂರು ದಿನದಲ್ಲಿ ಗಂಬೀರ ವಿಷಯ ಚರ್ಚೆಗೆ ಮುಂದಾಗಿದೆ. ಯುದ್ಧಭೀತಿ, ಸಾಮ್ರಾಜ್ಯಶಾಹಿ ದುರಾಸೆಗಳ ಹಿಂದಿನ ಮಸಲತ್ತುಗಳೇನು ಎಂಬುದನ್ನು ಜನರಿಗೆ ಮಾಹಿತಿ ನೀಡಲಾಗುತ್ತದೆ ಎಂದು ವಿವರಿಸಿದರು. ಈ ಪ್ರತಿಕಾಗೋಷ್ಠಿಯಲ್ಲಿ ಮಹಾಧೀವೇಶನದ ಲಾಂಛನ(ಲೋಗೋ) ಬಿಡುಗಡೆಗೊಳಿಸಲಾಯಿತು. ಮುಖಂಡರಾದ ಅಮೀರ ಅಲಿ, ಎಂ.ಗಂಗಾಧರ ಪತ್ರಿಕಾಗೋಷ್ಠಿಯಲ್ಲಿದ್ದರು.

ವಿದ್ಯಾರ್ಥಿ ಸಂಘಟನೆಗಳ ಒತ್ತಾಯ | ಕೊಡದಿದ್ದರೆ ಇಲಾಖೆ ಎದುರು ಧರಣಿಗೆ ನಿರ್ಧಾರ

ಗೈರಾಣಿ ಭೂಮಿ ಶಾಲೆಗೆ ಮಂಜೂರು ಮಾಡಲು ಮನವಿ

ಸಂ.ಕ.ಸಮಾಚಾರ ಅರಕೇರಾ : ತಾಲೂಕಿನ ಹಾಲಜಾಡಲದಿನ್ನಿ ಗ್ರಾಮದಲ್ಲಿ ಗೈರಾಣಿ ಭೂಮಿ ಹೊತ್ತುವರಿ ಆಗಿದ್ದು ಕೂಡಲೇ ತಹಶೀಲ್ದಾರ ಬೇಟಿ ನೀಡಿ ಭೂಮಿಯನ್ನು ಹದ್ದಸ್ತ ಮಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸರಕಾರಿ ಗೈರಾಣಿ ಭೂಮಿಯನ್ನು ಮಂಜೂರು ಮಾಡುವಂತೆ ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್ ಎಫ್ ಐ ದೇವದುರ್ಗ ತಾಲೂಕು ಸಮಿತಿ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಡಿವೈ ಎಫ್ ಐ ಹಾಳಜಾಡಲದಿನ್ನಿ ಗ್ರಾಮ ಸಮಿತಿಯ ಮುಖಂಡರು ಸೋಮವಾರ ಅರಕೇರಾ ತಹಶೀಲ್ದಾರ ಅವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದ್ದಾರೆ.

ಎಸ್ ಎಫ್ ಐ ತಾಲೂಕು ಅಧ್ಯಕ್ಷ ಮಹಾಲಿಂಗ ದೊಡ್ಡಮನಿ ಮಾತನಾಡಿ ಹಾಳಜಾಡಲದಿನ್ನಿ ಗ್ರಾಮದಲ್ಲಿರುವ . ಶಾಲೆ ಎಲ್ ಕೆಜಿ ಯಿಂದ 7ನೇತರಗತಿಯವರಗೆ ಸುಮಾರು 180 ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು. ಪ್ರಸ್ತುತ ಹಳೆಯ ಮತ್ತು ಅಪಾಯಕರ ಕಟ್ಟಡದಲ್ಲೇ ತರಗತಿಗಳು ನಡೆಯುತ್ತಿವೆ. ಶಾಲೆಗೆ ಯಾವುದೇ ತಡೆಗೊಡೆ ಇಲ್ಲದೇ ಇರುವದರಿಂದ ಮಕ್ಕಳು ನೇರವಾಗಿ ಮುಖ್ಯ ರಸ್ತೆಗೆ ಸಂಪರ್ಕ ಹೊಂದಿದ್ದು ಅಪಘಾತ ಸಂಭವಿಸುವ ಭೀತಿ ದಿನೇ ದಿನೇ ಹೆಚ್ಚುತ್ತಿದೆ ಎಂದು ಸಂಘಟನೆಗಳು ಆಂತಕ ವ್ಯಕ್ತಪಡಿಸಿವೆ. ಇನ್ನು ಶಾಲೆ ಕಾರ್ಯನಿರ್ವಹಿಸುತ್ತಿರುವ ಜಾಗ ಖಾಸಗಿ ವ್ಯಕ್ತಿಗಳ ಸ್ವತ್ತಾಗಿದ್ದು ಶಾಲೆಯ ಅಭಿವೃದ್ದಿಗೆ ಅಗತ್ಯವಾದ

ಅರಕೇರಾ ತಹಶೀಲ್ದಾರ ಅವರಿಗೆ ಮನವಿ ಪತ್ರ ಸಲ್ಲಿಸುತ್ತಿರುವದು.

ಜಾಗವನ್ನು ನೀಡಲು ಅವರು ನಿರಾಕರಿಸುತ್ತಿದ್ದಾರೆ ಎನ್ನಲಾಗಿದೆ. ಇದರಿಂದ ಶಾಳೆಯ ವಿಸ್ತರಣೆ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ದಿಗೆ ತೊಂದರೆ ಉಂಟಾಗಿದೆ. ಈ ಹಿನ್ನೆಯಲ್ಲಿ ಹಾಳಜಾಡಲದಿನ್ನಿ ಗ್ರಾಮದ ಸರ್ವೆ ನಂಬರ 4,5,7,75 ರಲ್ಲಿ ಇರುವ ಸರಕಾರಿ ಗೈರಾಣಿ ಭೂಮಿಯನ್ನು ಶಾಲೆಗೆ ಮಂಜೂರು ಮಾಡಬೇಕು. ಇದರಿಂದ ಹೊಸ ಕಟ್ಟಡ ತಡೆಗೊಡೆ ಆಟದ ಮೈದಾನ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ನಿರ್ಮಿಸಲು ಅನುಕೂಲವಾಗಲಿದೆ ಎಂದು ಸಂಘಟನೆಗಳು ಮನವಿ ಮಾಡಿದೆ.

ಪಶ್ಚಿಮ ಬಂಗಾಲ ಮತ್ತು ಆಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿ ಅಧಿಕಾರ ಪಡೆದಿರುವದಕ್ಕೆ ಮುದಗಲ್ಲ ಬಿಜೆಪಿ ಘಟಕದ ವತಿಯಿಂದ ಸಂಭ್ರಮಾಚರಣೆ ನಡೆಸಿದರು. ಪಟಾಕಿ ಸಿಡಿಸಿ ಪಕ್ಷದ ಪರವಾಗಿ ಜೈಕಾರ ಹಾಕಿ, ಸಿಹಿ ವಿತರಿಸುವ ಮೂಲಕ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಸಂತೋಷ ಸುರಪೂರ, ನಾಗರಾಜ ತಳವಾರ, ಮಂಜುನಾಥ, ಚಂದಾವಲಿಸಾಬ, ರಾಮಜೀ, ಪಾಶಾ ಜಂಬಾಳಿ, ವೆಂಕಟೇಶ ಹಿರೇಮನಿ, ಗದ್ದೆಪ್ಪ, ರವೀ ವಿಶ್ವಕರ್ಮ ಸೇರಿದಂತೆ ಮುಂತಾದವರಿದ್ದರು.

ಕಸ್ತೂರಿ ತಪ್ಪದೆ ಓದಿ

ಕೆರೆಗಳ ರಕ್ಷಣೆಗೆ ರೈತ ಹೋರಾಟಗಾರರಿಗೆ ಬೆಂಬಲಿಸಿ

ಅಮರಣ್ಣ ಗುಡಿಹಾಳ ನುಡಿನಮನ | ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಭಾಗಿ

ಸಂ.ಕ. ಸಮಾಚಾರ, ಮುದಗಲ್ಲ : ರೈತ ಮುಖಂಡರ ದೀರ್ಘ ಕಾಲದ ಹೋರಾಟಗಳಿಂದ ನ್ಯಾಯವನ್ನು ಪಡೆಯುತ್ತಿದ್ದೇವೆ. ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ನಾವು ಗಟ್ಟಿಯಾಗಿ ರೈತರು ಸಂಘಟಿಸಿ ದಿಟ್ಟ ಹೋರಾಟಗಳಿಗೆ ಮುಂದಾಗಬೇಕಿದೆ. ನಾವುಗಳು ಪರಿಸರ ರಕ್ಷಣೆ ಮಾಡಿದರೆ ಮಾತ್ರ ಉತ್ತಮ ಮಳೆ, ಬೆಳೆ ಪಡೆಯದರ ಜತೆಗೆ ಕೆರೆಗಳ ರಕ್ಷಣೆ ಕೂಡಾ ಅಷ್ಟೇ ಸಹಾಯಕವಾಗುತ್ತದೆ ಎಂದು ರೈತ ಹೋರಾಟಗಾರ, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೋಮವಾರ ಅಭಿಪ್ರಾಯ ವ್ಯಕ್ತ ಪಡಿಸಿದರು.

ಸಮೀಪದ ಗುಡಿಹಾಳ ಗ್ರಾಮದ ರೈತ ಹೋರಾಟಗಾರ ಅಮರಣ್ಣ ಗುಡಿಹಾಳ ಅವರ ನುಡಿನಮನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಕಳೆದ ನಾಲ್ಕು ದಶಕಗಳ ಕಾಲ ರೈತ ಪರ ಹೋರಾಟ ಮಾಡಿದವರು. ಅವರ ನಿಧನ ರೈತ ಹೋರಾಟಗಾರರಿಗೆ, ರೈತ ಸಂಘಗಳಿಗೆ ಸಂಕಷ್ಟ ತಂದಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ. ಅವರಂತೆ ನಾವು ಕೂಡಾ ಹೋರಾಟದ ಹಾದಿಯಲ್ಲಿ ಭಾಗಿಯಾಗಿ ರೈತರ ಹಿತ ಕಾಪಾಡಲು ಮುಂದಾಗಬೇಕು. ರೈತರು ಒಗ್ಗಟ್ಟಾಗಿದ್ದರೆ ಮಾತ್ರ ಹೋರಾಟಕ್ಕೆ ಬೆಲೆ ಬರುತ್ತದೆ. ನಾವು ಬೆಳೆದ ನಮ್ಮ ಬೆಳೆಗೆ ನಾವೇ

ಮುದಗಲ್ಲ ಸಮೀಪದ ಗುಡಿಹಾಳ ಗ್ರಾಮದ ರೈತ ಹೋರಾಟಗಾರ ಅಮರಣ್ಣ ಗುಡಿಹಾಳ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಮಾತನಾಡಿದರು.

ದರ ನಿಗದಿಮಾಡುವ ಕಾನೂನು ತರಬೇಕು. ಬಂಡವಾಳ ಶಾಹಿಗಳ ಹಿಡಿತಕ್ಕೆ ನಾವೆಲ್ಲರೂ ಬಲಿಯಾಗಿರುವುದು ದುರದೃಷ್ಟಕರ ವಿಷಯ. ಇವರಿಂದ ನಾವು ಹೊರಗಡೆ ಬರಬೇಕು. ಗ್ರಾಮೀಣ ಮಟ್ಟದಲ್ಲಿ ಕೆರೆಗಳ ರಕ್ಷಣೆ ಕುರಿತು ಚರ್ಚಿಸಲಾಗುವುದು ಎಂದರು. ಈ ವೇಳೆ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ, ಮಸ್ಕಿ ಶಾಸಕ ಬಸನಗೌಡ ಪಾಟೀಲ್ ತುರವಿಹಾಳ, ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀಪಾಟೀಲ್, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ನಾಗರತ್ನ, ವೀರಭದ್ರಗೌಡ ಪಾಟೀಲ್, ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಹೆಚ್.ಬಿ.ಮುರಾರಿ, ಮಲ್ಲಿಕಾರ್ಜುನ, ಪಂಪಾಪತಿ ಗುಡಿಹಾಳ, ಈರಣ್ಣ ಅಂಕಶದೊಡ್ಡಿ ಸೇರಿದಂತೆ ಇತರಿದ್ದರು.

> ಹುಟ್ಟು ಹೋರಾಟಗಾರ ಅಮರಣ್ಣ ಗುಡಿಹಾಳ, ತನ್ನ ಇಡೀ ಜೀವನವನ್ನೆ ರೈತರ ಸಾಮಾಜಿಕ ನ್ಯಾಯಗಳಿಗಾಗಿ ಹೋರಾಟ ಮಾಡಿದ ವ್ಯಕ್ತಿ. ಸಹಾಯ ಸ್ವೀಕರಿಸಿದ್ದರೂ ಕೂಡ ಅನ್ಯಾಯದ ವಿರುದ್ಧ ಹೋರಾಟ ಮಾಡಿದ ವ್ಯಕ್ತಿ. ರಾಜಕೀಯ ವ್ಯವಸ್ಥೆಗಿಂತ ಸಂಘದ ಹೋರಾಟ ಅತ್ಯಂತ ಪ್ರಭಲ. ದೊಡ್ಡಿಗಳಲ್ಲಿ ಅರಣ್ಯ ಪ್ರದೇಶ ಜಮೀನು ರೈತರ ಪರವಾಗಿ ಮಾಡುವಲ್ಲಿ ನಿಷ್ಠೂರತೆಯ ಹೋರಾಟ ಮಾಡಿ ರೈತರಿಗೆ ನ್ಯಾಯ ಕೊಡಿಸುವಲ್ಲಿ ನಿರಂತರ ಮುಂದಾಳು ವಹಿಸಿರುವದು ಸ್ಮರಿಸಿದರು.
> ■ ಅಮರೇಗೌಡ ಬಯ್ಯಾಪೂರ, ಮಾಜಿ ಸಚಿವರು, ಕುಷ್ಟಗಿ ಕ್ಷೇತ್ರ.

ದಾವಣಗೆರೆ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ಜಯಭೇರಿ

ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ಪ್ರತಿಪಕ್ಷಗಳ ಕದನಕಣವಾಗಿದ್ದ ದಾವಣಗೆರೆ, ಬಾಗಲಕೋಟೆ ಉಪಚುನಾವಣೆಯಲ್ಲಿ ಕೊನೆಗೂ ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಮತದಾರರು ಕೈಹಿಡಿದು ಮತ್ತೊಮ್ಮೆ ಗೆಲುವಿನ ನಗೆ ಬೀರಿಸಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ದಿ.ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಸಮರ್ಥ್ ಮತ್ತು ಬಿಜೆಪಿಯ ಶ್ರೀನಿವಾದ ದಾಸಕರಿಯಪ್ಪ ನಡುವೆ ತೀವ್ರ ಪೈಪೋಟಿ ಇತ್ತು. ಇತ್ತ ಬಾಗಲಕೋಟೆಯಲ್ಲಿ ದಿ.ಎಚ್.ವೈ ಮೇಟಿ ಅವರ ಪುತ್ರ ಉಮೇಶ್ ಮೇಟಿ ಹಾಗೂ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿತ್ತು. ಅನೇಕ ಲೆಕ್ಕಾಚಾರಗಳ ನಡುವೆ ಉಭಯ ಪಕ್ಷಗಳೂ ಗೆಲುವು ನಮ್ಮದೇ ಎನ್ನುತ್ತಿದ್ದವು. ಬಾಗಲಕೋಟೆಯಲ್ಲಂತೂ ಸಿಎಂ ಸೇರಿದಂತೆ ಅನೇಕ ಘಟಾನುಘಟಿ ನಾಯಕರಗಳು ಕೈ ಅಭ್ಯರ್ಥಿ ಪರವಾಗಿ ಪ್ರಚಾರ ನಡೆಸಿದ್ದರು. ದಾವಣಗೆರೆಯಲ್ಲಿ ಮುಸ್ಲಿಂ ನಾಯಕರ ಬಂಡಾಯದ ನಡುವೆಯೂ ಸಮರ್ಥ್ ಜಯಭೇರಿ ಬಾರಿಸಿದ್ದಾರೆ.

ದಾವಣಗೆರೆ ಭದ್ರಕೋಟೆ ಉಳಿಸಿಕೊಂಡ ಕಾಂಗ್ರೆಸ್

ಸಂ.ಕ.ಸಮಾಚಾರ, ದಾವಣಗೆರೆ

ರಾಜ್ಯಾದ್ಯಂತ ತೀವ್ರ ಕುತೂಹಲ ಕೆರಳಿಸಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಭದ್ರಕೋಟೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಶಾಮನೂರು ಮೊಮ್ಮಗ ಸಮರ್ಥ್ ಶಾಮನೂರು, 5708 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಶಾಮನೂರು ಶಿವಶಂಕರಪ್ಪನವರ ಉತ್ತರಾಧಿಕಾರಿಯಾಗಿ ಆಯ್ಕೆಗೊಂಡು ಅವರು ರಾಜಕೀಯದ ಹೊಸ ಅಧ್ಯಾಯ ಬರೆದಿದ್ದಾರೆ.

ಯಾರಿಗೆ ಎಷ್ಟು ಮತಗಳು?

ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರು 63870 ಮತಗಳನ್ನು ಪಡೆದರೆ, ಸಮರ್ಥ್ ಶಾಮನೂರು 69578 ಮತಗಳನ್ನು ಪಡೆದು ಜಯ ಸಾಧಿಸಿದರು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಒಂದು ಬಾರಿಯೂ ತನ್ನ ಖಾತೆ ತೆರೆದಿಲ್ಲ. ಭಾರೀ ಸದ್ದು ಮಾಡಿದ್ದ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ 18,975 ಮತ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಉಳಿದಂತೆ ಪಕ್ಷೇತರರಾಗಿ ಸ್ಪರ್ಧಿಸಿದ್ದ 22 ಅಭ್ಯರ್ಥಿಗಳು 50ರಿಂದ 1186ರ ವರೆಗೆ ಮತ ಗಳಿಸಿದ್ದಾರೆ. ಆದರೆ ನಿರಂತರವಾಗಿ ಗೆಲುವ ಸಾಧಿಸುತ್ತಾ ಬಂದಿರುವ ಕಾಂಗ್ರೆಸ್, ಇದೀಗ ಮತ್ತೊಮ್ಮೆ ಭದ್ರಕೋಟೆ ಎಂಬುದನ್ನು ಸಾಬೀತಾಗಿದೆ.

ಸಕ್ರಿಯ ರಾಜಕಾರಣದಲ್ಲಿದ್ದ ಡಾ.ಶಾಮನೂರು ಶಿವಶಂಕರಪ್ಪನವರು, ಈ ಕ್ಷೇತ್ರದಲ್ಲಿ ನಿರಂತರವಾಗಿ ಗೆಲುವು ಸಾಧಿಸುತ್ತಾ ಬಂದಿದ್ದರು. ಅವರ ನಿಧನದ ತರುವಾಯ ಉಪಚುನಾವಣೆ ಘೋಷಣೆ ಆಗುತ್ತಿದ್ದಂತೆ ಸಮರ್ಥ್ ಶಾಮನೂರು ಅವರ ಹೆಸರು ಹೆಚ್ಚು ಪ್ರಚಲಿತಕ್ಕೆ ಬಂದಿತ್ತು. ಅಲ್ಪಸಂಖ್ಯಾತ ಸಮುದಾಯದ ಅಸಮಾಧಾನದ ಲಾಭ ಪಡೆದುಕೊಳ್ಳಲು ಮುಂದಾಗಿದ್ದ ಬಿಜೆಪಿಗೆ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷದ ಗೆಲುವಿನ ಭದ್ರಕೋಟೆ ಬಿಟ್ಟುಕೊಡಬಾರದು ಎಂದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವ ಸಂಪುಟದ ಸದಸ್ಯರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು ಇಲ್ಲಿಯೇ ಬೀಡು ಬಿಟ್ಟು ಒಗ್ಗಟ್ಟಾಗಿ ಪಕ್ಷದ ಪ್ರಚಾರದಲ್ಲಿ ತೊಡಗಿಕೊಂಡಿದ್ದರು.

ಮಾತ್ರವಲ್ಲ, ಕಾಂಗ್ರೆಸ್ ಸರ್ಕಾರದ 'ಗ್ಯಾರಂಟಿ ಯೋಜನೆಗಳು' ಅಭ್ಯರ್ಥಿ ಗೆಲುವಿಗೆ ಅನುಕೂಲವಾಯಿತು. ಬಿಜೆಪಿಗೆ ಕೈಕೊಟ್ಟ ನಿರೀಕ್ಷೆ: ಕೇಂದ್ರದ ಆಡಳಿತಾರೂಢ ಬಿಜೆಪಿ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿಕೊಂಡು ಮತದಾರರು ಮತ ನೀಡಿ ಗೆಲ್ಲಿಸುತ್ತಾರೆ ಹಾಗೂ ಟಿಕೆಟ್ ವಂಚಿತ ಅಲ್ಪಸಂಖ್ಯಾತ ಸಮುದಾಯವನ್ನು 'ಸ್ವಾಭಿಮಾನ'ದ ಪ್ರಶ್ನೆಯೊಡ್ಡಿ ಭಾರೀ ನಿರೀಕ್ಷೆಯೊಂದಿಗೆ ಹೇಳಿಕೆಗಳನ್ನು ನೀಡಿದ್ದ ಬಿಜೆಪಿ ನಾಯಕರ ನಿರೀಕ್ಷೆ ಕೈಕೊಟ್ಟಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಮರ್ಥ್ ಶಾಮನೂರು ಅವರನ್ನು ಹೆಗಲ ಮೇಲೆ ಹೊತ್ತ ಕಾರ್ಯಕರ್ತರು.

> ನಾನು ಅಜ್ಜನ ಸ್ಥಾನ ತುಂಬಲು ಚುನಾವಣೆಗೆ ನಿಂತೆ. ಮತದಾರ ಪ್ರಭುಗಳು ನನ್ನ ನಿರ್ಧಾರ ಒಪ್ಪಿ ಅಜ್ಜ ಮತ್ತು ತಂದೆಯವರ ರಾಜಕೀಯ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿದ್ದಾರೆ. 'ಇದು ನಮ್ಮ ಅಜ್ಜ ಕ್ಷೇತ್ರದ ಜನತೆಗೆ ನೀಡಿದ ಸೇವೆಗೆ ಮತ್ತು ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕೆಲಸಗಳಿಗೆ ಸಿಕ್ಕ ಜಯ'
>
> ▪ ಸಮರ್ಥ್ ಶಾಮನೂರು, ವಿಜೇತ ಕಾಂಗ್ರೆಸ್ ಅಭ್ಯರ್ಥಿ

> ನಾವು ಸೋತರೂ ಕಠಿಣ ಪೈಪೋಟಿ ನೀಡಿದ್ದೇವೆ. ನಮ್ಮ ಸಂಘಟಿತ ಹೋರಾಟ ಮತ್ತು ಜನರ ಬದಲಾವಣೆ ಬಯಸಿರುವ ನಾಡಿಮಿಡಿತ ಕೂಡ ಈ ಚುನಾವಣೆಯಿಂದ ಸಾಬೀತಾಗಿದೆ.
>
> ▪ ಬಿ.ಶ್ರೀನಿವಾಸ ದಾಸಕರಿಯಪ್ಪ, ಪರಾಜಿತ ಬಿಜೆಪಿ ಅಭ್ಯರ್ಥಿ

ಮೂರನೇ ತಲೆಮಾರಿಗೆ ಮಣೆ ಹಾಕಿದ ಮತದಾರ

ದಾವಣಗೆರೆ: ಇಡೀ ರಾಜ್ಯದ ಕುತೂಹಲ ಕೆರಳಿಸಿದ್ದ ಮತ್ತು ಜಿಲ್ಲೆಯ ರಾಜಕೀಯ ಪ್ರತಿಷ್ಠೆಯ ಕಣವಾಗಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಪಾರುಪತ್ಯವನ್ನು ಮೆರೆದಿದೆ.

ಹಿರಿಯ ಧುರೀಣ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದ್ದು, ಅವರ ಮೊಮ್ಮಗ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಅವರು ಅರ್ಹ ಗೆಲುವು ಸಾಧಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರು ಆರಂಭಿಕ ಸುತ್ತುಗಳಲ್ಲಿ ಭರ್ಜರಿ ಪೈಪೋಟಿ ನೀಡಿದರಾದರೂ, ಅಂತಿಮವಾಗಿ 5708 ಮತಗಳ ಹಿನ್ನಡೆ ಅನುಭವಿಸಿದರು. ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ ಅವರು ಪಡೆದ 18 ಸಾವಿರಕ್ಕೂ ಅಧಿಕ ಮತಗಳು ಕೂಡ ಫಲಿತಾಂಶದ ಮೇಲೆ ಪ್ರಭಾವ ಬೀರಿದ್ದವು. ಈ ಗೆಲುವು ಶಾಮನೂರು ಕುಟುಂಬಕ್ಕೆ ಅತ್ಯಂತ ಮಹತ್ವದ್ದಾಗಿತ್ತು.

ದಶಕಗಳ ಕಾಲ ದಾವಣಗೆರೆ ರಾಜಕೀಯವನ್ನು ನಿಯಂತ್ರಿಸಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನವು ಒಂದು ದೊಡ್ಡ ಶೂನ್ಯ ಸೃಷ್ಟಿಸಿತ್ತು. ಈಗ ಮೊಮ್ಮಗ ಸಮರ್ಥ್ ಶಾಮನೂರು ಗೆಲುವು ಸಾಧಿಸುವ ಮೂಲಕ ಅಜ್ಜನ ಸ್ಥಾನ ತುಂಬಿದ್ದಾರಲ್ಲದೆ, ಶಾಮನೂರು ಕುಟುಂಬದ ಮೂರನೇ ತಲೆಮಾರು ರಾಜಕೀಯ ಪ್ರವೇಶ ಮಾಡಿದಂತಾಗಿದೆ.

27 ವರ್ಷಕ್ಕೇ ಶಾಸಕನಾದ ಸಮರ್ಥ್ ಶಾಮನೂರು!

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಕೊನೆಗೂ ಮತದಾರರು ಮೂರನೇ ತಲೆಮಾರಿನ ಶಾಮನೂರು ಕುಡಿಗೆ ಬೆಂಬಲ ನೀಡಿದ್ದಾರೆ. ಇದು, ಅಲ್ಪಸಂಖ್ಯಾತ ಸಮುದಾಯದ ಕಾಂಗ್ರೆಸ್ ಮೇಲಿನ ನಂಬಿಕೆಯನ್ನು ಮತ್ತೊಮ್ಮೆ ಸಾಬೀತು ಮಾಡಿದೆ.

ಹೌದು, 'ಕುಟುಂಬ ರಾಜಕಾರಣ, ಒಂದೇ ಕುಟುಂಬದ ಪ್ರಾಬಲ್ಯ, ಇತರರಿಗೆ ಅವಕಾಶದ ಕೊರತೆ ಹಾಗೂ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡದಿರುವ ಆರೋಪಗಳೂ ಕೇಳಿ ಬಂದಿದ್ದವು. ಇಂತಹ ಟೀಕೆಗಳ ನಡುವೆಯೂ, ಶಾಮನೂರು ಮೊಮ್ಮಗ ಸಮರ್ಥ್ ಶಾಮನೂರು 5708 ಮತಗಳ ಅಂತರದಿಂದ ಗೆದ್ದು ಅತ್ಯಂತ ಕಿರಿಯ ವಯಸ್ಸಿನ ಶಾಸಕನಾಗಿ ವಿಧಾನಸಭೆಗೆ ಪ್ರವೇಶಿಸಲು ಸಜ್ಜಾಗಿದ್ದಾರೆ.

ವಿಶೇಷ ಎಂದರೆ ತಂದೆ ಎಸ್.ಎಸ್.ಮಲ್ಲಿಕಾರ್ಜುನ್ 28ನೇ ವಯಸ್ಸಿಗೆ ಶಾಸಕನಾಗಿ ಮಂತ್ರಿಯೂ ಆಗಿದ್ದರು. ಆದರೆ ಸಮರ್ಥ್ ಶಾಮನೂರು 27ನೇ ವಯಸ್ಸಿಗೆ ಶಾಸಕನಾಗಿ ಅಪ್ಪನ ದಾಖಲೆ ಮುರಿದಿದ್ದಾರೆ.

ಬರಿಗಾಲಲ್ಲೇ ಓಡಾಡಿದ್ದ ಸಮರ್ಥ್

ಅಜ್ಜನಂತೆಯೇ ಅಪಾರ ದೈವಭಕ್ತನಾಗಿರುವ ಸಮರ್ಥ್ ಚುನಾವಣೆಯ ಆರಂಭದಿಂದ ಹಿಡಿದು ಗೆಲುವು ಸಾಧಿಸಿ ಚುನಾವಣಾಧಿಕಾರಿಯಿಂದ ಪ್ರಮಾಣ ಪತ್ರ ಪಡೆಯುವರೆಗೂ ಬರಿಗಾಲಲ್ಲೆ ಓಡಾಡಿದ್ದಾರೆ. ಉರಿಬಿಸಿಲಲ್ಲೂ ಬರಿಗಾಲಲ್ಲೇ ನಡೆದಾಡಿ ಪ್ರಚಾರ ನಡೆಸಿದರು, ಈ ಹಿಂದೆ ಅಜ್ಜ ಚುನಾವಣೆಗೆ ಸ್ಪರ್ಧಿಸಿದ್ದಾಗ, ಅಪ್ಪ ಸ್ಪರ್ಧಿಸಿದ್ದಾಗ ಮತ್ತು ಅಮ್ಮ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದಾಗಲೂ ಬರಿಗಾಲಲ್ಲೇ ಪ್ರಚಾರ ಕೈಗೊಂಡು ಗೆಲುವು ತಂದುಕೊಟ್ಟಿದ್ದ ಸಮರ್ಥ್ ನಡೆ–ನುಡಿಯಿಂದ ಮತದಾರರು ಮಾರು ಹೋಗಿದ್ದಾರೆ.

ಸರ್ಕಾರದ ಸಾಧನೆಗಳು, ಕಾಂಗ್ರೆಸ್ ಸಿದ್ಧಾಂತಕ್ಕೆ ಜಯ: ಮುಖ್ಯಮಂತ್ರಿ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವು ನಮ್ಮ ಸರ್ಕಾರದ ಸಾಧನೆಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಸಿಕ್ಕ ಜಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದ್ದಾರೆ. ಉಪಚುನಾವಣೆ ಫಲಿತಾಂಶದ ಬಳಿಕ ಪ್ರತಿಕ್ರಿಯೆ ನೀಡಿರುವ ಅವರು, ಇದು ವಿರೋಧಪಕ್ಷಗಳ ಅಪಪ್ರಚಾರ ಮತ್ತು ಹಣದ ಪ್ರಭಾವದ ಹೊರತಾಗಿಯೂ ಮತದಾರರು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಸರ್ಕಾರದ ಮೇಲೆ ನಂಬಿಕೆ ಇಟ್ಟು ಮತಚಲಾಯಿಸಿದ್ದಾರೆ. ಇಡೀ ರಾಜ್ಯದ ಜನತೆ ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುತ್ತೇವೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿಯೂ ರಾಜ್ಯದ ಮತದಾರರು ಇದೇ ರೀತಿ ನಮ್ಮನ್ನು ಹರಸುತ್ತಾರೆ ಎಂಬ ನಂಬಿಕೆ ನಮಗೆ ಇದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದಕ್ಷಿಣದ ರಾಜ್ಯಗಳಾದ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಂತೆ ಕೇರಳಂ ಮತ್ತು ತಮಿಳುನಾಡು ರಾಜ್ಯಗಳಲ್ಲಿಯೂ ಬಿಜೆಪಿಯ ಕೋಮುವಾದಿ ರಾಜಕಾರಣಕ್ಕೆ ಪ್ರವೇಶ ಇಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ನೀಡಿರುವ ಎರಡು ರಾಜ್ಯಗಳ ಮತದಾರರನ್ನು ದೇಶದ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಜನರ ಪರವಾಗಿ ಅಭಿನಂದಿಸುತ್ತೇನೆ. ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ನಿರೀಕ್ಷಿತವಾಗಿತ್ತು. ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರು ಪಕ್ಷದ ಗೆಲುವಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ನೆರೆಯ ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ಕರ್ನಾಟಕದ ಕಾಂಗ್ರೆಸ್ ಪಕ್ಷದ ಬಲವನ್ನು ಹೆಚ್ಚಿಸಿದೆ.

ಬಾಗಲ'ಕೋಟೆ' ಭದ್ರಪಡಿಸಿದ ಉಮೇಶ

ಸಂ.ಕ.ಸಮಾಚಾರ, ಬಾಗಲಕೋಟೆ

ದಿ.ಎಚ್.ವೈ.ಮೇಟಿ ಅವರ ಅಗಲಿಕೆಯಿಂದ ತೆರವಾಗಿದ್ದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದ್ದ ಅವರ ಪುತ್ರ ಉಮೇಶ ಮೇಟಿ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಆರನೇ ಬಾರಿಗೆ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದ ಬಿಜೆಪಿಯ ವೀರಣ್ಣ ಚರಂತಿಮಠ ಅವರ ವಿರುದ್ಧ 22332 ಮತಗಳ ಅಂತರದ ಗೆಲುವನ್ನು ತಮ್ಮದಾಗಿಸಿಕೊಂಡ ಉಮೇಶ ಮೇಟಿ ಕ್ಷೇತ್ರವನ್ನು ಉಳಿಸಿದ್ದಾರೆ.

ಉಮೇಶ ಮೇಟಿ ಅವರನ್ನು ಗೆಲ್ಲಿಸಿಕೊಳ್ಳುವುದು ಸಿದ್ದರಾಮಯ್ಯ ಅವರಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ಈ ಕಾರಣದಿಂದಲೇ ಬಾಗಲಕೋಟೆ ಕ್ಷೇತ್ರ ಹೈವೋಲ್ಟೇಜ್ ಕಣವಾಗಿ ಪರಿಣಮಿಸಿತ್ತು. ವಾರಗಟ್ಟಲೆ ಬಾಗಲಕೋಟೆಯಲ್ಲಿದ್ದ ಸಿಎಂ ಒಟ್ಟು 18ಕ್ಕೂ ಅಧಿಕ ಪ್ರಚಾರ ಸಭೆಗಳನ್ನು ನಡೆಸಿದ್ದರು. ಅವರ ವಾಸ್ತವ್ಯ ಕಾರ್ಯಕರ್ತರಲ್ಲೂ ಉತ್ಸಾಹ ತುಂಬಿತ್ತು. ಪರಿಣಾಮ ನಿರೀಕ್ಷೆಗೂ ಮೀರಿದ ಅಂತರದ ಗೆಲುವು ಕಾಂಗ್ರೆಸ್ಸಿನ ಪಾಲಾಗಿದೆ. ಸಿದ್ದರಾಮಯ್ಯ ಅವರ ವರ್ಚಸ್ಸಿಗೂ ಚುನಾವಣೆಯ ಫಲಿತಾಂಶ ಕನ್ನಡಿ ಹಿಡಿದಂತೆ ಆಗಿದೆ.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಪಾರುಪತ್ಯವಿತ್ತು. ಅದನ್ನು ಭೇದಿಸಿ ಕಾಂಗ್ರೆಸ್ಸಿಗೆ ಮತ್ತೆ ನೆಲೆ ಕಲ್ಪಿಸಿಕೊಡುವಲ್ಲಿ ಎಚ್.ವೈ.ಮೇಟಿ ಯಶಸ್ವಿಯಾಗಿದ್ದರು. ಅವರ ಅಗಲಿಕೆ ನಂತರ ಕ್ಷೇತ್ರದ ಇತರೆ ನಾಯಕರು ಟಿಕೆಟ್‌ಗೆ ಪ್ರಯತ್ನ ಪಡದೆ ಮೇಟಿ ಅವರ ಕುಟುಂಬದಲ್ಲೇ ಟಿಕೆಟ್ ನೀಡುವಂತೆ ಅಭಿಪ್ರಾಯ ಮಂಡಿಸಿದ್ದರು. ಅಳೆದು ತೂಗಿ ಮೇಟಿ ಅವರ ಕಿರಿಯ ಪುತ್ರ ಉಮೇಶ ಅವರಿಗೆ ಟಿಕೆಟ್ ಕಲ್ಪಿಸಲಾಗಿತ್ತು. ಉಮೇಶಗೆ ಟಿಕೆಟ್ ದೊರಕಿಸಿಕೊಡುವಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರ ಪಾತ್ರವೂ ಪ್ರಮುಖವಾಗಿತ್ತು. ಜಾರಕಿಹೊಳಿ ಅವರ ತಂಡವು ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಕ್ಷೇತ್ರದಲ್ಲಿ ಎಲ್ಲ ರೀತಿಯ ಕೆಲಸ ಕಾರ್ಯಗಳಲ್ಲೂ ತೊಡಗಿತ್ತು. ಪರಿಣಾಮ ಕಾಂಗ್ರೆಸ್ಸಿಗೆ ಗೆಲುವು ಉಂಟಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಗ್ಯಾರಂಟಿ ಯೋಜನೆಗಳು ಅದರಲ್ಲೂ ಗೃಹಲಕ್ಷ್ಮೀ ಯೋಜನೆ ಈ ಚುನಾವಣೆಯಲ್ಲೂ ಗುಪ್ತಗಾಮಿನಿಯಾಗಿ ಕೆಲಸ ಮಾಡಿದ್ದು, ಮಹಿಳಾ ಮತದಾರರೇ ಕ್ಷೇತ್ರದಲ್ಲಿ ಹೆಚ್ಚಾಗಿರುವುದರಿಂದ ಅವರ ಮತಗಳೂ ಕಾಂಗ್ರೆಸ್ ಕಡೆಗೆ ವಾಲಿರುವ ಲೆಕ್ಕಾಚಾರ ಕಂಡುಬಂದಿದೆ.

ಕಾರ್ಯಕರ್ತರಿಗೆ ನಿರಾಸೆ, ಕೆಲ ನಾಯಕರಿಗೆ ಅವ್ಯಕ್ತ ಖುಷಿ!

ಸೋಲಿನಿಂದ ಪಾಠ ಕಲಿಯದ ಬಿಜೆಪಿಯಲ್ಲಿ ಒಳಗುದಿ

▪ **ಶಿವಕುಮಾರ್ ಮೆಣಸಿನಕಾಯಿ**

ಸಂ.ಕ.ಸಮಾಚಾರ ಬೆಂಗಳೂರು

ಕರ್ನಾಟಕ ವಿಧಾನಸಭೆಯ ಎರಡು ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶ ರಾಜ್ಯ ಬಿಜೆಪಿಯಲ್ಲಿ ವಿಚಿತ್ರ ಭಾವನೆ ಮೂಡಿಸಿದೆ. ಬಿಜೆಪಿಯ ಅಖಂಡ ಕಾರ್ಯಕರ್ತರಿಗೆ ಫಲಿತಾಂಶ ಭಾರಿ ನಿರಾಸೆ ಉಂಟುಮಾಡಿದ್ದರೆ, ಪಕ್ಷದ ಕೆಲ ಮೇಲ್ಪಂಕ್ತಿಯ ನಾಯಕರಲ್ಲಿ ಒಳಗೊಳಗೇ ಸಂತೋಷ ತಂದಿದೆ ಎಂದರೆ ಯಾರಾದರೂ ನಂಬಲೇಬೇಕು, ಮತ್ತು ಇದನ್ನು ನಂಬುವುದು ಸ್ವಲ್ಪ ಕಷ್ಟವೇ!

ಇಂತಹುದೊಂದು ಭಾವ ಮೂಡಲು ಕಾರಣವೇನೆಂದರೆ ಬಿಜೆಪಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕೂದಲೆಳೆಯ ಅಂತರದಲ್ಲಿ ಸೋತಿದ್ದರೆ, ಬಾಗಲಕೋಟೆ ಕ್ಷೇತ್ರದಲ್ಲಿ ಭಾರಿ ಅಂತರದ ಪರಾಭವ ಮರ್ಮಾಘಾತ ಉಂಟುಮಾಡಿದೆ. ಇನ್ನೂ ಸರಳವಾಗಿ ಹೇಳುವುದಾದರೆ ದಾವಣಗೆರೆ ಕ್ಷೇತ್ರದಲ್ಲಿ ಸೋಲಿನ ಅಂತರ ಗಣನೀಯ ತಗ್ಗಿದ್ದರೆ, ಬಾಗಲಕೋಟೆಯಲ್ಲಿ ಸೋಲಿನ ಅಂತರ ಗಣನೀಯ ಹೆಚ್ಚಳವಾಗಿದೆ.

2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಶಾಮನೂರು ಶಿವಶಂಕರಪ್ಪ 27,888 ಮತಗಳ ಅಂತದಿಂದ ಗೆಲುವು ಸಾಧಿಸಿದ್ದರು. ಈಗ ಬಿಜೆಪಿ ಸೋಲಿನ ಅಂತರ 5,708ಕ್ಕೆ ಕುಸಿದಿದೆ. ಆದಾಗ್ಯೂ ಕಾಂಗ್ರೆಸ್ ಕಳೆದುಕೊಂಡ ಮತಗಳು ಬಿಜೆಪಿಗೇನೂ ಬಂದಿಲ್ಲ. ಬದಲಾಗಿ ಎಸ್‌ಡಿಪಿಐ ಮುಸ್ಲಿಂ ಮತಗಳನ್ನು ಸೆಳೆದುಕೊಂಡಿದೆ. ಮೇಲ್ನೋಟಕ್ಕೆ ಬಿಜೆಪಿ ಸೋಲಿನ ಅಂತರ ಕುಸಿದಿದೆ ಎಂದೇ ಹೇಳಬಹುದು. ಲಿಂಗಾಯತ ಮತ್ತು ಮುಸ್ಲಿಂ ಪ್ರಾಬಲ್ಯದ ನಡುವೆಯೂ ಸಾಮಾನ್ಯ ಕ್ಷೇತ್ರದಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗೆ ಟಿಕೆಟ್ ನೀಡಿ, ಹೊಸ ಸಂದೇಶವನ್ನೇ ರವಾನಿಸಿದೆ. ಇದು ಮುಂದಿನ ದಿನಗಳಲ್ಲೂ ಪಕ್ಷಕ್ಕೆ ನೆರವಾಗಬಹುದು.

ಇನ್ನು ಬಾಗಲಕೋಟೆ ಕ್ಷೇತ್ರದಲ್ಲಿ ಬಿಜೆಪಿ ನಿಜಕ್ಕೂ ಮಹತ್ವದ ಗೆಲುವನ್ನು ಕೈಚೆಲ್ಲಿದೆ. ಏಕೆಂದರೆ ಕಾಂಗ್ರೆಸ್ ಪಕ್ಷದಲ್ಲಿನ ಆಂತರಿಕ ಬಿಕ್ಕಟ್ಟು ದಾವಣಗೆರೆಯಲ್ಲಿ ಬಹಿರಂಗ ಚರ್ಚೆಗೆ ಬಂದರೂ ಬಾಗಲಕೋಟೆಯಲ್ಲಿ ಚರ್ಚೆಗೆ ಬಂದಿರಲಿಲ್ಲ ಆದಾಗ್ಯೂ ಆಂತರಿಕ ಬೇಗುದಿ ಇಲ್ಲಿ ವಿಭಿನ್ನವಾಗಿತ್ತು. ಮಾಜಿ ಸಚಿವ ಸಿ.ಸಿ.ಪಾಟೀಲ್ ಮತ್ತು ಮಾಜಿ ಸಂಸದ ಪ್ರತಾಪಸಿಂಹ ಅವರು ಬಾಯಿತಪ್ಪಿ ಆಡಿದ ಮಾತುಗಳು ಪಕ್ಷದ ಅಭ್ಯರ್ಥಿಗೆ ಶಾಪವಾಗಿ ಪರಿಣಮಿಸಿದವು.

ರಾಜ್ಯ ಬಿಜೆಪಿಗೆ ಭವಿಷ್ಯ ಇದೆಯೇ?:

ಎರಡೂ ಕ್ಷೇತ್ರಗಳಲ್ಲಿನ ಸ್ಥಳೀಯ ಕಾರಣಗಳ ಹೊರತಾಗಿಯೂ ಬಿಜೆಪಿ ರಾಜ್ಯಮಟ್ಟದಲ್ಲಿ ಕಲಿ ಯಲೇಬೇಕಾದ ಪಾಠ ಗಳನ್ನು ಬಿಜೆಪಿ ಕಲಿಯದಿದ್ದರೆ ಭವಿಷ್ಯದಲ್ಲಿ ಉಳಿಗಾಲವಿಲ್ಲ ಎಂಬ ಸಂದೇಶವನ್ನು ಉಪ ಚುನಾವಣೆಯ ಫಲಿತಾಂಶ ರವಾನಿಸಿದೆ. ಬಿಜೆಪಿ ಆಂತರಿಕ ಜಗಳವನ್ನು ಆಂತರಿಕವಾಗಿಯೇ ಅಂತ್ಯಗೊಳಿಸಬೇಕು. ಇಲ್ಲದಿದ್ದರೆ ಭವಿಷ್ಯವೂ ಪಕ್ಷವನ್ನು ಕಾಪಾಡಲಾರದು. ಪಕ್ಷದ ಮೇಲ್ಪಂಕ್ತಿಯ ನಾಯಕರು ಹಿಂಬಾಲಕರ ಕಿವಿಕಚ್ಚುವ ಮಾತುಗಳನ್ನು ಕೇಳದೇ ಮತದಾರರ ನಾಡಿಮಿಡಿತ ಅರಿಯಬೇಕು.ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳನ್ನು ಟೀಕಿಸುವಾಗ ದೇಶದ ಕೆಲ ರಾಜ್ಯಗಳಲ್ಲಿ ಬಿಜೆಪಿ ಕೂಡ ಗ್ಯಾರಂಟಿಗಳನ್ನು ಘೋಷಿಸುತ್ತಿದೆ ಎಂಬುದನ್ನು ಮರೆಯಬಾರದು. ಈ ಸೂತ್ರಗಳನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ರಾಜ್ಯದ ಮತದಾರ ಉಪ ಚುನಾವಣೆ ಮೂಲಕ ಬಿಜೆಪಿಗೆ ಸಂದೇಶ ರವಾನಿಸಿದಂತಿದೆ. ಇದನ್ನು ಅರಿಯುವ ಮನಸ್ಸು ಬಿಜೆಪಿ ನಾಯಕರಲ್ಲಿ ಇದೆಯೋ ಇಲ್ಲವೋ? ಬಿಜೆಪಿ ರಾಷ್ಟ್ರೀಯ ನಾಯಕರಂತೂ ರಾಜ್ಯದಲ್ಲಿ ಉಪಚುನಾವಣೆಯ ಸೋಲಿನ ಪರಾಮರ್ಶೆ ಮಾಡುವಾಗ ರಾಜ್ಯ ನಾಯಕರು ಇಂತಹುದೇ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ.

ಬಿಜೆಪಿ ಮೇಲೇನು ಪರಿಣಾಮ?

ವಾರಗಳ ಕಾಲ ಸಿಎಂ ಸಿದ್ದು ಠಿಕಾಣಿಯಿಂದ ಗೆಲುವಾಯ್ತೆ?

ಅಲ್ಪಸಂಖ್ಯಾತ ಮತದಾರರಿಂದ ಖಡಕ್ ಸಂದೇಶ ರವಾನೆ

▪ **ಕೆ.ವಿ.ಪರಮೇಶ್**

ಸಂ.ಕ.ಸಮಾಚಾರ ಬೆಂಗಳೂರು

ಆಡಳಿತ ಪಕ್ಷ ಕಾಂಗ್ರೆಸ್‌ನಲ್ಲಿ ಆರಂಭದಿಂದಲೂ ಗೊಂದಲ, ಆತಂಕ ಮೂಡಿಸಿದ್ದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆ ಫಲಿತಾಂಶ ಕೊನೆಗೂ ನೆಮ್ಮದಿ ತಂದು ಕೊಟ್ಟಿದೆ. ಆದರೆ ಅಲ್ಪಸಂಖ್ಯಾತ ಸಮುದಾಯದ ಮತದಾರರ ನಿರ್ಣಾಯಕ ನಿಲುವು ಭವಿಷ್ಯದ ದೃಷ್ಟಿಯಿಂದ ಕೈಪಾಳಯಕ್ಕೆ ಅಷ್ಟೇನೂ ಆಶಾದಾಯಕ ಎನಿಸುವ ವಿಷಯವಲ್ಲ ಎನ್ನುವ ಕಟುಸತ್ಯವನ್ನೂ ರಿಸಲ್ಟ್ ದರ್ಶನ ಮಾಡಿಸಿದೆ. ಹಾಗಾಗಿ ಮುಂದಿನ ಚುನಾವಣೆಗಳಲ್ಲಿ ಒಳೇಟಿನ ಆತಂಕದ ಖಡಕ್ ಸಂದೇಶವನ್ನು ಉಪಚುನಾವಣೆ ರವಾನಿಸಿದೆ. ಆದರೆ ಬೈಲೆಕ್ಷನ್‌ಅನ್ನು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದ ಸಿಎಂ ಸಿದ್ದರಾಮಯ್ಯ ವಾರದ ಕಾಲ ಕ್ಷೇತ್ರಗಳಲ್ಲೇ ಠಿಕಾಣಿ ಹೂಡಿ ನಡೆಸಿದ್ದ ಕಾರ್ಯತಂತ್ರಗಳ ಫಲಕೊಟ್ಟಿವೆ. ಜೊತೆಗೆ ಫೈಟ್ ನಡುವೆಯೂ ಮತ್ತೆ ಕುರ್ಚಿ ಭದ್ರಗೊಳಿಸಿದಂತಾಗಿದೆ.

ಕ್ಷೇತ್ರಕ್ಕೆ ದೌಡಾಯಿಸಿದ್ದ ವರಿಷ್ಠರು

ಕಾಂಗ್ರೆಸ್‌ನ ಭದ್ರಕೋಟೆ ಎನಿಸಿದ್ದರೂ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಟಿಕೆಟ್ ಹಂಚಿಕೆಯಿಂದ ಹಿಡಿದು ಫಲಿತಾಂಶ ಪ್ರಕಟವಾಗುವವರೆಗೂ ಒಂದಿಲ್ಲೊಂದು ರೀತಿಯ ಆತಂಕದ ವಿದ್ಯಮಾನಗಳಿಗೆ ಸಾಕ್ಷಿಯಾಗಿದ್ದವು. ಕ್ಷೇತ್ರದಲ್ಲಿ ನಿರ್ಣಾಯಕ ಸಂಖ್ಯೆಯಷ್ಟಿರುವ ಮುಸ್ಲಿಮರು ಟಿಕೆಟ್ ಅಪೇಕ್ಷಿಸಿದ್ದು, ಸಿಗದಿದ್ದಾಗ ತಿರುಗಿಬಿದ್ದಿದ್ದು, ಬಳಿಕ ಪಕ್ಷದ ನಾಯಕರು ಅನುಸರಿಸಿದ ಸಮಾಧಾನತಂತ್ರ ಹಾಗೂ ಮತದಾನದ ಬಳಿಕ ಹೈಕಮಾಂಡ್ ಕೈಗೊಂಡಿದ್ದ ನಾಯಕರ ವಿರುದ್ಧದ ಶಿಸ್ತುಕ್ರಮ ಪಕ್ಷದಲ್ಲಿ ಅಯೋಮಯ ಸನ್ನಿವೇಶ ಸೃಷ್ಟಿಸಿತ್ತು. ಇದೆಲ್ಲದರ ಹೊರತಾಗಿಯೂ ಉಭಯ ಕ್ಷೇತ್ರಗಳನ್ನು ಗೆಲುವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡ ಸಿಎಂ ಸಿದ್ದರಾಮಯ್ಯ ಖುದ್ದಾಗಿ ಕ್ಷೇತ್ರಗಳಲ್ಲಿ ಠಿಕಾಣಿ ಹೂಡಿದ್ದರು.

ಗೆಲುವಿನ ಅಂತರ ಇಳಿದಿದ್ದೇಕೆ?

ಸಚಿವ ಹಾಗೂ ಅಭ್ಯರ್ಥಿ ಸಮರ್ಥ್ ತಂದೆ ಎಸ್.ಎಸ್. ಮಲ್ಲಿಕಾರ್ಜುನ ಅವರು ಸಚಿವ ಜಮೀರ್ ಅಹ್ಮದ್ ಕುರಿತು ಆಡಿದ್ದ ಮಾತು ದೊಡ್ಡಮಟ್ಟದಲ್ಲಿ ಎಫೆಕ್ಟ್ ಆಗುವಷ್ಟರಲ್ಲಿ ವರಿಷ್ಠರು ಮಾಡಿದ ತೇಪೆತಂತ್ರವೂ ಡ್ಯಾಮೇಜ್ ಕಂಟ್ರೋಲ್ ಮಾಡಿತು. ಆದರೆ ಮತದಾನದ ದಿನವೇ ಮೈನಾರಿಟಿ ಮುಖಂಡರು ನಮ್ಮವರಿಂದಲೇ ಪಕ್ಷವಿರೋಧಿ ಚಟುವಟಿಕೆ ನಡೆದಿದೆ ಎಂದು ಆರೋಪಿಸಿದ್ದು, ಹಲವು ಗೊಂದಲಗಳಿಗೆ ಕಾರಣವಾಗಿತ್ತು. ಇದೆಲ್ಲದರ ನಡುವೆಯೇ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತ್ರ ಅಲ್ಪಸಂಖ್ಯಾತರು ನಮ್ಮ ಕೈ ಹಿಡಿದಿದ್ದಾರೆ. ಫಲಿತಾಂಶ ಎರಡೂ ಕ್ಷೇತ್ರದಲ್ಲಿ ನಮ್ಮ ಪರವಾಗಿಯೇ ಬರಲಿದೆ ಎಂದಿದ್ದ ಅನುಭವದ ಮಾತು ಇದೀಗ ನಿಜವಾಗಿದೆ. ಆದರೆ ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರಿಗೆ 2023ರಲ್ಲಿ ಸಿಕ್ಕಿದ್ದ ಗೆಲುವಿನ ಅಂತರ 27,888 ರಿಂದ ಇದೀಗ ಮೊಮ್ಮಗ ಸಮರ್ಥ್‌ಗೆ 5,708ಕ್ಕೆ ತಂದಿಳಿಸಿದೆ.

ಇನ್ನೂ ಬಾಗಲಕೋಟೆಯಲ್ಲಿ ಅತ್ಯಾಪ್ತ ಹೆಚ್.ವೈ.ಮೇಟಿ ಅವರ ಸ್ಥಾನಕ್ಕೆ ಸ್ಪರ್ಧಿಸಲು ಮಕ್ಕಳೇ ಪೈಪೋಟಿಗಿಳಿದಾದ ಖುದ್ದು ಬೆಂಗಳೂರಿನ ನಿವಾಸಕ್ಕೆ ನಾಲ್ವರನ್ನೂ ಕರೆಸಿ ಮನವೊಲಿಸಿದ್ದ ಸಿಎಂ ಸಿದ್ದು ಪ್ರಚಾರದಲ್ಲೂ ಮುಂಚೂಣಿಯಲ್ಲಿ ನಿಂತು ಪುತ್ರ ಉಮೇಶ್‌ಮೇಟಿ ಅವರನ್ನು 21,866 ಮತಗಳ ಅಂತರದಿಂದ ಗೆಲ್ಲಿಸಿಕೊಂಡಿದ್ದಾರೆ.

ಸಂಭಾವ್ಯ ವಿದ್ಯಮಾನಗಳ ಅಚ್ಚರಿ

ಉಪಚುನಾವಣೆ ಸಿಎಂ ಸಿದ್ದರಾಮಯ್ಯ ಅವರ ಸೀಟನ್ನು ಇನ್ನಷ್ಟು ಭದ್ರಗೊಳಿಸಿದೆ ಎಂದು ವಿಶ್ಲೇಷಿಸಬಹುದಾದರೆ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಥಾನವನ್ನೂ ಗಟ್ಟಿಗೊಳಿಸಿದೆ ಎನ್ನಲಡ್ಡಿಯಿಲ್ಲ. ಆದರೆ ರಾಜಕಾರಣದಲ್ಲಿ ಇವೆಲ್ಲವೂ ತಾತ್ಕಾಲಿಕ ಮಾತ್ರ. ಮೇ ತಿಂಗಳ ಸಂಭಾವ್ಯ ಕ್ರಾಂತಿ ಘಟಿಸಿದರೆ ಸರ್ಕಾರ ಮತ್ತು ಪಕ್ಷದ ಮಟ್ಟದಲ್ಲಿ ಬಹುದೊಡ್ಡ ಬದಲಾವಣೆಗೆ ಬೈಎಲೆಕ್ಷನ್ ರಿಸಲ್ಟ್ ಕಾರಣವಾದರೂ ಅಚ್ಚರಿಯಿಲ್ಲ.

ಫಲ ಕೊಟ್ಟ ಕಾರ್ಯತಂತ್ರ

ಭಾರತದ ದೃಢೀಕೃತ ಫಲಿತಾಂಶ

> ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ಕಡೆ ಎನ್‌ಡಿಎ ಮೈತ್ರಿಕೂಟವು ಅಭೂತಪೂರ್ವ ಗೆಲುವು ಸಾಧಿಸಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ವಿಕಸಿತ ಭಾರತಕ್ಕಾಗಿ ಅವರ ಪರಿವರ್ತನಾಪ್ರೇರಿತ ಕಾರ್ಯಸೂಚಿಯಲ್ಲಿ ಜನರು ಹೊಂದಿರುವ ನಿರಂತರ ನಂಬಿಕೆಯ ದೃಢೀಕೃತ ಫಲಿತಾಂಶವಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಾರ್ಯತಂತ್ರದ ನಾಯಕತ್ವ ಮತ್ತು ರಾಷ್ಟ್ರೀಯ ಏಕತೆಗೆ ಅಚಲ ಬದ್ಧತೆಯು ಈ ಫಲಿತಾಂಶವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.
>
> ▪ ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ನಮ್ಮ ಊಹೆ ಸರಿಯಾಗಿದೆ

> ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದಿಂದ ನಮ್ಮಲ್ಲಿ ಯಾವುದೇ ಬದಲಾವಣೆ ಆಗಲ್ಲ. ಗ್ಯಾರಂಟಿ ಯೋಜನೆಗಳಿಂದ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದಾರೆ. ಕೇರಳದಲ್ಲೂ ನಮ್ಮ ಪಕ್ಷ ಗೆದ್ದಿದೆ. ನಮ್ಮ ಊಹೆ ಸರಿಯಾಗಿದೆ. ಆದರೆ, ಎಸ್‌ಡಿಪಿಐಗೆ ಬಿದ್ದಿರುವ ಓಟು ಡೇಂಜರ್ ಆಗಿದೆ. ಅಸ್ಸಾಂನಲ್ಲಿ ಪಕ್ಷಕ್ಕೆ ಇಷ್ಟು ಕಡಿಮೆ ಸೀಟು ಸಿಗುತ್ತದೆ ಅಂದುಕೊಂಡರಿಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯವರು ಗೆಲ್ಲಲೇಬೇಕು ಎಂದು ಮತ ಡಿಲಿಟ್ ಮಾಡಿಸಿದ್ದಾರೆ.
>
> ▪ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಮುಂದೆ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ

> ಉಪ ಚುನಾವಣೆಯಲ್ಲಿ ಒಂದು ಕ್ಷೇತ್ರ ಗೆಲ್ಲುವ ವಿಶ್ವಾಸವಿತ್ತು. ಮತದಾರ ಪ್ರಭುಗಳ ನಿಲುವನ್ನು ಪಕ್ಷ ಸ್ವಾಗತಿಸುತ್ತದೆ. ಪಂಚ ರಾಜ್ಯಗಳ ಚುನಾವಣೆ ಫಲಿತಾಂಶದಲ್ಲಿ ಕಾಂಗ್ರೆಸ್‌ಗೆ ಭವಿಷ್ಯವಿಲ್ಲ ಎಂಬುದು ಸಾಬೀತಾಗಿದೆ. ಅಭಿವೃದ್ಧಿ ಮತ್ತು ವಿಕಸಿತ ಭಾರತ ನಿರ್ಮಾಣ ಮಾಡಬೇಕು ಎಂಬ ಎನ್‌ಡಿಎ ಬದ್ಧತೆಗೆ ಮತದಾರರು ಆಶೀರ್ವಾದ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷ ಸುಳ್ಳು ಹೇಳಿ ಮತದಾರರನ್ನು ಸೆಳೆದುಕೊಳ್ಳಬಹುದು ಎಂದು ಭಾವಿಸಿತ್ತು. ಆದರೆ, ಮತದಾರರು ಅದರ ಮಾತನ್ನು ನಂಬಿಲ್ಲ ಎಂಬುದು ಚುನಾವಣೆ ಫಲಿತಾಂಶವೇ ಸಾಕ್ಷಿ
>
> ▪ ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ದೇಶದ ಸುಭದ್ರತೆಗೆ ಸಿಕ್ಕ ಗೆಲುವು

> ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿಯ ಆಡಳಿತಕ್ಕಾಗಿ ಹಾಗೂ ದೇಶದ ಸುಭದ್ರತೆಗಾಗಿ ಜನರು ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ದೇಶವನ್ನು ಭದ್ರವಾಗಿ ಇಡಲು ಪ್ರಧಾನಿ ನರೇಂದ್ರ ಮೋದಿಯವರಿಂದ ಮಾತ್ರ ಸಾಧ್ಯ ಎಂದು ಮತದಾರರು ಸಂದೇಶ ನೀಡಿದ್ದಾರೆ. ಕರ್ನಾಟಕದಲ್ಲಿ ಉಪಚುನಾವಣೆ ಸಿಂಪತಿ ಮೇಲೆ ನಡೆದಿದೆ. ಶಾಸಕರು ನಿಧನರಾಗಿದ್ದರಿಂದ ಆ ದಯೆಯ ಮೇಲೆ ಮತ ಕೇಳಲಾಗಿದೆ. ಆದರೆ, ಎರಡೂ ಕ್ಷೇತ್ರದಲ್ಲಿ ಬಿಜೆಪಿ ಬಗ್ಗೆ ಒಲವು ಇರುವುದು ಮತ ಗಳಿಕೆಯಿಂದ ಗೊತ್ತಾಗಿದೆ.
>
> ▪ ಆರ್. ಅಶೋಕ, ವಿಧಾನಸಭೆ ಪ್ರತಿಪಕ್ಷ ನಾಯಕ.

ಕನ್ನಡ ಸ್ವಾಭಿಮಾನಕ್ಕೆ ಸಂದ ಜಯ

> ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಜಯ ದಾಖಲಿಸಿರುವುದು ಕನ್ನಡಿಗರ ಸ್ವಾಭಿಮಾನಕ್ಕೆ ಸಂದ ಜಯ. ಈ ಫಲಿತಾಂಶವು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಜನತೆ ನೀಡಿದ ಸಮ್ಮತಿಯಾಗಿದೆ. ಹೀಗಾಗಿ ಇದು ಕಾಂಗ್ರೆಸ್ ಗ್ಯಾರಂಟಿಗಳ ಜಯ, ಪ್ರತಿಯೊಬ್ಬ ಕನ್ನಡಿಗನ ಜಯ, ಕನ್ನಡ ಸ್ವಾಭಿಮಾನಕ್ಕೆ ಸಂದ ಜಯ, ಕಾಂಗ್ರೆಸ್ ಕಾರ್ಯಕರ್ತರ ಜಯ. 2028ರ ವಿಧಾನಸಭೆ ಚುನಾವಣೆಯಲ್ಲಿಯೂ ಕರ್ನಾಟಕದ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಆಶೀರ್ವಾದ ಮಾಡುವುದು ಖಚಿತ
>
> ▪ ರಣದೀಪ್ ಸಿಂಗ್ ಸುರ್ಜೇವಾಲ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ

ಎರಡೂ ಕಡೆ ಗೆಲ್ಲುವ ನಿರೀಕ್ಷೆ ಇತ್ತು

> ಬಾಗಲಕೋಟೆ ಕ್ಷೇತ್ರದ ಸೋಲನ್ನು ನಿರೀಕ್ಷಿಸಿರಲಿಲ್ಲ. ಎರಡೂ ಕಡೆ ಪಕ್ಷದ ಕಾರ್ಯಕರ್ತರು ಕೆಲಸ ಮಾಡಿದ್ದರು. ಇದರಿಂದ ಗೆಲ್ಲುವ ನಿರೀಕ್ಷೆ ಇತ್ತು. ಕಾಂಗ್ರೆಸ್ ಉಪಸಮರ ಗೆದ್ದಿದೆ ಎಂದರೆ ಸರ್ಕಾರದ ಪರವಾದ ಒಲವು ಇದೆ ಅನ್ನುವುದು ಸರಿಯಲ್ಲ. ಮುಖ್ಯಮಂತ್ರಿಯವರು ಬಾಗಲಕೋಟೆಯಲ್ಲಿ ಬಂದು 15 ದಿನ ಬೀಡು ಬಿಟ್ಟಿದ್ದರು. ಸಚಿವ ಸಂಪುಟದ ಸದಸ್ಯರೂ ಬೀಡು ಬಿಟ್ಟಿದ್ದರು.
>
> ▪ ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಎನ್‌ಡಿಎ ಸಾಧನೆ ಸಂತಸ ತಂದಿದೆ

> ಪಂಚ ರಾಜ್ಯಗಳ ಚುನಾವಣೆಯಲ್ಲಿ ಎನ್‌ಡಿಎ ಮಾಡಿರುವ ಸಾಧನೆ ಹೆಮ್ಮೆಯ ವಿಷಯವಾಗಿದೆ. ಎನ್‌ಡಿಎ ಮಿತ್ರಪಕ್ಷವಾಗಿರುವ ತಮಗೆ ಸಂತಸ ತಂದಿದೆ. ಪಶ್ಚಿಮ ಬಂಗಾಳ, ಅಸ್ಸಾಂ, ಪಾಂಡಿಚೇರಿಯಲ್ಲಿ ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ಜಯಭೇರಿ ಬಾರಿಸಿರುವುದು ಹಾಗೂ ಕೇರಳದಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ಮೂಲಕ ಸಾಧನೆ ಮಾಡಿರುವುದು ಐತಿಹಾಸಿಕವಾದುದು.
>
> ▪ ಎಚ್.ಡಿ. ದೇವೇಗೌಡ, ಮಾಜಿ ಪ್ರಧಾನಿ

ದೇಶಾದ್ಯಂತ ಶೂನ್ಯಕ್ಕೆ ತಳ್ಳಲ್ಪಟ್ಟ 'ಕೈ' ಅಸ್ತಿತ್ವ

> ಕೇರಳ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ. ಮುಂಬರುವ ಚುನಾವಣೆಯಲ್ಲಿ ಕರ್ನಾಟಕದಲ್ಲಿಯೂ ಇದೇ ಸ್ಥಿತಿ ಎದುರಾಗಲಿದೆ. ದುರಾಡಳಿತ, ಮಿತಿಮೀರಿದ ತುಷ್ಟೀಕರಣ, ಭ್ರಷ್ಟಾಚಾರ, ಗೂಂಡಾಗಿರಿ ವಿರುದ್ಧ ಅತ್ಯಂತ ಸ್ಪಷ್ಟ ಜನಾದೇಶ ಇದಾಗಿದೆ. ಒಂದು ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ದೇಶಾದ್ಯಂತ ಶೂನ್ಯಕ್ಕೆ ತಳ್ಳಲ್ಪಟ್ಟಿದೆ. ತಮಿಳುನಾಡಲ್ಲಿ ವಿಜಯ್ ಜತೆ ಹೋಗುತ್ತೇವೆ ಎಂದಿದ್ದಾರೆ. ಅಲ್ಲಿ ಹೋಗಲು ಅವರಲ್ಲೇನೂ ಉಳಿದಿಲ್ಲ. ಇನ್ನೇನು ಹೋಗುತ್ತಾರೆ?
>
> ▪ ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಪಂಚ ರಾಜ್ಯ ಪಂಚ್ ಕಜ್ಜಾಯ

ದೀದಿ ದರ್ಬಾರ್‌ಗೆ ಬಿಜೆಪಿ ಫುಲ್ ಸ್ಟಾಪ್

ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಕಮಲ ಕಿಲಕಿಲ

15 ವರ್ಷಗಳ ಮಮತಾ ಆಡಳಿತಕ್ಕೆ ಬ್ರೇಕ್ ಹಾಕಿದ ಬಂಗಾಳಿಗಳು | ಸುವೇಂದು ಮುಂದಿನ ಬಿಜೆಪಿ ಸಿಎಂ?

ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಯಕಿ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಓಲೈಕೆ ಹಾಗೂ ಸೊಕ್ಕಿಗೆ ಈಗ ಬಿಜೆಪಿ ಫುಲ್‌ಸ್ಟಾಪ್ ಹಾಕಿದೆ. ಬಿಜೆಪಿಯೊಂದಿಗೆ ಸುದೀರ್ಘಮಯ ಸಂಘರ್ಷ ಹಾಗೂ ಬಿರುಗಾಳಿಯ ರಾಜಕೀಯ ಹೋರಾಟ ಈಗ ನಿರ್ಣಾಯಕ ತಿರುವು ಪಡೆದುಕೊಂಡಿದ್ದು ಮಮತಾ ದೀದಿಯವರ 15 ವರ್ಷಗಳ ದುರಾಡಳಿತ ಅಂತ್ಯ ಕಾಣುವಂತಾಗಿದೆ.

ಟಿಎಂಸಿ ಹಾಗೂ ಬಿಜೆಪಿ ನಡುವಣ ನೇರ ಹೋರಾಟದಲ್ಲಿ ಬಿಜೆಪಿ ವಿಜಯದ ಪತಾಕೆ ಹಾರಿಸಿದೆ. ಸ್ವಾತಂತ್ರ್ಯಾನಂತರದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪಶ್ಚಿಮಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ.

ರಾಜ್ಯದ 85 ಮುಸ್ಲಿಮ್ ಪ್ರಾಬಲ್ಯ ಇರುವ ಕ್ಷೇತ್ರಗಳಲ್ಲಿ 12ರಲ್ಲಿ ಗೆಲುವು ಸಾಧಿಸಿದರೆ ಟಿಎಂಸಿ 52ರಲ್ಲಿ ಗೆಲುವು ಕಂಡಿದೆ. 2021ರಲ್ಲಿ ಟಿಎಂಸಿ 75 ಕ್ಷೇತ್ರಗಳಲ್ಲಿ ಪ್ರಾಬಲ್ಯ ಸಾಧಿಸಿದರೆ ಬಿಜೆಪಿಗೆ ದಕ್ಕಿದ್ದು 1 ಸ್ಥಾನ ಮಾತ್ರ. ಈ ಅಂಶವೇ ರಾಜ್ಯದಲ್ಲಿ ಮಮತಾ ಮುಸ್ಲಿಮರ ಮತಗಳಿಗೆ ಮಾಡಿರುವ ಓಲೈಕೆಯ ಪ್ರಮಾಣ ಸ್ಪಷ್ಟವಾಗುತ್ತದೆ.

ಆದರೆ ಹಿಂದೂ ಪ್ರಾಬಲ್ಯ ಇರುವ ಉತ್ತರ ಬಂಗಾಳ ಹಾಗೂ ಜಂಗಲ್ ಮಹಲ್ ಪ್ರದೇಶದಲ್ಲಿ ಬಿಜೆಪಿ ಅತ್ಯುತ್ತಮ ಪ್ರದರ್ಶನ ನೀಡಿರುವುದು ಪಕ್ಷವು 148ರ ಬಹುಮತದ ಗಡಿ ದಾಟಲು ಕಾರಣವಾಯಿತು. ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರೇ ಹೆಚ್ಚಾಗಿರುವ 84 ಕ್ಷೇತ್ರಗಳ ಪೈಕಿ 65ರಷ್ಟನ್ನು ಬಿಜೆಪಿ ಕಬಳಿಸಿದೆ. ಮತುವಾ ಹಾಗೂ ರಾಜವಂಶಿ ಬುಡಕಟ್ಟು ಸಮುದಾಯದವರೂ ಬಿಜೆಪಿಗೆ ಮತಹಾಕಿರುವುದು ಕಂಡುಬಂದಿದೆ. ಗ್ರಾಮ ಹಾಗೂ ಕೃಷಿ ಹೆಚ್ಚಾಗಿರುವ ಕ್ಷೇತ್ರಗಳಲ್ಲಿ ಬಿಜೆಪಿ ಜಯ ದಾಖಲಿಸಿದರೆ, ಟಿಎಂಸಿ ಕೆಲವೊಂದು ನಗರ ಹಾಗೂ ಮಧ್ಯಮ ವರ್ಗದವರೇ ಹೆಚ್ಚಾಗಿರುವ ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿದೆ.

ಮತದಾರರ ವಿಶೇಷ ಪರಿಷ್ಕರಣೆಯಡಿ ದಾಖಲೆ ಸಂಖ್ಯೆಯ ಮತದಾರರ ಅಳಿಸುವಿಕೆಯ ಬಳಿಕ ಈ ಚುನಾವಣೆಯಲ್ಲಿ ಟಿಎಂಸಿಗೆ ಸೋಲಾಗಿರುವುದು ಇಲ್ಲಿ ಗಮನಾರ್ಹ. ಮಾಜಿ ಕಟ್ಟಾ ಬೆಂಬಲಿಗ ಸುವೇಂದು ಅಧಿಕಾರಿಯವರ ನಾನಾ ರೀತಿಯ ರಾಜಕೀಯ ತಂತ್ರಗಾರಿಕೆ ಎದುರು ಮಮತಾರವರ ಆಕ್ರಮಣಕಾರಿ ರಾಜಕೀಯ ಸೋಲು ಕಂಡಿದೆ.

ಮಿಷನ್ ಬಿಜೆಪಿ ಹಿಂದಿನ ರೂವಾರಿಗಳು

'ಮಿಷನ್ ಬಂಗಾಳ'ದ ಯಶಸ್ಸಿನ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಚಾಣಾಕ್ಷ ತಂತ್ರಗಾರಿಕೆ ಹಾಗೂ ಐವರು ಪ್ರಮುಖ ನಾಯಕರ ಪರಿಶ್ರಮ ಎದ್ದು ಕಾಣುತ್ತಿದೆ. ಶಾ ಅವರು ಸ್ಥಳೀಯ ದೇವತೆ, ಬಂಗಾಳಿ ಸಂಸ್ಕೃತಿ ಮತ್ತು ಆಹಾರ ಪದ್ಧತಿಗೆ ಒತ್ತು ನೀಡುವ ಮೂಲಕ ಗಮನ ಸೆಳೆದರು. ಸುವೆಂಧು, ಧರ್ಮೆಂದ್ರ ಪ್ರಧಾನ್, ಭುಪೇಂದರ್ ಯಾದವ್, ಬನ್ಸಾಲ್, ಬಿಪ್ಲಾಬ್ ದೇಬ್ ಅವರೂ ಬಿಜೆಪಿಯ ಗೆಲುವಿಗೆ ಶ್ರಮಿಸಿದ್ದಾರೆ.

ಬಿಜೆಪಿ ಗೆಲ್ಲಲು ಇವೇ ಕಾರಣ

- ಮಮತಾ ಬ್ಯಾನರ್ಜಿ ಸರ್ಕಾರದ ದುರಾಡಳಿತ ವಿರುದ್ಧ ಜನರು ಬೇಸತ್ತಿದ್ದರು, ಅದರ ವಿರುದ್ಧ ಮತ ಹಾಕಿದರು.
- ಎಲ್ಲ ಹಿಂದೂ ಮತಗಳ ಕ್ರೋಢೀಕರಣ ಮಾಡುವಲ್ಲಿ ಯಶಸ್ಸು ಕಂಡ ಬಿಜೆಪಿ ಪಕ್ಷ. ಆದಿವಾಸಿ ಸಮುದಾಯದಿಂದ ಬೆಂಬಲ
- ಮಹಿಳೆಯರ ಮೇಲಾಗುತ್ತಿದ್ದ ದೌರ್ಜನ್ಯ ಹಾಗೂ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳ ಕೊರತೆಯಿಂದ ರೋಸಿ ಹೋಗಿದ್ದ ರಾಜ್ಯದ ಜನ
- ಬಂಗ್ಲಾದೇಶದ ಅತಿಕ್ರಮಣಕ್ಕೆ ಟಿಎಂಸಿ ಬೆಂಬಲ ನೀಡುತ್ತಿದೆ ಎಂಬ ಆರೋಪ ಹಿಂದೂಗಳಲ್ಲಿ ಭಾರಿ ಆತಂಕ ಸೃಷ್ಟಿಸಿತ್ತು
- ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ಯುಪಿ ಸಿಎಂ ಯೋಗಿ ಆದಿತ್ಯನಾಥ್ ಸೇರಿ ಗಣ್ಯರ ಬಿರುಸಿನ ಪ್ರಚಾರಕ್ಕೆ ಬಂಗಾಳದ ಜನ ಮನಸೋತರು, ಮತಗಟ್ಟೇಲಿ ಮತ ಹಾಕಿದ್ರು
- ಮಮತಾ ಆಡಳಿತದಲ್ಲಾದ ಹಗರಣಗಳಿಗೆ ಬೇಸತ್ತಿದ್ದ ಜನರು

ಲೆಕ್ಕಾಚಾರ

04
ಸತತ ನಾಲ್ಕನೆಯ ಬಾರಿಗೆ ಅಧಿಕಾರಕ್ಕೆ ಏರುವ ಮಮತಾ ಕನಸು ಸಿಡಿದು ನುಚ್ಚುನೂರು

17000
ಸಂದೇಶ್‌ಖಾಲಿ ಕ್ಷೇತ್ರದಲ್ಲಿ 17000 ಮತಗಳಿಂದ ಗೆದ್ದು ಬೀಗಿದ ಬಿಜೆಪಿಯ ಸನತ್

77
2021ರಲ್ಲಿ ನಡೆದ ವಿಧಾನಸಭೆ ಚುನಾವಣೇಲಿ ಭಾರತೀಯ ಜನತಾ ಪಕ್ಷ ಗೆದ್ದ ಸೀಟು

215
2021ರಲ್ಲಿ ನಡೆದ ವಿಧಾನಸಭೆ ಚುನಾವಣೇಲಿ ಟಿಎಂಸಿ ಪಕ್ಷ ಗೆದ್ದ ಕ್ಷೇತ್ರಗಳ ಸಂಖ್ಯೆ

ಹೈವೋಲ್ಟೇಜ್ ಹೈಲೈಟ್ಸ್

ಚುನಾವಣಾ ಸ್ವಾರಸ್ಯ

ಬಿಜೆಪಿಗೆ ಚುನಾವಣೋತ್ತರ ಸಮೀಕ್ಷೆಗಳು ಬಹುಮತ ತೋರಿಸಿದ್ದವಾದರೂ ಅದು ಗೆಲ್ಲುವುದು ಅಷ್ಟು ಸುಲಭದ ದಾರಿಯಾಗಿರಲಿಲ್ಲ. ಗಣನೀಯ ಸಂಖ್ಯೆಯ ಮುಸ್ಲಿಂ ಮತಗಳು ಬಂಗಾಳದಲ್ಲಿ ಇರುವುದರಿಂದ ಗೆಲುವು ಕಷ್ಟವಾಗಿತ್ತು. ಆದರೆ ಇದನ್ನು ಮೀರಿ ಗೆದ್ದಿರುವುದು ಪವಾಡವೇ ಎನ್ನಲಾಗುತ್ತಿದೆ.

ಟಿಎಂಸಿ ಭದ್ರ ಕೋಟೆ ಒಡೆದ ಆರ್‌ಜಿ ಕರ್ ಸಂತ್ರಸ್ತೆ ಅಮ್ಮ

ಆರ್‌ಜಿ ಕಾಲೇಜಿನ ನತದೃಷ್ಟ ವೈದ್ಯೆಯ ತಾಯಿ ಹಾಗೂ ಬಿಜೆಪಿ ಅಭ್ಯರ್ಥಿ ರತ್ನಾ ದೇಬ್‌ನಾಥ್ ಉತ್ತರ ಪರಗಣ

ಜಿಲ್ಲೆಯ ಪಣಿಹಟಿ ಕ್ಷೇತ್ರದಲ್ಲಿ ಗೆಲುವು ಸಾಧಿಸುವ ಮೂಲಕ ಜನರ ನ್ಯಾಯ ದೊರಕಿದೆ. ಪಣಿಹಟಿ 2011ರಿಂದಲೂ ತೃಣಮೂಲ ಕಾಂಗ್ರೆಸಿನ ಭದ್ರಕೋಟೆಯಾಗಿದ್ದು ಇದೀಗ ಭಾವನಾತ್ಮಕ ಕಾರಣಗಳಿಂದಾಗಿ ಬಿಜೆಪಿಯ ಪಾಲಾಗಿದೆ. ಇದು ಮೃತ ವೈದ್ಯಗೆ ದೊರೆತ ನ್ಯಾಯವೇ ಸರಿ.

ಮತ್ತೆ ಬಾಬ್ರಿ ಕಟ್ಟುತ್ತೇನೆಂದ ಕಬೀರ್‌ಗೆ ಭಾರೀ ಗೆಲುವು

ಬಾಬ್ರಿ ಮಸೀದಿಯದೇ ರೀತಿಯಲ್ಲಿ ಬಂಗಾಳದಲ್ಲಿಯೂ ಮಸೀದಿಗೆ 2025ರ ಡಿಸೆಂಬರ್ 6ರಂದು ಅಡಿಗಲ್ಲು

ಹಾಕಿ ನಿರ್ಮಾಣ ಮಾಡಿದ್ದ ವಿವಾದಿತ ಶಾಸಕ ಹುಮಯೂನ್ ಕಬೀರ್ ಈಗ ರೇಜಿ ನಗರ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಈ ಬಾಬ್ರಿ ಮಸೀದಿ ಘೋಷಣೆ ಮೂಲಕ ಮುಸ್ಲಿಮರ ಒಲವು ಗಳಿಸಿದ್ದರು. ಮಸೀದಿ ವಿವಾದ ಹುಟ್ಟುಹಾಕಿದ್ದಕ್ಕಾಗಿ ಟಿಎಂಸಿಯಿಂದಲೇ ಹುಮಾಯುನ್ ಉಚ್ಚಾಟಿತರಾಗಿದ್ದರು.

ಝುಲ್ಮುರಿ ತಿಂದು ಮಮತಾ ಪಕ್ಷದ ಭದ್ರಕ್ಷೇತ್ರ ಗೆದ್ದ ಪಿಎಂ

ಪ್ರಧಾನಿ ಮೋದಿ ಪಶ್ಚಿಮಬಂಗಾಳದ ಚುನಾವಣಾ ಪ್ರಚಾರ ವೇಳೆ ಜಲಮುರಿ ತಿಂದ ಜಾರ್‌ಗ್ರಾಮದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಇದುವರೆಗೆ ಟಿಎಂಸಿಯ ಭದ್ರಕೋಟೆಯಾಗಿದ್ದ ಜಾರ್‌ಗ್ರಾಮದಲ್ಲಿ ಬಿಜೆಪಿಯ ಲಕ್ಷ್ಮಿಕಾಂತ್ ಸಾಹು ಜಯ ಸಾಧಿಸಿದ್ದಾರೆ. ಜಾರ್‌ಗ್ರಾಮದಲ್ಲಿ ಪ್ರಧಾನಿ ಮೋದಿ ಪ್ರಚಾರ ಮಾಡುವಾಗ ಜಲಮುರಿ ಅಂಗಡಿಗೆ ಹೋಗಿ ದುಡ್ಡುಕೊಟ್ಟು ಅದನ್ನು ತಿಂದ ನಂತರ ದೇಶದಾದ್ಯಂತ ಭಾರೀ ಸುದ್ದಿಗೆ ಗ್ರಾಸವಾಗಿದ್ದು ಸಾಮಾಜಿಕ ತಾಣದಲ್ಲಿ ಅವರ ಪೋಸ್ಟ್‌ಗೆ ಲಕ್ಷಾನುಗಟ್ಟಲೆ ಲೈಕ್‌ಗಳು ಬಂದಿದ್ದವು.

ಶ್ಯಾಮ್ ಪ್ರಸಾದ ಮುಖರ್ಜಿ ನಾಡಲ್ಲಿ ಅಂತೂ ಗೆದ್ದ ಕಮಲ

ಬಿಜೆಪಿಯ ಮೂಲ ಪುರುಷರೆಂದು ಪರಿಗಣಿಸಲ್ಪಟ್ಟಿರುವ ಶ್ಯಾಮ ಪ್ರಸಾದ್ ಮುಖರ್ಜಿ ಅವರ ತಾಯ್ನಾಡಾದ



ಪಶ್ಚಿಮಬಂಗಾಳದಲ್ಲಿ ಈಗ ಕಮಲ ಅರಳಿದೆ. 1951ರಲ್ಲಿ ಆರೆಸ್ಸೆಸ್ ಸಹಾಯದಿಂದ ಅವರು ಜನಸಂಘ ಸ್ಥಾಪಿಸಿದ್ದರು. ಮುಂದೆ ಜನಸಂಘವೇ ಭಾರತೀಯ ಜನತಾ ಪಾರ್ಟಿಯಾಗಿ ಪರಿವರ್ತಿಸಲ್ಪಟ್ಟಿರುವುದರಿಂದ ಬಿಜೆಪಿ ಬೆಳವಣಿಗೆಗೆ ಅವರೇ ಮೂಲಪುರುಷರು ಎನ್ನಲಾಗುತ್ತದೆ.

ಎಲ್ಲ ಸಮೀಕ್ಷೆಗಳನ್ನೂ ಮೀರಿ ಗೆದ್ದ ಮೋದಿ ಮತ್ತು ಟೀಮ್

ಪಶ್ಚಿಮಬಂಗಾಳ ಚುನಾವಣೆಗೆ ಸಂಬಂಧಿಸಿದಂತೆ ಹಲವಾರು ಮತದಾನೋತ್ತರ ಸಮೀಕ್ಷೆಗಳಂತೆ ಬಿಜೆಪಿ 125ರಿಂದ 180ರಷ್ಟು ಸೀಟುಗಳನ್ನು ಗೆಲ್ಲಬಹುದೆಂದು ಅಂದಾಜಿಸಲಾಗಿತ್ತು. ಆದರೀಗ ಬಿಜೆಪಿ 200ರ ಗಡಿ ದಾಟಿರುವುದು ಕಂಡುಬಂದಿದೆ. ಇದರಿಂದ ಯಾವುದೇ ಮತದಾನೋತ್ತರ ಸಮೀಕ್ಷೆಯೂ ನಿಖರವಲ್ಲವೆಂಬುದು ಮತ್ತೊಮ್ಮೆ ಸಾಬೀತಾಗಿದೆ. ಬಿಜೆಪಿ ಬಹುಮತ ಸಾಧಿಸಬಹುದೆಂದು ಬಹುತೇಕ ಸಮೀಕ ಅಂದಾಜಿಸಿದ್ದರೂ ಈ ಪರಿಯ ಗೆಲುವು ಸಿಗಬಹುದೆಂದು ಹೇಳಿರಲಿಲ್ಲ.

ಗೆದ್ದವರು

ಫಿರ್ಹಾದ್ ಹಕೀಮ್
ತೃಣಮೂಲ ಕಾಂಗ್ರೆಸ್

ಗೌರಿ ಶಂಕರ್
ಭಾರತೀಯ ಜನತಾ ಪಕ್ಷ

ಹುಮಯುನ್ ಕಬೀರ್
ಪಕ್ಷೇತರ ಅಭ್ಯರ್ಥಿ

ಅಗ್ನಿಮಿತ್ರ ಪೌಲ್
ಭಾರತೀಯ ಜನತಾ ಪಕ್ಷ

ಸುವೇಂದು ಅಧಿಕಾರಿ
ಭಾರತೀಯ ಜನತಾ ಪಕ್ಷ

ಸೋತವರು

ಅಧೀರ್ ರಂಜನ್
ಕಾಂಗ್ರೆಸ್ ಪಕ್ಷ

ಹುಮಾಯುನ್
ತೃಣಮೂಲ ಕಾಂಗ್ರೆಸ್

ರಾಜ್ ಚಕ್ರಬರ್ತಿ
ತೃಣಮೂಲ ಕಾಂಗ್ರೆಸ್

ತಪಸ್ ಬ್ಯಾನರ್ಜಿ
ತೃಣಮೂಲ ಕಾಂಗ್ರೆಸ್

ಮಮತಾ ಬ್ಯಾನರ್ಜಿ
ತೃಣಮೂಲ ಕಾಂಗ್ರೆಸ್

ದ್ರಾವಿಡ ಪಾಲಿಟಿಕ್ಸ್‌ಗೆ ವಿಜಯ್ ತಿಲಾಂಜಲಿ

ಎಂಜಿಆರ್‌ರಂತೆ ಎಂಟ್ರಿ ಕೊಟ್ಟರು, ಅವರಂತೆಯೇ ಗೆದ್ದರು | ತ.ನಾಡಿಗೆ ಈಗ ಹೊಸ ಜನನಾಯಗನ್

ಐದೇ ವರ್ಷದಲ್ಲಿ ಸ್ಟಾಲಿನ್‌ಗೆ ಗೇಟ್‌ಪಾಸ್ ಕೊಟ್ಟ ತಮಿಳಿಗರು | ಅಣ್ಣಾಡಿಎಂಕೆನೂ ಫೇಲ್, ಮೋದಿ ಠುಸ್

ತಮಿಳು ನಾಡು

ಚೆನ್ನೈ: ಪ್ರಜಾಪ್ರಭುತ್ವದಲ್ಲಿ ಮತದಾರರು ಮನಸ್ಸು ಮಾಡಿದರೆ ಏನು ಬೇಕಾದರೂ ಆದೀತು ಎಂಬ ಹಳ್ಳಿಕಟ್ಟೆಯ ಮಾತಿಗೆ ತದ್ರೂಪವಾದ ಚುನಾವಣಾ ಫಲಿತಾಂಶವನ್ನು ತಮಿಳುನಾಡಿನ ಜನ ನೀಡಿದ್ದಾರೆ. ಅನಿರೀಕ್ಷಿತ ಬೆಳವಣಿಗೆ ಎಂಬಂತೆ ಎರಡೇ ವರ್ಷಗಳ ಹಿಂದೆ ಪಕ್ಷ ಕಟ್ಟಿ ರಾಜಕೀಯಕ್ಕಿಳಿದಿದ್ದ ನಟ ವಿಜಯ್ ಅವರ ಪಕ್ಷ ಅಲ್ಲಿ ಭಾರಿ ಜಯಭೇರಿ ಬಾರಿಸಿದ್ದು, ಅಧಿಕಾರ ಗದ್ದುಗೆ ಹಿಡಿಯಲು ತುದಿಗಾಲಲ್ಲಿ ನಿಂತಿದೆ.

ಆ ಮೂಲಕ 50 ವರ್ಷಗಳಿಂದ ಅಧಿಕಾರ ಅಧಿಪತ್ಯ ಹಿಡಿದು ಕೂತಿದ್ದ ದ್ರಾವಿಡ ರಾಜಕೀಯಕ್ಕೆ ಅಲ್ಲಿನ ಜನ ಮೂಲೆ ತೋರಿಸಿದ್ದಾರೆ. ಅದರಲ್ಲೂ ಕಳೆದ 5 ವರ್ಷಗಳಿಂದ ಹಿಂದೂಗಳನ್ನು ದೂಷಿಸುತ್ತಲೇ ಆಡಳಿತ ಮಾಡುತ್ತ ಬಂದಿದ್ದ ಡಿಎಂಕೆ ಹಾಗೂ ಅದರ ನಾಯಕರಿಗೆ ತಮಿಳು ಮತದಾರರು ಮುಟ್ಟಿ ನೋಡಿಕೊಳ್ಳುವಂತೆ ಸೋಲಿನೇಟು ನೀಡಿದ್ದಾರೆ.

ಡಿಎಂಕೆ 70 ಸ್ಥಾನಗಳನ್ನು, ಎಐಎಡಿಎಂಕೆ 47 ಸ್ಥಾನವನ್ನು, ಬಿಜೆಪಿ ಒಂದು ಬರೀ ಸೀಟನ್ನು ತನ್ನದಾಗಿಸಿಕೊಂಡಿದೆ. ಇನ್ನು ಕಾಂಗ್ರೆಸ್ ಕೂಡ 4 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಆದರೆ ಈ ಎಲ್ಲ ಅನುಭವಿ ಪಕ್ಷಗಳು ಕನಸಲ್ಲೂ ಊಹಿಸಿದಿದ್ದ ರೀತಿಯಲ್ಲಿ ವಿಜಯ್ ಅವರ ಟಿವಿಕೆ ಪಕ್ಷ 106 ಕ್ಷೇತ್ರಗಳಲ್ಲಿ ಭರ್ಜರಿ ಜಯ ಸಾಧಿಸಿದೆ.

ದಶಕಗಳಿಂದಲೂ ತಮಿಳುನಾಡಿನಲ್ಲಿ ಕೇವಲ ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳ ನಡುವೆ ಜಿದ್ದಾಜಿದ್ದಿಯ ಸ್ಪರ್ಧೆ ನಡೆಯುತ್ತಿತ್ತು. ಆದರೆ ಇದೇ ಮೊದಲ ಬಾರಿಗೆ ಅಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ವಿಶೇಷವಾಗಿತ್ತು. ಆದರೆ ಟಿವಿಕೆಯನ್ನು ಉಳಿದೆರಡು ಘಟನಾಘಟಿ ಪಕ್ಷಗಳು ಅಷ್ಟಾಗಿ ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷಿಸಿದ್ದು ಮಾತ್ರ ಸುಳ್ಳಲ್ಲ. ಡಿಎಂಕೆ ಹಾಗೂ ಎಐಎಡಿಎಂಕೆ ಹೀನಾಯ ಪ್ರದರ್ಶನಕ್ಕೆ ಕಾರಣವೇ ಇದು ಎನ್ನುತ್ತಾರೆ ವಿಶ್ಲೇಷಕರು.

ಇನ್ನು ವಿಜಯ್ ಅಖಾಡಕ್ಕೆ ಇಳಿಸಿದ ಬಹುತೇಕರು ಸಾಮಾನ್ಯರೇ ಆಗಿದ್ದು, ಅವರಲ್ಲಿ ಸಾಕಷ್ಟು ಜನ ಗೆದ್ದು ಬೀಗಿದ್ದಾರೆ.

- 1977ರಲ್ಲಿ ತ.ನಾಡು ಬಾಚಿಕೊಂಡು ಸರ್ಕಾರ ಮಾಡಿದ್ದ ಎಂ.ಜಿ.ರಾಮಚಂದ್ರರಾವ್
- ನಂತರ ಸಾವಿನವರೆಗೂ (1987) ಆಡಳಿತ ನಡೆಸಿದ ಖ್ಯಾತಿಗೆ ಎಂಜಿಆರ್ ಪಾತ್ರ
- ಅಲ್ಲಿಂದ ಇಲ್ಲಿಯವರೆಗೆ ತಾವೇ ಪಕ್ಷ ಕಟ್ಟಿ ಯಾವ ಸ್ಟಾರ್ ಕೂಡ ತಮಿಳುನಾಡಿನಲ್ಲಿ ವಿಧಾನಸಭೆ ಚುನಾವಣೆ ಗೆದ್ದಿಲ್ಲ, ಕಮಲ್ ಹಾಸನ್ ಕೂಡ ಸೋತು ಸುಣ್ಣಾಗಿದ್ದರು
- ಈಗ ವಿಜಯ್ ಹಾಗೂ ಅವರ ಟಿವಿಕೆ ಪಕ್ಷ ಈ ಹೊಸ ಸಾಧನೆಯನ್ನು ಮಾಡಿದೆ
- 2024ರಲ್ಲಿ ಪಕ್ಷ ಸ್ಥಾಪಿಸಿದ್ದ ವಿಜಯ್, 2025ರಿಂದ ಪ್ರಚಾರ ಶುರು ಮಾಡಿದ್ದರು.

ಸಿಂಗಂ ಸೈಡ್‌ಲೈನ್: ಮೋದಿ & ಟೀಮ್ ಮಹಾ ಎಡವಟ್ಟು

ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿತ್ತು.

ಆದರೆ ಹೇಗಾದರೂ ಮಾಡಿ ಆಡಳಿತ ಗದ್ದುಗೆ ಏರಬೇಕೆಂಬ ತವಕದಲ್ಲಿದ್ದ ಬಿಜೆಪಿ ಅಣ್ಣಾಮಲೈ ಅವರನ್ನು ಬದಿಗೊತ್ತಿ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿತು. ಇದರ ನಂತರ ಅವಧಿ ಮುಗಿದ ನೆಪದಲ್ಲಿ ಅಣ್ಣಾಮಲೈ ರಾಜ್ಯಾಧ್ಯಕ್ಷ ಹುದ್ದೆಯಿಂದಲೂ ಕೆಳಗಿಳಿದರು. ಒಂದೊಮ್ಮೆ ಅಣ್ಣಾಮಲೈ ಅವರನ್ನೇ ಮುಖ್ಯಮುಖವಾಗಿಟ್ಟುಕೊಂಡು ಬಿಜೆಪಿ ಅಖಾಡಕ್ಕೆ ಇಳಿದಿದ್ದರೆ ಮತಪ್ರಮಾಣವನ್ನು ಹೆಚ್ಚಿಸಿಕೊಳ್ಳುವುದರ ಜತೆಗೆ ಡಬಲ್ ಡಿಜಿಟ್ಟನ್ನೂ ಬಿಜೆಪಿ ದಾಟಬಹುದಾಗಿತ್ತು ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ. ಬದಲಾಗಿ ಎಐಎಡಿಎಂಕೆ ಜತೆ ಮೈತ್ರಿ ಮಾಡಿಕೊಳ್ಳುವ ಮೂಲಕ ಕಳೆದ ಸಲಕ್ಕಿಂತಲೂ ಬಿಜೆಪಿ ಮತಪ್ರಮಾಣ ಕಡಿಮೆ ಆಗಿದೆ.

ಲೆಕ್ಕಾಚಾರ

30 ವರ್ಷ
ತಮಿಳುನಾಡು ಚಿತ್ರರಂಗದಲ್ಲಿ ವಿಜಯ್ 30 ವರ್ಷ ನಟನೆ, ದಳಪತಿಯಾಗಿ ಪರಿವರ್ತನೆ

70
ಮೂವತ್ತು ವರ್ಷ, ಸುಮಾರು 70 ಸಿನೆಮಾಗಳಲ್ಲಿ ವಿಜಯ್ ನಟನೆ, ಸೂಪರ್‌ಸ್ಟಾರ್ ಖ್ಯಾತಿ

39
ನಟ ವಿಜಯ್‌ರ ಕರೂರ್ ಸಮಾವೇಶದಲ್ಲಿ ಮೃತಪಟ್ಟ ಜನರು, ಭಾರೀ ವಿವಾದ

2011
ಎಐಎಡಿಎಂಕೆ ಬೆಂಬಲಿಸಿದ್ದ ನಟ ವಿಜಯ್ ಸಂಘಟನೆ ವಿಜಯ್ ಮಕ್ಕಲ್ ಇಯಕ್ಕಂ

ಹೈವೋಲ್ಟೇಜ್ ಹೈಲೈಟ್ಸ್

ಚುನಾವಣಾ ಸ್ವಾರಸ್ಯ

ಮೊದಲ ಬಾರಿ ಚುನಾವಣಾ ಕಳಕ್ಕಿಳಿದ ವಿಜಯ್ ಅವರ ಟಿವಿಕೆ ಪಕ್ಷ 50 ವರ್ಷ ತಮಿಳುನಾಡು ಆಳಿದ ಪಕ್ಷಗಳನ್ನು ಮಕಾಡೆ ಮಲಗಿಸಿ ಅಧಿಕಾರ ಗದ್ದುಗೆ ಏರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಇದು ನಿಜಕ್ಕೂ ಪ್ರಜಾಪ್ರಭುತ್ವದ ಅದ್ಭುತವೇ ಸರಿ. ಇದು ಪ್ರಜಾಪ್ರಭುತ್ವದ ಸೊಬಗೂ ಹೌದು.

ಕಮಲ್ ರೀತಿಯೇ ಮಕಾಡೆ ಮಲಗುತ್ತಾರೆಂದು ನಕ್ಕಿದ್ದರು

ತಮಿಳುನಾಡು ರಾಜಕೀಯದಲ್ಲಿ ಸೂಪರ್‌ಸ್ಟಾರ್‌ಗಳು ಸದ್ದು ಮಾಡುತ್ತಿರುವುದು ಇದೇ ಮೊದಲಲ್ಲ. ಎಂಜಿಆರ್,

ಜಯಲಲಿತಾ, ಶಿವಾಜಿ ಗಣೇಶನ್ ಸೇರಿ ಇನ್ನೂ ಹಲವಾರು ಜನ ಅಲ್ಲಿ ತಮ್ಮ ಸಾಮ್ರಾಜ್ಯ ಕಟ್ಟಿ ಮೆರೆದಿದ್ದಾರೆ. ಆದರೆ ಕಮಲ್ ಹಾಸನ್‌ರಂಥ ಸೂಪರ್‌ಸ್ಟಾರ್‌ಗಳೂ ಅಲ್ಲಿ ಪಕ್ಷ ಕಟ್ಟಿ ನೆಲಕ್ಕಚ್ಚಿದ್ದಾರೆ. ವಿಜಯ್ ಕೂಡ ಕಮಲ್ ಸಾಲಿಗೇ ಸೇರುತ್ತಾರೆ ಎಂಬ ಕುಹಕ ಕೇಳಿಬಂದಿದ್ದವು.

ವಿಜಯ್ ಸೋಲಿಸಿದ್ದ ಎಲ್ಲಾ ಎಕ್ಸಿಟ್ ಪೋಲ್‌ಗೂ ಸೋಲು

ಈ ಸಲದ ವಿಧಾನಸಭಾ ಚುನಾವಣೆಯಲ್ಲಿ ಮಗದೊಮ್ಮೆ ಸ್ಟಾಲಿನ್ ನೇತೃತ್ವದ ಡಿಎಂಕೆ ಅಧಿಕಾರಕ್ಕೆ ಬರುತ್ತದೆ ಎಂದು ಬಹುತೇಕ ಎಲ್ಲ ಚುನಾವಣೋತ್ತರ ಸಮೀಕ್ಷೆಗಳು ಹೇಳಿದ್ದವು. ಈಗ ವಿಜಯ್ ಗೆದ್ದಿದ್ದಾರೆ. ಅವರು ಸೋಲುತ್ತಾರೆ ಎಂದು ಹೇಳಿದ್ದ ಸಮೀಕ್ಷೆಗಳೇ ಸೋತಿವೆ. ಡಿಎಂಕೆ, ಎಐಎಡಿಎಂಕೆ ಪಕ್ಷಗಳ ರೀತಿ ಸಮೀಕ್ಷಾ ಸಂಸ್ಥೆಗಳೂ ವಿಜಯ್ ಪಕ್ಷವನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲವಾ ಎಂಬುದು ಪ್ರಶ್ನೆ. ಆದರೆ ಎಕ್ಸಿಸ್ ಮೈ ಇಂಡಿಯಾ ಸಂಸ್ಥೆ ಮಾತ್ರ ಟಿವಿಕೆ ಪಕ್ಷ ಗೆಲುವಿನ ಭವಿಷ್ಯ ನುಡಿದಿತ್ತು.

ಗೆಳತಿ ತ್ರಿಷಾ ಹುಟ್ಟು ಹಬ್ಬದ ದಿನವೇ 'ವಿಜಯ' ಮಾಲೆ

ಗೆಳತಿ ತ್ರಿಷಾ ಅವರ ಹುಟ್ಟು ಹಬ್ಬವಾದ ನಿನ್ನೆಯೇ (ಮೇ 4) ವಿಜಯ್ ಪಕ್ಷ ಭರ್ಜರಿ ಜಯಭೇರಿ ಬಾರಿಸಿರುವುದು



ಇನ್ನೊಂದು ವಿಶೇಷ. ಮತದಾನ ಶುರುವಾಗುತ್ತಿದ್ದಂತೆಯೇ ತಿರುಪತಿಗೆ ಹೋಗಿ ತಿಮ್ಮಪ್ಪನ ದರ್ಶನ ಪಡೆದ ತ್ರಿಷಾ, ಅಲ್ಲಿಂದ ನೇರವಾಗಿ ವಿಜಯ್ ಅವರ ಮನೆಗೆ ಹೋಗಿ ಅವರಿಗೆ ಶುಭ ಕೋರಿದರು. ದಾಂಪತ್ಯ ಜೀವನದಲ್ಲೆದ್ದ ಬಿರುಗಾಳಿ ವಿಜಯ್ ರಾಜಕೀಯದ ಮೇಲೆ ಯಾವುದೇ ಪರಿಣಾಮ ಬೀರಿಲ್ಲ.

ವರ್ಕ್ ಆಗದ ಪಿಎಂ ಮೋದಿ ಹವಾ: ಮೈತ್ರಿಯೂ ವಿಫಲ..!

ಈ ಸಲದ ಚುನಾವಣೆಯಲ್ಲಿ ಬಿಜೆಪಿ ಕನಿಷ್ಠ ಡಬಲ್ ಡಿಜಿಟ್ ಸೀಟ್‌ಗಳನ್ನಾದರೂ ಗೆಲ್ಲಬಹುದು ಎಂದು ನಿರೀಕ್ಷಿಸಲಾಗಿತ್ತು. ಅದಕ್ಕೆ ಬೇಕಾದ ಎಲ್ಲ ರೀತಿಯ ಬೀಜವನ್ನೂ ಮೋದಿ ಹಾಗೂ ಅವರ ಟೀಂ ತಮಿಳುನಾಡಿನಲ್ಲಿ ಬಿತ್ತಿದ್ದರು. ಆದರೆ ಅದ್ಯಾವುದೂ ಕೆಲಸ ಮಾಡಿಲ್ಲ ಎನ್ನುವುದು ಶಾಕಿಂಗ್ ಸಂಗತಿ. ಪಶ್ಚಿಮ ಬಂಗಾಳಕ್ಕೆ ನೀಡಿದಷ್ಟೇ ಸಮಯವನ್ನು ಬಿಜೆಪಿ ಹಾಗೂ ಅದರ ನಾಯಕರು ತಮಿಳುನಾಡಿಗೂ ನೀಡಿ ಪ್ರಚಾರ ಮಾಡಿದ್ದರು. ಅದಾಗ್ಯೂ ಅಲ್ಲಿನ ಮತದಾರ ಎನ್‌ಡಿಎ ಮೈತ್ರಿಗೆ ಬಹುಮತ ನೀಡಿಲ್ಲ.

ಸನಾತನ ವಿರೋಧಿ ನಡೆ, ಡಿಎಂಕೆ ಪಕ್ಷ ಮನೆಯ ಕಡೆ

ಐದು ವರ್ಷದ ಹಿಂದೆಯಷ್ಟೇ ಆರಿಸಿ ಬಂದಿದ್ದ ಸ್ಟಾಲಿನ್ ನೇತೃತ್ವದ ಡಿಎಂಕೆ ತನ್ನ ಮೊದಲಾವಧಿಯಲ್ಲೇ ಮನೆಯತ್ತ

ಮುಖ ಮಾಡಿರುವುದು ತಮಿಳಿಗರ ಅಚ್ಚರಿಗೇನು ಕಾರಣವಾಗಿಲ್ಲ. ಹೆಜ್ಜೆ ಹೆಜ್ಜೆಗೂ ಹಿಂದೂ ಧರ್ಮವನ್ನು ದೂಷಿಸುತ್ತ ಬಂದಿದ್ದ ಡಿಎಂಕೆ ನಾಯಕರ ಧೋರಣೆಗೆ ಅಲ್ಲಿನ ಹಿಂದೂಗಳು ಬೇಸತ್ತಿದ್ದರು. ಅವರ ಅಹಂಕಾರಕ್ಕೆ ರೋಸಿ ಹೋಗಿದ್ದರು. ಈ ಸೋಲು ಡಿಎಂಕೆಗೊಂದು ಪಾಠ.

ಗೆದ್ದವರು

ಬಲಾಕೃಷ್ಣ ಹೊಸೂರ್
ಎಐಎಡಿಎಂಕೆ

ಎಡಪ್ಪಡಿ ಪಳನಿಸ್ವಾಮಿ
ಎಐಎಡಿಎಂಕೆ

ಒ.ಪನೀರ್‌ಸೆಲ್ವಂ
ಡಿಎಂಕೆ ಪಕ್ಷ

ತಂಗಮ್ ತೆನರಸು
ಡಿಎಂಕೆ ಪಕ್ಷ

ಉದಯನಿಧಿ ಸ್ಟಾಲಿನ್
ಡಿಎಂಕೆ, ಸ್ಟಾಲಿನ್ ಮಗ

ಸೋತವರು

ಎಂ ಕೆ ಸ್ಟಾಲಿನ್
ಡಿಎಂಕೆ ಪಕ್ಷ

ರಾಜೇಂದ್ರನ್
ಡಿಎಂಕೆ ಪಕ್ಷ

ತಮಿಳುಸಾಯಿ
ಭಾರತೀಯ ಜನತಾ ಪಕ್ಷ

ವಸಂತಿ ಶ್ರೀನಿವಾಸನ್
ಭಾರತೀಯ ಜನತಾ ಪಕ್ಷ

ನೈಯರ್ ನಾಗೇಂದ್ರನ್
ಭಾರತೀಯ ಜನತಾ ಪಕ್ಷ

ಪಂಚ ರಾಜ್ಯ ಪಂಚ್ ಕಜ್ಜಾಯ

ಭಾರತ ಈಗ ಕಮ್ಯುನಿಸ್ಟ್ ಆಡಳಿತ ಮುಕ್ತ

ಎಡಪಕ್ಷಕ್ಕೆ ಕೊನೆ ಆಸರೆ ಆಗಿದ್ದ ಕೇರಳದಲ್ಲೀಗ ಕಾಂಗ್ರೆಸ್ ಅಧಿಕಾರಕ್ಕೆ | ಪಿಣರಾಯಿ ಶಕೆ ಅಂತ್ಯ

ಕೊನೆಗೂ ದೇವರ ನಾಡಲ್ಲಿ ಬಿಜೆಪಿ ಖಾತೆ ಓಪನ್ | ರಾಜೀವ್ ಚಂದ್ರಶೇಖರ್ ಸೇರಿ 3 ಜನ ಜಯಭೇರಿ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ ಎಲ್‌ಡಿಎಫ್ ಹೀನಾಯ ಸೋಲು ಅನುಭವಿಸಿದ್ದು, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದೆ. ಆ ಮೂಲಕ ಕಳೆದ 50 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಭಾರತದ ಯಾವುದೇ ರಾಜ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರವಿಲ್ಲದಂತಾಗಿದೆ. ದೇಶದ ಯಾವುದಾದರೂ ಒಂದು ರಾಜ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರ ಅಸ್ತಿತ್ವದಲ್ಲಿತ್ತು. ಆದರೆ, ಕೇರಳ ಚುನಾವಣಾ ಫಲಿತಾಂಶದೊಂದಿಗೆ ಭಾರತದ ರಾಜಕೀಯ ಇತಿಹಾಸದಲ್ಲಿ ಕಮ್ಯುನಿಸ್ಟ್ ಆಡಳಿತದ ಸುವರ್ಣ ಯುಗಕ್ಕೆ ಭಾರಿ ಹೊಡೆತ ಬಿದ್ದಿದೆ.

ಕೇರಳ

1977ರಲ್ಲಿ ಪಶ್ಚಿಮ ಬಂಗಾಳದಲ್ಲಿ ಜ್ಯೋತಿ ಬಸು ಅವರ ನೇತೃತ್ವದಲ್ಲಿ ಎಡಪಕ್ಷಗಳ ಪರ್ವ ಆರಂಭವಾಗಿತ್ತು. ಬಂಗಾಳದಲ್ಲಿ 34 ವರ್ಷಗಳ ಸುದೀರ್ಘ ಆಡಳಿತದ ನಂತರ 2011 ರಲ್ಲಿ ಅಧಿಕಾರ ಕಳೆದುಕೊಂಡವು. ನಂತರ 2018 ರಲ್ಲಿ ತ್ರಿಪುರಾದಲ್ಲೂ ಎಡರಂಗ ನೆಲಕಚ್ಚಿತ್ತು. ಇದೀಗ ಕೇರಳದ ಸೋಲಿನೊಂದಿದೇಶದಲ್ಲಿ ಎಡಪಕ್ಷಗಳ ಆಡಳಿತವಿರುವ ರಾಜ್ಯವೇ ಇಲ್ಲದಂತಾಗಿದೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮ್ಯಾಜಿಕ್ ನಂಬರ್ 71ಅನ್ನು ದಾಟಿ 90ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಸುನಾಮಿ ಸೃಷ್ಟಿಸಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಆಡಳಿತ ವಿರೋಧಿ ಅಲೆ ಮತ್ತು ಭ್ರಷ್ಟಾಚಾರದ ಆರೋಪಗಳು ಎಡರಂಗದ ಪತನಕ್ಕೆ ಪ್ರಮುಖ ಕಾರಣವೆನ್ನಲಾಗಿದೆ. ಸ್ವತಃ ಪಿಣರಾಯಿ ವಿಜಯನ್ ಅವರ ಧರ್ಮದಂ ಕ್ಷೇತ್ರದಿಂದ ಆರಂಭಿಕ ಹಿನ್ನಡೆ ಅನುಭವಿಸಿದ್ದರು. ಆದರೆ ಅಂತಿಮ ಹಂತದಲ್ಲಿ 19,247 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದರು.

ಮುಖ್ಯಮಂತ್ರಿ ಪಿಣರಾಯಿ ಸಂಪುಟದ ಪ್ರಮುಖ 13 ಸಚಿವರು ಸೋಲನ್ನು ಅನುಭವಿಸಿದ್ದಾರೆ. ವಯನಾಡ್ ಸೇರಿದಂತೆ ಎಡಪಕ್ಷಗಳ ಭದ್ರಕೋಟೆಗಳಲ್ಲೇ ಕಾಂಗ್ರೆಸ್ ಕ್ಲೀನ್ ಸ್ವೀಪ್ ಮಾಡಿದೆ.

ಕೇರಳದಲ್ಲಿ ಕಾಂಗ್ರೆಸ್ ಅಧಿಕಾರಕ್ಕೇರುವುದು ಖಚಿತವಾಗುತ್ತಿದ್ದಂತೆಯೇ ಅಲ್ಲಿನ ಮುಖ್ಯಮಂತ್ರಿ ಹುದ್ದೆಗೆ ಏರುವುದಾರು ಎಂಬ ಬಗ್ಗೆಯೂ ಈಗ ಚರ್ಚೆಗಳು ಶುರುವಾಗಿವೆ. ಕರ್ನಾಟಕ ಉಸ್ತುವಾರಿ ಕೆ.ಸಿ.ವೇಣುಗೋಪಾಲ್ ಅವರು ರೇಸ್‌ನಲ್ಲಿ ಮುಂಚೂಣಿಯಲ್ಲಿ ಇದ್ದಾರೆ. ಇವರು ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ಕಾರಣ ಸಿಎಂ ಆಗುವ ಸಾಧ್ಯತೆಗಳಿವೆ.

ಶೂನ್ಯದಿಂದ ಮೂರಕ್ಕೆ: ಬಿಜೆಪಿ ದಾಖಲೆ

ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಬಿಜೆಪಿ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದಿದೆ. ಬಿಜೆಪಿ ಪಾಲಿಗೆ ಅತ್ಯಂತ ಪ್ರತಿಷ್ಠಿತವಾಗಿದ್ದ ನೇಮಮ್ ಕ್ಷೇತ್ರದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು 45000 ಮತಗಳ ಅಂತರದಲ್ಲಿ ಭರ್ಜರಿ ಜಯ ದಾಖಲಿಸಿದ್ದಾರೆ. ಇನ್ನುಳಿದಂತೆ, ಕೊಲ್ಲಂ ಜಿಲ್ಲೆಯ ಚಾತನ್ನೂರು ಕ್ಷೇತ್ರದಲ್ಲಿ ಬಿಜೆಪಿಯ ಬಿ.ಬಿ. ಗೋಪಕುಮಾರ್ ಹಾಗೂ ಮಾಜಿ ಕೇಂದ್ರ ಸಚಿವ ವಿ. ಮುರಳೀಧರನ್ ಅವರು ಗೆದ್ದಿದ್ದಾರೆ.

ಪಿಣರಾಯಿಗೆ ಮುಳುವಾಗಿದ್ದು

- ಆಡಳಿತ ವಿರೋಧಿ ಅಲೆ: ಸತತ 10 ವರ್ಷಗಳ ವಿಜಯನ್ ಆಡಳಿತಕ್ಕೆ ಕೇರಳದ ಜನ ರೋಸಿ ಹೋಗಿದ್ದರು. ಬೆಲೆ ಏರಿಕೆ, ನಿರುದ್ಯೋಗ ಮತ್ತು ಅಭಿವೃದ್ಧಿ ವಿಳಂಬ ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಲು ಬಹುಮುಖ್ಯ ಕಾರಣವಾಯಿತು.
- ಆರ್ಥಿಕ ಬಿಕ್ಕಟ್ಟು ಮತ್ತು ಆಡಳಿತ ವೈಫಲ್ಯ: ಕೇರಳ ಕಳೆದ ಕೆಲವು ವರ್ಷಗಳಿಂದ ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಸರ್ಕಾರಿ ನೌಕರರ ಸಂಬಳ ಮತ್ತು ಪಿಂಚಣಿ ವಿಳಂಬ, ರಾಜ್ಯದ ಸಾಲದ ಹೊರೆ ಹೆಚ್ಚಾಗಿರುವುದು ಎಲ್‌ಡಿಎಫ್‌ಗೆ ಮುಳುವಾಯಿತು. ಇದು ಪಿಣರಾಯಿಗೆ ಮುಳುವಾಯಿತು.
- ಭ್ರಷ್ಟಾಚಾರದ ಆರೋಪ: ಪಿಣರಾಯಿ ವಿಜಯನ್ ಸರ್ಕಾರ ಮತ್ತು ಅವರ ಕುಟುಂಬದ ವಿರುದ್ಧ ಕೇಳಿಬಂದ ಮಾಸಪ್ಪಡಿ ಪ್ರಕರಣ ಸೇರಿದಂತೆ ವಿವಿಧ ಹಗರಣಗಳು
- ಅಲ್ಪಸಂಖ್ಯಾತ ಮತ ಧ್ರುವೀಕರಣ: ಕೇರಳದಲ್ಲಿ ನಿರ್ಣಾಯಕವಾಗಿರುವ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳು ಈ ಬಾರಿ ದೊಡ್ಡ ಮಟ್ಟದಲ್ಲಿ ಯುಡಿಎಫ್‌ಗೆ ಬೆಂಬಲ ನೀಡಿವೆ.

ಲೆಕ್ಕಾಚಾರ

11
ಸ್ಪರ್ಧಿಸಿದ್ದ 35 ಮಹಿಳೆಯರ ಪೈಕಿ ಒಟ್ಟು 11 ಮಹಿಳೆಯರು ಶಾಸಕಿಯರಾಗಿ ಆಯ್ಕೆ

64
ಕಳೆದ ಬಾರಿಗಿಂತ ಈ ಸಲ 64 ಕ್ಷೇತ್ರಗಳನ್ನು ಎಲ್ಡಿಎಫ್ ಕಳೆದುಕೊಂಡಿದೆ, ಸೋತಿದೆ.

45
ಗೆದ್ದ ಯುಡಿಎಫ್ ಅಭ್ಯರ್ಥಿ ಪೈಕಿ 35% ಜನ 45 ವರ್ಷ ವಯಸ್ಸಿನ ಕೆಳಗಿನವರು.

15 ವರ್ಷ
2011ರ ನಂತರ ಇದೇ ಮೊದಲ ವಯನಾಡ್‌ನ ಎಲ್ಲ ಕ್ಷೇತ್ರ ಕಾಂಗ್ರೆಸ್ ಪಾಲಾಗಿವೆ.

ಹೈವೋಲ್ಟೇಜ್ ಹೈಲೈಟ್ಸ್ | ಚುನಾವಣಾ ಸ್ವಾರಸ್ಯ

ನಿರೀಕ್ಷೆಯಂತೆ ಈ ಸಲ ಕೇರಳದಲ್ಲಿ ಪಿಣರಾಯಿ ಅವರ ಎಲ್‌ಡಿಎಫ್ ಸೋತಿದೆ. ಜತೆಗೆ ಯುಡಿಎಫ್ ಗೆದ್ದಿದೆ. ಆದರೆ ಅಲ್ಲಿ ಈಗ ಸಿಎಂ ಹುದ್ದೆ ರೇಸ್ ಶುರುವಾಗಿದೆ. ಆಶ್ಚರ್ಯವೆಂಬಂತೆ ರಾಹುಲ್ ಗಾಂಧಿ ವಿರೋಧ ಕಟ್ಟಿಕೊಂಡಿರುವ ಶಶಿ ತರೂರ್ ಅವರ ಹೆಸರೂ ಸಿಎಂ ರೇಸಲ್ಲಿ ಕೇಳಿಬರುತ್ತಿದೆ.

ಪುತ್ತುಪಳ್ಳಿ ಗೆದ್ದು ತಂದೆಯ ಕ್ಷೇತ್ರ ಉಳಿಸ್ಕೊಂಡ ಚಾಂಡಿ

ಕೇರಳದ ಮಾಜಿ ಸಿಎಂ ಉಮ್ಮನ್ ಚಾಂಡಿ ಅವರ ಪುತ್ರ, ಕಾಂಗ್ರೆಸ್ ಅಭ್ಯರ್ಥಿ ಚಾಂಡಿ ಉಮ್ಮನ್ ಅವರು ಪುತುಪ್ಪಳ್ಳಿ



ವಿಧಾನಸಭಾ ಕ್ಷೇತ್ರದಲ್ಲಿ 52,907 ಮತಗಳ ಭಾರಿ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಈ ಮೂಲಕ ತಮ್ಮ ತಂದೆಯ ಹಳೆಯ ದಾಖಲೆಯನ್ನು ಮೀರಿಸಿ ಭದ್ರಕೋಟೆಯನ್ನು ಉಳಿಸಿಕೊಂಡಿದ್ದಾರೆ. ಸಿಪಿಐ(ಎಂ) ಅಭ್ಯರ್ಥಿ ರಾಧಾಕೃಷ್ಣನ್ ಅವರ ವಿರುದ್ಧ ಅವರು ದಾಖಲೆ ಸೃಷ್ಟಿಸಿದ್ದಾರೆ.

ಪಿಣರಾಯಿ ಸರ್ಕಾರದ 21 ಸಚಿವರ ಪೈಕಿ 13 ಜನ ಮನೆಗೆ

ಕೇರಳ ವಿಧಾನಸಭೆ ಚುನಾವಣೆಯಲ್ಲಿ ಕಮ್ಯುನಿಷ್ಟ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಮಕಾಡೆ ಮಲಗಿದ್ದು, 21 ಸಚಿವರ ಪೈಕಿ 13 ಜನರು ಹೀನಾಯವಾಗಿ ಸೋತಿದ್ದಾರೆ. ಪಿಣರಾಯಿ ಸರ್ಕಾರದಲ್ಲಿ ಆರೋಗ್ಯ ಸಚಿವೆ ಆಗಿದ್ದ ವೀನಾ ಜಾರ್ಜ್ ಅವರು ಕಾಂಗ್ರೆಸ್ ಅಭ್ಯರ್ಥಿ ಅಬಿನ್ ವಾರ್ಕೆ ಅವರ ವಿರುದ್ಧ 18,985 ಅಂತರದಲ್ಲಿ ಸೋತಿದ್ದಾರೆ. ಇನ್ನು ದೇವಸ್ವಂ ಖಾತೆ ಸಚಿವ, ಶಿಕ್ಷಣ ಸಚಿವ ಸೇರಿದಂತೆ ಪ್ರಮುಖರು ಪರಭಾರಗೊಂಡಿದ್ದಾರೆ. ಇದು ಆಡಳಿತ ವಿರೋಧಿ ಅಲೆಯ ಹೊಡೆತ ಎನ್ನಲಾಗುತ್ತಿದೆ.

ನಿಜವಾದ ಎಕ್ಸಿಟ್ ಪೋಲ್ ಭವಿಷ್ಯ: ಎಲ್ಡಿಎಫ್‌ಗೆ ಶಾಕ್..!

ಕೇರಳದಲ್ಲೂ ಎಕ್ಸಿಟ್ ಪೋಲ್‌ಗಳ ಭವಿಷ್ಯ ಬಹುತೇಕ ಸತ್ಯವಾಗಿವೆ. ಎಕ್ಸಿಸ್ ಮೈ ಇಂಡಿಯಾ, ಮಾಟ್ರಿಜ್,



ಪಿ–ಮಾರ್ಕ್ ಸೇರಿದಂತೆ ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಕಾಂಗ್ರೆಸ್ ನೇತೃತ್ವದ ಎಲ್‌ಡಿಎಫ್ 78 ರಿಂದ 90 ಕ್ಷೇತ್ರಗಳಲ್ಲಿ ಗೆಲವು ಸಾಧಿಸುತ್ತದೆ ಎಂದು ಭವಿಷ್ಯ ನುಡಿದಿದ್ದವು. ಆದರೆ ಇದೀಗ ಎಕ್ಸಿಟ್ ಪೋಲ್‌ಗಳ ಅಂದಾಜಿಗಿಂತಲೂ ಯುಡಿಎಫ್ ಭರ್ಜರಿ ಜಯ ಸಾಧಿಸಿದೆ.

ಸಿದ್ದರಾಮಯ್ಯ, ಡಿಕೆಶಿ ಆಪ್ತ ಕೆ.ಸಿ.ವೇಣು ಸಿಎಂ ರೇಸಲ್ಲಿ

ಕೇರಳದಲ್ಲಿ ಅಧಿಕಾರಕ್ಕೆ ಮರಳಿರುವ ಯುಡಿಎಫ್‌ನಲ್ಲಿ ಈಗ ಮುಂದಿನ ಮುಖ್ಯಮಂತ್ರಿ ಯಾರು ಎಂಬ ಚರ್ಚೆ ಜೋರಾಗಿದೆ. ವರದಿಗಳ ಪ್ರಕಾರ, ವಿಪಕ್ಷ ನಾಯಕನಾಗಿರುವ ವಿ.ಡಿ.ಸತೀಶನ್ ಹೆಸರು ಮುಂಚೂಣಿಯಲ್ಲಿದೆ. ಇವರನ್ನು ಹೊರತುಪಡಿಸಿ ರಾಹುಲ್ ಗಾಂಧಿಗೆ ಆಪ್ತವಾಗಿರುವ ಕೆ.ಸಿ.ವೇಣುಗೋಪಾಲ್ ಹೆಸರೂ ಚರ್ಚೆಯಲ್ಲಿದೆ. ಅಲ್ಲದೇ ಮಾಜಿ ಸಿಎಂ ಉಮ್ಮನ್ ಚಾಂಡಿ ಪುತ್ರ ಚಾಂಡಿ ಉಮ್ಮನ್ ಹಾಗೂ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರ ಹೆಸರುಗಳು ಸಿಎಂ ರೇಸ್‌ನಲ್ಲಿ ಕೇಳಿಬರುತ್ತಿವೆ.

22 ಕ್ಷೇತ್ರಗಳಲ್ಲಿ ಗೆದ್ದ ಮುಸ್ಲಿಂ ಲೀಗ್‌ನಿಂದ ಹೊಸ ದಾಖಲೆ

ಕೇರಳದ ಮಲಬಾರ್ ಭಾಗದಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷವಾದ ಇಂಡಿಯನ್ ಯುನಿಯನ್ ಮುಸ್ಲಿಂ ಲೀಗ್ ಈ ಬಾರಿ ಬರೋಬ್ಬರಿ 22 ಸ್ಥಾನಗಳಲ್ಲಿ ಗೆದ್ದು ತನ್ನ ಸ್ವಂತ ದಾಖಲೆಯನ್ನು ಮುರಿದಿದೆ. ಆ ಮೂಲಕ ಈ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಮರಳಲು ಈ ಪಕ್ಷವೇ ಅತಿ ದೊಡ್ಡ ಬೆನ್ನೆಲುಬಾಗಿ ನಿಂತಿದೆ. ಈ ರೀತಿಯ ಭರ್ಜರಿ ಜಯನವನ್ನು ಹಿಂದೆಂದೂ ಮುಸ್ಲಿಂ ಲೀಗ್ ಗಳಿಸಿರಲಿಲ್ಲ.

ಗೆದ್ದ ಪ್ರಮುಖರು

ಹೆಸರು	ಪಕ್ಷ
ಪಿಣರಾಯಿ ವಿಜಯನ್	ಕಮ್ಯುನಿಷ್ಟ ಪಕ್ಷ
ವೇಣುಗೋಪಾಲ್	ಕಾಂಗ್ರೆಸ್
ರಾಜೀವ್	ಭಾರತೀಯ ಜನತಾ ಪಕ್ಷ
ವಿ.ಡಿ.ಸತೀಶನ್	ಕಾಂಗ್ರೆಸ್
ವಿ.ಮುರಳೀಧರನ್	ಭಾರತೀಯ ಜನತಾ ಪಕ್ಷ

ಸೋತ ಪ್ರಮುಖರು



ಹೆಸರು	ಪಕ್ಷ
ಕೆ.ಕೆ.ಶೈಲಜಾ	ಕಮ್ಯುನಿಷ್ಟ್ ಪಕ್ಷ
ಶಿವನ್ ಕುಟ್ಟಿ	ಕಮ್ಯುನಿಷ್ಟ್ ಪಕ್ಷ
ವೀನಾ ಜಾರ್ಜ್	ಕಮ್ಯುನಿಷ್ಟ್ ಪಕ್ಷ
ಕೆ.ಸುರೇಂದ್ರನ್	ಭಾರತೀಯ ಜನತಾ ಪಕ್ಷ
ಎಂ. ರಿಯಾಸ್	ಕಮ್ಯುನಿಷ್ಟ್ ಪಕ್ಷ

ಮಾಮಾ ಹ್ಯಾಟ್ರಿಕ್, ಮಿಯಾಗಳ ಎದೆ ಧಡಕ್

ಹಿಮಂತ್ ಸರ್ಮಾ ನೇತೃತ್ವದಲ್ಲಿ ಸತತ ಮೂರನೇ ಬಾರಿ ಚುನಾವಣೆ ಗೆದ್ದ ಬಿಜೆಪಿ | ಹೊಸ ದಾಖಲೆ

ಬಾಂಗ್ಲಾದೇಶದಿಂದ ಅಕ್ರಮವಾಗಿ ಒಳಗೆ ಬಂದ ಮಿಯಾ ಮುಸ್ಲಿಮರಿಗೆ ತಪ್ಪದ ಗಡೀಪಾರು ಆತಂಕ

ಈಶಾನ್ಯ ರಾಜ್ಯಗಳಿಗೆ ಸಂಬಂಧಿಸಿದಂತೆ, ಈ ಬಾರಿ ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಇಡಿಎ (ಈಶಾನ್ಯ ಪ್ರಜಾಸತ್ತಾತ್ಮಕ ಮೈತ್ರಿಕೂಟ) ತನ್ನ ಪ್ರಾಬಲ್ಯ ಮೆರೆದಿದೆ, ಸತತ 3ನೇ ಬಾರಿ ಗೆಲುವು ಸಾಧಿಸುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದೆ.

ಸೋಮವಾರ ರಾಜ್ಯದ 35 ಜಿಲ್ಲೆಗಳ ಒಟ್ಟು 40 ಮತ ಕೇಂದ್ರಗಳಲ್ಲಿ ಬೆಳಗ್ಗೆ 8 ರಿಂದ ಮತಗಳ ಎಣಿಕೆ ಆರಂಭವಾಯಿತು. ಎಣಿಕೆಯ ಪ್ರತಿ ಸುತ್ತಿನಲ್ಲೂ ಮುನ್ನಡೆ ಕಾಯ್ದುಕೊಂಡ ಎನ್‌ಇಡಿಎ, ಅಂತಿಮವಾಗಿ ಕಾಂಗ್ರೆಸ್ ಮೈತ್ರಿಕೂಟವನ್ನು ಹೀನಾಯವಾಗಿ ಸೋಲಿಸಿದೆ.

ಅಸ್ಸಾಂ ರಾಜ್ಯ

ಪರಿಶಿಷ್ಟ ಪಂಗಡಗಳಿಗೆ 19 ಹಾಗೂ ಪರಿಶಿಷ್ಟ ಜಾತಿಗೆ 9 ಸ್ಥಾನಗಳ ಮೀಸಲು ಸೇರಿದಂತೆ ಅಸ್ಸಾಂನ ಒಟ್ಟು 126 ಸ್ಥಾನಗಳಿಗಾಗಿ ಏಪ್ರಿಲ್ 9 ರಂದು ಒಂದೇ ಹಂತದಲ್ಲಿ ಮತದಾನ ನಡೆದಿತ್ತು. ಅಸ್ಸಾಂನಲ್ಲಿ ಸರಳ ಬಹುಮತಕ್ಕೆ 64 ಸ್ಥಾನಗಳ ಅಗತ್ಯವಿದೆ.

ಒಟ್ಟು 722 ಅಭ್ಯರ್ಥಿಗಳು ಕಣದಲ್ಲಿದ್ದು, 2.5 ಕೋಟಿ ಮತದಾರರು ದಾಖಲೆಯ ಅತ್ಯಧಿಕ ಶೇ. 85.96 ರಷ್ಟು ಮತದಾನ ಮಾಡಿದ್ದರು. ಈ ಪೈಕಿ ಮಹಿಳೆಯರೇ ಅತ್ಯಧಿಕ ಶೇ. 86.5 ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದರು.

2006 ರಿಂದಲೂ ಈಶಾನ್ಯ ರಾಜ್ಯಗಳಲ್ಲಿ ತನ್ನ ಪ್ರಾಬಲ್ಯ ಕಾಯ್ದುಕೊಂಡಿದ್ದ ಕಾಂಗ್ರೆಸ್ 2016ರಲ್ಲಿ ನೆಲಕಚ್ಚಿದ್ದು ಈವರೆಗೆ ಚೇತರಿಸಿಕೊಂಡಿಲ್ಲ. ಕಳೆದ 3 ಅವಧಿಗಳಿಂದಲೂ ಅಸ್ಸಾಮನ್ನು ಎನ್‌ಇಡಿಎ ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ.

ಈ ಬಾರಿ ಎನ್‌ಇಡಿಎದ ಪ್ರಮುಖ ಪಕ್ಷ ಬಿಜೆಪಿ 90, ಎಜಿಪಿ ಮತ್ತು ಬಿಒಪಿಎಫ್ ಕ್ರಮವಾಗಿ 26 ಹಾಗೂ 11 ಸ್ಥಾನಗಳಲ್ಲಿ ಕಣಕ್ಕಿಳಿದಿದ್ದವು. ಅಂತೆಯೇ ಪ್ರತಿ ಪಕ್ಷ ಮೈತ್ರಿಕೂಟ ಎಎಸ್‌ಎಂನಲ್ಲಿ ಕಾಂಗ್ರೆಸ್ 99, ರೈಜೋರ್ ದಳ 13, ಎಜೆಪಿ 10, ಸಿಪಿಐಎಂ 3 ಮತ್ತು ಸರ್ವಪಕ್ಷಗಳ ಗುಡ್ಡಗಾಡು ನಾಯಕರ ಸಂಘಟನೆ (ಎಪಿಎಚ್‌ಎಲ್‌ಸಿ) 2 ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. ಉಳಿದಂತೆ ಎಐಯುಡಿಎಫ್ 30, ಎಎಪಿ ಮತ್ತು ಯುಪಿಪಿಎಲ್ ತಲಾ 18 ಸ್ಥಾನ, ಟಿಎಂಸಿ 22, ಜಾರ್ಖಂಡ್ ಮುಕ್ತಿ ಮೋರ್ಚ (ಜೆಎಂಎಂ) 16 ಸ್ಥಾನಗಳಲ್ಲಿ ಸ್ಪರ್ಧಿಸಿದ್ದು, ಜೊತೆಗೆ 258 ಪಕ್ಷೇತರರೂ ಕಣದಲ್ಲಿದ್ದರು.

ಈಶಾನ್ಯ ರಾಜ್ಯವಾದ ಅಸ್ಸಾಂನಲ್ಲಿ ಈಗ ಬಿಜೆಪಿ ತನ್ನ ಅಸ್ತಿತ್ವವನ್ನು ಮಗದಷ್ಟು ಗಟ್ಟಿಮಾಡಿಕೊಂಡಿದ್ದು, ಕಾಂಗ್ರೆಸ್ ಲೆಕ್ಕಕ್ಕೇ ಇಲ್ಲದಂತಾಗಿದೆ.



- ಸತತ ಮೂರನೇಯ ಸಲ ಅಸ್ಸಾಂನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೀನಾಯವಾದ ಸೋಲು
- ಕಾಂಗ್ರೆಸ್ ನಾಯಕ ದಿವಂಗತ ತರುಣ್ ಗೋಗಯ್ ನಿಧನಾನಂತರ ಪಕ್ಷ ನೆಲಕ್ಕೆ
- ಸಫಲವಾಗದ ತರುಣ್ ಗೊಗಯ್ ಮಗ ಗೌರವ್ ಗೋಗಯ್ ಪಕ್ಷ ಕಟ್ಟುವ ತಂತ್ರ
- ಬಿಜೆಪಿ ಹ್ಯಾಟ್ರಿಕ್ ಗೆಲುವಾದರೂ ಹಿಮಂತ ಸರ್ಮ 2ನೇ ಅವಧಿಗೆ ಅಸ್ಸಾಂನ ಸಿಎಂ
- ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಕುಗ್ಗಿದೆ, ಎಲ್ಲ ವರ್ಗಗಳಿಂದಲೂ ಬಿಜೆಪಿಗೆ ಭಾರಿ ಮತ
- ಟೀ ಬೆಳೆಯುವ ಮೇಲ್ಭಾಗದ ಅಸ್ಸಾಂನಲ್ಲಿ ಬಿಜೆಪಿ ಪಕ್ಷ ಪ್ರಾಬಲ್ಯವನ್ನು ಸಾಧಿಸಿದೆ.
- ವರ್ಕ್‌ಔಟ್ ಮೋದಿ–ಶಾ ನುಸುಳುಕೋರರ ತಂತ್ರ, ಗೆದ್ದ ಹಿಮಂತ್ ಕೆಲಸ

ಬಾಂಗ್ಲಾ ನುಸುಳುಕೋರರ ಹೊರಗಟ್ಟಿದ್ದೇ ವರವಾಯ್ತು

ನೆರೆ ದೇಶ 'ಬಾಂಗ್ಲಾದವರ ಒಳನುಸುಳುವಿಕೆ' ಪಿಡುಗಿಗೆ ಒಂದು ಇತಿಹಾಸವೇ ಇದೆ. ಈಶಾನ್ಯ ರಾಜ್ಯಗಳನ್ನು ಮೊದಲಿನಿಂದಲೂ ಕಾಡುತ್ತಿದ್ದ



ಈ ಸಮಸ್ಯೆ ನಿವಾರಣೆಗೆ ರಾಜ್ಯದಲ್ಲಿ ಸಾಕಷ್ಟು ಚಳವಳಿಗಳು, ಹೋರಾಟಗಳೂ ನಡೆದಿವೆ.
ಈ ಹಿಂದೆ ಅಸ್ಸಾಂ ಗಣ ಪರಿಷತ್ ಅಧಿಕಾರಕ್ಕೆ ಬಂದಿದ್ದೂಸಹ ಇದೇಹೋರಾಟದಿಂದಾಗಿಯೇ!
ಈ ಜಟಿಲ ಸಮಸ್ಯೆಯನ್ನು ನಿವಾರಿಸಲು ಬಿಜೆಪಿ ಪ್ರಯತ್ನಿಸಿ ಅದರಲ್ಲಿ ಸಾಕಷ್ಟು ಯಶಸ್ವಿಯಾಗಿದ್ದು, ಈ ಬಾರಿಯ ಹ್ಯಾಟ್ರಿಕ್ ಗೆಲುವಿಗೆ ಕಾರಣವಾಗಿದೆ ಎನ್ನಲಾಗಿದೆ. ಕಾಂಗ್ರೆಸ್ ಸೇರಿದಂತೆ ಪ್ರತಿ ಪಕ್ಷಗಳು ಎಷ್ಟೇ ವಿರೋಧಿಸಿದರೂ ಸಹ ಎನ್‌ಆರ್‌ಸಿ (ನಾಗರಿಕರ ರಾಷ್ಟ್ರೀಯ ದಾಖಲೆ) ಕಾಯ್ದೆ ಜಾರಿಗೆ ತಂದು ಒಳ ನುಸುಳುಕೋರರನ್ನು ಹೊರ ಹಾಕಿದ್ದೇ ಎನ್‌ಡಿಎ ಗೆಲುವಿಗೆ ಮೂಲ ಕಾರಣ ಎಂದು ವಿಶ್ಲೇಷಿಸಲಾಗಿದೆ.
ಇನ್ನು ಮಗದೊಮ್ಮೆ ಮುಖ್ಯಮಂತ್ರಿ ಆಗಿ ಹಿಮಂತ್ ಬಿಸ್ವಾ ಶರ್ಮ ಅವರು ಅಧಿಕಾರಕ್ಕೆ ಏರಲಿದ್ದಾರೆ.

ಲೆಕ್ಕಾಚಾರ

1.29
ಅಸ್ಸಾಂ ಚುನಾವಣೆಯಲ್ಲಿ ಈ ಬಾರಿ ಶೇ.1.29 'ನೋಟಾ' ಮತಗಳು ದಾಖಲಾಗಿವೆ.

258
ಈ ಸಲದ ಅಸ್ಸಾಂ ಎಲೆಕ್ಷನಲ್ಲಿ ಸ್ಪರ್ಧೆ ಮಾಡಿದ್ದ ಪಕ್ಷೇತರ ಅಭ್ಯರ್ಥಿಗಳ ಒಟ್ಟು ಸಂಖ್ಯೆ

87701
ಸಿಎಂ, ಬಿಜೆಪಿಯ ನಾಯಕ ಹಿಮಂತ್ ಬಿಸ್ವ ಸರ್ಮಾ ಗೆದ್ದ ಮತಗಳ ಅಂತರ.

23000
ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾದ ಗೌರವ್ ಗೋಗಯ್ ಸೋತ ಮತಗಳ ಅಂತರ 23000

ಹೈವೋಲ್ಟೇಜ್ ಹೈಲೈಟ್ಸ್ | ಚುನಾವಣಾ ಸ್ವಾರಸ್ಯ

ಅಸ್ಸಾಂನಲ್ಲಿ ಬಿಜೆಪಿ ಗೆಲುವಿಗೆ ಮೋದಿ ಹಾಗೂ ಅಮಿತ್ ಶಾ ಅವರಿಗಿಂತ ಹಿಮಂತ್ ಬಿಸ್ವಾ ಸರ್ಮಾ ಅವರ ಮುಖವರ್ಚಸ್ಸು, ಅವರ ಆಡಳಿತದಲ್ಲಾದ ಕೆಲಸವೇ ಕಾರಣ ಎನ್ನುವುದು ನಿಸ್ಸಂದೇಹ. ಈ ಕಾರಣದಿಂದ ಬಿಜೆಪಿ ನಾಯಕರು ಅಷ್ಟಾಗಿ ಅಸ್ಸಾಂ ಪ್ರಚಾರದ ಬಗ್ಗೆ ಈ ಸಲ ತಲೆ ಕೆಡಿಸಿಕೊಳ್ಳಲಿಲ್ಲ.

ಹಿಮಂತ್ ಫ್ಯಾಕ್ಟರ್ ಅಸ್ಸಾಂ ಗೆಲುವಿಗೆ ಪ್ರಮುಖ ಕಾರಣ

ತಮ್ಮ ಎಂದಿನ ಜಲುಕ್ಬಾರಿ ಕ್ಷೇತ್ರದಲ್ಲಿ ಹಾಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಸರ್ಮ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

ಹೀಗಾಗಿ ಹಿಮಂತ ಬಿಸ್ವಾ ಸರ್ಮ ಅವರೇ 3ನೇ ಬಾರಿಗೆ ಮುಖ್ಯಮಂತ್ರಿಯಾಗಿ ಮುಂದುವರೆಯುವ ಎಲ್ಲ ಸಾಧ್ಯತೆಗಳಿವೆ. ಈ ಸಲದ ಚುನಾವಣೆಯ ಮುಖ್ಯ ರೂವಾರಿ ಆಗಿದ್ದವರೇ ಅವರು. ಮೋದಿ ಶಾ ಅವರ ಜತೆ ಹಿಮಂತ್ ಅವರ 'ಮಾಮಾ' ವರ್ಚಸ್ಸು ಕೂಡ ದೊಡ್ಡ ಕೆಲಸವನ್ನೇ ಮಾಡಿದೆ.

ಅಸ್ಸಾಂನಲ್ಲೂ ನಿಜವಾದ ಎಲ್ಲ ಎಕ್ಸಿಟ್ ಪೋಲ್‌ಗಳ ಭವಿಷ್ಯ

ಅಸ್ಸಾಂ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ಸಂಘ ಸಂಸ್ಥೆಗಳು ನಡೆಸಿದ್ದ ಮತದಾನೋತ್ತರ ಸಮೀಕ್ಷೆಗಳು, ಸ್ವಲ್ಪ ಹೆಚ್ಚು ಕಡಿಮೆ ಸತ್ಯಕ್ಕೆ ಸಮೀಪಿಸಿದೆ. ಬಿಜೆಪಿ ನೇತೃತ್ವದ ಎನ್‌ಡಿಎ 88 ರಿಂದ 100 ಸ್ಥಾನ ಹಾಗೂ ಕಾಂಗ್ರೆಸ್ ನೃತೃತ್ವದ ಮೈತ್ರಿಕೂಟಕ್ಕೆ 24 ರಿಂದ 36 ಸ್ಥಾನ ಬರಬಹುದೆಂದು ಆಕ್ಸಿಕ್ ಮೈ ಇಂಡಿಯಾ ಭವಿಷ್ಯ ನುಡಿದಿತ್ತು. ಹಾಗೆ ನೋಡಿದರೆ ಕೆಲ ಚುನಾವಣೋತ್ತರ ಸಮೀಕ್ಷೆಗಳ ನಿರೀಕ್ಷೆಯನ್ನೂ ಮೀರಿಸಿ ಅಸ್ಸಾಂನಲ್ಲಿ ಬಿಜೆಪಿ ಭಾರಿ ಕ್ಷೇತ್ರಗಳನ್ನು ಗೆದ್ದು ಜಯಭೇರಿಯನ್ನು ಬಾರಿಸಿದೆ.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೋಗಯ್‌ಗೇ ಸೋಲು

ಅಸ್ಸಾಂ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೋಯ್ ತಮ್ಮ ಜೊರ್ಹಟ್ ಕ್ಷೇತ್ರದಲ್ಲಿ ಹೀನಾಯ ಸೋಲು ಕಂಡಿದ್ದು, ಬಿಜೆಪಿಯ ಹಿತೇಂದ್ರನಾಥ ಗೋಸ್ವಾಮಿ 23,182 ಮತಗಳ ಅಂತರದಲ್ಲಿ ಗೆಲುವಿನ ನಗೆ ಬೀರಿದ್ದಾರೆ. ಇವರ ಮೇಲೆ ಸಿಎಂ ಹಿಮಂತ್ ಬಿಸ್ವಾ ಸರ್ಮ ಒಂದಾದ ಮೇಲೊಂದರಂತೆ ಆರೋಪ ಮಾಡುತ್ತ ಬಂದಿದ್ದರು. ಇವರ ಪತ್ನಿಗೆ ಪಾಕಿಸ್ತಾನದ ನಂಟಿದೆ ಎಂಬ ಆರೋಪವಂತೂ ದೇಶಾದ್ಯಂತ ಭಾರಿ ಸದ್ದು ಮಾಡಿತ್ತು.

ಕೈ ತೊರೆದು ಬಿಜೆಪಿ ಪಕ್ಷಕ್ಕೆ ಬಂದ ಬಹುತೇಕರಿಗೆ ಜಯ

ಈ ಮಧ್ಯೆ, ಕಾಂಗ್ರೆಸ್ ಪಕ್ಷವನ್ನು ತೊರೆದು ಬಿಜೆಪಿ ಸೇರಿದ್ದ ದಿಸ್‌ಪುರ್ ಕ್ಷೇತ್ರದ ಪ್ರದ್ಯುತ್ ಬರ್ಡೋಲಿ ಮತ್ತು ಬಿಹ್‌ಪುರಿಯಾ ಕ್ಷೇತ್ರದ ಭೂಪೇನ್ ಬೊರ್ರಾ ತಮ್ಮ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದಾರೆ. ಚುನಾವಣೆಯ ಹೊಸ್ತಿಲಲ್ಲಿ ಕಾಂಗ್ರೆಸ್ ಬಿಟ್ಟು ಬಂದವರನ್ನೆಲ್ಲ ಬಿಜೆಪಿ ಬಿಚ್ಚು ಹಸ್ತದಿಂದ ಸ್ವಾಗತ ಮಾಡಿ ಪಕ್ಷದೊಳಗೆ ಸೇರಿಸಿಕೊಂಡಿತ್ತು. ಇದು ಸ್ಥಳೀಯವಾಗಿ ಕಾಂಗ್ರೆಸ್‌ನ ಬಲವನ್ನು ಬಹಳ ದೊಡ್ಡ ಮಟ್ಟದಲ್ಲಿ ಕುಸಿಯುವಂತೆ ಮಾಡಿತ್ತು. ಕೊನೆ ಘಳಿಗೆಯಲ್ಲಿ ಕೆಲ ಕ್ಷೇತ್ರಗಳಲ್ಲಿ ಟಿಕೆಟ್ ನೀಡಲು ಕಾಂಗ್ರೆಸ್ ಪರದಾಡಿತ್ತು.

ಅಸ್ಸಾಂನಲ್ಲಿ ಗೆದ್ದ ಸಣ್ಣಪುಟ್ಟ ಪಕ್ಷಗಳು: ಬಿಜೆಪಿಗೆ ಬೆಂಬಲ

ಬಿಜೆಪಿ, ಎಜಿಪಿ (ಅಸ್ಸಾಂ ಗಣ ಪರಿಷತ್), ಬಿಒಪಿಎಫ್ (ಬೋಡೋ ಲ್ಯಾಂಡ್ ಪೀಪಲ್ಸ್ ಫ್ರಂಟ್), ಯುಪಿಪಿಎಲ್ (ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್), ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ), ಎನ್‌ಪಿಪಿ (ನ್ಯಾಷನಲ್ ಪೀಪಲ್ಸ್ ಪಾರ್ಟಿ–ಮೇಘಾಲಯದಲ್ಲಿ ಪ್ರಮುಖ ಪಕ್ಷ ಕನ್ರಾಡ್ ಸಂಗ್ಮ ನೇತೃತ್ವ), ಎನ್‌ಡಿಪಿಪಿ (ನ್ಯಾಷನಲ್ ಡೆಮಾಕ್ರಟಿಕ್ ಪ್ರೋಗ್ರೆಸಿವ್ ಪಾರ್ಟಿ

ಗೆದ್ದ ಪ್ರಮುಖರು

ಹೆಸರು	ಪಕ್ಷ
ಹಿಮಂತ ಬಿಸ್ವಾ ಸರ್ಮ	ಭಾರತೀಯ ಜನತಾ ಪಕ್ಷ
ಪ್ರದ್ಯುತ್ ಬರ್ಡೋಲಿ	ಭಾರತೀಯ ಜನತಾ ಪಕ್ಷ
ಬೊರ್ರಾ	ಭಾರತೀಯ ಜನತಾ ಪಕ್ಷ
ಅತುಲ್	ಅಸ್ಸಾಂ ಗಣ ಪರಿಷತ್
ಚರಣ್	ಬೋಡೋ ಪೀಪಲ್ಸ್ ಫ್ರಂಟ್

ಸೋತ ಪ್ರಮುಖರು

ಹೆಸರು	ಪಕ್ಷ
ಗೌರವ್	ಕಾಂಗ್ರೆಸ್
ಸೈಕಿಯಾ	ಕಾಂಗ್ರೆಸ್
ಲ್ಯೂರಿಂ	ಎ.ಜೆ.ಪಿ.
ಭೂಯನ್	ಎ.ಜೆ.ಪಿ.
ರಾಜೇನ್ ಗೊಹಾಯಿನ್	ಎ.ಜೆ.ಪಿ.

ಪಂಚ ರಾಜ್ಯ ಪಂಚ್ ಕಜ್ಜಾಯ

ಪ.ಬಂಗಾಳದಲ್ಲಿ ಹೊಸ ಸೂರ್ಯೋದಯ: ಪ್ರಧಾನಿ ಮೋದಿ

ನೂತನ ಸರ್ಕಾರದ ಮೊದಲ ಸಂಪುಟದಲ್ಲೇ ಆಯಷ್ಮಾನ್ ಭಾರತ ಯೋಜನೆಗೆ ಹಸಿರು ನಿಶಾನೆಯ ಭರವಸೆ

ನವದೆಹಲಿ: ಪಶ್ಚಿಮಬಂಗಾಳದಲ್ಲಿ ಬಿಜೆಪಿಗೆ ದೊರಕಿದ ಗೆಲುವಿನಿಂದ ಹೊಸ ಸೂರ್ಯೋದಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಬಣ್ಣಿಸಿದ್ದಾರೆ. ಇದು ಬದಲಾವಣೆಯ ಸಮಯವೇ ಹೊರತು ಸೇಡಿನ ಸಮಯವಲ್ಲ ಎಂದವರು ಎದುರಾಳಿಗೆ ಕಿವಿಮಾತು ಹೇಳಿದ್ದಾರೆ. ನೂತನ ಸರ್ಕಾರದ ಮೊದಲ ಸಂಪುಟದಲ್ಲೇ ಆಯಷ್ಮಾನ್ ಭಾರತ ಯೋಜನೆಗೆ ಹಸಿರು ನಿಶಾನೆ ನೀಡಲಾಗುವುದೆಂದೂ ಘೋಷಿಸಿದ್ದಾರೆ.

ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಹೊರಬಿದ್ದ ಹಿನ್ನೆಲೆಯಲ್ಲಿ ಪಕ್ಷದ ಕೇಂದ್ರಕಚೇರಿಯಲ್ಲಿ ಬಿಜೆಪಿ ವಿಜಯೋತ್ಸವ ಭಾಷಣ ಮಾಡಿದ ಅವರು, ಗಂಗೋತ್ರಿಯಿಂದ ಗಂಗಾಸಾಗರವರೆಗೆ ಬಿಜೆಪಿಯ ಕಮಲ ಅರಳಿದೆ ಎಂದೂ ವರ್ಣಿಸಿದರು.

ಕಾಂಗ್ರೆಸ್ ವಿಭಜನೆ ನೀತಿಗೆ ಟೀಕೆ: ಇದೇ ವೇಳೆ ಪ್ರತಿಪಕ್ಷ ಕಾಂಗ್ರೆಸನತ್ತ ಗುರಿ ಮಾಡಿದ ಅವರು, ಕಾಂಗ್ರೆಸ್ ಯಾವಾಗಲೂ ಭಾರತವನ್ನು ವಿಭಜಿಸಲು ಪ್ರಯತ್ನಿಸುತ್ತಿದೆ. ಆದರೆ ಜನರು ಈ ಫಲಿತಾಂಶ ಮೂಲಕ ಅಭಿವೃದ್ಧಿಯ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ.

ಮುಖರ್ಜಿ ಕನಸು

> ಪಶ್ಚಿಮಬಂಗಾಳದಲ್ಲಿ ಬಿಜೆಪಿ ಗೆದ್ದಿರುವುದರಿಂದ ಡಾ.ಶ್ಯಾಮಪ್ರಸಾದ್ ಮುಖರ್ಜಿಯವರ ಆತ್ಮಕ್ಕೆ ಸಾಂತ್ವನ ಸಿಕ್ಕಿದೆ. ಸಮೃದ್ಧ ಬಂಗಾಳದ ಕುರಿತು ಅವರು ಕಂಡಿದ್ದ ಕನಸು ಇದುವರೆಗೂ ನನಸಾಗಿರಲಿಲ್ಲ. ಬಂಗಾಳದ ಜನರು ಈಗ ಬಿಜೆಪಿಗೆ ಒಂದು ಅವಕಾಶ ನೀಡಿದ್ದಾರೆ.
>
> ▪ ನರೇಂದ್ರ ಮೋದಿ, ಪ್ರಧಾನಮಂತ್ರಿ

ವಿಭಜನೆಯಲ್ಲಿ ಜನರಿಗೆ ನಂಬಿಕೆ ಇಲ್ಲದಿರುವುದನ್ನು ತೋರಿಸಿಕೊಟ್ಟಿದ್ದಾರೆ ಎಂದರು. ಕೇರಳದ ಅಭಿವೃದ್ಧಿಗೆ ನಾವು ಕೆಲಸ ಮಾಡುತ್ತೇವೆ ಎಂದು ಯುಡಿಎಫ್‌ಗೆ ಭರವಸೆ ನೀಡುತ್ತೇವೆ ಎಂದೂ ಪ್ರಕಟಿಸಿದರು.

ಮಹಿಳೆಯರ ಕೋಪಕ್ಕೆ ಗುರಿ: ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆಯೂ ಪ್ರಸ್ತಾವಿಸಿದ ಅವರು, ಈ ಮಸೂದೆಯನ್ನು ತಡೆದ ಪ್ರತಿಪಕ್ಷಗಳು ಮಹಿಳೆಯರ ಕೋಪಕ್ಕೆ ಗುರಿಯಾಗಲಿವೆ ಎಂದು ನಾನು ಪ್ರತಿಪಕ್ಷಗಳಿಗೆ ಎಚ್ಚರಿಕೆ ನೀಡಿದ್ದೆ. ಈಗ ಚುನಾವಣಾ ಫಲಿತಾಂಶ ಮುಖೇನ ಪ್ರತಿಪಕ್ಷಗಳನ್ನು ಶಿಕ್ಷಿಸಿದ್ದಾರೆ ಎಂದರು. ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷವೂ ಮಹಿಳೆಯರ ಕೋಪಕ್ಕೆ ಗುರಿಯಾಗಲಿದೆ ಎಂದರು.

ಅಂಗ, ಬಂಗ ಹಾಗೂ ಕಳಿಂಗದ ಜನರು ಬಿಜೆಪಿಯನ್ನು ಆರಿಸಿಕೊಂಡಿದ್ದಾರೆ. ನಮ್ಮ ಮೇಲೆ ಜನ ನಂಬಿಕೆ ಇಟ್ಟಿದ್ದಾರೆ ಎಂದರು.

ತಮಿಳಿಗರ ಯೋಗಕ್ಷೇಮಕ್ಕೆ ಬದ್ಧ: ತಮಿಳುನಾಡಿನಲ್ಲಿ ಎನ್‌ಡಿಎಗೆ ಮತ ಚಲಾಯಿಸಿದ ಮತದಾರರಿಗೆ ಕೃತಜ್ಞತೆ ವ್ಯಕ್ತಪಡಿಸಿದ ಅವರು, ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಾಗೂ ಅವರ ಜೀವನ ಸುಧಾರಿಸುವಲ್ಲಿ ನಾವು ಯಾವಾಗಲೂ ಮುಂಚೂಣಿಯಲ್ಲಿರುತ್ತವೆ. ತಮಿಳುನಾಡಿನ ಪ್ರಗತಿ ಹಾಗೂ ಜನರ ಯೋಗ ಕ್ಷೇಮದ ಬಗ್ಗೆ ಕಾಳಜಿ ವಹಿಸುವ ಯಾವುದೇ ಅವಕಾಶವನ್ನೂ ಕೈಬಿಡುವುದಿಲ್ಲ ಎಂದು ವಾಗ್ದಾನ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಮಾತನಾಡಿ, ಮೀಸಲು ಮಸೂದೆಯನ್ನು ತಿರಸ್ಕರಿಸಿದ ವಿರೋಧಪಕ್ಷಗಳ ಮೇಲೆ ಜನರು ಕೋಪಿಸಿಕೊಂಡಿರುವುದು ಈ ಚುನಾವಣಾ ಫಲಿತಾಂಶ ತೋರಿಸುತ್ತದೆ ಎಂದರು.

ಕೇರಳಂನಲ್ಲಿ ಇನ್ನು ನಿಜವಾದ ಕಲ್ಯಾಣ ಹಾಗೂ ಆರ್ಥಿಕಾಭಿವೃದ್ಧಿ ಕಾರ್ಯ ಆರಂಭವಾಗುತ್ತಿದೆ. ಕೇರಳಂನ ಕಳೆದು ಹೋದ ವೈಭವ ಹಾಗೂ ಯುಡಿಎಫ್‌ನ ಜನಕೇಂದ್ರಿತ ಆಡಳಿತ ಮಾದರಿ ಮರುಸ್ಥಾಪಿಸುವುದಕ್ಕೆ ನಾವು ಕಟಿಬದ್ಧರಾಗಿದ್ದೇವೆ.

▪ ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿಪಕ್ಷ ನಾಯಕ

ಪಶ್ಚಿಮಬಂಗಾಳದ ಜನತೆ ಅತಿಕ್ರಮಣಕಾರರು ಮತ್ತವರ ಬಗ್ಗೆ ಸಹಾನುಭೂತಿ ತೋರಿಸುವವರಿಗೆ ಈ ಚುನಾವಣೆ ಮೂಲಕ ಬಲವಾದ ಸಂದೇಶ ನೀಡಿದ್ದಾರೆ. ತನ್ಮೂಲಕ ತುಷ್ಟೀಕರಣ ರಾಜಕಾರಣದಲ್ಲಿ ತೊಡಗುವ ಪಕ್ಷಗಳು ಇನ್ನೆಂದಿಗೂ ಮರೆಯಲಾಗದ ಪಾಠ ಕಲಿಸಿಕೊಟ್ಟಿದ್ದಾರೆ

▪ ಅಮಿತ್ ಶಾ, ಕೇಂದ್ರ ಗೃಹ ಸಚಿವ

ಅಸ್ಸಾಂ ಮತ್ತು ಪಶ್ಚಿಮಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಗೆಲುವು ಪಕ್ಷದ ಮೇಲೆ ಜನರಿಟ್ಟ ವಿಶ್ವಾಸ ಮತ್ತು ಅದರ ಅಭಿವೃದ್ಧಿ ಆಧಾರಿತ ರಾಜಕಾರಣಕ್ಕೆ ಸಂದ ಜಯ. ಸಾಮಾನ್ಯವಾಗಿ ರಾಜ್ಯ ವಿಧಾನಸಭಾ ಚುನಾವಣೆಗಳ ಫಲಿತಾಂಶ ದೇಶದ ರಾಜಕಾರಣಕ್ಕೆ ಹೊಸ ದಿಕ್ಕು ನೀಡುತ್ತದೆ.

▪ ಏಕನಾಥ ಶಿಂದೆ, ಮಹಾರಾಷ್ಟ್ರ ಉಪಮುಖ್ಯಮಂತ್ರಿ

ಚುನಾವಣಾ ಆಯೋಗದ ಬೆಂಬಲದೊಂದಿಗೆ ಬಿಜೆಪಿಯು ಅಸ್ಸಾಂ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿ ಮತಗಳನ್ನು ಕದ್ದಿದೆ. ಬಿಜೆಪಿಯ ಕೋಮು ರಾಜಕೀಯ ವಿರುದ್ಧ ಇಂಡಿ ಮಿತ್ರಕೂಟದ ಪಕ್ಷಗಳು ಏಕತೆ ಪ್ರದರ್ಶಿಸುವ ಅವಶ್ಯಕತೆ ಇದೆ.

▪ ರಾಹುಲ್ ಗಾಂಧಿ ,ಕಾಂಗ್ರೆಸ್ ನಾಯಕ

ಮಾ ಮಾಟಿ ಹಾಗೂ ಮಾನುಷಿ ಸಿದ್ಧಾಂತಕ್ಕೆ ತಿಲಾಂಜಲಿಯಿತ್ತ ಟಿಎಂಸಿಯ ದಮನಕಾರಿ ಆಡಳಿತ ಅಂತ್ಯಗೊಳಿಸಿದ ಪಶ್ಚಿಮ ಬಂಗಾಳ ಜನತೆಗೆ ಅಭಿನಂದನೆಗಳು. ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಭಾರತದ ಪ್ರಮುಖ ರಾಜ್ಯವಾಗಿ ಮತ್ತೆ ಪ್ರಜ್ವಲಿಸಲಿದೆ.

▪ ನಿರ್ಮಲಾ ಸೀತಾರಾಮನ್ ಕೇಂದ್ರ ಹಣಕಾಸು ಸಚಿವೆ.

ಅಸ್ಸಾಮಿನ ಜನರು ಪ್ರಗತಿಪರ, ಸ್ಥಿರ ಹಾಗೂ ನಿರ್ಣಾಯಕ ಆಡಳಿತವನ್ನು ಆಯ್ಕೆ ಮಾಡಿದ್ದಾರೆ. ಹೀಗಾಗಿ ಸುರಕ್ಷತಾ, ಸುಭದ್ರತಾ ಹಾಗೂ ಸುಭದ್ರ ಅಸ್ಸಾಮಿಗಾಗಿ ಬಿಜೆಪಿಯ ಸಾಮೂಹಿಕ ಕಟಿಬದ್ಧತೆಯಿಂದಾಗಿ ಮುಂಬರುವ ದಿನಗಳಲ್ಲಿ ರಾಜ್ಯ ಮತ್ತಷ್ಟು ಸದೃಢಗೊಳ್ಳಲಿದೆ.

▪ ಸರ್ಬಾನಂದ ಸೋನೋವಾಲಾ । ಕೇಂದ್ರ ಬಂದರು ಸಚಿವ

ದೇಶದಲ್ಲೀಗ ಬಿಜೆಪಿ ಆಳ್ವಿಕೆ ರಾಜ್ಯ 22

ಪಶ್ಚಿಮಬಂಗಾಳ ಗೆಲುವಿನ ಬಳಿಕ ಕೇಸರಿ ಆಡಳಿತ ಇನ್ನೂ ವಿಸ್ತರಣೆ



ಪುದುಚೇರಿಯಲ್ಲಿ ಮತ್ತೆ ಎನ್‌ಡಿಎ ಅಧಿಕಾರಕ್ಕೆ

ಒಟ್ಟು ಸ್ಥಾನ: 30 ಬಹುಮತಕ್ಕೆ16

ಪಕ್ಷ	2026	2021
ಎನ್‌ಡಿಎ	18	16
ಕಾಂಗ್ರೆಸ್	06	08
ಟಿವಿಕೆ	03	00
ಇತರ	03	06

ಪುದುಚೇರಿ: ಎನ್‌ಡಿಎ ಸರ್ಕಾರ ಎರಡನೇ ಬಾರಿ ಅಧಿಕಾರಕ್ಕೆ ಬರಲು ಸಜ್ಜಾಗಿದೆ. ಬಿಜೆಪಿ, ಎಐಎನ್‌ಆರ್‌ಸಿ ಹಾಗೂ ಎಲ್‌ಜೆಕೆ ಪಕ್ಷಗಳು ಜೊತೆಗೂಡಿ ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದು 17 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಮತ್ತೆ ಅಧಿಕಾರಕ್ಕೇರಲು ಸನ್ನಾಹ ನಡೆಸಿವೆ.

ಎಐಎನ್‌ಆರ್‌ಸಿ ಪಕ್ಷ 12 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ, ಅದರ ಮಿತ್ರ ಪಕ್ಷವಾದ ಬಿಜೆಪಿ ಎರಡು ಸ್ಥಾನಗಳನ್ನು ಗೆದ್ದಿದೆ. ಎಲ್‌ಜೆಕೆ ಒಂದು ಕ್ಷೇತ್ರಗಳಲ್ಲಿ ಜಯ ದಾಖಲಿಸಿದೆ.

ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಒಳಗೊಂಡಂತೆ ಎನ್‌ಡಿಎಗೆ ಮೇಲುಗೈ ಸಾಧಿಸಿರುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ವಿಜಯೋತ್ಸವ ಭಾಷಣ ಮಾಡಿದ್ದು ಪುದುಚೇರಿಯ ಜನತೆ ಮತ್ತೊಮ್ಮೆ ಎನ್‌ಡಿಎಗೆ ಆಶೀರ್ವದಿಸಿದ್ದಾರೆ ಎಂದು ಹೇಳಿರುವುದಲ್ಲದೆ, ಮುಖ್ಯಮಂತ್ರಿ ರಂಗಸ್ವಾಮಿಯ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

30 ಸದಸ್ಯರ ಕೇಂದ್ರಾಡಳಿತ ಪುದುಚೇರಿ ವಿಧಾನಸಭೆಯಲ್ಲಿ ಬಹುಮತ ಗಳಿಸಲು 16ರಲ್ಲಿ ಗೆಲ್ಲುವ ಅವಶ್ಯಕತೆ ಇದೆ. ಆದರೆ 17 ಕ್ಷೇತ್ರಗಳಲ್ಲಿ ಎನ್‌ಡಿಎ ಗೆಲ್ಲುವ ಮೂಲಕ ಬಹುಮತ ಖಚಿತಪಡಿಸಿಕೊಂಡಿದೆ.

ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಬಿಜೆಪಿ–ಎಐಎನ್‌ಆರ್‌ಸಿ ಮೈತ್ರಿಕೂಟ ಗೆಲ್ಲುವುದೆಂದು ಭವಿಷ್ಯ ನುಡಿದಿದ್ದರೂ ಕಾಂಗ್ರೆಸ್ ಮತ್ತು ಡಿಎಂಕೆ ಮಿತ್ರಕೂಟವೂ ಅಧಿಕಾರಕ್ಕೆ ಬರುವ ಬಗ್ಗೆ ಆಶಾವಾದ ವ್ಯಕ್ತಪಡಿಸಿದ್ದರು. ಆದರೆ ಪ್ರತಿಪಕ್ಷಗಳ ಲೆಕ್ಕಾಚಾರ ಈಗ ತಲೆ ಕೆಳಗಾಗಿದೆ. ಎಐಎನ್‌ಆರ್‌ಸಿ ನಾಯಕ ಹಾಗೂ ಮುಖ್ಯಮಂತ್ರಿ ರಂಗಸ್ವಾಮಿ ಅವರು ತಟ್ಟಂಚಾಡಿ ಕ್ಷೇತ್ರದಲ್ಲಿ 10,024 ಮತಗಳನ್ನು ಪಡೆಯುವ ಮೂಲಕ ಇ ವಿನಯಗಂ ಅವರನ್ನು 4441 ಮತಗಳ ಅಂತರದಿಂದ ಗೆದ್ದಿದ್ದಾರೆ. ಎನ್‌ಡಿಎ ಮಿತ್ರಕೂಟದಲ್ಲಿ ಲಾಟರಿ ಉದ್ಯಮಿ ಸ್ಯಾಂಟಿಯಾಗೋ ಮಾರ್ಟಿನ್ ಅವರ ಪುತ್ರ ಜೋಸ್ ಚಾರ್ಲ್ಸ್ ಅವರ ನೇತೃತ್ವದ ಲಚ್ಚಿಯಾ ಜನನಾಯಕ ಕಚ್ಚಿ ಪಕ್ಷವೂ ಸೇರಿದೆ.ಸ್ಥಿರ ಆಡಳಿತ ಹಾಗೂ ಜನ ಕಲ್ಯಾಣ ಕಾರ್ಯಕ್ರಮಗಳು ಎನ್‌ಡಿಎ ಕಾರ್ಯಸೂಚಿಯಾಗಿದೆ. ಏಪ್ರಿಲ್ 9ರಂದು ಒಂದೇ ಹಂತದಲ್ಲಿ 30 ಕ್ಷೇತ್ರಗಳಿಗೆ ನಡೆದ ಮತದಾನದಲ್ಲಿ ಶೇ.90ರಷ್ಟು ಅಭೂತಪೂರ್ವ ಮತ ಚಲಾವಣೆಯಾಗಿತ್ತು.

ಖಲಿಸ್ತಾನಿ ಉಗ್ರಗಾಮಿಗಳು ದೇಶದ ಭದ್ರತೆಗೆ ಕಂಟಕ: ಕೆನಡಾ

ಒಟ್ಟಾವ: ಕೆನಡಾದಲ್ಲಿ ಸಕ್ರಿಯವಾಗಿರುವ ಖಲಿಸ್ತಾನಿ ಉಗ್ರಗಾಮಿಗಳು ದೇಶದ ಭದ್ರತೆಗೆ ದೊಡ್ಡ ಕಂಟಕವಾಗಿದ್ದಾರೆ ಎಂದು ಕೆನಡಾದ ಗುಪ್ತಚರ ಇಲಾಖೆ ತನ್ನ ವಾರ್ಷಿಕ ವರದಿಯಲ್ಲಿ ಅಧಿಕೃತವಾಗಿ ಘೋಷಿಸಿದೆ. ಭಾರತದ ಆಕ್ಷೇಪಣೆಗಳ ನಡುವೆಯೂ ಈವರೆಗೆ ಮೃದು ಧೋರಣೆ ತಳೆದಿದ್ದ ಕೆನಡಾ, ಇದೀಗ ಮೊದಲ ಬಾರಿಗೆ ಈ ಗುಂಪುಗಳನ್ನು "ರಾಷ್ಟ್ರೀಯ ಭದ್ರತಾ ಬೆದರಿಕೆ" ಎಂದು ಕರೆದಿದೆ. ಕೆನಡಾ ಮೂಲದ ಖಲಿಸ್ತಾನಿ ಉಗ್ರರು ತಮ್ಮ ಹಿಂಸಾತ್ಮಕ ಕಾರ್ಯಸೂಚಿಯನ್ನು ಪ್ರಚಾರ ಮಾಡಲು ಕೆನಡಾದ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಸಮುದಾಯದ ಮುಗ್ಧ ಜನರಿಂದ ಹಣವನ್ನು ಸಂಗ್ರಹಿಸಿ, ಅದನ್ನು ಭಯೋತ್ಪಾದಕ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ ಎಂದು ಕೆನಡಾ ಸೆಕ್ಯುರಿಟಿ ಇಂಟೆಲಿಜೆನ್ಸ್ ಸರ್ವಿಸ್ ತನ್ನ 2025ರ ಸಾರ್ವಜನಿಕ ವರದಿಯಲ್ಲಿ ತಿಳಿಸಿದೆ.

329 ಜನರನ್ನು ಬಲಿಪಡೆದ 1985ರ ಏರ್ ಇಂಡಿಯಾ ವಿಮಾನ 182ರ ಬಾಂಬ್ ಸ್ಫೋಟದ ಆರೋಪಿಗಳು ಇದೇ ಗುಂಪುಗಳಿಗೆ ಸೇರಿದವರಾಗಿದ್ದರು ಎಂಬ ಅಂಶವನ್ನು ವರದಿ ಉಲ್ಲೇಖಿಸಿದೆ. ಕಳೆದ ಕೆಲವು ವರ್ಷಗಳಿಂದ ಭಾರತವು ಕೆನಡಾ ಮಣ್ಣಿನಲ್ಲಿ ನಡೆಯುತ್ತಿರುವ ಭಾರತ ವಿರೋಧಿ ಚಟುವಟಿಕೆಗಳ ಬಗ್ಗೆ ಪುರಾವೆಗಳ ಸಮೇತ ಎಚ್ಚರಿಸುತ್ತಲೇ ಇತ್ತು. 2023ರಲ್ಲಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯ ನಂತರ ಭಾರತ ಮತ್ತು ಕೆನಡಾ ಸಂಬಂಧ ತಳಮಟ್ಟಕ್ಕೆ ಕುಸಿದಿತ್ತು. ಆದರೆ, ಕೆನಡಾದ ನೂತನ ಪ್ರಧಾನಿ ಮಾರ್ಕ್ ಕಾರ್ನಿ ನೇತೃತ್ವದ ಸರ್ಕಾರವು ಈಗ ಭಾರತದ ಕಳವಳಗಳನ್ನು ಗಂಭೀರವಾಗಿ ಪರಿಗಣಿಸಿದಂತಿದೆ. ಇದು ಭಾರತಕ್ಕೆ ಸಂದ ಪ್ರಮುಖ ರಾಜತಾಂತ್ರಿಕ ಜಯ ಎಂದು ವಿಶ್ಲೇಷಿಸಲಾಗುತ್ತಿದೆ.

ಬಿಜೆಪಿ 100 ಸೀಟು ಲೂಟಿ ಮಾಡಿದೆ: ಮಮತಾ ಕಿಡಿಕಿಡಿ

ಮತ್ತೆ ನಾವು ಪುಟಿದೇಳುತ್ತೇವೆ: ದೀದಿ

ಕೋಲ್ಕತಾ: ಪಶ್ಚಿಮ ಬಂಗಾಳದ ಲೋಕಸಭಾ ಚುನಾವಣಾ ಫಲಿತಾಂಶದ ಬೆನ್ನಲ್ಲೇ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಚುನಾವಣಾ ಪ್ರಕ್ರಿಯೆಯಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಚುನಾವಣಾ ಫಲಿತಾಂಶದ ಕುರಿತು ಪ್ರತಿಕ್ರಿಯಿಸಿದ ಅವರು, "ಇದು ಕೇವಲ ಚುನಾವಣೆಯಲ್ಲ, ಇಲ್ಲಿ ನಡೆದಿದ್ದು ಲೂಟಿ, ಲೂಟಿ ಮತ್ತು ಲೂಟಿ. ಕೇಂದ್ರದ ತನಿಖಾ ಸಂಸ್ಥೆಗಳು ಮತ್ತು ಚುನಾವಣಾ ಆಯೋಗದ ನೆರವಿನಿಂದ ಬಿಜೆಪಿಯು ಪ್ರಜಾಪ್ರಭುತ್ವವನ್ನು ಅಣಕವಾಡಿದೆ" ಎಂದು ಕಿಡಿಕಾರಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಮತ ಎಣಿಕೆ ಸಂದರ್ಭದಲ್ಲಿ ಅಕ್ರಮಗಳು ನಡೆದಿವೆ ಎಂದು ದೂರಿದ ದೀದಿ, ತಮ್ಮ ಪಕ್ಷದ ಸೋಲಿನ ಪರಾಮರ್ಶೆ ನಡೆಸುವುದಾಗಿ ತಿಳಿಸಿದರು. "ನಾವು ಈ ಹಿನ್ನಡೆಯಿಂದ ಎದೆಗುಂದುವುದಿಲ್ಲ. ತೃಣಮೂಲ ಕಾಂಗ್ರೆಸ್ ಕಣ್ಮರೆಯಾಗುವ ಪಕ್ಷವಲ್ಲ. ನಾವು ಮತ್ತೆ ಪುಟಿದೇಳುತ್ತೇವೆ, ಜನರ ಆಶೀರ್ವಾದದೊಂದಿಗೆ ಬಲಿಷ್ಠವಾಗಿ ಮರಳುತ್ತೇವೆ" ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಇದೇ ವೇಳೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರಿಸಿದ ಅವರು, ಬಂಗಾಳದ ಜನತೆ ಕೋಮುವಾದಿ ಶಕ್ತಿಗಳಿಗೆ ತಕ್ಕ ಉತ್ತರ ನೀಡಲಿದ್ದಾರೆ. ಪ್ರಜಾಪ್ರಭುತ್ವದ ರಕ್ಷಣೆಗಾಗಿ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಘೋಷಿಸಿದರು. ಟಿಎಂಸಿ ಸೋಲನ್ನು ಒಪ್ಪಿಕೊಂಡರೂ, ನೈತಿಕವಾಗಿ ನಾವು ಗೆದ್ದಿದ್ದೇವೆ ಎಂದು ಮಮತಾ ಪ್ರತಿಪಾದಿಸಿದರು. ಈ ಹೇಳಿಕೆಯು ಈಗ ಬಂಗಾಳ ರಾಜಕಾರಣದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದೆ.

ಹೊರ್ಮುಜ್ ಜಲಸಂಧಿ ಬಳಿ ಹಡಗಿನ ಮೇಲೆ ಇರಾನ್ ದಾಳಿ

ಲಂಡನ್: ಇರಾನ್ ಬಳಿಯ ಹೊರ್ಮುಜ್ ಜಲಸಂಧಿ ನಿಯಂತ್ರಣಕ್ಕೆ ಇರಾನ್ ಹಾಗೂ ಅಮೆರಿಕ ನಡುವೆ ಪೈಪೋಟಿ ಮುಂದುವರೆದಿದ್ದು, ಭಾನುವಾರ ಹೊರ್ಮುಜ್ ದಾಟಲು ಬಂದ ಸರಕು ತುಂಬಿದ ಹಡಗೊಂದನ್ನು ಇರಾನ್ ಹೊಡೆದುರುಳಿಸಿದೆ.

ಇದರಿಂದಾಗಿ ಜಲಸಂಧಿ ಬಳಿ ಉದ್ವಿಗ್ನ ಪರಿಸ್ಥಿತಿ ತಲೆದೋರಿದೆ.

ಇರಾನಿನ ಸಣ್ಣ ಪ್ರಮಾಣದ ಹಲವು ಯುದ್ಧ ನೌಕೆಗಳು ಏಕ ಕಾಲಕ್ಕೆ ದಾಳಿ ಮಾಡಿವೆ ಎಂದು ಬ್ರಿಟನ್ ನೌಕಾಯಾನ ನಿರ್ವಹಣಾ ಏಜೆನ್ಸಿಯೊಂದು ಸಂಕ್ಷಿಪ್ತ ಪ್ರಕಟಣೆಯಲ್ಲಿ ತಿಳಿಸಿದೆ.

ಯುನೈಟೆಡ್ ಕಿಂಗ್‌ಡಂ ಮೆರಿಟೈಂ ಟ್ರೇಡ್ ಆಪರೇಷನ್ಸ್ ಹೇಳಿಕೆ ಪ್ರಕಾರ ದಾಳಿಗೊಳಗಾದ ಅಪರಿಚಿತ ಹಡಗಿನಲ್ಲಿದ್ದ ಎಲ್ಲ ಸಿಬ್ಬಂದಿ ಸುರಕ್ಷಿತರಾಗಿದ್ದಾರೆ. ಈ ಪ್ರಕರಣ ಇರಾನ್ ಪಶ್ಚಿಮಕ್ಕೆ 11 ನೌಕಾ ಮೈಲು (20 ಕಿಮೀ) ದೂರದ ಸಿರಿಕ್ ಬಳಿ ನಡೆದಿದೆ.ಹೊರ್ಮುಜ್ ಜಲಸಂಧಿಯ ಇರಾನ್ ಕಡೆಯ ಭಾಗದಲ್ಲಿ ಈ ಸಿರಿಕ್ ಪ್ರದೇಶವಿದ್ದು ದಾಳಿಯಿಂದಾಗಿ ಪರಿಸರಕ್ಕೂ ಯಾವುದೇ ಹಾನಿ ಆಗಿಲ್ಲ ಎಂದು ಏಜೆನ್ಸಿ ಖಚಿತಪಡಿಸಿದೆ.ಫೆ.28 ರಂದು ಪಶ್ಚಿಮ ಏಷ್ಯಾ ಯುದ್ಧ ಆರಂಭವಾದಾಗಿನಿಂದ ಹೊರ್ಮುಜ್ ಜಲಸಂಧಿ ಮೇಲೆ ಹಿಡಿತ ಸಾಧಿಸಲು ಇರಾನ್ ಯತ್ನಿಸುತ್ತಲೇ ಇದೆ.

ಹೊರ್ಮುಜ್‌ನಲ್ಲಿ 'ಪ್ರಾಜೆಕ್ಟ್ ಫ್ರೀಡಂ':ಟ್ರಂಪ್ ಘೋಷಣೆ

ವಾಷಿಂಗ್ಟನ್: ಇರಾನಿನ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿರುವ ಜಗತ್ತಿನ ವಿವಿಧ ದೇಶಗಳ ನೂರಾರು ಹಡಗುಗಳನ್ನು ಬಿಡುಗಡೆ ಮಾಡಲಾಗುವುದು. ಸರಕು ತುಂಬಿದ ಆ ಹಡಗುಗಳು ಮುಂದೆ ಸಾಗಲು ಉಚಿತವಾಗಿ ಜಲಸಂಧಿಯನ್ನು ಮುಕ್ತ ಮಾಡಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ತಮ್ಮದೇ ಟ್ರೂಥ್ ಸೋಷಿಯಲ್ ಸಾಮಾಜಿಕ ಜಾಲ ತಾಣದಲ್ಲಿ ಹೀಗೆ ಘೋಷಿಸಿರುವ ಟ್ರಂಪ್, ಜಲಸಂಧಿಯಲ್ಲಿ ಕೆಲವು ತಟಸ್ಥ ದೇಶಗಳಿಗೆ ಹಾಗೂ ಅಮಾಯಕ ದೇಶಗಳಿಗೆ ಸೇರಿದ ಹಡುಗುಗಳು ನಿರ್ಬಂಧಕ್ಕೊಳಗಾಗಿ ಸಿಲುಕಿವೆ; 'ಮಾವನೀಯ' ದೃಷ್ಟಿಯಿಂದ ಅವುಗಳಿಗೆ ಮಾರ್ಗದರ್ಶನ ಮಾಡಿ ಮುಂದೆ ಉಚಿತವಾಗಿ ಮುಂದೆ ಕಳುಹಿಸಲಾಗುವುದು. ಅಮೆರಿಕ ಹಾಗೂ ಮಧ್ಯಪ್ರಾಚ್ಯ ದೇಶಗಳು– ಅದರಲ್ಲೂ ಇರಾನ್ ಪರವಾಗಿ ನಾವು ಈ ಕಾರ್ಯಾಚರಣೆ ಕೈಗೊಂಡಿದ್ದೇವೆ, ಇದಕ್ಕೆ ನಾವು 'ಪ್ರಾಜೆಕ್ಟ್ ಫ್ರೀಡಂ' ಎಂದು ಹೆಸರಿಸಿದ್ದೇವೆ ಎಂದು ಟ್ರಂಪ್ ವ್ಯಂಗ್ಯವಾಡಿದ್ದಾರೆ.

ಇರಾನ್‌ನಿಂದ ಪ್ರತಿ ದಾಳಿ ಎಚ್ಚರಿಕೆ

ಟ್ರಂಪ್ ಅವರ ಈ ಪ್ರಾಜೆಕ್ಟ್ ಫ್ರೀಡಂ ಯೋಜನೆಗೆ ಪ್ರತಿಕ್ರಿಯೆ ನೀಡಿರುವ ಇರಾನ್, 'ಯಾವುದೇ ಸಶಸ್ತ್ರ ವಿದೇಶೀ ಪಡೆ'– ಅದರಲ್ಲೂ ಅಮೆರಿಕ ಪಡೆ ಜಲಸಂಧಿ ಪ್ರವೇಶಕ್ಕೆ ಯತ್ನಿಸಿದರೆ ಪ್ರತಿ ದಾಳಿ ನಡೆಸುವುದಾಗಿ ಎಚ್ಚರಿಸಿದೆ. ಹೊರ್ಮುಜ್ ಜಲಸಂಧಿಯಲ್ಲಿ ಭಾರತದ ತೈಲ ಹಾಗೂ ಎಲ್‌ಪಿಜಿ ಹಡಗುಗಳು ಸಹ ಸಿಕ್ಕಿಕೊಂಡಿರುವುದರಿಂದ ಟ್ರಂಪ್ ಅವರ ಈ ಆದೇಶದಿಂದ ಭಾರತಕ್ಕೆ ಆಶಾದಾಯಕ ಭಾವನೆ ಉಂಟಾಗಿದೆ.

ರಿಸಲ್ಟ್ ಬೆನ್ನಲ್ಲೇ ಬಂಗಾಳದಲ್ಲಿ ಟಿಎಂಸಿ ಕಚೇರಿ ಪುಡಿಪುಡಿ

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಫಲಿತಾಂಶದ ಬೆನ್ನಲ್ಲೇ ರಾಜ್ಯದ ವಿವಿಧೆಡೆ ರಾಜಕೀಯ ಸಂಘರ್ಷ ತಾರಕಕ್ಕೇರಿದೆ. ಹಲವು ಜಿಲ್ಲೆಗಳಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷದ ಕಚೇರಿಗಳ ಮೇಲೆ ಕಿಡಿಗೇಡಿಗಳು ದಾಳಿ ನಡೆಸಿ ವಿಧ್ವಂಸಕ ಕೃತ್ಯ ಎಸಗಿದ್ದಾರೆ ಎಂದು

ವರದಿಯಾಗಿದೆ. ದಕ್ಷಿಣ 24 ಪರಗಣ ಜಿಲ್ಲೆಯ ಬರುಯಿಪುರ್, ಕೂಚ್ ಬೆಹಾರ್‌ನ ತುಫಾನಗಂಜ್ ಮತ್ತು ಉತ್ತರ 24 ಪರಗಣದ ಪಾನಿಹಾಟಿಯಲ್ಲಿ ಟಿಎಂಸಿ ಕಚೇರಿ ಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಬರುಯಿಪುರ್‌ನಲ್ಲಿ ಪಕ್ಷದ ಫ್ಲೆಕ್ಸ್ ಬೋರ್ಡ್‌ಗಳು ಮತ್ತು ಬ್ಯಾನರ್‌ಗಳನ್ನು ಹರಿದು ಹಾಕಲಾಗಿದ್ದು, ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ಅವರ ಭಾವಚಿತ್ರಗಳನ್ನು ವಿರೂಪಗೊಳಿಸಲಾಗಿದೆ ಎಂದು ಟಿಎಂಸಿ ನಾಯಕರು ಆರೋಪಿಸಿದ್ದಾರೆ. ಪಶ್ಚಿಮ ವರ್ಧಮಾನ್ ಜಿಲ್ಲೆಯ ಜಮುರಿಯಾದಲ್ಲಿ ಟಿಎಂಸಿ ಕಚೇರಿಗೆ ಬೆಂಕಿ ಹಚ್ಚಲಾಗಿದ್ದು, ಅಸನ್ಸೋಲ್‌ನಲ್ಲಿಯೂ ಕಚೇರಿ ಧ್ವಂಸಗೊಂಡಿದೆ. "ಬಿಜೆಪಿ ಬೆಂಬಲಿಗರು ಈ ಕೃತ್ಯಗಳ ಹಿಂದೆ ಇದ್ದಾರೆ" ಎಂದು ಟಿಎಂಸಿ ನೇರ ಆರೋಪ ಮಾಡಿದೆ. ಆದರೆ ಈ ಎಲ್ಲಾ ಆರೋಪಗಳನ್ನು ಬಿಜೆಪಿ ನಿರಾಕರಿಸಿದೆ.

ಅಜಿತ್, ಶರದ್ ಪವಾರ್ ದಾಖಲೆ ಮುರಿದ ಸುನೇತ್ರಾ

ಬಾರಾಮತಿ: ಮಹಾರಾಷ್ಟ್ರ ರಾಜಕೀಯದ ಅತ್ಯಂತ ಪ್ರತಿಷ್ಠಿತ ಕಣ ಎನಿಸಿದ್ದ ಬಾರಾಮತಿ ವಿಧಾನಸಭಾ ಉಪಚುನಾವಣೆಯಲ್ಲಿ ಎನ್‌ಸಿಪಿ ಅಧ್ಯಕ್ಷೆ ಹಾಗೂ ಉಪಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರು ದಾಖಲೆ ಮಟ್ಟದ ಮತಗಳ ಅಂತರದಿಂದ ಭರ್ಜರಿ ಜಯ ದಾಖಲಿಸಿದ್ದಾರೆ. ಈ ಗೆಲುವನ್ನು ಅವರು

ತಮ್ಮ ದಿವಂಗತ ಪತಿ, ಮಾಜಿ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಅರ್ಪಿಸಿದ್ದಾರೆ. ಸೋಮವಾರ ಪ್ರಕಟವಾದ ಫಲಿತಾಂಶದಲ್ಲಿ ಸುನೇತ್ರಾ ಪವಾರ್ ಅವರು ಸುಮಾರು 2,18,034 ಮತಗಳ ಬೃಹತ್ ಅಂತರದಿಂದ ಜಯಭೇರಿ ಬಾರಿಸಿದ್ದಾರೆ. ಈ ಮೂಲಕ ವಿಧಾನಸಭಾ ಚುನಾವಣಾ ಇತಿಹಾಸದಲ್ಲೇ ಅತಿ ಹೆಚ್ಚು ಮತಗಳ ಅಂತರದ ರಾಷ್ಟ್ರೀಯ ದಾಖಲೆಯನ್ನು ಅವರು ಸೃಷ್ಟಿಸಿದ್ದಾರೆ. ಚುನಾವಣಾ ಆಯೋಗದ ಅಂಕಿ–ಅಂಶಗಳ ಪ್ರಕಾರ, ಸುನೇತ್ರಾ ಅವರಿಗೆ 2,18,969 ಮತಗಳು ಲಭಿಸಿದರೆ, ಉಳಿದ 22 ಅಭ್ಯರ್ಥಿಗಳು ಸೇರಿದಂತೆ ನೋಟಾ ಅಡಿ ಚಲಾವಣೆಯಾದ ಮತಗಳು ಕೇವಲ 5,000ದ ಗಡಿ ದಾಟಿಲ್ಲ. ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸೇರಿದಂತೆ ಎಲ್ಲಾ ವಿಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೆ ವಿಮಾನ ದುರಂತದಲ್ಲಿ ಅಕಾಲಿಕ ನಿಧನ ಹೊಂದಿದ ಅಜಿತ್ ಪವಾರ್ ಅವರಿಗೆ ಗೌರವ ಸಲ್ಲಿಸಿವೆ.

ವಿಜಯ್ ಸೋಲ್ತಾರೆ ಅನ್ನೋ ಭೀತೀಲಿ ಕುತ್ತಿಗೆ ಕುಯ್ದುಕೊಂಡ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ವೇಳೆ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷವು ಸೋಲುತ್ತದೆ ಎಂಬ ವದಂತಿಗಳಿಂದ ಮನನೊಂದ ಅಭಿಮಾನಿಯೊಬ್ಬ ಕುತ್ತಿಗೆ ಕುಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಆಘಾತಕಾರಿ ಘಟನೆ ಸೋಮವಾರ ನಡೆದಿದೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ

ನಿವಾಸಿ ಮಹೇಂದ್ರನ್ ಎಂಬಾತ ಆತ್ಮಹತ್ಯೆಗೆ ಯತ್ನಿಸಿದ ವಿಜಯ್ ಅಭಿಮಾನಿ. ಸೋಮವಾರ ಬೆಳಿಗ್ಗೆ ಮತ ಎಣಿಕೆ ಆರಂಭವಾದಾಗಿನಿಂದಲೂ ವಿಜಯ್ ಅವರ ಪಕ್ಷದ ಫಲಿತಾಂಶದ ಬಗ್ಗೆ ಮಹೇಂದ್ರನ್ ಅತೀವ ಆತಂಕದಲ್ಲಿದ್ದನು. ಕೆಲವು ಕ್ಷೇತ್ರಗಳಲ್ಲಿ ಪಕ್ಷ ಹಿನ್ನಡೆ ಅನುಭವಿಸುತ್ತಿದೆ ಎಂಬ ವದಂತಿಗಳು ಹರಡುತ್ತಿದ್ದಂತೆ ಆತೀವ ಆಘಾತಕ್ಕೊಳಗಾದ ಮಹೇಂದ್ರನ್, ತನ್ನ ಮನೆಯ ಹೊರಗಡೆ ಬ್ಲೇಡ್‌ನಿಂದ ಕುತ್ತಿಗೆ ಕುಯ್ದುಕೊಂಡಿದ್ದಾನೆ. ಮಹೇಂದ್ರನ್ ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ಗಮನಿಸಿದ ಸ್ಥಳೀಯರು ಕೂಡಲೇ ಆತನನ್ನು ರಕ್ಷಿಸಿ ಕೃಷ್ಣಗಿರಿ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಿದ್ದಾರೆ. ಸದ್ಯ ಮಹೇಂದ್ರನ್ ಪರಿಸ್ಥಿತಿ ಗಂಭೀರವಾಗಿದ್ದು ಐಸಿಯುನಲ್ಲಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಘಟನೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಲೈವ್ ಟೀವಿಯಲ್ಲೇ ಕಣ್ಣೀರಿಟ್ಟಿದ್ದ ಪ್ರದೀಪ್ ಗುಪ್ತಾ ಈಗ ಹೀರೋ!

ನವದೆಹಲಿ: ಚುನಾವಣಾ ಫಲಿತಾಂಶಗಳ ಮುನ್ಸೂಚನೆ ನೀಡುವಲ್ಲಿ 'ಕಿಂಗ್' ಎನಿಸಿಕೊಂಡಿದ್ದ ಆಕ್ಸಿಸ್ ಮೈ ಇಂಡಿಯಾದ ಪ್ರದೀಪ್ ಗುಪ್ತಾ, ಕಳೆದ ಲೋಕಸಭಾ ಚುನಾವಣೆಯ ವೇಳೆ ತಮ್ಮ ಲೆಕ್ಕಾಚಾರ ತಪ್ಪಾದಾಗ ಟಿವಿ ಚರ್ಚೆಯಲ್ಲೇ ಕಣ್ಣೀರಿಟ್ಟು ದೇಶಾದ್ಯಂತ ಸುದ್ದಿಯಾಗಿದ್ದರು. ಆದರೆ, ಈಗ ತಮಿಳುನಾಡು ವಿಧಾನಸಭಾ ಚುನಾವಣೆಯ ಫಲಿತಾಂಶವು ಅವರನ್ನು ಮತ್ತೆ

ಯಶಸ್ಸಿನ ಶಿಖರಕ್ಕೇರಿಸಿದೆ. ಯಾರೂ ಊಹಿಸದ ರೀತಿಯಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷದ ಅಬ್ಬರವನ್ನು ನಿಖರವಾಗಿ ಭವಿಷ್ಯ ನುಡಿದಿದ್ದ ಗುಪ್ತಾ, ಈಗ ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿದ್ದಾರೆ. ಕಳೆದ 2024ರ ಲೋಕಸಭಾ ಚುನಾವಣೆಯ ಎಕ್ಸಿಟ್ ಪೋಲ್ ಫಲಿತಾಂಶಗಳು ಹೊರಬಂದಾಗ, ಆಕ್ಸಿಸ್ ಮೈ ಇಂಡಿಯಾ ನೀಡಿದ್ದ ಅಂಕಿ–ಅಂಶಗಳು ವಾಸ್ತವ ಫಲಿತಾಂಶಕ್ಕೆ ತೀರಾ ವ್ಯತಿರಿಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸುದ್ದಿ ವಾಹಿನಿಯ ನೇರ ಪ್ರಸಾರದಲ್ಲಿ ಹಿರಿಯ ಪತ್ರಕರ್ತ ರಾಜದೀಪ್ ಸರ್ದೇಸಾಯಿ ಎದುರು ಪ್ರದೀಪ್ ಗುಪ್ತಾ ಭಾವುಕರಾಗಿ ಅತ್ತಿದ್ದರು. "ದತ್ತಾಂಶಗಳು ಸುಳ್ಳಾಗಿದ್ದಕ್ಕೆ ನನಗೆ ನೋವಾಗಿದೆ" ಎಂದು ಅವರು ಹೇಳಿದ್ದ ದೃಶ್ಯ ವೈರಲ್ ಆಗಿತ್ತು. ಅಂದು ಅವರನ್ನು ಟೀಕಿಸಿದ್ದವರೇ ಇಂದು ಅವರ ಕಾರ್ಯಕ್ಷಮತೆಯನ್ನು ಕಂಡು ಹುಬ್ಬೇರಿಸುತ್ತಿದ್ದಾರೆ.

ಸಂಯುಕ್ತ ಕರ್ನಾಟಕ ಸಂಪಾದಕೀಯ

ಹಳಬರಿಗಿಲ್ಲ ರಾಜಕೀಯ ಮಣೆ ನೂತನ ಮುಖಗಳಿಗೆ ಮನ್ನಣೆ

ದೇಶದಲ್ಲಿ 5 ರಾಜ್ಯಗಳಿಗೆ ಚುನಾವಣೆ ನಡೆದು ನವಪೀಳಿಗೆಯ ರಾಜಕೀಯ ಸುನಾಮಿ ತಲೆಎತ್ತಿದೆ. ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ, ತಮಿಳುನಾಡಿನ ಸ್ಟಾಲಿನ್, ಕೇರಳದ ಪಿಣರಾಯಿ ವಿಜಯನ್ ಈ ಸುನಾಮಿಯಲ್ಲಿ ಕೊಚ್ಚಿ ಹೋಗಿದ್ದಾರೆ. ವಿಜಯನ್ ರೀತಿಯ ಹೊಸ ಮುಖಗಳು ರಾಜಕೀಯದಲ್ಲಿ ಕಂಡುಬರುತ್ತಿದೆ. ಇದು ದೇಶದ ರಾಜಕೀಯ ರಂಗದಲ್ಲಿ ಹೊಸ ಬದಲಾವಣೆ ತರುವುದಂತೂ ಖಚಿತ. ಚುನಾವಣೆ ಆಯೋಗ ಯಾವ ಕಾರಣಕ್ಕೆ ತ್ವರಿತ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಕೈಗೊಂಡಿತೋ ತಿಳಿಯದು. ಅದರಿಂದ ರಾಜಕೀಯ ರಂಗದಲ್ಲಿ ಹೊಸ ಗಾಳಿ ಬೀಸಲು ಕಾರಣವಾಯಿತು. ಹಿಂದೆ ಯುವ ಪೀಳಿಗೆ ಚುನಾವಣೆಯಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರಲಿಲ್ಲ. ಮತದಾನದ ದಿನ ರಜೆ ಬಂದಿತು ಎಂದು ಮಜಾ ಮಾಡಲು ಪಿಕ್‌ನಿಕ್ ಹೋಗುತ್ತಿದ್ದರು. ಅದನ್ನು ಗಮನಿಸಿದ ಚುನಾವಣೆ ಆಯೋಗ ವಾರದ ಕೊನೆ ದಿನಗಳಲ್ಲಿ ಮತದಾನ ನಡೆಸುವುದನ್ನು ಕೈಬಿಟ್ಟಿತು. ಈ ಬಾರಿ ಕ್ಷಿಪ್ರ ಮತದಾರರ ಪಟ್ಟಿ ಪರಿಷ್ಕರಣೆ ಕೈಗೊಂಡಿದ್ದು ಎಲ್ಲರನ್ನೂ ಬಡಿದೆಬ್ಬಿಸಿದ್ದಂತೂ ನಿಜ. ಅದರಲ್ಲೂ ಪ್ರತಿಪಕ್ಷಗಳಿಗೆ ಇದು ಬಿಜೆಪಿಯ ಹುನ್ನಾರವಾಗಿ ಕಂಡಿತು. ಸುಪ್ರೀಂ ಕೋರ್ಟ್‌ವರೆಗೆ ಹೋದರೂ ಆಯೋಗಕ್ಕೆ ಮೂಗುದಾರ ಹಾಕಲು ಸಾಧ್ಯವಾಗಲಿಲ್ಲ. ಪಶ್ಚಿಮ ಬಂಗಾಳದಲ್ಲಿ ನೆರೆಯ ಬಾಂಗ್ಲಾದವರು ಬಂದು ಮತ ಚಲಾಯಿಸಿ ಹೋಗುತ್ತಾರೆ. ಅದರಿಂದ ದೀದಿ ಗೆಲ್ಲುತ್ತಾರೆ ಎಂಬ ಮಾತು ಕೇಳಿಬರುತ್ತಿತ್ತು. ಈ ಬಾರಿ ಚುನಾವಣೆ ಆಯೋಗ ಬಹಳ ಕಟ್ಟುನಿಟ್ಟಾಗಿ ಮತದಾರರ ಪಟ್ಟಿ ಪರಿಷ್ಕರಣೆ ಕೈಗೊಂಡಿದ್ದು ವಲಸೆ ಬಂದವರು ಹೆದರಿದರು. ಸ್ಥಳೀಯರು ಮತ ಹಾಕಲಿಲ್ಲ ಎಂದರೆ ಪೌರತ್ವ ಹೋಗಿಬಿಡುತ್ತದೆ ಎಂಬ ಭಯ ಯುವ ಪೀಳಿಗೆ ಮತ ಚಲಾಯಿಸಲು ಕಾರಣವಾಯಿತು. ಪ್ರತಿ ರಾಜಕೀಯ ಪಕ್ಷವೂ ತನ್ನದೇ ಆದ ಮತ ಬ್ಯಾಂಕ್ ನಂಬಿ ಕುಳಿತಿತ್ತು. ಅವುಗಳಿಗೆ ಹೊಸ ಮತದಾರರು ಬಂದು ಮತ ಚಲಾಯಿಸುವುದು ಬೇಕಿರಲಿಲ್ಲ. ಆದರೆ ಹೊಸ ಮತದಾರರನ್ನು ತಡೆಯಲು ಸಾಧ್ಯವಾಗಲಿಲ್ಲ. ಹೀಗಾಗಿ ಪಶ್ಚಿಮ ಬಂಗಾಳದಲ್ಲಿ ಶೇ. 92, ತಮಿಳುನಾಡಿನಲ್ಲಿ ಶೇ. 85ರಷ್ಟು ಮತದಾನವಾಯಿತು. ಕೇರಳದಲ್ಲೂ ಮತದಾನ ನಿರೀಕ್ಷೆ ಮೀರಿ ಆಯಿತು. ಇದರ ಫಲವೇ ಫಲಿತಾಂಶದಲ್ಲಿ ಕಂಡುಬಂದಿದೆ. ಹೊಸ ಮತದಾರರ ಸಮಸ್ಯೆಗಳೇ ಬೇರೆ. ಅಲ್ಲದೆ ಅವರಿಗೆ ಹೊಸ ನಾಯಕರು ಬೇಕು. ಅದರಿಂದ ಅವರು ಹೊಸ ಮುಖ, ಹೊಸ ಪಕ್ಷವನ್ನು ಹುಡುಕಿಕೊಂಡರು. ಇಲ್ಲದಿದ್ದಲ್ಲಿ ತಮಿಳುನಾಡಿನಲ್ಲಿ ವಿಜಯನ್ ನೇರವಾಗಿ ಅಧಿಕಾರದ ಗದ್ದುಗೆಗೆ ಬರಲು ಸಾಧ್ಯವಿರಲಿಲ್ಲ. ಈಗ ಎಲ್ಲ ಕಡೆ ನವಪೀಳಿಗೆ ನಿರುದ್ಯೋಗದ ವಿರುದ್ಧ ಸಂಘಟಿತಗೊಳ್ಳುತ್ತಿದೆ. ಚುನಾವಣೆಯಲ್ಲಿ ಅವರು ಇದುವರೆಗೆ ಬಾವುಟ, ಬ್ಯಾನರ್ ಹಿಡಿದುಕೊಳ್ಳುತ್ತಿದ್ದರು. ಈಗ ತಮ್ಮದೇ ಆದ ನಾಯಕನನ್ನು ಕಂಡುಕೊಳ್ಳಲು ಹೊರಟಿರುವುದು ಸ್ಪಷ್ಟ.

> **ನವಪೀಳಿಗೆ ನಿರುದ್ಯೋಗದ ವಿರುದ್ಧ ಸಂಘಟಿತಗೊಳ್ಳುತ್ತಿದೆ. ಇದುವರೆಗೆ ಬಾವುಟ, ಬ್ಯಾನರ್ ಹಿಡಿದುಕೊಳ್ಳುತ್ತಿದ್ದವರು ಈಗ ತಮ್ಮದೇ ಆದ ನಾಯಕನನ್ನು ಕಂಡುಕೊಳ್ಳಲು ಹೊರಟಿರುವುದು ಸ್ಪಷ್ಟ.**

ಪಶ್ಚಿಮ ಬಂಗಾಳದ ದೀದಿ ಚುನಾವಣೆ ಕಾಲದಲ್ಲಿ ಪರದಾಡಿದ್ದನ್ನು ನೋಡಿದರೆ ಅವರ ರಾಜಕೀಯ ಅಸ್ತಿತ್ವವೇ ಉಳಿಯುವುದಿಲ್ಲ ಎಂಬ ಭಾವನೆ ಮೂಡುವುದು ಸಹಜ. ಈಗ ತೃಣಮೂಲ ಕಾಂಗ್ರೆಸ್ ಕಚೇರಿ ಬಿಕೋ ಎನ್ನುತ್ತಿದೆ ಎಂದರೆ ಹೊಸ ಪೀಳಿಗೆಗೆ ಈ ಪಕ್ಷ ಬೇಕಿಲ್ಲ ಎಂಬುದು ಸ್ಪಷ್ಟ. ತಮಿಳುನಾಡಿನಲ್ಲೂ ಇದೇ ಪರಿಸ್ಥಿತಿ. ಡಿಎಂಕೆ ಮತ್ತು ಎಐಎಡಿಎಂಕೆ ಹೊಸ ತಲೆಮಾರಿನವರನ್ನು ಆಕರ್ಷಿಸಲು ಸಾಧ್ಯವಾಗಿಲ್ಲ. ಸ್ಟಾಲಿನ್‌ಗೆ ತನ್ನ ಮಗನೇ ರಾಜಕೀಯ ಅಧಿಕಾರಕ್ಕೆ ಬರಬೇಕು ಎಂದರೆ ಉಳಿದ ಯುವಕರು ಬೇರೆ ದಾರಿ ಹುಡುಕಿಕೊಳ್ಳುವುದು ಸಹಜ. ಅದೇರೀತಿ ಕೇರಳದಲ್ಲೂ ಪಿಣರಾಯಿ ವಿಜಯನ್ ತಲೆ ಅಲುಗಾಡುತ್ತಿದ್ದರೂ ಅಧಿಕಾರ ಬಿಟ್ಟುಕೊಡಲು ಸಿದ್ಧವಿಲ್ಲ. ಅಲ್ಲೂ ಹೊರ ರಾಜ್ಯಗಳಲ್ಲಿರುವ ಯುವ ಮತದಾರರು ಈ ಬಾರಿ ತಮ್ಮ ಗ್ರಾಮಕ್ಕೆ ಬಂದು ಮತ ಚಲಾಯಿಸಿ ಹೋಗಿದ್ದಾರೆ. ಪುದುಚೇರಿ ಮತ್ತು ಅಸ್ಸಾಂನಲ್ಲಿ ಮಾತ್ರ ಬದಲಾವಣೆ ಗಾಳಿ ಬೀಸಿಲ್ಲ.

ಕರ್ನಾಟಕದಲ್ಲಿ ಎರಡು ಉಪಚುನಾವಣೆಗಳಲ್ಲಿ ಆಡಳಿತ ಕಾಂಗ್ರೆಸ್ ಗೆದ್ದಿದೆ. ಬಾಗಲಕೋಟೆಯಲ್ಲಿ ಆಡಳಿತ ಪಕ್ಷಕ್ಕೆ ತನ್ನ ಸೀಟು ಉಳಿಸಿಕೊಳ್ಳುವುದು ಕಷ್ಟವಾಗಲಿಲ್ಲ. ದಾವಣಗೆರೆಯಲ್ಲಿ ಮಾತ್ರ ಮುಸ್ಲಿಮರು ತಮಗೆ ಸೀಟು ಬಿಟ್ಟುಕೊಡಬೇಕೆಂದು ಕೇಳಿದ್ದರು. ಆದರೂ ಹೈಕಮಾಂಡ್ ಮುಸ್ಲಿಮರಿಗೆ ಟಿಕೆಟ್ ಕೊಡಲಿಲ್ಲ. ಇದರ ಪ್ರಭಾವ ಮುಂಬರುವ ದಿನಗಳಲ್ಲಿ ಕಾಣಲಿದೆ. ಮುಸ್ಲಿಮರು ತಾವು ಕೇವಲ ಮತಬ್ಯಾಂಕ್ ಅಲ್ಲ ಎಂದು ನೇರವಾಗಿ ಹೇಳಿದ್ದಾರೆ. ಮುಂಬರುವ ದಿನಗಳಲ್ಲಿ ರಾಜಕೀಯ ಅಧಿಕಾರ ಹಂಚಿಕೆಯ ಕಾಲದಲ್ಲಿ ಅವರು ತಮ್ಮ ಪಾಲು ಕೇಳುವುದಂತೂ ಖಂಡಿತ. ಈಗ ಕಾಂಗ್ರೆಸ್ ಬೀಸೋ ದೊಣ್ಣೆ ತಪ್ಪಿಸಿಕೊಂಡಿದ್ದರೂ ಬಿರುಕು ಇನ್ನೂ ಹಾಗೆ ಇದೆ ಎಂಬುದು ಸ್ಪಷ್ಟ. ಯುವಕರು ಇನ್ನೂ ಕಾಂಗ್ರೆಸ್ ಕಡೆ ತಿರುಗಿ ನೋಡುತ್ತಿಲ್ಲ.

ಈ ವಿಷಯದಲ್ಲಿ ಬಿಜೆಪಿ ಎಚ್ಚೆತ್ತು ಯುವ ಪೀಳಿಗೆಗೆ ಪಕ್ಷದೊಳಗೆ ಹೆಚ್ಚಿನ ಅಧಿಕಾರ ಕೊಡುವ ಕೆಲಸ ಕೈಗೊಂಡಿದೆ. ಈಗ ಪಕ್ಷದ ಪ್ರಚಾರಕ್ಕಿಂತ ಕಾರ್ಯಕರ್ತರ ಮಟ್ಟದಲ್ಲಿ ಸದ್ದಿಲ್ಲದೆ ಕೆಲಸ ಮಾಡುವ ಯುವಕರು ಅವರಿಗೆ ಬೇಕಾಗಿದ್ದಾರೆ. ಅದಕ್ಕಾಗಿ ಅವರು ಎಲ್ಲ ಕಡೆ ಹುಡುಕಾಟ ನಡೆಸಿದ್ದಾರೆ. ಅಣ್ಣಾಮಲೈ, ರಾಘವ್ ಚಡ್ಡಾ, ತೇಜಸ್ವಿ ಸೂರ್ಯ ಅವರೇ ಮುಂದಿನ ಪೀಳಿಗೆಯ ನಾಯಕರು ಎಂಬುದು ಅವರಿಗೆ ಗೊತ್ತಿದೆ. ತಾಂತ್ರಿಕ ಜ್ಞಾನ ಪಡೆದ ರಾಜಕೀಯದಿಂದ ದೂರ ಉಳಿದಿರುವ ಉತ್ಸಾಹಿ ಯುವಕರನ್ನು ಕರೆತರುವ ಕೆಲಸ ಮಾಡುತ್ತಿದ್ದಾರೆ. ಈ ರೀತಿ ವ್ಯವಸ್ಥಿತವಾಗಿ ಯುವ ಪಡೆ ಸಿದ್ಧಪಡಿಸುವ ಕೆಲಸ ಬೇರೆ ಕಡೆ ನಡೆಯುತ್ತಿಲ್ಲ. ಕೇಜ್ರಿವಾಲ್ ಅವರಿಗೆ ಇಂಥ ಅವಕಾಶವಿತ್ತು. ಆದರೆ ಸುವರ್ಣ ಅವಕಾಶವನ್ನು ಕಳೆದುಕೊಂಡರು ಎಂಬುದನ್ನು ಅಣ್ಣಾ ಹಜಾರೆ ಹೇಳಿದ್ದಾರೆ. ಈಗಿನ 5 ರಾಜ್ಯಗಳ ಚುನಾವಣೆ ಮುಂದಿನ ದಿನಗಳಲ್ಲಿ ಯುವ ಪೀಳಿಗೆ ಯಾವ ದಿಕ್ಕಿನಲ್ಲಿ ಚಿಂತಿಸುತ್ತಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಹಳಬರು ಗೌರವದಿಂದ ಹಿಂದೆ ಸರಿದರೆ ಒಳಿತು ಎಂಬ ಸಂದೇಶವನ್ನು ಯುವ ಮತದಾರರು ಇಂದಿನ ಚುನಾವಣೆ ಮೂಲಕ ರವಾನಿಸಿದ್ದಾರೆ. ನೆರೆ ದೇಶಗಳಲ್ಲೂ ಇದೇ ರೀತಿಯ ಯುವ ಪೀಳಿಗೆಯ ರಾಜಕೀಯ ಸುನಾಮಿ ತಲೆ ಎತ್ತಿದೆ ಎಂಬುದನ್ನು ಗಮನಿಸಬೇಕು. ರಾಜಕೀಯ ನಿಂತ ನೀರಲ್ಲ.

ಸಂಶಯಗಳ ಛೇದನದಿಂದ ಪರಮಾರ್ಥ ದರ್ಶನ

ಪರಮಾತ್ಮನ ದರ್ಶನವೆಂಬ ಸೂರ್ಯೋದಯವಾದಾಗ ಅಜ್ಞಾನವೆಂಬ ಕತ್ತಲೆ ಲಯವಾಗಿ ಹೋಗುತ್ತದೆ. ಜೊತೆಯಲ್ಲಿ ಅನೇಕ ಆಶ್ಚರ್ಯಕಾರಿ ಸಂಗತಿಗಳು ಆಗುತ್ತವೆ. ಅಂತಹ ಸಂಗತಿಗಳಲ್ಲಿ ಬುದ್ಧಿಯಲ್ಲಿರುವ ವಾಸನಾಗ್ರಂಥಿಗಳ ಬಿಡಿಸಿಕೊಳ್ಳುವಿಕೆ ಮತ್ತು ಮನಸ್ಸಿನಲ್ಲಿರುವ ಎಲ್ಲ ಸಂಶಯಗಳ ನಿವಾರಣೆ ಇವೆರಡು ಮುಖ್ಯವಾದವು. ಇವೆರಡು ಸಂಗತಿಗಳನ್ನು ಉಪನಿಷತ್ತು ಉಲ್ಲೇಖ ಮಾಡುತ್ತದೆ. ಜೊತೆಗೆ ಎಲ್ಲ ಕರ್ಮಗಳ ಕ್ಷಯವಾಗುವಿಕೆಯನ್ನೂ ಸೇರಿಸಿ ಹೇಳುತ್ತದೆ. **ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ। ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ॥** (ಮುಂಡಕ.ಉ.: 2.2.8) ಹೃದಯಗ್ರಂಥಿ ಎಂದರೆ ಬುದ್ಧಿಯಲ್ಲಿರುವ ವಾಸನೆಗಳ ಸಮೂಹ ಮತ್ತು ಅದರಿಂದ ಉಂಟಾಗುವ ಆಸೆಗಳು. ವಾಸನಾಜನ್ಯ ಆಸೆಗಳು ಮತ್ತು ಸಂಶಯಗಳು ಲೌಕಿಕರಿಗೆ ಜೀವನಪರ್ಯಂತವೂ ಇರುತ್ತವೆ. ಗಂಗೆಯ ಪ್ರವಾಹ ಸದಾ ಒಂದೇ ರೀತಿಯಾಗಿ ಹರಿಯುತ್ತಿರುವಂತೆ ವಾಸನಾಜನ್ಯ ಆಸೆಗಳು ಮತ್ತು ಸಂಶಯಗಳು ಬದುಕಿರುವವರೆಗೂ ಬರುತ್ತಿರುತ್ತವೆ. ಅಲ್ಲದೆ ಮುಂದೆ ಅನೇಕ ಜನ್ಮಗಳವರೆಗೂ ಇವು ಮುಂದುವರಿಯಬಲ್ಲವು. ಹಿಂದೆ ಅನೇಕ ಜನ್ಮಗಳಿಂದ ನಮ್ಮ ಜೊತೆ ಬಂದಿವೆ. ಇಂತಹ ದೃಢವಾದ ಗಂಟುಗಳು ಪರಮಾತ್ಮ ದರ್ಶನದಿಂದ ಸುಲಲಿತವಾಗಿ ಬಿಡಿಸಿಕೊಳ್ಳುತ್ತವೆ, ಬಿಟ್ಟುಹೋಗುತ್ತವೆ. ಈ ಶ್ಲೋಕದಲ್ಲಿರುವ ಎರಡು ಶಬ್ದಗಳು ತಮ್ಮ ಸಹಜ ಶಕ್ತಿಯಿಂದಲೇ ಸುಲಲಿತವಾಗಿ ಬಿಡಿಸಿಕೊಳ್ಳುವಿಕೆಯನ್ನು ಹೇಳುತ್ತಿವೆ. **ಭಿದ್ಯತೇ, ಛಿದ್ಯಂತೇ** ಈ ಎರಡು ಶಬ್ದಗಳು ಸಂಸ್ಕೃತ ಭಾಷೆಯಲ್ಲಿ 'ಕರ್ಮ-ಕರ್ತೃ'ಗಳನ್ನು ಹೇಳುತ್ತವೆ. ಅಂದರೆ ವಾಕ್ಯದಲ್ಲಿರುವ ಕರ್ಮಗಳನ್ನೇ ಕರ್ತೃವೋ ಎಂಬಂತೆ ಬಿಂಬಿಸಿ ಹೇಳುತ್ತವೆ. ಸುಲಲಿತವಾಗಿ ಕೆಲಸವಾಗುವ ಸಂದರ್ಭದಲ್ಲಿ ಇಂಥ ಶಬ್ದ ಪ್ರಯೋಗವಾಗುತ್ತದೆ. ಉದಾಹರಣೆಗೆ; **ತಂಡುಲಃ ಪಚ್ಯತೇ** (ಅಕ್ಕಿಯೇ ಅಡುಗೆ ಮಾಡುತ್ತದೆ). ಕೆಲವು ಜಾತಿಯ ಅಕ್ಕಿಕಾಳುಗಳು ಸುಲಭವಾಗಿ ಕಡಿಮೆ ವೇಳೆಯಲ್ಲಿ ಬೆಂದು ಅನ್ನವಾಗುತ್ತವೆ. ಮತ್ತೆ ಕೆಲವು ಜಾತಿಯ ಅಕ್ಕಿಕಾಳುಗಳು ಅನ್ನವಾಗಲು ದೀರ್ಘಕಾಲ ತೆಗೆದುಕೊಳ್ಳುತ್ತವೆ, ಮತ್ತು ಅಡುಗೆಯವರಿಗೆ ಹೆಚ್ಚು ಶ್ರಮವನ್ನು ಕೊಡುತ್ತವೆ. ಈ ಉದಾಹರಣೆಯಲ್ಲಿ ಹೇಳಿರುವ ಅಕ್ಕಿಯ ಕಾಳುಗಳು ಸುಲಭವಾಗಿ ಬೆಂದುಹೋಗುತ್ತವೆ. ಇಂತಹ ಅಕ್ಕಿಯನ್ನು ಬೇಯಿಸಲು ನಿಂತವನು ಹೇಳುತ್ತಾನೆ; 'ನನಗೇನೂ ಕಷ್ಟವಿಲ್ಲ, ಅಕ್ಕಿಯೇ ಅಡುಗೆ ಮಾಡುತ್ತದೆ.' ಅಕ್ಕಿಯೇ ಸುಲಭವಾಗಿ ಅಡುಗೆಯಾಗುವಂತೆ ಮಾಡುತ್ತದೆ. ಹಾಗೆಯೇ ಎಲ್ಲ ಗ್ರಂಥಿಗಳು ತಾವಾಗಿಯೇ ಸುಲಲಿತವಾಗಿ ಬಿಡಿಸಿಕೊಳ್ಳುತ್ತವೆ. ಎಲ್ಲ ಸಂಶಯಗಳು ತಾವಾಗಿಯೇ ಸುಲಲಿತವಾಗಿ ಕತ್ತರಿಸಿಹಾಕಲ್ಪಡುತ್ತವೆ. **ಭಿದ್ಯತೇ, ಛಿದ್ಯಂತೇ** ಈ ಶಬ್ದಗಳು ಇದನ್ನೇ ಹೇಳುತ್ತಿವೆ. ಚೆನ್ನಾಗಿ ಒಣಗಿದ ಕಟ್ಟಿಗೆಗೆ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುವಂತೆ, ಪರಮಾತ್ಮದರ್ಶನದಿಂದ ವಾಸನೆಗಳು, ಸಂಶಯಗಳು ಕೆಲವೇ ಕ್ಷಣಗಳಲ್ಲಿ ಸುಲಭವಾಗಿ ನಾಶವಾಗುತ್ತವೆ.

ಗುರುಬೋಧೆ
ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು
ಶ್ರೀ ಸೋಂದಾ ಸ್ವರ್ಣವಲ್ಲೀ ಮಠ

ಗೆದ್ದು ರೇಸ್‌ನಲ್ಲೇ ಉಳಿದ ಮುಂಬೈ

ಐಪಿಎಲ್‌ನಲ್ಲೇ ಎಂಐನ ಗರಿಷ್ಠ ಮೊತ್ತ ಚೇಸ್ । ಲಖನೌಗೆ ಭಾರೀ ಹೊಡೆತ

ಮುಂಬೈ: ಪ್ರತಿಷ್ಠಿತ ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಐಪಿಎಲ್ 2026ರ 47ನೇ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ (ಎಲ್‌ಎಸ್‌ಜಿ) ಎದುರು ಮುಂಬೈ ಇಂಡಿಯನ್ಸ್ 6 ವಿಕೆಟ್‌ಗಳ ಜಯಗಳಿಸುವ ಮೂಲಕ ಪ್ಲೇಆಫ್ ರೇಸ್‌ನಲ್ಲಿ ಉಳಿದುಕೊಂಡಿದೆ. ಲಖನೌ ಸೂಪರ್ ಜೈಂಟ್ಸ್ ಅಬ್ಬರದ ಬ್ಯಾಟಿಂಗ್ ಎದುರು ಮುಂಬೈನ ಆರಂಭಿಕರಾದ ರೋಹಿತ್ ಶರ್ಮಾ (84) ಹಾಗೂ ರ್‍ಯಾನ್ ರಿಕಲ್ಟನ್‌ರ (83) ರನ್ ಜೊತೆಗೆ 143 ರನ್‌ಗಳ ಜೊತೆಯಾಟದಿಂದ ಎಂಐ ಇನ್ನು 8 ಎಸೆತ ಬಾಕಿಯಿರುವಂತೆಯೇ ಜಯ ಸಾಧಿಸಿದೆ. ತಿಲಕ್ ವರ್ಮಾ 11, ಸೂರ್ಯಕುಮಾರ್ 12 ರನ್ ಗಳಿಸಿ ನಿರಾಸೆ ಮೂಡಿಸಿದರೂ, ನಮನ್‌ದೀರ್ 23, ವಿಲ್ ಜಾಕ್ಸ್ 10 ರನ್‌ಗಳಿಸಿ ಜಯ ತಂದಿಟ್ಟರು.

ಪೂರನ್ ಸಿಡಿಲಬ್ಬರದ ಅರ್ಧಶತಕ

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಖನೌ ತಂಡಕ್ಕೆ ಆರಂಭಿಕ ಆಟಗಾರ ಜೋಶ್ ಇಂಗ್ಲಿಸ್ (13) ಬೇಗನೆ ನಿರ್ಗಮಿಸಿದರೂ, ನಿಕೋಲಸ್ ಪೂರನ್ ಮತ್ತು ಮಿಚೆಲ್ ಮಾರ್ಷ್ ಮುಂಬೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಕೇವಲ 17 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಪೂರನ್, ಒಟ್ಟು 21 ಎಸೆತಗಳಲ್ಲಿ 63 ರನ್ (1 ಬೌಂಡರಿ, 8 ಸಿಕ್ಸರ್) ಚಚ್ಚಿದರು. ಇವರಿಗೆ ಸಾಥ್ ನೀಡಿದ ಮಿಚೆಲ್ ಮಾರ್ಷ್ 25 ಎಸೆತಗಳಲ್ಲಿ 44 ರನ್ ಗಳಿಸಿ ತಂಡದ ಮೊತ್ತವನ್ನು ಹತ್ತನೇ ಓವರ್ ವೇಳೆಗೆ 140ರ ಗಡಿ ದಾಟಿಸಿದರು.

ನಾಯಕ ರಿಷಭ್ ಪಂತ್ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಒಂದು ಹಂತದಲ್ಲಿ ಲಖನೌ ತಂಡವು 250 ರನ್ ದಾಟುವ ಮುನ್ಸೂಚನೆ ನೀಡಿತ್ತು. ಆದರೆ ಕಾರ್ಬಿನ್ ಬಾಷ್ ಒಂದೇ ಓವರ್‌ನಲ್ಲಿ ಪೂರನ್ ಮತ್ತು ಮಾರ್ಷ್ ಅವರನ್ನು ಔಟ್ ಮಾಡುವ ಮೂಲಕ ಮುಂಬೈಗೆ ಆಸರೆಯಾದರು. ಅಂತಿಮ ಹಂತದಲ್ಲಿ ಏಡೆನ್ ಮಾರ್ಕ್ರಾಮ್ (31*) ಮತ್ತು ಹಿಮ್ಮತ್ ಸಿಂಗ್ (40*) ಆರನೇ ವಿಕೆಟ್‌ಗೆ ಅಜೇಯ 68 ರನ್‌ಗಳ ಕಾಣಿಕೆ ನೀಡಿ ತಂಡದ ಮೊತ್ತವನ್ನು 220ರ ಗಡಿ ದಾಟಿಸಿದರು.

ಬುಮ್ರಾ ತಮ್ಮ ನಾಲ್ಕು ಓವರ್‌ಗಳಲ್ಲಿ 45 ರನ್ ಬಿಟ್ಟುಕೊಟ್ಟು ಯಾವುದೇ ವಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ. ಕೊನೆಯ ಮೂರು ಓವರ್‌ಗಳಲ್ಲಿ ಮುಂಬೈ ಬೌಲರ್‌ಗಳು ಕೇವಲ 22 ರನ್ ನೀಡುವ ಮೂಲಕ ಲಕ್ನೋ ತಂಡವನ್ನು 228ಕ್ಕೆ ನಿಯಂತ್ರಿಸುವಲ್ಲಿ ಯಶಸ್ವಿಯಾದರು.

ಸ್ಕೋರ್: ಎಲ್‌ಎಸ್‌ಜಿ 228/5. ಎಂಐ 229/4.

ಐಪಿಎಲ್ 2026

ನಂ	ತಂಡ	ಪಂದ್ಯ	ಜಯ	ಸೋಲು	ಅಂಕ
01	ಪಂಜಾಬ್	09	06	02	13
02	ಆರ್‌ಸಿಬಿ	09	06	03	12
03	ಹೈದ್ರಾಬಾದ್	10	06	04	12
04	ರಾಜಸ್ಥಾನ	10	06	04	12
05	ಗುಜರಾತ್	10	06	04	12
06	ಚೆನ್ನೈ	09	04	05	08
07	ಡೆಲ್ಲಿ	09	04	05	08
08	ಕೆಕೆಆರ್	09	03	05	07
09	ಮುಂಬೈ	10	03	07	06
10	ಲಖನೌ	09	02	07	04

ಬಿಎಫ್‌ಸಿ – ಒಡಿಶಾ ಪಂದ್ಯ ಡ್ರಾನಲ್ಲಿ ಅಂತ್ಯ

ಬೆಂಗಳೂರು: ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಆತಿಥೇಯ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಮತ್ತು ಒಡಿಶಾ ಎಫ್‌ಸಿ 1–1 ಗೋಲುಗಳ ಅಂತರದಿಂದ ಸಮಬಲ ಸಾಧಿಸಿದವು. ಪಂದ್ಯದ ಆರಂಭದಿಂದಲೂ ಚೆಂಡಿನ ಮೇಲೆ ಶೇ. 80ರಷ್ಟು ಹಿಡಿತ ಸಾಧಿಸಿದ್ದ ಬೆಂಗಳೂರು ತಂಡಕ್ಕೆ, 34ನೇ ನಿಮಿಷದಲ್ಲಿ ಒಡಿಶಾದ ರಹೀಮ್ ಅಲಿ ಗೋಲು ಬಾರಿಸುವ ಮೂಲಕ ಆಘಾತ ನೀಡಿದರು. ದ್ವಿತೀಯಾರ್ಧದಲ್ಲಿ ಸುನಿಲ್ ಚೆಟ್ರಿ ಬದಲಿಗೆ ಕಣಕ್ಕಿಳಿದ ಸೋಹಮ್ ವರ್ಷ್ಣೇಯ ತಂದ ಚುರುಕಿನಿಂದ ಬಿಎಫ್‌ಸಿಗೆ ಪೆನಾಲ್ಟಿ ಅವಕಾಶ ಲಭಿಸಿತು. ಇದನ್ನು ಬ್ರಯಾನ್ ಸ್ಯಾಂಚೆಜ್ ಗೋಲಾಗಿ ಪರಿವರ್ತಿಸಿ ಸ್ಕೋರ್ ಸಮಬಲಗೊಳಿಸಿದರು.

ಪ್ಲೇಆಫ್ ಹಾದಿಯಲ್ಲಿರಲು ಡೆಲ್ಲಿ, ಚೆನ್ನೈ ಹೋರಾಟ!

ನವದೆಹಲಿ: ಐಪಿಎಲ್ 2026ರ 48ನೇ ಪಂದ್ಯದಲ್ಲಿ ಇಂದು ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗುತ್ತಿವೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಹಣಾಹಣಿ ಉಭಯ ತಂಡಗಳಿಗೂ ಪ್ಲೇ ಆಫ್ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾಗಿದೆ. ಪ್ರಸ್ತುತ ಅಂಕಪಟ್ಟಿಯಲ್ಲಿ ಎರಡೂ ತಂಡಗಳು ತಲಾ 9 ಪಂದ್ಯಗಳಲ್ಲಿ 4 ಜಯ ಮತ್ತು 5 ಸೋಲುಗಳೊಂದಿಗೆ 8 ಅಂಕಗಳನ್ನು ಹೊಂದಿವೆ. ಡೆಲ್ಲಿ ಕ್ಯಾಪಿಟಲ್ಸ್ ಕಳೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ 226 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿ ಭರ್ಜರಿ ಜಯ ದಾಖಲಿಸಿದ ಆತ್ಮವಿಶ್ವಾಸದಲ್ಲಿದೆ. ಕೆ.ಎಲ್. ರಾಹುಲ್ ಮತ್ತು ಪಥುಮ್ ನಿಸ್ಸಾಂಕ ಅವರ ಸ್ಫೋಟಕ ಬ್ಯಾಟಿಂಗ್ ಡೆಲ್ಲಿಗೆ ಆನೆಯ ಬಲ ನೀಡಿದೆ.

ಮತ್ತೊಂದೆಡೆ, ಚೆನ್ನೈ ಸೂಪರ್ ಕಿಂಗ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ ಎಂಟು ವಿಕೆಟ್‌ಗಳ ಜಯ ಗಳಿಸಿ ಲಯಕ್ಕೆ ಮರಳಿದೆ. ನಾಯಕ ರುತುರಾಜ್ ಗಾಯಕ್ವಾಡ್ ಸತತ ಎರಡು ಅರ್ಧಶತಕ ಸಿಡಿಸಿ ಫಾರ್ಮ್‌ಗೆ ಬಂದಿರುವುದು ತಂಡಕ್ಕೆ ನೆಮ್ಮದಿ ತಂದಿದೆ. ಆದರೆ, ಸ್ಟಾರ್ ಆಟಗಾರ ಎಂ.ಎಸ್. ಧೋನಿ ಫಿಟ್ನೆಸ್ ಸಮಸ್ಯೆಯಿಂದಾಗಿ ಇಂದಿನ ಪಂದ್ಯದಿಂದ ಹೊರಗುಳಿಯುವ ಸಾಧ್ಯತೆಯಿದೆ ಎಂಬ ಸುದ್ದಿ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದೆ.

ಪಂದ್ಯದಾರಂಭ: ರಾ. 7.30ಕ್ಕೆ

'ಗರ್ಲ್‌ಫ್ರೆಂಡ್ ಸಂಸ್ಕೃತಿ'ಗೆ ಬಿಸಿಸಿಐನಿಂದ ಬ್ರೇಕ್?

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್‌ನಲ್ಲಿ ಶಿಸ್ತು ಮತ್ತು ವೃತ್ತಿಪರತೆಯನ್ನು ಕಾಪಾಡಿಕೊಳ್ಳಲು ಬಿಸಿಸಿಐ ಈಗ 'ಗರ್ಲ್‌ಫ್ರೆಂಡ್ ಸಂಸ್ಕೃತಿ'ಗೆ ಕಡಿವಾಣ ಹಾಕಲು ಮುಂದಾಗಿದೆ. ಆಟಗಾರರ ಗಮನ ಬೇರೆಡೆಗೆ ಸೆಳೆಯುವುದನ್ನು ತಪ್ಪಿಸಲು ಮತ್ತು ತಂಡದ ಆಂತರಿಕ ಮಾಹಿತಿಗಳು ಸೋರಿಕೆಯಾಗದಂತೆ ತಡೆಯಲು ಈ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ.

ವರದಿಗಳ ಪ್ರಕಾರ, ಆಟಗಾರರ ಸಂಗಾತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವುದರಿಂದ ತಂಡದ ತಂತ್ರಗಳು ಬಹಿರಂಗವಾಗುವ ಭೀತಿ ಎದುರಾಗಿದೆ. ಅಲ್ಲದೆ, ಕೆಲವು ಸಂಗಾತಿಗಳು ಬೆಟ್ಟಿಂಗ್ ಮತ್ತು ಜೂಜಿನ ಆಪ್‌ಗಳನ್ನು ಪ್ರಚಾರ ಮಾಡುತ್ತಿರುವುದು ಆಂಟಿ ಕರಪ್ಷನ್ ಯೂನಿಟ್ ಗಮನಕ್ಕೆ ಬಂದಿದೆ. ಪ್ರಸ್ತುತ ನಿಯಮದಂತೆ ಪತ್ನಿಯರು ಮತ್ತು ಕುಟುಂಬದವರಿಗೆ ಮಾತ್ರ ತಂಡದ ಜೊತೆ ಇರಲು ಅವಕಾಶವಿದ್ದು, ಗೆಳತಿಯರಿಗೆ ಅಧಿಕೃತವಾಗಿ ಇಂತಹ ಯಾವುದೇ ಅವಕಾಶಗಳಿಲ್ಲ. ಮುಂದಿನ ಸೀಸನ್‌ನಿಂದ ಗೆಳತಿಯರು ಹೋಟೆಲ್‌ನಲ್ಲಿ ಉಳಿಯುವುದನ್ನು ನಿರ್ಬಂಧಿಸಬಹುದಾದ ನಿಯಮ ಜಾರಿಗೆ ತರಲು ಬಿಸಿಸಿಐ ಚಿಂತಿಸುತ್ತಿದೆ.

ಇಂಗ್ಲೆಂಡ್‌ಗೆ ಮರಳಿದ ಸಾಲ್ಟ್ ಆರ್‌ಸಿಬಿಗೆ ಭಾರಿ ಹಿನ್ನಡೆ

ಬೆಂಗಳೂರು: ಐಪಿಎಲ್ 2026ರ ಆವೃತ್ತಿಯಲ್ಲಿ ಭರ್ಜರಿ ಫಾರ್ಮ್‌ನಲ್ಲಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆರಂಭಿಕ ಆಟಗಾರ ಫಿಲ್ ಸಾಲ್ಟ್ ಗಾಯದ ಸಮಸ್ಯೆಯಿಂದಾಗಿ ತವರಿಗೆ ಮರಳಿದ್ದಾರೆ. ದೆಹಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗ ಅವರ ಎಡಗೈ ಬೆರಳಿಗೆ ತೀವ್ರ ಪೆಟ್ಟಾಗಿತ್ತು. ವೈದ್ಯಕೀಯ ತಪಾಸಣೆ ಮತ್ತು ಸ್ಕ್ಯಾನಿಂಗ್‌ಗಾಗಿ ಅವರು ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದ್ದು, ಸದ್ಯ ಇಂಗ್ಲೆಂಡ್ ಕ್ರಿಕೆಟ್ ಮಂಡಳಿಯ ವೈದ್ಯಕೀಯ ತಂಡದ ಉಸ್ತುವಾರಿಯಲ್ಲಿದ್ದಾರೆ. ಟೂರ್ನಿಯ ಪ್ರಮುಖ ಘಟ್ಟದಲ್ಲಿರುವ ಆರ್‌ಸಿಬಿಗೆ ಸಾಲ್ಟ್ ಅಲಭ್ಯತೆ ದೊಡ್ಡ ಹೊಡೆತ ನೀಡಿದೆ. ಆದಾಗ್ಯೂ, ಮೇ ಅಂತ್ಯದ ವೇಳೆಗೆ ಅವರು ಚೇತರಿಸಿಕೊಂಡು ಮತ್ತೆ ತಂಡವನ್ನು ಸೇರಿಕೊಳ್ಳುವ ವಿಶ್ವಾಸವನ್ನು ವ್ಯಕ್ತಪಡಿಸಿದೆ. ಅಲ್ಲಿಯವರೆಗೆ ಜೇಕಬ್ ಬೆಥೆಲ್ ಆರಂಭಿಕರಾಗಿ ಮುಂದುವರಿಯಲಿದ್ದಾರೆ.

ಯಾನಿಕ್ ಸಿನ್ನರ್ ಮುಡಿಗೇರಿದ ಮ್ಯಾಡ್ರಿಡ್ ಓಪನ್ ಟೆನಿಸ್ ಗರಿ

ಮ್ಯಾಡ್ರಿಡ್: ಅಗ್ರ ಸೀಡ್ ಇಟಲಿಯ ಯಾನಿಕ್ ಸಿನ್ನರ್ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಬಾಚಿಕೊಳ್ಳುವುದರೊಂದಿಗೆ ಹೊಸ ದಾಖಲೆಯೊಂದನ್ನು ಬರೆದಿದ್ದಾರೆ.

ಭಾನುವಾರ ನಡೆದ ಅಂತಿಮ ಪಂದ್ಯದಲ್ಲಿ ಯಾನಿಕ್ ಸಿನ್ನರ್ 2ನೇ ಕ್ರಮಾಂಕ ಹೊಂದಿದ್ದ ಜರ್ಮನ್ ಆಟಗಾರ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಎರಡು ನೇರ ಸೆಟ್‌ಗಳಲ್ಲಿ 6–1, 6–2 ಅಂತರದಿಂದ ಹಣಿದು ಮೊಟ್ಟ ಮೊದಲ ಬಾರಿಗೆ ಮ್ಯಾಡ್ರಿಡ್ ಓಪನ್ ಪ್ರಶಸ್ತಿ ಗಿಟ್ಟಿಸಿಕೊಂಡರಲ್ಲದೇ, ಟೆನಿಸ್‌ನ 'ಬಿಗ್ ತ್ರೀ'ಗಳಾದ ರೋಜರ್ ಫೆಡರರ್, ರಫೇಲ್ ನಡಾಲ್ ಹಾಗೂ ನೋವಾಕ್ ಜೊಕೊವಿಚ್ ಅವರಿಗೂ ಸಾಧ್ಯವಾಗದ ದಾಖಲೆಯೊಂದನ್ನು ಬರೆದರು. ಮ್ಯಾಡ್ರಿಡ್ ಗೆಲುವಿನೊಂದಿಗೆ ಸತತ ಐದು ಮಾಸ್ಟರ್ಸ್–1000 ಪ್ರಶಸ್ತಿ ಜಯಿಸಿದ ಮೊಟ್ಟ ಮೊದಲ ಆಟಗಾರನೆಂಬ ಗೌರವಕ್ಕೆ ಅವರು ಪಾತ್ರರಾದರು.

ಇದಕ್ಕೂ ಮೊದಲು ಆರ್ಥರ್ ಫಿಲ್ಸ್ ಎದುರಿನ ಸೆಮಿಫೈನಲ್ ಪಂದ್ಯ ಗೆದ್ದಾಗಲೇ ಎಲ್ಲ ಒಂಭತ್ತೂ ಎಟಿಪಿ ಮಾಸ್ಟರ್ಸ್–1000 ಟೂರ್ನಿಯ ಫೈನಲ್ ಪ್ರವೇಶಿಸಿದ ಕೇವಲ ನಾಲ್ಕನೇ ಹಾಗೂ ಅತ್ಯಂತ ಕಿರಿಯ ಆಟಗಾರನೆಂಬ ಹೆಗ್ಗಳಿಕೆಗೂ ಸಿನ್ನರ್ ಪಾತ್ರರಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದ್ದು, ಅಭಿಮಾನಿಗಳು ಸಂಭ್ರಮಿಸಿದ್ದಾರೆ.

ಸಂಯುಕ್ತ ಬಂಧ 5948



ಉತ್ತರ: 5947

ಎಡದಿಂದ ಬಲಕ್ಕೆ: 1.ಪ್ರವಾಸ 3.ಛದನ 5.ಮಾನಸಪುತ್ರ 7.ಸಾಧ್ಯತೆ 8.ತಿರುಕ 10.ಸನಿಹ 13.ರಾವಣ 15.ಹಳೆನೆನಪು 17.ಚಪ್ಪರ 18.ರಕ್ಕಸ

ಮೇಲಿನಿಂದ ಕೆಳಕ್ಕೆ: 1.ಪ್ರತಿ 2.ಸಮಾನತೆ 3.ಛತ್ರಪತಿ 4.ನಗ 6.ಸತ್ತಂಗ 7.ಸಾರಸ 9.ಕರಣ 11.ಹರಿಹರ 12.ಕಲ್ಪನೆ 12.ರಾಮಾಪುರ 13.ರಾಮಾಪುರ 14.ಪಂಚ 16.ವ್ಯಾಸ

ಎಡದಿಂದ ಬಲಕ್ಕೆ

1 ಪರಿಣಾಮಕಾರಿ ವರ್ಚಸ್ಸು ಹೊಂದಿದವನು 3
3 ಜರೂರಾಗಿ ತಂದ ಹಣ್ಣು ಅತ್ತಿ ಅಲ್ಲ 3
5 ಸಂನ್ಯಾಸಿಗಳ ಹುಟ್ಟುಹಬ್ಬದ ಪರ್ಯಾಯ ಪದ 3
6 ನಮ್ಮ ರಾಷ್ಟ್ರವಂತೂ ಅಲ್ಲ 4
8 ಮರ ಕಡಿಯಲು ತಂದ ನವರತ್ನ ಮಣಿ 4
12 ಅಸುರರಿಂದ ಕೂಡಿದ ಪ್ರಪಂಚ 5
15 ಕರದಲ್ಲಿ ಹಿಡಿದು ಗುಡಿಗೆ ತಂದ ಭರಣಿ 4
18 ದಮಯಂತಿಯ ಗಂಡ ಮಾಡಿದ ಅಡುಗೆ 4
20 ವಂಗದೇಶದಿ ಬೆಳೆದ ಮಸಾಲೆ ಪದಾರ್ಥ 3
21 ತೆರೆ ಎಳೆದು ಮುಕ್ತಗೊಳಿಸಿದ ಬಗೆ 3
22 ದಾಟಲಾಗದಷ್ಟು ಕಷ್ಟವಾದುದು 3

ಮೇಲಿನಿಂದ ಕೆಳಕ್ಕೆ

1 ಸಂಚಾರ ಮಾಡುವ ಸಮಯದಲ್ಲಿ ಹಬ್ಬಿಸಿದ್ದು 3
2 ಶವದ ಆತ್ಮ ಬೇರೆಯ ಅಧೀನಕ್ಕೆ ಹೋಗಿದೆ 3
3 ಅಂತಿಂಥ ಮುಕ್ತಾಯವಲ್ಲ, ಇದೇ ಕೊನೆ 3
4 ಪಾರಸಿ ದೇಶದವನಾದ ಈತ ವಿಲಾಸಿ 3
6 ಪಟ್ಟಕ್ಕೇರಲು ರಾಜಕಾರಣಿ ಹಾಕಿದ ವರಸೆ 2
7 ಭಗವಂತನನ್ನು ಪ್ರತಿಷ್ಠಾಪಿಸಿರುವ ಮಂದಿರ 5
9 ಕಳವಳಗೊಳ್ಳದೆ ಕತ್ತರಿಸಿದ ರುಚಿಕರ ಊಟ 5
10 ತಿತ್ತಿಯಲ್ಲಿರಿಸಿ ತಂದ ಮೊಟ್ಟೆ 2
11 ಸತಿಗಾಗಿ ನಿರ್ಮಿಸಿಕೊಟ್ಟ ಮನೆ 3
13 ಮಂಕರಿ ಹೊತ್ತು ಬಂದವನು ದಡ್ಡ 2
14 ರಾವಣ ಆಳಿದ ದ್ವೀಪ 2
16 ಪಾರಮ್ಯವಾದ ಸೌಂದರ್ಯ ತೆರೆದಿದೆ 3
17 ನಮಗೆ ದೊರೆತ ಹಲವು ಬಗೆಯ ಜಯ 3
18 ನಗಲಾರದ ರೋಖ ಹಣ 3
19 ಏನೂ ಅರಿಯದಾತ ಪಂಡಿತನ ಜತೆಗಾರ 3

ದಿನ ವಿಶೇಷ

ಮಂಗಳವಾರ: 05.05.2026

- **ಶ್ರೀ ಶಾಲಿವಾಹನ ಶಕೆ 1948**
- **ಸೌರಮಾಸ: ಮೀನ, ದಿನ: 21**
- **ಮು. ಮಾಸ: ಶವ್ವಾಲ್, ದಿನ: 18**

ಪರಾಭವ ಸಂವತ್ಸರ, ಉತ್ತರಾಯಣ, **ಋತು:** ವಸಂತ, **ಮಾಸ:** ವೈಶಾಖ, **ಪಕ್ಷ:** ಕೃಷ್ಣ, **ತಿಥಿ:** ಚತುರ್ಥಿ (60.00), **ನಿತ್ಯನಕ್ಷತ್ರ:** ಜ್ಯೇಷ್ಠಾ (12.52), **ಯೋಗ:** ಶಿವ (24.16), **ಕರಣ:** ಬವ (18.38)
ಮಾಸ ನಿಯಾಮಕ: ಕಮಲಾಲಯ ಮಧುಸೂದನ
ಸೂರ್ಯೋದಯ: 06.00 (**ನಾಳೆ:** 06.00)
ಸೂರ್ಯಾಸ್ತ: 06.48 (**ನಾಳೆ:** 06.48)
ಮಳೆನಕ್ಷತ್ರ: ಭರಣೀ ಮೂರನೆಯ ಪಾದ.
ಸಂಕಷ್ಟಹರ ಚತುರ್ಥಿ (ಚಂ.ಉ.: ರಾ. 10.07). ಪಟ್ಟಣಕೊಡೋಲಿ ತಾ. ಬೀರದೇವ ಜಯಂತಿ. ಶಿರೂರು ಮಠದ ಶ್ರೀ ಲಕ್ಷ್ಮೀಕಾಂತ ತೀರ್ಥರ ಆರಾಧನೆ. ಕೋಡಿಮಠ ಶ್ರೀ ಶಿವಲಿಂಗಜ್ಜಯ್ಯ ಪುಣ್ಯಸ್ಮರಣೆ. ನರಗುಂದ ತಾ. ಬೆನಕೊಪ್ಪ ಚೌಡೇಶ್ವರಿ ದೇವಿ ಜಾತ್ರೆ. ಕೊತಬಾಳ ರೋಣ ಶ್ರೀ ಗುರು ಅಡವಿ ಸಿದ್ಧೇಶ್ವರ ಜಾತ್ರೆ. ಹಿರಿಯಡ್ಕ ಶ್ರೀ ವೀರಭದ್ರ ಉತ್ಸವ. ಸಿಕ್ಖರ ಮೂರನೇ ಗುರು ಅಮರ ದಾಸ್, ಸ್ವಾತಂತ್ರ್ಯ ಹೋರಾಟಗಾರ ತ್ರಿಲೋಕಿನಾಥ ಚಕ್ರವರ್ತಿ, ಲಿಪಿ ಸಂಶೋಧಕ ರಘುನಾಥ್ ಮುರ್ಮು ಜನ್ಮದಿನ. ಹಿಂದೂಸ್ತಾನಿ ಸಂಗೀತಗಾರ ರಾಮಕೃಷ್ಣಬುವಾ ವಝೆ ಪುಣ್ಯದಿನ. ಅಂತಾರಾಷ್ಟ್ರೀಯ ಶುಶ್ರೂಷಕಿಯರ ದಿನ.

ಜಮೈಕಾಗೆ ಸ್ಕೋರ್‌ಬೋರ್ಡ್ ನೀಡಿ ಸ್ನೇಹ ಮೆರೆದ ಜೈಶಂಕರ್

ಕಿಂಗ್‌ಸ್ಟನ್: ಭಾರತ ಮತ್ತು ಜಮೈಕಾ ನಡುವಿನ ಕ್ರಿಕೆಟ್ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ, ಭಾರತ ಸರ್ಕಾರವು ಜಮೈಕಾದ ಐತಿಹಾಸಿಕ ಸಬೀನಾ ಪಾರ್ಕ್ ಕ್ರೀಡಾಂಗಣಕ್ಕೆ ಆಧುನಿಕ ಎಲೆಕ್ಟ್ರಾನಿಕ್ ಸ್ಕೋರ್‌ಬೋರ್ಡ್ ಅನ್ನು ಉಡುಗೊರೆಯಾಗಿ ನೀಡಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಜಮೈಕಾ ಪ್ರಧಾನಿ ಆಂಡ್ರ್ಯೂ ಹೋಲ್ನೆಸ್ ಅವರೊಂದಿಗೆ ಈ ಸ್ಕೋರ್‌ಬೋರ್ಡ್ ಅನ್ನು ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಜೈಶಂಕರ್, "ಉಭಯ ದೇಶಗಳ ಸ್ನೇಹ ಪರಸ್ಪರ ಗೌರವದ ಮೇಲೆ ನಿರ್ಮಾಣವಾಗಿದೆ" ಎಂದು ಬಣ್ಣಿಸಿದರು.

ಸ್ಮಾರ್ಟ್ ಕ್ರೀಡಾ ತಂತ್ರಜ್ಞಾನದ ಕೊಹ್ಲಿ ಮೆಟಾಗ್ಲಾಸ್ ಬಿಡುಗಡೆ

ಮುಂಬೈ: ಕ್ರೀಡಾ ಲೋಕದಲ್ಲಿ ತಂತ್ರಜ್ಞಾನದ ಹೊಸ ಕ್ರಾಂತಿ ಆರಂಭವಾಗಿದ್ದು, ಓಕ್ಲಿ ಮತ್ತು ಮೆಟಾ ಸಂಸ್ಥೆಗಳು ಭಾರತದಲ್ಲಿ ಓಕ್ಲಿ ಮೆಟಾ ಪರ್ಫಾರ್ಮೆನ್ಸ್ ಸನ್ ಗ್ಲಾಸ್‌ಗಳನ್ನು ಬಿಡುಗಡೆ ಮಾಡಿವೆ. ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿ ಈ ನೂತನ ಸಾಧನಗಳನ್ನು ಅನಾವರಣಗೊಳಿಸಿದರು. ಈ ಸ್ಮಾರ್ಟ್ ಗ್ಲಾಸ್‌ಗಳು ಕ್ರೀಡಾಪಟುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನೆರವಾಗಲಿದ್ದು, ತರಬೇತಿಯಲ್ಲಿ ಹೊಸ ಆಯಾಮ ನೀಡಲಿವೆ. ಈ ಓಕ್ಲಿ ಮೆಟಾ ಹೆಚ್‌ಎಸ್‌ಟಿಎನ್ ಬೆಲೆ 41,800 ಹಾಗೂ ವ್ಯಾನ್‌ಗಾರ್ಡ್ ಸಂಗ್ರಹದ ಬೆಲೆ 52,300 ರಿಂದ ಆರಂಭವಾಗಲಿದೆ.

ಡಾ. ವೈ.ಎಸ್.ಕೆ. ಆಚಾರ್ಯ
ಜ್ಯೋತಿಷಿಗಳು, ಶ್ರೀ ಕಾಮಾಕ್ಯ ಪ್ರತ್ಯಂಗಿರಾದೇವಿ ಉಪಾಸಕರು
76767 78568

ಇಂದಿನ ಭವಿಷ್ಯ

ರಾಹು ಕಾಲ ಅ. 03ರಿಂದ 04.30
ಗುಳಿಕ ಕಾಲ ಮ. 12ರಿಂದ 01.30
ಯಮಗಂಡ ಕಾಲ ಬೆ. 09ರಿಂದ 10.30
ಶುಭ ಸಂಖ್ಯೆ 2–8–4–1

ಮೇಷ: ವಾಹನ ಬಿಡಿಭಾಗಗಳ ವ್ಯಾಪಾರದಲ್ಲಿ ಲಾಭ. ವೃತ್ತಿಯಲ್ಲಿ ಹೊಸ ಅವಕಾಶ. ದುಡುಕಿನ ನಿರ್ಧಾರ ಬೇಡ.

ವೃಷಭ: ಕೋರ್ಟು ವಿಚಾರಗಳಲ್ಲಿ ಜಯ. ಕ್ರೀಡಾಸಕ್ತರಿಗೆ ಶುಭ. ಲೆಕ್ಕ ಪರಿಶೋಧಕರಿಗೆ ಲಾಭ. ಅಲ್ಪ ಸಂಪಾದನೆ.

ಮಿಥುನ: ಮಧ್ಯವರ್ತಿಗಳಿಂದ ನಷ್ಟ ಸಂಭವ. ಉನ್ನತ ಅಧಿಕಾರಿಗಳ ಸಹಕಾರ. ಪ್ರೀತಿಪಾತ್ರರ ಜತೆ ಮನಸ್ತಾಪ.

ಕರ್ಕ: ವೃತ್ತಿಯಲ್ಲಿ ಕರ್ತವ್ಯಲೋಪ. ಉನ್ನತ ವಿದ್ಯಾಭ್ಯಾಸಕ್ಕೆ ಅಡಚಣೆ. ಉಸಿರಾಟದ ಸಮಸ್ಯೆ. ಅನಗತ್ಯ ಪಯಣ.

ಸಿಂಹ: ವಿಶ್ವಾಸದ್ರೋಹಿಗಳ ಬಗ್ಗೆ ಎಚ್ಚರವಿರಲಿ. ವೃತ್ತಿಯಲ್ಲಿ ಹೊಸ ಅವಕಾಶ. ಹಿರಿಯರ ಮಾರ್ಗದರ್ಶನ ಅಗತ್ಯ.

ಕನ್ಯಾ: ಶ್ರೀಮಂತರ ಸಹಕಾರ. ವ್ಯಾಪಾರದಲ್ಲಿ ಮಾಡಿಕೊಂಡ ಒಪ್ಪಂದದಲ್ಲಿ ಬಿರುಕು. ಗಗನಯಾನಿಗಳಿಗೆ ಶುಭ.

ತುಲಾ: ವೃತ್ತಿಯಲ್ಲಿ ಉನ್ನತ ಪದವಿ. ಕೋರ್ಟ್ ತಕರಾರುಗಳಲ್ಲಿ ಅಪಜಯದ ಸಾಧ್ಯತೆ. ಸ್ವಂತ ಮನೆಯ ಕನಸು ಸಾಕಾರ.

ವೃಶ್ಚಿಕ: ವಿದ್ಯಾಸಂಸ್ಥೆಯವರಿಗೆ ಒತ್ತಡ. ಬಹುಕಾಲದ ಮಿತ್ರರ ಜತೆ ಮನಸ್ತಾಪ. ಹೊಸ ವ್ಯಾಪಾರ ಪ್ರಾರಂಭ.

ಧನು: ಕುಲಗುರುಗಳ ದರ್ಶನ. ವಿದೇಶಿ ವ್ಯಾಪಾರದಲ್ಲಿ ಲಾಭ. ಪತ್ನಿಗೆ ಆರೋಗ್ಯದ ಸಮಸ್ಯೆ ಬರುವ ಸಂಭವ.

ಮಕರ: ಕುಟುಂಬದವರಿಂದ ಒತ್ತಡ. ಕೈಗೆತ್ತಿಕೊಂಡ ಕೆಲಸಗಳು ಅಪೂರ್ಣವಾಗುವ ಸಾಧ್ಯತೆ. ವೇದಾಧ್ಯಯನಕ್ಕೆ ಶುಭ.

ಕುಂಭ: ಉದ್ಯಮಿಗಳಿಗೆ ಲಾಭ. ದಾಯಾದಿಗಳ ಸಹಕಾರ. ಉದರ ಸಂಬಂಧಿಸಿದ ಅನಾರೋಗ್ಯ. ಪೂಜ್ಯರ ಭೇಟಿ.

ಮೀನ: ಸಣ್ಣ ಉದ್ಯೋಗದಾರರಿಗೆ ಲಾಭ. ವೃತ್ತಿಯಲ್ಲಿ ಒತ್ತಡ. ದೇವತಾ ಉಪಾಸನೆಯಿಂದ ಮಾನಸಿಕ ದೃಢತೆ ಲಭ್ಯ.

Editor : Mahabaleshwar V.Bhat, Printed and Published by Ashok Shanbhag on behalf of Loka Shikshana Trust, Printed at Samyukta Karnataka PressC-23, Kapanoor Industrial Area, Kalaburagi and Published at H.No.1-1165-13, Gokul Nivas, Opp: Dr.Arati Sharma Hospital, Ivan-E-Shani, Station Area,Kalaburagi, Phone No. 08472-220848, e-mail:gulbsk2008@gmail.com RNI Regn.No.KARKAN/1999/2674 Executive Editor : Mohan Hegde

ಸಂಪುಟ ವಿಸ್ತರಣೆವರೆಗೆ ಕಾಯುವ ತಾಳ್ಮೆ ಇಲ್ಲ

ಇಂದು ದೆಹಲಿಗೆ ಪ್ರಯಾಣ। ಹೈಕಮಾಂಡ್ ನಿರ್ಧಾರ ಪ್ರಕಟಿಸಬೇಕು: ಬೇಳೂರು

ಸಂ.ಕ.ಸಮಾಚಾರ ಸಾಗರ

ಸಚಿವ ಸ್ಥಾನದ ಬೇಡಿಕೆ ಈಡೇರಿಸಲು ಒತ್ತಾಯಿಸಿ ಮಂಗಳವಾರ 40 ಶಾಸಕರು ದೆಹಲಿಗೆ ಹೋಗುತ್ತಿದ್ದೇವೆ. ಒಂದೋ ಸಚಿವ ಸ್ಥಾನ ಕೊಡಬೇಕು. ಇಲ್ಲ ಹೈಕಮಾಂಡ್ ತನ್ನ ನಿರ್ಧಾರ ಏನೆಂದು ಪ್ರಕಟಿಸಬೇಕು. ಇನ್ನು ಚುನಾವಣೆಗೆ ಎರಡು ವರ್ಷವಿದೆ. ಈಗಲೇ ನಮಗೆ ಸಚಿವ ಸ್ಥಾನ ನೀಡಿದರೆ ಪಕ್ಷ ಸಂಘಟನೆಗೆ ಅನುಕೂಲವಾಗುತ್ತದೆ ಎಂದು ಶಾಸಕ ಹಾಗೂ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ಗೋಪಾಲಕೃಷ್ಣ ಬೇಳೂರು ತಿಳಿಸಿದರು.

ಬೇಸೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈಚೆಗೆ ನಾವು ದೆಹಲಿಗೆ ಹೋಗಿ ನಮ್ಮ ಹಕ್ಕನ್ನು ಪಕ್ಷದ ಪ್ರಮುಖರ ಎದುರು ವ್ಯಕ್ತಪಡಿಸಿ ಬಂದಿದ್ದೇವೆ.

ಐದು ರಾಜ್ಯಗಳ ಚುನಾವಣೆ ಫಲಿತಾಂಶದ ನಂತರ ಬನ್ನಿ ಎಂದು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಮಂಗಳವಾರ ದೆಹಲಿಗೆ ಹೋಗುತ್ತಿದ್ದೇವೆ ಎಂದು ಹೇಳಿದರು.

ಪ್ರತೀ ಬಾರಿಯೂ ಇಂದು–ನಾಳೆ–ಮುಂದೆ... ಹೀಗೆ ಸಮಯ ಹೇಳುತ್ತಾ ಅದಕ್ಕಾಗಿ ಕಾದು ಕುಳಿತು ಸಾಕಾಗಿದೆ, ಇನ್ನು ಕಾಯುವ ಪ್ರಶ್ನೆ ಇಲ್ಲ. ಪಕ್ಷದ ಹಿರಿಯ ನಾಯಕರು ಸಂಪುಟ ವಿಸ್ತರಣೆ ಮಾಡುವ ದಿನಾಂಕವನ್ನು ಕೂಡಲೆ ಘೋಷಣೆ ಮಾಡಬೇಕು. ಇಲ್ಲವೇ ಮಾಡುವುದೇ ಇಲ್ಲ ಎಂದಾದರೂ ಹೇಳಬೇಕು. ಎರಡಲ್ಲಿ ಒಂದು ನಿರ್ಧಾರ ಆಗಲೇಬೇಕು ಅದಕ್ಕಾಗಿ ದೆಹಲಿಗೆ ಹೋಗುತ್ತಿದ್ದೇನೆ ಎಂದರು.

ರಾಜ್ಯದಲ್ಲಿ ಸಂಪುಟ ಪುನರ್ ರಚನೆ ಖಚಿತ. ಮುಖ್ಯಮಂತ್ರಿಗಳ ಬದಲಾವಣೆ ಆಗುತ್ತದೆಯೋ, ಬಿಡುತ್ತದೆಯೋ ಎಂದು ಹೇಳಲು ಆಗುವುದಿಲ್ಲ. ಆದರೆ ಹೈಕಮಾಂಡ್ ಗೊಂದಲ ಆಗದಂತೆ ಸಮಸ್ಯೆ ಬಗೆಹರಿಸಬೇಕು. ಅನಗತ್ಯ ಗೊಂದಲದಿಂದ ಪಕ್ಷಕ್ಕೆ ಡ್ಯಾಮೇಜ್ ಉಂಟಾಗುತ್ತದೆ.

ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ನನಗೆ ಸಚಿವ ಸ್ಥಾನ ಸಿಗುವ ನಿರೀಕ್ಷೆ ಇದೆ. ಈಗಾಗಲೆ ಹೈಕಮಾಂಡ್‌ಗೆ ನಮ್ಮ ಬೇಡಿಕೆಯನ್ನು ತಿಳಿಸಿದ್ದೇವೆ. ಹೈಕಮಾಂಡ್ ಯಾವುದೇ ಖಾತೆ ನೀಡಿದರೂ ಅದನ್ನು ಸಮರ್ಥವಾಗಿ ನಿಭಾಯಿಸುತ್ತೇನೆ ಎಂದು ಹೇಳಿದರು.

ಗದಗ ಮಠದ ಅಂಗಳದಲ್ಲಿ ಅವಘಡ: ಆರು ಜನರ ವಿರುದ್ಧ ಪ್ರಕರಣ ದಾಖಲು

ಗದಗ: ತೋಂಟದಾರ್ಯ ಮಠದ ಜಾತ್ರೆಯಲ್ಲಿ ಡ್ಯಾನ್ಸಿಂಗ್ ಫ್ಲೈ ತೊಟ್ಟಿಲು ತುಂಡಾಗಿ ತೊಟ್ಟಿನಲ್ಲಿ ಆಟವಾಡುತ್ತಿದ್ದ 20 ಕ್ಕೂ ಹೆಚ್ಚು ಜನರಿಗೆ ಗಾಯ ತೀವ್ರ ಗಾಯಗಳಾಗಿರುವ ಘಟನೆಗೆ ಸಂಬಂಧಿಸಿದಂತೆ ಜಾತ್ರಾ ಸಮಿತಿ ಅಧ್ಯಕ್ಷ, ಮಠದ ವ್ಯವಸ್ಥಾಪಕ ಸೇರಿದಂತೆ ಆರು ಜನರ ಮೇಲೆ ಶಹರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತೋಂಟದಾರ್ಯ ಮಠದ ಜಾತ್ರಾ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ,ಮಠದ ವ್ಯವಸ್ಥಾಪಕ ಎಸ್.ಎಸ್.ಅಂಗಡಿ ಸೇರಿದಂತೆ ಮನರಂಜನೆಗಾಗಿ ಜಾಗೆ ಗುತ್ತಿಗೆ ಪಡೆದಿದ್ದ ವ್ಯಕ್ತಿಗಳ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಾತ್ರೆಯಂಗವಾಗಿ ಹಾಕಲಾಗಿದ್ದ ಎಲ್ಲ ಅಂಗಡಿ, ಮುಂಗಟ್ಟುಗಳು, ಮನರಂಜನೆಗಾಗಿ ಅಳವಡಿಸಿದ್ದ ಆಟಿಗೆಗಳನ್ನು ನಿನ್ನೆ ರಾತ್ರಿಯಿಂದಲೇ ಬಂದ್ ಮಾಡಿಸಿದ್ದು ರಥ ಬೀದಿಗಳಲ್ಲಿ ಪೊಲೀಸರು ಸರ್ಪಗಾವಲು ಇದೆ.

ರಾಜ್ಯ ಮುಖ್ಯಮಾಹಿತಿ ಆಯುಕ್ತರಾಗಿ ಜಿ.ಸತ್ಯವತಿ ಪ್ರಮಾಣ ವಚನ ಸ್ವೀಕಾರ

ಬೆಂಗಳೂರು: ಲೋಕಭವನದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ನೂತನವಾಗಿ ನೇಮಕವಾದ ರಾಜ್ಯ ಮುಖ್ಯ ಮಾಹಿತಿ ಆಯುಕ್ತ ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿಗೆ ಪ್ರಮಾಣ ವಚನ ಬೋಧಿಸಿದರು. ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ ಅವರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ ಪಾಟೀಲ್, ಇಂಧನ ಸಚಿವ ಕೆ.ಜೆ ಜಾರ್ಜ್,ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್‌ಉಪಸ್ಥಿತರಿದ್ದರು.

ಡಿಸಿಇಟಿ: ಅರ್ಜಿ ತಿದ್ದುಪಡಿಗೆ ಅವಕಾಶ

ಬೆಂಗಳೂರು: ಲ್ಯಾಟರಲ್ ಎಂಟ್ರಿ ಮೂಲಕ ಎಂಜಿನಿಯರಿಂಗ್ 2ನೇ ವರ್ಷ ಅಥವಾ 3ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಡಿಸಿಇಟಿಗೆ ಅರ್ಜಿ ಸಲ್ಲಿಸಿರುವ ಡಿಪ್ಲೊಮಾ ಅಭ್ಯರ್ಥಿಗಳು, ಮೀಸಲಾತಿ ಸೇರಿದಂತೆ ಸಣ್ಣ ಪುಟ್ಟ ತಪ್ಪುಗಳ ತಿದ್ದುಪಡಿಗೆ ಮೇ 20ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ.

ಅಭ್ಯರ್ಥಿಗಳುಮೇ5ರಿಂದ20ರವರೆಗೆ ಲಾಗಿನ್ ಆಗಿ ತಮ್ಮ ಅರ್ಜಿಯಲ್ಲಿ ಏನಾದರು ಬದಲಾವಣೆ ಅಗತ್ಯ ಇದ್ದರೆ ಮಾಡಿಕೊಳ್ಳಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ರಕ್ಷಣೆ, ಮಾಜಿ ಸೈನಿಕ, ಸಿಆರ್ ಪಿಎಫ್ ಸೇರಿದಂತೆ ಇತರ ವಿಶೇಷ ಕ್ಯಾಟರಿಗಳಲ್ಲಿ ಅರ್ಹತೆ ಇದ್ದು ಕ್ಲೇಮ್ ಮಾಡಿರುವ ಬಗ್ಗೆ ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳಬಹುದು. ಕ್ಲೇಮ್ ಮಾಡಿದ್ದಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸಬಹುದು. ಮೀಸಲಾತಿ ಸಂಬಂಧದ ಆರ್ ಡಿ ಸಂಖ್ಯೆ ನಮೂದಿಸುವುದನ್ನು ಕೂಡ ಖಚಿತಪಡಿಸಿಕೊಳ್ಳಲು ಅವರು ಸಲಹೆ ನೀಡಿದ್ದಾರೆ.

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:02:2026–27, ದಿನಾಂಕ:02–05–2026

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿತ್ರದುರ್ಗ ನಗರದ ಉದ್ಯಾನವನಗಳ ದೈನಂದಿನ ಸ್ವಚ್ಛತೆ ಮಾಡಲು ಹೊರಗುತ್ತಿಗೆ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ಬಗ್ಗೆ ರೂ.25.00 ಲಕ್ಷಗಳು ಅನುಮೋದನೆಯಾಗಿರುವ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಏಜೆನ್ಸಿ/ಸರಬರಾಜುದಾರರಿಗಾಗಿ ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ವಿವರ ಈ ಕೆಳಕಂಡಂತೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಸಭೆಯ ಅಂತರ್‌ಜಾಲ www.chitradurgacity.mrc.gov.in ನಲ್ಲಿ ಸಂಪೂರ್ಣವಾಗಿ ವರ್ಕ್ ಇಂಡೆಂಟ್ ನಂಬರ್, ಟೆಂಡರ್ ಮೀಸಲಾಯಿತಿ ಮತ್ತು ಟೆಂಡರ್ ನೋಟಿಫಿಕೇಷನ್ ಪಡೆಯಬಹುದಾಗಿದೆ. DMA/2026-27/SE7786

ಟೆಂಡರ್ ಪ್ರಕಟಣೆ:–

1) ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿ: 18–05–2026 ರ 5.00 ಗಂಟೆ ಸಂಜೆವರೆಗೆ
2) ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 19–05–2026 ರ 5.30 ಗಂಟೆಗೆ
3) ಟೆಂಡರ್‌ನ್ನು ತೆರೆಯುವ ದಿನಾಂಕ (ಆರ್ಥಿಕ) 20–05–2026 ರ 5.30 ಗಂಟೆಗೆ
4) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ
5) ಇ.ಎಂ.ಡಿ ಮೊತ್ತ KPPP Portal ನಿಯಮಾನುಸಾರ

DIPR/CTA/KSMCA/83/2026-27

ಸಹಿ/–ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ, ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560015.

ಸಂಖ್ಯೆ:ಎ1/ಬಿಯುಡಿ/ಟೆಂಡರ್/ಎಸ್.ಎಫ್/ಸಿಆರ್–05/2026–27 ದಿನಾಂಕ:04.05.2026

ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್, ಕಗ್ಗಲೀಪುರ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮತ್ತು ಆರ್.ಎಸ್.ಪಿ.ಡಿ ಯೋಜನೆಯಡಿ ಸಸಿ ಬೆಳೆಸುವ, ಸಸಿ ನಿರ್ವಹಣೆ, 1ನೇ ವರ್ಷದ ನೆಡುತೋಪು ನಿರ್ವಹಣೆ, 2ನೇ ವರ್ಷದ ನೆಡುತೋಪು ನಿರ್ವಹಣೆ ಮತ್ತು 3ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2026–27ನೇ ಸಾಲಿನಲ್ಲಿ ನೊಂದಾಯಿತರಾಗಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:18.05.2026 ಮಧ್ಯಾಹ್ನ 3.00 ಗಂಟೆಗೆ ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:19.05.2026ರಂದು ಮಧ್ಯಾಹ್ನ 3:10 ಗಂಟೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ ದಿನಾಂಕ:21.05.2026 ಮಧ್ಯಾಹ್ನ 1.00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದನೇ ಬಾರಿ ಇ–ಪೋರ್ಟಲ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ (Auto extention) ಮರು–ಟೆಂಡರ್‌ಗೆ ದಿನಾಂಕ:25.05.2026 ಮಧ್ಯಾಹ್ನ 3:00 ಗಂಟೆಯವರೆಗೂ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಿ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:26.05.2026 ಮಧ್ಯಾಹ್ನ 3:10 ಗಂಟೆಗೆ ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ದಿನಾಂಕ:28.05.2026 ಮಧ್ಯಾಹ್ನ 1:00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ಡಿಐಪಿಆರ್/ಸಿಪಿ/481/ಸಿಸಿಎಲ್/2026–27

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

APEX

ನಂ.1, 'ಉತ್ತುಂಗ', ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.
ದೂರವಾಣಿ: 080–26983700, 26983722, 22976600 ಇ–ಮೇಲ್: recoverycell@karnatakaapex.bank.in

ಹರಾಜು ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್ಸಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರ ಪ್ರಕಾರ ಹರಾಜು ಮಾರಾಟ ಪ್ರಕ್ರಿಯೆ

ಈ ಮೂಲಕ ತಿಳಿಸುವುದೇನೆಂದರೆ, ಬ್ಯಾಂಕ್ ಸರ್ಫೇಸಿ ಕಾಯ್ದೆ, 2002ರ ಸೆಕ್ಷನ್ 13(2)ರ ಅಡಿಯಲ್ಲಿ ಮತ್ತು ಇದಕ್ಕೆ ಅನುಸಾರವಾಗಿ ಕಾಯ್ದೆಯ ಸೆಕ್ಷನ್ 13(4)ರ ಅಡಿಯಲ್ಲಿ ಈ ಕೆಳಕಂಡ ಸಾಲಗಾರರಿಗೆ / ಜಾಮೀನುದಾರರಿಗೆ ನೋಟೀಸ್ ನೀಡಿದ್ದು, **ಅಧಿಕೃತ ಅಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಬೆಂಗಳೂರು – 560018** ಇವರು ಕೆಳಗೆ ವಿವರಿಸಿರುವ ಬ್ಯಾಂಕಿಗೆ ಅಡಮಾನಗೊಂಡ ಸ್ಥಿರಾಸ್ತಿಗಳು ಮತ್ತು ಆಧಾರ ಮಾಡಿರುವ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ಸರ್ಫೇಸಿ ಕಾಯ್ದೆ ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 6(2) ಮತ್ತು 8(6) ಅಡಿಯಲ್ಲಿ ಮಾರಾಟ ಮಾಡಲು ನಿರ್ಧರಿಸಿರುತ್ತಾರೆ.

ಕ್ರ. ಸಂ.	ಸಾಲಗಾರರು / ಜಾಮೀನುದಾರರ ವಿವರ	ಸ್ಥಿರಾಸ್ತಿಯ ವಿವರ	ಮೀಸಲು ಬೆಲೆ ಮತ್ತು ಇಎಂಡಿ ಮೊತ್ತ	ಬ್ಯಾಂಕಿಗೆ ಪಾವತಿಸಬೇಕಾದ ಒಟ್ಟು ಸಾಲದ ಮೊತ್ತ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ ಹಾಗೂ ಹರಾಜಿನ ಸ್ಥಳ
1	**Borrowers:** **1) M/s. Shiv Shakti Sugar Mill (India) Pvt. Ltd.,** **having its Registered Office at:** No. 15-9-27, Mukthiyar Gunj, Hyderabad - 500012 (T.S.), **Factory at:** Bhangoor Village, Bidar Taluk & District - 585227, **Rep. by its Managing Director, Sri Sunil Kumar Agarwal,** **2) Sri Sunil Kumar Agarwal S/o. Late Ramanand Agarwal, Promoter, President & Managing Director of M/s. Shiv Shakti Sugar Mill (India) Pvt. Ltd.,** **3) Smt. Meenu Agarwal W/o. Sri Sunil Kumar Agarwal, Director, M/s. Shiv Shakti Sugar Mill (India) Pvt. Ltd.,** **Both 2 & 3 are residing at:** No.15-9-27, Mukthiyar Gunj, Hyderabad - 500 012, Telangana State. **4) Sri Tanish Agarwal S/o. Sri Sunil Kumar Agarwal, Director, M/s. Shiv Shakti Sugar Mill (India) Pvt. Ltd.,** No. 15-1-564, Siddiambar Bazar, Begum Bazar, Nampalli, Hyderabad, Telangana-500012.	**1) Item No.1:** All that piece and parcel of the land bearing Sy.No.97, measuring 4 Acres, 2 Guntas, situated at Bhangoor Village, Bidar Taluk and District and bounded on **East by :** Land belonging to Md Ismail Sindolkar, **West by :** Land belonging to Sangaramappa and Basavanappa Wali, **North by :** Land belonging to Vaijnath and Gaudappa Mali Patil, **South by :** Land in Sy.No. 99 of Bhangoor, belonging to Papayya Barber. **2) Item No.2:** All that piece and parcel of the land bearing Sy.No.99, measuring 3 Acres, 3 Guntas, situated at Bhangoor Village, Bidar Taluk and District and bounded on **East by :** Bhangoor Tank, **West by :** Land of Basavanappa Wali, **North by :** Land in Sy.No. 97 of Bhangoor belonging to Sri Veershetty, **South by :** Lands of Ramanna Kalbemalgi and Chand Khan & Others. **3) Item No.3:** Hypothecation regarding Plant and Machinery Registered deed of hypothecation regarding plant and machinery dated 01.02.2019, registered on 03.06.2019, as Document No. BDR-4-00022-2019-20 of Book-IV stored in CD No.BDRD 320, before the Senior Sub-registrar, Bidar EXECUTED BY M/s. Shiv Shakti Sugar Mills (India) Pvt. Ltd., in favour of the KSC Apex Bank Ltd.,	**Rs.15,91,00,000/-** (Rupees Fifteen Crore Ninety One Lakh Only) **EMD:** **Rs.1,59,10,000/-** (Rupees One Crore Fifty Nine Lakh Ten Thousand Only) (10% of the Reserve Price)	**Rs.20,35,19,860/-** (Rupees Twenty Crore Thirty Five Lakh Nineteen Thousand Eight Hundred and Sixty Only) **as on 03-05-2026**	**21-05-2026 at 11.30 AM No.1, "UTHUNGA", Pampa Mahakavi Road, Chamarajpet, Bengaluru - 560018**

The Description of the Hypothecated Machinery are narrated hereunder:-

Sl.No.	Machinery Details	Nos.	Use of Machinery
1	Cane Cutter along with 75 H.P. Electrical Motor	1 Set	For cutting of Sugar Cane.
2	Fibroizer, cutter and crusher along with 200 H.P. Electrical Motor	1 Set	For Extra Fine Preparation of Sugar Cane.
3	Cane Milling Section (Tandem) Mill Roller Size 24"x16" with carries motors totally number of rollers 20 along with 2 Nos. of 125 H.P. Motors and 1 No. of 40 H.P. Motor and 4 Nos. of 5 H.P. Motors and reduction gear boxes with inter carrier chain.	5 Nos.	For extraction of Sugar Cane Juice.
4	Sugar Cane Un-loader Crane with unloading platform with cane stock yard along with electrical motors.	1 Set	For Un-loading of sugarcane from lorries, carts and tractors.
5	Sugar Carrier i.e., from Crane to supply upto the mills	2 Set	For carrying sugar cane upto the Mills.
6	Control Electrical Panel Board with required capacity of starters switch gears and O.C.B's.	1 Set	Electrical Power Station for running of cutter, fibrozier and mills.
7	M.S. Tank on MS Foundation	2 Nos.	For water supply to the mills.
8	Sulphur Bhatties	3 Nos.	For passing sulphur dioxide gas in sugar cane for removing impurities from juice.
9	Sulphur Tank	4 Nos.	For filling raw sugar cane juice in these tanks for treatment of Sulphur Dioxide Gas.
10	MS Juice Heaters	3 Nos.	For Boiling of Sulphited juice upto 100^0 c.
11	Scrubbers	4 Nos.	For filtration of sulphur dioxide gas to supply to sulphur tanks.
12	Continuous Juice Clarifier	1	For settling of clear juice and muddy juice will be deposited below the tank.
13	Rotary Drum Vacuum Filtration Plant	1	The Juice will be separated from Mud through vacuum technology.
14	Hot Juice Pan evaporation and boiling Station 12T capacity	3 Nos.	For evaporation of clear and clarified juice.
15	Concentrators	3 Nos.	For further evaporation of juice 80^0 bricks.
16	Crystallizer	80 Nos.	For cooling & developing sugar crystals.
17	Centrifugal Machines	5 Nos.	For separating molasses and sugar in this machine.
18	Molasses Bhatty 5 MT Each	5	For boiling of 3rd grade sugar.
19	Crystallizer Tank	20	For cooling and developing sugar crystals for 3rd grade sugar.
20	Molasses storage tank	40	For storing of Molasses.
21	Sugar grading M/C	3	For grading of sugar into three different qualities i.e., C Type, M Type and S Type.
22	1 No. of 10 Tons 23 kg pressure Boiler along with feed water pumps 4 Nos with electrical motors and chimney of 150 feet in height with panel board with over head MS Shed	1 No	For Steam generation required for captive power generation and for process juice boiling section.
23	Boiler Water Tank	3 Nos.	For storage of water required for boiler.
24	Bagasse Carrier	1	For feeding of Bagasse to Boiler.
25	Pressure reducing Station	1	For reducing steam pressure.
26	DM Water Plant	1	For filtration of water total.
27	Turbine (Electrical Power Generation Station) along with alternator of 640 KW with panel board and all accessories.	1	For Power generation.
28	Juice Storage Tank	1	For storing of sugar cane juice.
29	Mix juice storage tank	1	For storing of sugar cane juice.
30	Weigh bridge 20 MT Dial type avery make	1	For weighment of sugarcane.
31	New Weigh bridge 50 MT scale type	1	For weighment of sugarcane.
32	650 KVA transformer	1	For electrical purposes.
33	315 KVA transformer	1	For electrical purposes.
34	200 KVA transformer	1	For electrical purposes.
35	Diesel generator Set 62.5 KVA	1	For electrical power alternate arrangement in case of breakdown of power.
36	Diesel generator Set 250 KVA	1	For electrical power alternate arrangement in case of breakdown of power.
37	Submersible pumps	4 Nos.	For bore well water drawing.
38	Lathe Machines and Shaper Machines, drilling machines, welding machines.	11 Nos.	For workshop purpose required for repairing and reconditioning of entire plant and machineries.
39	Weighing Scale	2 Nos.	For Sugar Weighment.
40	Compressors & Water Cooling Stations along with pumps motors.	4 Nos.	For water Cooling
41	Magma Pumps and Juice pumps and Concentrators	32 Nos.	For pumping of sugar cane juice, syrup and final masecute of sugar juice.
42	MS Carts	60	For transportation of sugar cane from fields to factory with the help of bullocks.

Place of storage / Installation of the Hypothecated Machinery at factory premises at Bhangoor Village, Bidar Taluk & District - 585227.

ಹರಾಜು ಮಾರಾಟದ ಷರತ್ತು ಮತ್ತು ನಿಬಂಧನೆಗಳು: 1) ಟೆಂಡರ್ ನಮೂನೆಯನ್ನು **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ನಂ.1, 'ಉತ್ತುಂಗ', ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018, (ದೂ. ಸಂ: 080–26983700 / 26983722 / 22976600),** ಇವರಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ, ಕಛೇರಿ ವ್ಯವಹಾರದ ಸಮಯದಲ್ಲಿ ಪಡೆದುಕೊಳ್ಳಬಹುದಾಗಿದೆ. 2) ಹರಾಜು ಬಿಡ್ಡು ಕೂಗಲು ಇಚ್ಚಿಸುವವರು ನಿಗದಿತ ಟೆಂಡರ್ ನಮೂನೆ ಮತ್ತು ಕಾಯ್ದಿರಿಸಿರುವ ಮಾರಾಟದ ಬೆಲೆಯ ಮೊತ್ತದ ಶೇಕಡ 10% ರಷ್ಟು ಮೊತ್ತವನ್ನು ಇ.ಎಂ.ಡಿ ಯಾಗಿ, **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಬೆಂಗಳೂರು** ಇವರಿಗೆ ಸಂದಾಯವಾಗುವಂತೆ, ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ ಪ್ರಕಟಣೆಯ ನಂತರದ ದಿನಗಳಲ್ಲಿ ಖರೀದಿಸಿದ ಡಿಮ್ಯಾಂಡ್ ಡ್ರಾಫ್ಟ್ / ಬ್ಯಾಂಕರ್ಸ್ ಚೆಕ್ / ಪೇ–ಆರ್ಡರ್‌ನ್ನು ಮುಚ್ಚಿದ ಲಕೋಟೆಯಲ್ಲಿ ಬ್ಯಾಂಕಿಗೆ ಸಲ್ಲಿಸಬೇಕಾಗಿರುತ್ತದೆ. 3) ನಿಗದಿತ ನಮೂನೆಯಲ್ಲಿರದ ಟೆಂಡರ್ ಲಕೋಟೆಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್ ಹಾಗೂ ಇ.ಎಂ.ಡಿ ಇರುವ ಲಕೋಟೆಗಳನ್ನು **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಚಾಮರಾಜಪೇಟೆ, ಬೆಂಗಳೂರು** ಇವರಲ್ಲಿ ದಿನಾಂಕ: **20–05–2026 ರಂದು ಸಂಜೆ 5.00 ಗಂಟೆಯೊಳಗೆ** ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಮೊತ್ತ ಸಂದಾಯದ ಬಗ್ಗೆ ದಾಖಲಾತಿ / ವಿವರಗಳನ್ನು ಒಳಗೊಂಡಿರದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. 4) ಕಾಯ್ದಿರಿಸಿದ ಬೆಲೆಯ ಮೊತ್ತಕ್ಕಿಂತ ಕಡಿಮೆ ಮೊತ್ತಕ್ಕೆ ಹರಾಜಿನಲ್ಲಿ ಸ್ಥಿರಾಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. 5) ಹರಾಜು ಯಶಸ್ವಿಯಾಗದ ಬಿಡ್ಡುದಾರರಿಗೆ ಇ.ಎಂ.ಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು. 6) ಹರಾಜು ಮಾರಾಟದ ಷರತ್ತುಗಳನ್ನು ಪೂರೈಸದ ಯಶಸ್ವಿ ಬಿಡ್ಡುದಾರರ ಇ.ಎಂ.ಡಿ ಮೊತ್ತವನ್ನು ಯಾವುದೇ ಪೂರ್ವ ಸೂಚನೆ ಇಲ್ಲದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 7) ಮುಚ್ಚಿದ ಟೆಂಡರ್ ಲಕೋಟೆಗಳನ್ನು ಅಧಿಕೃತ ಅಧಿಕಾರಿಯವರು ಹರಾಜು ಪ್ರಕ್ರಿಯೆಯಲ್ಲಿ ಉಪಸ್ಥಿತರಿರುವ / ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ: **21–05–2026 ರಂದು ಬೆಳಿಗ್ಗೆ 11.30 ಗಂಟೆಗೆ** ತೆರೆಯುತ್ತಾರೆ. 8) ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಇ.ಎಂ.ಡಿ ಸೇರಿದಂತೆ ಮಾರಾಟ ಬೆಲೆಯ ಶೇಕಡ 25% ರಷ್ಟು ಮೊತ್ತವನ್ನು ಹರಾಜು ಮುಗಿದ ತಕ್ಷಣದಲ್ಲೇ ಅದೇ ದಿನ ಡಿಮ್ಯಾಂಡ್ ಡ್ರಾಫ್ಟ್ / ಪೇ–ಆರ್ಡರ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ ರೂಪದಲ್ಲಿ ಠೇವಣಿ ಇರಿಸಬೇಕಾಗುತ್ತದೆ. ಮಾರಾಟ ಸ್ಥಿರೀಕರಣ ದಿನಾಂಕದಿಂದ 15 ದಿನಗಳೊಳಗಾಗಿ ಬಾಕಿ ಮೊತ್ತವನ್ನು ಪಾವತಿಸತಕ್ಕದ್ದು. ಒಂದು ಪಕ್ಷ ಉಳಿಕೆ ಹಣ ಪಾವತಿಸುವಲ್ಲಿ ವಿಫಲನಾದರೆ, ಠೇವಣಿ ಇರಿಸಿದ ಹಣವನ್ನು ಯಾವುದೇ ಪೂರ್ವ ಸೂಚನೆ ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರು ಹರಾಜಿಗೆ ಇರಿಸಲಾಗುವುದು. 9) ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಆಸ್ತಿ ವರ್ಗಾವಣೆಗೆ ಸಂಬಂಧಿ ಕಾನೂನಿನ್ವಯ ಶಾಸನಬದ್ಧ ಬಾಕಿಗಳು / ತೆರಿಗೆಗಳು / ಶುಲ್ಕ / ಆಸ್ತಿ ತೆರಿಗೆ / ಇಬಿ ಶುಲ್ಕ / ನೀರು ಶುಲ್ಕ / ಪ್ರಯಾಣ ವೆಚ್ಚ / ಸ್ಟ್ಯಾಂಪ್ ಶುಲ್ಕ / ನೋಂದಣಿ ಶುಲ್ಕ / ಇತರೆ ಎಲ್ಲವನ್ನೂ ಪಾವತಿಸಬೇಕಾಗುತ್ತದೆ. 10) ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರ್ ಅಥವಾ ಎಲ್ಲಾ ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ, ಹರಾಜು ನಡೆಸುವ ಅಥವಾ ಮುಂದೂಡುವ ಇಲ್ಲವೆ ರದ್ದುಪಡಿಸುವ ಸಂಪೂರ್ಣ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ ಮತ್ತು ಪೂರ್ವ ಸೂಚನೆ ನೀಡದೇ ಕೂಡ ಹರಾಜು ಮಾರಾಟದ ಷರತ್ತುಗಳನ್ನು ತಿದ್ದುಪಡಿ ಅಥವಾ ಬದಲಿಸಬಹುದಾದ ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ. 11) ಮಾರಾಟವೂ ಕೂಡ ಬ್ಯಾಂಕಿನವರ ನಿರ್ಣಯದ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. 12) ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಮಾರಾಟಕ್ಕಿಟ್ಟಿರುವ ಸ್ಥಿರಾಸ್ತಿಯನ್ನು ಖುದ್ದು ಪರಿವೀಕ್ಷಿಸಲು, ಪ್ರಕಟಣೆಯಲ್ಲಿ ಸೂಚಿಸಿರುವ ಸ್ಥಳಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ **ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ** ಭೇಟಿ ನೀಡಲು ಅವಕಾಶ ಕಲ್ಪಿಸಲಾಗಿದೆ. 13) ಹರಾಜು ಮಾರಾಟಕ್ಕಿಟ್ಟಿರುವ ಸ್ಥಿರಾಸ್ತಿ **"ಎಲ್ಲಿ ಏನಿದೆಯೋ ಅದೇ ಸ್ಥಿತಿಯಲ್ಲಿ" ಮತ್ತು "ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ"** ಮಾರಾಟ ಮಾಡಲಾಗುವುದು ಮತ್ತು ಬಿಡ್ಡುದಾರರು ಅದಕ್ಕೆ ಸಂಬಂಧಿಸಿದ ಹಕ್ಕುಪತ್ರ, ಮಾಲೀಕತ್ವ, ಶಾಸನಬದ್ಧ ಅನುಮೋದನೆ, ಋಣಭಾರ ರಹಿತ ಪತ್ರ ಮುಂತಾದವನ್ನು ಬಿಡ್ಡುದಾರರು ತಾವೇ ಖಚಿತಪಡಿಸಿಕೊಳ್ಳಬೇಕಾಗಿರುತ್ತದೆ.

ಬಿಡ್ಡುದಾರರು ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ನಂ.1, 'ಉತ್ತುಂಗ', ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018. ಇದರ ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಿ, ಹರಾಜಿಗಿಟ್ಟಿರುವ ಆಸ್ತಿ ಕುರಿತಾದ ವಿವರಗಳನ್ನು ಖಚಿತಪಡಿಸಿಕೊಳ್ಳಬಹುದು ಹಾಗೂ ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಸ್ಥಿರಾಸ್ತಿಯ ಸ್ಥಳ ಪರಿಶೀಲನೆ ಕೈಗೊಳ್ಳಬಹುದಾಗಿರುತ್ತದೆ. ಸಂಪರ್ಕ ಸಂಖ್ಯೆ: 080–26983700 / 26983722 / 22976600, ಇ–ಮೇಲ್: recoverycell@karnatakaapex.bank.in

ಸ್ಥಳ: ಬೆಂಗಳೂರು
ದಿನಾಂಕ: 04–05–2026

ಸಹಿ/– ಅಧಿಕೃತ ಅಧಿಕಾರಿ
ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

ಟೆಂಡರ್ ಅಧಿಸೂಚನೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

ಸಂಖ್ಯೆ: ಮುಇಂವಿ/ಬಾ/ಪ್ರ(ಕಾ)ವ/ಕಾನಿಇಂ(ಪ್ರಿ)/ಸಕಾನಿಇಂ(ಪ್ರಿ)/26–27/2294–99 ದಿನಾಂಕ: 02.05.2026

ಕವಿಪ್ರನಿನಿಯು ವಿದ್ಯುನ್ಮಾನ ವಿಧಾನದ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3355** ರನ್ವಯ 110ಕೆವಿ ಉಪ–ಕೇಂದ್ರ ಉಕ್ಕಲಿಯ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ ಮಾಡುವುದು.
2. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3356** ರನ್ವಯ 110ಕೆವಿ ಉಪಕೇಂದ್ರ ಹಿರೇಮುರಾಳದ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ ಮಾಡುವುದು.
3. **ಬಿಡ್ ವಿಚಾರಣೆ ಸಂಖ್ಯೆ: ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3357(SC ವರ್ಗಕ್ಕೆ ಮೀಸಲಾಗಿದೆ)** ರನ್ವಯ 110ಕೆವಿ ಉಪಕೇಂದ್ರ ಹೊನವಾಡದ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ.
4. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3363 (ST ವರ್ಗಕ್ಕೆ ಮೀಸಲಾಗಿದೆ)** ರನ್ವಯ 220KV ಎಸ್‌ಆರ್‌ಎಸ್ ಕಾಲೋನಿ ಹುಬ್ಬಳ್ಳಿಯಲ್ಲಿ ಹೊಸದಾಗಿ ನಿರ್ಮಿಸಲಾದ ಹಾಟ್‌ಲೈನ್ ಶೆಡ್ ಕಟ್ಟಡದ ಬಳಿ ಮಳೆನೀರು ಹರಿದುಹೋಗಲು ಚರಂಡಿ ನಿರ್ಮಾಣ.
5. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3367(ST ವರ್ಗಕ್ಕೆ ಮೀಸಲಾಗಿದೆ)**ರನ್ವಯ 110ಕೆವಿ ಉಪ–ಕೇಂದ್ರ ಗೋಪನಕೊಪ್ಪದ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ.
6. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3371(SC ವರ್ಗಕ್ಕೆ ಮೀಸಲಾಗಿದೆ)**ರನ್ವಯ 110ಕೆವಿ ಉಪಕೇಂದ್ರ ಸಂಬಾಪುರದಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು.
7. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3373**ರನ್ವಯ 220ಕೆವಿ ಕಂಟ್ರೋಲ್ ರೂಂ ಗದಗಕ್ಕೆ ಶೌಚಾಲಯ ಮತ್ತು ಅದಕ್ಕೆ ಸಂಬಂಧಿಸಿದ ಇತರೆ ಕಾಮಗಾರಿಗಳು.
8. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3374** ರನ್ವಯ 110ಕೆವಿ ಉಪಕೇಂದ್ರ ಸಿದ್ದಾಪುರದಲ್ಲಿ ಒಳಚರಂಡಿ ಮಾರ್ಗದ ಕಾಮಗಾರಿ.
9. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3375**ರನ್ವಯ 110ಕೆವಿ ಉಪಕೇಂದ್ರ ಗುತ್ತಲದ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ.
10. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್3382** ರನ್ವಯ 110ಕೆವಿ ಆವರಣದ ನೆಹರುನಗರ ಬೆಳಗಾವಿಯಲ್ಲಿ ಸುತ್ತು ಗೋಡೆಯನ್ನು ಎತ್ತರಿಸುವುದು.
11. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2026–27/ಒಡಬ್ಲ್ಯೂ/ವರ್ಕ್_ಇಂಡೆಂಟ್ 3668** ರನ್ವಯ ಎಸ್‌ಆರ್‌ಎಸ್ ಹುಬ್ಬಳ್ಳಿಯಲ್ಲಿ ಹೊಸದಾಗಿ ನಿರ್ಮಿಸಲಾದ ಹಾಟ್‌ಲೈನ್ ಶೆಡ್‌ಗೆ ಹಾಟ್ ಸ್ಟಿಕ್‌ಗಳು, ಸೂಕ್ಷ್ಮ ಉಪಕರಣಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರೆ ಕೆಲಸಗಳಿಗೆ ಸಂಗ್ರಹಿಸುವ ಕಾಮಗಾರಿ.
12. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2026–27/ಒಡಬ್ಲ್ಯೂ/ವರ್ಕ್_ಇಂಡೆಂಟ್ 3671(ಪ್ರವರ್ಗ–II(ಎ) ವರ್ಗಕ್ಕೆ ಮೀಸಲಾಗಿದೆ)**ರನ್ವಯ ವಿಜಯಪುರದ 110ಕೆವಿ ಉಪಕೇಂದ್ರ ಕೆಐಎಡಿಬಿಯ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ.
13. **ಬಿಡ್ ವಿಚಾರಣೆ ಸಂಖ್ಯೆ: ಕೆಪಿಟಿಸಿಎಲ್/2026–27/ಒಡಬ್ಲ್ಯೂ/ವರ್ಕ್_ಇಂಡೆಂಟ್ 3672** ರನ್ವಯ 110ಕೆವಿ ಉಪಕೇಂದ್ರ ಅಥರ್ಗಾದಲ್ಲಿ ಕಾಂಕ್ರೀಟ್ ರಸ್ತೆಯ ನಿರ್ಮಾಣ.
14. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2026–27/ಒಡಬ್ಲ್ಯೂ/ವರ್ಕ್_ಇಂಡೆಂಟ್3673 (ST ವರ್ಗಕ್ಕೆ ಮೀಸಲಾಗಿದೆ)** 110ಕೆವಿ ಉಪಕೇಂದ್ರ ದೇವರಹಿಪ್ಪರಗಿಯ ಜಾಗಕ್ಕೆ ಸುತ್ತು ಗೋಡೆಯ ನಿರ್ಮಾಣ.
15. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2026–27/ಒಡಬ್ಲ್ಯೂ/ವರ್ಕ್_ಇಂಡೆಂಟ್3674** 110KV ಉಪಕೇಂದ್ರ ದೇವರಹಿಪ್ಪರಗಿಯಲ್ಲಿ ಕಾಂಕ್ರೀಟ್ ರಸ್ತೆಯ ನಿರ್ಮಾಣ.
16. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್ 3358(ಪ್ರವರ್ಗ–I ವರ್ಗಕ್ಕೆ ಮೀಸಲಾಗಿದೆ)** 110KV ಉಪಕೇಂದ್ರ ಮುಧೋಳದಲ್ಲಿ ನೋಡಲ್ ಅಧಿಕಾರಿ ಮುಧೋಳರವರ ವಾಸ್ತವ್ಯಕ್ಕಾಗಿ ಕಚೇರಿ ಕೊಠಡಿ ನಿರ್ಮಾಣ.
17. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್3359(ಪ್ರವರ್ಗ–II(ಎ) ವರ್ಗಕ್ಕೆ ಮೀಸಲಾಗಿದೆ)** 110KV ಉಪಕೇಂದ್ರ ಜಮಖಂಡಿಯಲ್ಲಿ ನೋಡಲ್ ಅಧಿಕಾರಿ ಮತ್ತು ಟಿ ಮತ್ತು ಪಿ ಕೊಠಡಿಯ ಕಟ್ಟಡ ಕಚೇರಿ ನಿರ್ಮಾಣ.
18. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್3360** 220KV ರಿಸೀವಿಂಗ್ ಸ್ಟೇಷನ್ ವಜರಮಟ್ಟಿಯ ಆವರಣದ ಕಾಂಪೌಂಡ್ ಗೋಡೆಯ ಸುಧಾರಣೆಗೆ ಟೆಂಡರ್.
19. ಬಿಡ್ ವಿಚಾರಣೆ ಸಂಖ್ಯೆ: **ಕೆಪಿಟಿಸಿಎಲ್/2026–27/ಒಡಬ್ಲ್ಯೂ/ವರ್ಕ್_ಇಂಡೆಂಟ್3380 (ಪ್ರವರ್ಗ–II(ಎ) ವರ್ಗಕ್ಕೆ ಮೀಸಲಾಗಿದೆ)** 110KV ಉಪಕೇಂದ್ರ ರಬಕವಿಯಲ್ಲಿ RCC ಅಪ್ರೋಚ್ ರಸ್ತೆ ನಿರ್ಮಾಣ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ **https//kppp.karnataka.gov.in** ಕುರಿತು ನಲ್ಲಿ ಲಾಗಿನ್ ಆಗಿ ದಿನಾಂಕ: **05.05.2026 ರ ಸಂಜೆ 05:30 ಗಂಟೆಗೆ** ಅಥವಾ ತದನಂತರ ಪಡೆಯಬಹುದು. ಇತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್),
ಪ್ರಸರಣ (ಕಾರ್ಯಾಚರಣೆ) ವಲಯ, ಕವಿಪ್ರನಿನಿ,
ಸೆಕ್ಟರ್ ಸಂಖ್ಯೆ 45ರ ಎದುರು, ನವನಗರ, ಬಾಗಲಕೋಟೆ–587 103.

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ನಗರ ಯೋಜಕರು ರವರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು–560002

ಸಂಖ್ಯೆ: ಮು.ನ.ಯೋ/ಜಿಬಿಎ/ಪಿಆರ್/692/CLU–05/25–26/E–205374 ದಿನಾಂಕ: 04–05–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಸಾರಿಗೆ ಸಂಪರ್ಕ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂ ಉಪಯೋಗ ಮರು ನಿಗದಿಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಮರು ನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಮರು ನಿಗದಿಪಡಿಸುವ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರುರವರ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ. ನಂ.	ವಿಸ್ತೀರ್ಣ (ಎ–ಗುಂ)	ಪರಿಷ್ಕೃತ ಮಹಾಯೋಜನೆ –2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ. ಅಮರ್ ನಾಥ್ .ಸಿ ಬಿನ್ ಚಿನ್ನಪ್ಪ ರೆಡ್ಡಿ .ಎ	ಬೆಂಗಳೂರು ಪೂರ್ವ	ಬಿದರ ಹಳ್ಳಿ	ಕುಂಬೇನ ಅಗ್ರಹಾರ	39/3	01ಎ–20ಗುಂ	ಸಾರಿಗೆ ಮತ್ತು ಸಂಪರ್ಕ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವಿದಿಲ್ಲ ಹಾಗಾಗಿ ಅಭಿವೃದ್ಧಿಪಡಿಸುವ ಆಗತ್ಯವಿರುತ್ತದೆ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ/ ಅಪಾರ್ಟ್‌ಮೆಂಟ್ ಲಭ್ಯವಾಗುತ್ತದೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ಸಾರಿಗೆ ಮತ್ತು ಸಂಪರ್ಕ"** ವಲಯದಿಂದ **"ವಸತಿ"** ಉಪಯೋಗಕ್ಕೆ ಭೂ ಉಪಯೋಗ ಮರು ನಿಗದಿಪಡಿಸಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/2026–27/219 ದಿನಾಂಕ: 02.05.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-2, & 3 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.:(1) ಶಹಾಪೂರ ತಾಲ್ಲೂಕಿನ ಶಿರವಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26515 (SC Bidder Only) (2) ಶಹಾಪೂರ ತಾಲ್ಲೂಕಿನ ಉಕ್ಕಿನಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. & ಶಹಾಪೂರ ತಾಲ್ಲೂಕಿನ ಚಾಮನಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26493 (CAT-II (A) Bidders Only) (3) ಶಹಾಪೂರ ತಾಲ್ಲೂಕಿನ ಗಂಗನಾಳ ಗ್ರಾಮದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ. & ಶಹಾಪೂರ ತಾಲ್ಲೂಕಿನ ದರಿಯಾಪೂರ ಗ್ರಾಮದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ. RDPR/2026-27/RD/WORK_INDENT26521CAT-II (A) Bidders Only) (4)ಶಹಾಪೂರ ತಾಲ್ಲೂಕಿನ ಮದ್ದರಕಿ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. & ಶಹಾಪೂರ ತಾಲ್ಲೂಕಿನ ಹೋಸಕೇರ ಗ್ರಾಮದ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26500 Other (5) ಶಹಾಪೂರ ತಾಲ್ಲೂಕಿನ ನಾಗನಟಗಿ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ಮತ್ತು ಕಂಪೌಂಡಗೋಡೆ ನಿರ್ಮಾಣ. & ಶಹಾಪೂರ ತಾಲ್ಲೂಕಿನ ಹೋತಪೇಠ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26518 Other (6) ಶಹಾಪೂರ ತಾಲ್ಲೂಕಿನ ಗುಂಡಾಪೂರ ಗ್ರಾಮದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ. & ಶಹಾಪೂರ ತಾಲ್ಲೂಕಿನ ಹೊಸಕೇರಾ–ವನದುರ್ಗಾ ರಸ್ತೆಯಿಂದ ಹೊಸಕೇರಾ ಗ್ರಾಮದ ಸಿದ್ದುಗೌಂಡಿ ಮನೆಯವರೆಗೆ ಸಿ.ಸಿ. ರಸ್ತೆ ನಿರ್ಮಾಣ. RDPR/2026-27/RD/WORK_INDENT26522 Other (7) ಶಹಾಪೂರ ತಾಲ್ಲೂಕಿನ ಸಗರ ಗ್ರಾಮದಲ್ಲಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ. RDPR/2026-27/RD/WORK_INDENT26522 Other **2)ಲೆಕ್ಕ ಶೀರ್ಷಿಕೆ:**2025–26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 23.74 ಮತ್ತು ಗರಿಷ್ಠ ರೂ. 100.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 4ನೇ ದರ್ಜೆ ಮತ್ತು 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 06.05.2026 ರಿಂದ 16.05.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 16.05.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್(ಕೆ.ಡಬ್ಲ್ಯು– 3):**18.05.2026 ಬೆಳ್ಳಿಗೆ 9:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್(ಕೆ.ಡಬ್ಲ್ಯು– 2):** 18.05.2026 ಬೆಳ್ಳಿಗೆ 9.00 ನಂತರ **10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್(ಕೆ.ಡಬ್ಲ್ಯು– 3):** 22.05.2026 ಬೆಳ್ಳಿಗೆ 11:00 ನಂತರ **11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. **12) ಅಂತರಜಾಲ ತಾಣದ ವಿಳಾಸ:**https://kppp.karnataka.gov.in

ಸೂಚನೆ :– ಟೆಂಡರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/48/ಕೆ.ಎಸ್.ಎಂ.ಸಿ&ಎ/2026–27

ಈ ವರ್ಷ ಪಿಯು ಕಾಮರ್ಸ್‌ಗೆ ಭಾರೀ ಬೇಡಿಕೆ

ಶೇ.60ರಷ್ಟು ವಿದ್ಯಾರ್ಥಿಗಳು ಸಿಇಬಿಎ, ಎಸ್‌ಇಬಿಎ, ಶೇ.40ರಷ್ಟು ವಿಜ್ಞಾನ, ಕಲಾ ವಿಭಾಗದತ್ತ ಆಸಕ್ತಿ

■ ನರಸಿಂಹಮೂರ್ತಿ ನೀರಕಲ್ಲು

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಈ ಬಾರೀ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ-1ರಲ್ಲಿ ದಾಖಲೆಯ ಫಲಿತಾಂಶ ಬಂದಿದ್ದು, ಪಿಯುಸಿ ಪ್ರವೇಶಕ್ಕಾಗಿ ರಾಜ್ಯದ ಎಲ್ಲ ಕಾಲೇಜುಗಳಲ್ಲಿ ನೂಕು ನುಗ್ಗಲು ಉಂಟಾಗಿದೆ. ಅದರಲ್ಲೂ ಈ ಬಾರಿಯೂ ಸಹ ವಾಣಿಜ್ಯವಿಭಾಗಕ್ಕೆ ಎಲ್ಲಿಲ್ಲದ ಬೇಡಿಕೆ ಬಂದಿದ್ದು ಶೇ. 60 ರಷ್ಟು ವಿದ್ಯಾರ್ಥಿಗಳು ವಾಣಿಜ್ಯ ವಿಭಾಗಕ್ಕೆ ಸೇರಬಯಸಿದ್ದು ಉಳಿದ ಶೇ. 40ರಲ್ಲಿ ವಿಜ್ಞಾನ ಮತ್ತು ಕಲಾವಿಭಾಗಕ್ಕೆ ಸೇರಿಕೊಳ್ಳುತ್ತಿದ್ದಾರೆ.

ರಾಜ್ಯದ ಸರಾಸರಿಗೆ ಹೋಲಿಸಿದರೆ ಕಾಮರ್ಸ್‌ಗೆ ಹೆಚ್ಚಿನ ಬೇಡಿಕೆ ಇದೆ. ವಾಣಿಜ್ಯ ವಿಭಾಗದಲ್ಲಿ ಕಂಪ್ಯೂಟರ್, ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ ಕಾಂಬಿನೇಶನ್ ತೆಗೆದುಕೊಳ್ಳುವುದಕ್ಕೆ ವಿದ್ಯಾರ್ಥಿಗಳು ಕಾತರರಾಗಿದ್ದಾರೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಬರುವುದಕ್ಕೂ ಮುನ್ನವೇ ರಾಜ್ಯದ ಎಲ್ಲೆಡೆ ಪ್ರತಿಷ್ಠಿತ ಕಾಲೇಜುಗಳಲ್ಲಿ ಅಡ್ವಾನ್ಸ್ ಬುಕ್ಕಿಂಗ್ ಮಾಡಿದ್ದಾರೆ. ವಿದ್ಯಾರ್ಥಿಗಳೂ ಸಹ ನಮಗೆ ಕಾಮರ್ಸ್‌ನಲ್ಲಿಯೇ ಆಸಕ್ತಿ ಇದೆ ಎಂದು ಹೇಳುತ್ತಿದ್ದಾರೆ. ಹಾಗಾಗಿ ವಿಜ್ಞಾನ ಮತ್ತು ಕಲಾವಿಭಾಗಕ್ಕೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಯುತ್ತಿದೆ.

ಈಗಾಗಲೇ ಬಹುತೇಕ ಕಾಲೇಜುಗಳಲ್ಲಿ ಕಾಮರ್ಸ್ ವಿಭಾಗಕ್ಕೆ ಅಗತ್ಯ ಸೀಟು ಇಲ್ಲದೇ ಇನ್ನೂ ಹೆಚ್ಚಿನ ಸೀಟು ಬೇಕು ಎಂದು ಪಿಯು ಶಿಕ್ಷಣ ಇಲಾಖೆಗೆ ಮನವಿ ಮಾಡಿಕೊಳ್ಳಲು ಮುಂದಾಗಿದ್ದಾರೆ.



ದಶಕದ ಹಿಂದೆ ಎಸ್‌ಎಸ್‌ಎಲ್‌ಸಿ ಮುಗಿದ ತಕ್ಷಣ ಶೇ. 70ರಷ್ಟು ವಿದ್ಯಾರ್ಥಿಗಳು ಸೈನ್ಸ್‌ಗೆ ಸೇರಿಕೊಳ್ಳುತ್ತಿದ್ದರು. ಮುಂದೆ ಸಾಫ್ಟವೇರ್ ಇಂಜಿನಿಯರ್ ಆಗಿ ಕೈತುಂಬ ಸಂಬಳ ಪಡೆಯುತ್ತಿದ್ದರು. ಈಗ ಅದಕ್ಕೆ ಡಿಮ್ಯಾಂಡ್ ಕಡಿಮೆಯಾಗಿ ವಾಣಿಜ್ಯ ಕೋರ್ಸ್ ಮುಗಿಸಿದರೆ ಮುಂದೆ ಮ್ಯಾನೇಜ್ಮೆಂಟ್(ಎಂಬಿಎ) ಕೋರ್ಸು, ಬ್ಯಾಂಕು, ಲೆಕ್ಕಪತ್ರ ವಿಭಾಗದಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಮುಂದಾಗಿದ್ದರು. ಮ್ಯಾನೇಜ್ಮೆಂಟ್ ಕಲಿತ ವಿದ್ಯಾರ್ಥಿಗಳಿಗೆ ಕಂಪನಿಗಳೂ ಸಹ ಹೆಚ್ಚು ಸಂಬಳ ನೀಡತೊಡಗಿದವು. ದೇಶದ ಬಹುತೇಕ ದೊಡ್ಡ ನಗರಗಳಲ್ಲಿ ದೊಡ್ಡ, ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಎಂಬಿಎ ಕಲಿತ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳತೊಡಗಿದರು. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಕಾಮರ್ಸ್ ಕೋರ್ಸಿಗೆ ಡಿಮ್ಯಾಂಡ್ ಹೆಚ್ಚಾಗತೊಡಗಿದೆ.

■ ಎಸ್ಸೆಸ್ಸೆಲ್ಸಿಯಲ್ಲಿ ಶೇ.95ರಷ್ಟು ಅಂಕ ಪಡೆದವರು ಕೂಡ ಸೈನ್ಸ್ ಬಿಟ್ಟು ಕಾರ್ಮಸ್‌ನತ್ತ ಒಲವು

■ ರಾಜ್ಯದಲ್ಲಿ ಎಂಎನ್‌ಸಿ ಕಂಪನಿಗಳಲ್ಲಿ ಉದ್ಯೋಗ ಹೆಚ್ಚಳ, ಕಾರ್ಮಸ್‌ಗೆ ಡಿಮ್ಯಾಂಡ್

ಕಾಮರ್ಸ್‌ಗೆ ಅಷ್ಟೊಂದು ಸೀಟು ಹೇಗೆ ಕೊಡೋದು?

ಈ ಬಾರಿ ಶೇ 95 ಕ್ಕಿಂತ ಹೆಚ್ಚು ಫಲಿತಾಂಶ ಬಂದವರೂ ಸಹ ಕಾಮರ್ಸ್ ಕೋರ್ಸ್ ಬಯಸುತ್ತಿದ್ದಾರೆ. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಸೀಟು ಕೊಡುವುದು ನಿಯಮ. ಆದರೆ ಈ ಬಾರಿ ಯಾರಿಗೆಂತ ಸೀಟು ಕೊಡುವುದು? ಅಲ್ಲದೇ ಪಿಯುಸಿ ಕಾಮರ್ಸ್ ಸೀಟಿನ ಸಲುವಾಗಿ ದೊಡ್ಡ, ದೊಡ್ಡ ರಾಜಕಾರಣಿಗಳಿಂದ ಕರೆ ಮಾಡಿಸುತ್ತಾರೆ. ಈಗ ಸೈನ್ಸ್‌ಗೆ ಎಡ್ಮಿಷನ್ ಮಾಡಿ ನಂತರ ಬಿಕಾಂಗೆ ಚೇಂಜ್ ಮಾಡಿ ಎಂದು ಹೇಳಿದರೂ ಕೇಳುತ್ತಿಲ್ಲ. ಪ್ರತಿ ಸಲಕ್ಕಿಂತ ಈ ಬಾರಿ ಕಾಮರ್ಸ್‌ಗೆ ಡಿಮ್ಯಾಂಡ್ ಬಂದಿದೆ ಎಂದು ಪ್ರತಿಷ್ಠಿತ ಕಾಲೇಜಿನ ಆಡಳಿತ ಮಂಡಳಿ ಸದಸ್ಯರೊಬ್ಬರು ತಿಳಿಸಿದ್ದಾರೆ.

> ನಾನು ಈ ಬಾರಿ ಶೇ.97 ಅಂಕ ಪಡೆದಿದ್ದೇನೆ. ಮೊದಲಿನಿಂದಲೂ ಕಾಮರ್ಸ್ ಮಾಡಬೇಕು ಎಂದು ನಿರ್ಧರಿಸಿದ್ದೆ. ಕಾಮರ್ಸ್ ಮಾಡಿದರೆ ಮುಂದೆ ಹಲವಾರು ಮಾರ್ಗಗಳು ಇವೆ. ಹಾಗಾಗಿ ನಾನು, ನನ್ನ ಸ್ನೇಹಿತರೆಲ್ಲರೂ ಕಾಮರ್ಸ್ ಆಯ್ಕೆ ಮಾಡಿಕೊಂಡಿದ್ದೇವೆ.
>
> ■ ಅಂಕಿತ್, ವಿದ್ಯಾರ್ಥಿ

ದಾಖಲೆ ಫಲಿತಾಂಶದ ಎಫೆಕ್ಟ್

ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಇತಿಹಾಸದಲ್ಲೇ ದಾಖಲೆ ಸೃಷ್ಟಿಸಿದೆ. ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಪ್ರತಿಸಲಕ್ಕಿಂತ ಈ ಬಾರಿ ಪಿಯು ಕಾಲೇಜುಗಳಲ್ಲಿ ಪ್ರವೇಶಕ್ಕೆ ಸರದಿ ಸಾಲು ಆರಂಭವಾಗಿದೆ. ಎಲ್ಲರೂ ಅದೇ ಕೋರ್ಸು ಕೇಳಿದರೆ ನಮಗೆ ಕೊಡಲು ಸಾಧ್ಯವಿಲ್ಲ. ನೀವು ಸೈನ್ಸ್ ಅಥವಾ ಆರ್ಟ್ಸ್‌ಗೆ ಸೇರಿಕೊಳ್ಳಿ ಎಂದರೆ ವಿದ್ಯಾರ್ಥಿಗಳು, ಪೋಷಕರು ಒಪ್ಪುತ್ತಿಲ್ಲ ಹಾಗಾಗಿ ಕಾಲೇಜಿನವರು ನಮಗೆ ಹೆಚ್ಚಿನ ಸೀಟುಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಬೇಕು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ದುಂಬಾಲು ಬಿದ್ದಿದ್ದಾರೆ.

ಬೆಂಬಲ ಬೆಲೆಗೆ ಸೂರ್ಯಕಾಂತಿ ಖರೀದಿ, ಕೇಂದ್ರ ಅಸ್ತು: ಜೋಶಿ

7,721ರೂ. ಬೆಲೆಯಲ್ಲಿ 9,023 ಟನ್ ಖರೀದಿ ಜೋಶಿ ಮನವಿಗೆ ಒಪ್ಪಿಗೆ ನೀಡಿದ ಶಿವರಾಜ್

ಸಂ.ಕ.ಸಮಾಚಾರ, ನವದೆಹಲಿ

ಬೆಲೆ ಕುಸಿತದಿಂದ ಕಂಗೆಟ್ಟಿದ್ದ ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ನೆರವಿಗೆ ಮುಂದಾದ ಕೇಂದ್ರ ಸರ್ಕಾರ ಇದೀಗ ಬೆಂಬಲ ಬೆಲೆಯಲ್ಲಿ 9,023 ಮೆಟ್ರಿಕ್ ಟನ್ ಸೂರ್ಯಕಾಂತಿ ಖರೀದಿಗೆ ಅಸ್ತು ಎಂದಿದೆ.

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಮನವಿ ಮೇರೆಗೆ ಕೇಂದ್ರ ಸರ್ಕಾರ ಮಹತ್ವದ ನಿರ್ಧಾರ ತೆಗೆದುಕೊಂಡು ರಾಜ್ಯದ ಸೂರ್ಯಕಾಂತಿ ಬೆಳೆಗಾರರ ಬೆನ್ನಿಗೆ ನಿಂತಿದೆ. ಸಚಿವ ಪ್ರಲ್ಹಾದ ಜೋಶಿ ಮಾರ್ಗದರ್ಶನದಂತೆ ಕೇಂದ್ರ ಕೃಷಿ ಸಚಿವಾಲಯ ಇದೀಗ ಕ್ವಿಂಟಲ್‌ಗೆ 7721 ರೂ. ಬೆಂಬಲ ಬೆಲೆ ಯೋಜನೆಯಲ್ಲಿ ಸೂರ್ಯಕಾಂತಿ ಖರೀದಿಗೆ ಅನುಮೋದನೆ ನೀಡಿದೆ.

ಸೂರ್ಯಕಾಂತಿ ಕರ್ನಾಟಕದ ಪ್ರಮುಖ ಎಣ್ಣೆ ಬೀಜಗಳಲ್ಲಿ ಒಂದಾಗಿದ್ದು, 0.59 ಲಕ್ಷ ಹೆಕ್ಟೇರ್‌ನಲ್ಲಿ 0.44 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಹೊಂದಿದೆ. ಆದರೆ, ಪ್ರಸ್ತುತ ಮಾರುಕಟ್ಟೆಯಲ್ಲಿ ಸರ್ಕಾರ ನಿಗದಿಪಡಿಸಿದ 7721 ರೂ. ಕನಿಷ್ಠ ಬೆಲೆಗಿಂತ ಕಡಿಮೆಯಿದೆ. ಹಾಗಾಗಿ ಬೆಂಬಲ ಬೆಲೆಯಲ್ಲಿ ಸೂರ್ಯಕಾಂತಿ ಖರೀದಿಸಿ ರಾಜ್ಯದ ರೈತರ ನೆರವಿಗೆ ಧಾವಿಸಬೇಕೆಂದು ಸಚಿವ ಪ್ರಲ್ಹಾದ ಜೋಶಿ ಕೃಷಿ ಸಚಿವರಿಗೆ ಪತ್ರ ಬರೆದು ಒತ್ತಾಯಿಸಿದ್ದರು. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ಸಂಬಂಧ ಜೋಶಿ ಅವರಿಗೆ ಪತ್ರ ಬರೆದು ಮಾಹಿತಿ ಹಂಚಿಕೊಂಡಿದ್ದಾರೆ. ತಮ್ಮ ಒತ್ತಾಸೆಯಂತೆ ಕರ್ನಾಟಕದಿಂದ ಬೆಂಬಲ ಬೆಲೆಯಲ್ಲಿ ಸೂರ್ಯಕಾಂತಿ ಖರೀದಿಗೆ ಅನುಮೋದನೆ ನೀಡಿದ್ದಾಗಿ ತಿಳಿಸಿದ್ದಾರೆ.

ಬಿಜೆಪಿಯ ಜೀವರಾಜ್ ಸೇರಿ ಮೂವರ ವಿರುದ್ಧ ಎಫ್‌ಐಆರ್

ಮತಪತ್ರ ತಿರುಚಿದ್ದಾರೆಂದು ದೂರು ದಾಖಲು

ಸಂ.ಕ.ಸಮಾಚಾರ, ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆಯಲ್ಲಿ ಅಕ್ರಮ ನಡೆಸಿದ ದೂರಿಗೆ ಸಂಬಂಧಿಸಿದಂತೆ ಬಿಜೆಪಿಯ ಡಿ.ಎನ್.ಜೀವರಾಜ್ ಸೇರಿದಂತೆ ಮೂವರ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಾಗಿದೆ.

ಬಿಜೆಪಿಯ ಡಿ.ಎನ್. ಜೀವರಾಜ್, ಅಂದಿನ ಚುನಾವಣಾಧಿಕಾರಿ ವೇದಾಮೂರ್ತಿ ಮತ್ತು ಅಂದಿನ ಜಿಲ್ಲಾಧಿಕಾರಿ ರಮೇಶ್‌ಕುಮಾರ್ ಅವರ ವಿರುದ್ಧ ದೂರಿಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಿಕೊಳ್ಳುವ ಮೂಲಕ ಪೊಲೀಸರು ತನಿಖೆ ಕೈಗೆತ್ತಿಕೊಂಡಿದ್ದಾರೆ.

ಅಂಚೆ ಮತ ಎಣಿಕೆ ಟೇಬಲ್ ಏಜೆಂಟ್ ಆಗಿದ್ದ ಸುಧೀರ್ ಕುಮಾರ್ ಮುರೋಳಿ ನೀಡಿದ ದೂರಿನ ಅನ್ವಯ ಈ ಕ್ರಮ ಜರುಗಿಸಲಾಗಿದೆ.

ಮತಪತ್ರಗಳನ್ನು ಇರಿಸಲಾಗಿದ್ದ ಸ್ಟ್ರಾಂಗ್ ರೂಂ ಸೀಲ್ ಆಗಿರಲಿಲ್ಲ. ಟ್ರಂಕ್‌ಗಳ ಲಾಕ್ ಕಟ್ ಆಗಿತ್ತು ಎಂದು ದೂರುದಾರರು ಗಂಭೀರ ಆರೋಪ ಮಾಡಿದ್ದಾರೆ. ಮತ ಪತ್ರಗಳನ್ನು ಟ್ಯಾಂಪರಿಂಗ್ ಮಾಡಲಾಗಿದೆ ಎಂಬ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ವಂಚನೆ, ಕ್ರಿಮಿನಲ್ ಪಿತೂರಿ ಹಾಗೂ ಫೋರ್ಜರಿ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಹೈಕೋರ್ಟ್ ಮೆಟ್ಟಿಲೇರಿದ ಜೀವರಾಜ್

ತನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರಾಜಕೀಯ ಪ್ರೇರಿತ ಮತ್ತು ಕಾನೂನುಬಾಹಿರ ಎಂದು ಡಿ.ಎನ್. ಜೀವರಾಜ್ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇಂದು ಅರ್ಜಿ ಸಲ್ಲಿಸಿದ್ದಾರೆ. ತಮ್ಮ ಮೇಲಿನ ಎಫ್‌ಐಆರ್ ರದ್ದುಗೊಳಿಸಬೇಕು. ಪ್ರಕರಣದ ತನಿಖೆಗೆ ತಡೆಯಾಜ್ಞೆ ನೀಡುವಂತೆಯೂ ಮನವಿ ಮಾಡಿದ್ದಾರೆ, ಈ ಅರ್ಜಿ ಮಂಗಳವಾರ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರುವ ಸಾಧ್ಯತೆಯಿದೆ.

ನಗರಸಭಾ ಕಾರ್ಯಾಲಯ
ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.
Email:itstaff_ulb_gouribidanur@yahoo.co.in,
Website:www.gowribidanurtown.gov.in

ಸಂಖ್ಯೆ: ನಸಗೌ/ಆಶಾ/ಟೆಂಡರ್/ಸಿಆರ್-1/2026-27 ದಿನಾಂಕ: 30.04.2026

ಟೆಂಡರ್ ಪ್ರಕಟಣೆ (ಮೂರನೇ ಕರೆ)

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಅರ್ಹ ದರ್ಜೆಯ ಸಂಘ ಸಂಸ್ಥೆಗಳಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.gouribidanurcity.gov.in** ನಲ್ಲಿ ಪರಿಶೀಲಿಸಬಹುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 16.05.2026ರ ಸಂಜೆ 5.00 ಗಂಟೆಯವರೆಗೆ (2)** ಟೆಂಡರ್ ತೆರೆಯುವ **ದಿನಾಂಕ: 18.05.2026 ರ ಬೆಳಿಗ್ಗೆ 11.00 ಗಂಟೆಗೆ.**

ಕ್ರ ಸಂ	ಕಾಮಗಾರಿ	ಅಂದಾಜು ಮೊತ್ತ (ಲಕ್ಷಗಳಲ್ಲಿ)
	ನಗರಸಭಾ ನಿಧಿ	
1	ಗೌರಿಬಿದನೂರು ನಗರವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನಹರಣ ಚಿಕಿತ್ಸೆ ಮಾಡುವುದು (DMA/2025-26/SE6762/CALL-3	37.50

ಸಹಿ/- ಪೌರಾಯುಕ್ತರು ನಗರಸಭೆ, ಗೌರಿಬಿದನೂರು
ಸಹಿ/- ಆಡಳಿತಾಧಿಕಾರಿಗಳು ನಗರಸಭೆ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:47/ಕೆ.ಎಸ್.ಎಂ.ಸಿ.ಎ/2026-27

22 ಜಿಲ್ಲೆಯಲ್ಲಿ ಗುಡುಗು ಸಹಿತ ಮಳೆ

ಒಂದು ವಾರ ಕಾಲ ಪೂರ್ವ ಮುಂಗಾರು ಚುರುಕು: ಹವಾಮಾನ

ಸಂ.ಕ. ಸಮಾಚಾರ ಬೆಂಗಳೂರು

ರಾಜ್ಯದಲ್ಲಿ ಪೂರ್ವ ಮುಂಗಾರು ಚುರುಕಾಗಿದ್ದು 22 ಜಿಲ್ಲೆಗಳಲ್ಲಿ ಗುಡುಗು, ಮಿಂಚು ಸಹಿತ ಒಂದು ವಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರ್ನಾಟಕ ಸಹಿತ ದಕ್ಷಿಣ ಭಾರತದ ಮೇಲೆ ಮುಂದಿನ ಕೆಲವು ದಿನ ಹವಾಮಾನ ಬದಲಾವಣೆಯ ಅಲೆ ಅಪ್ಪಳಿಸಲಿದೆ ಎಂದು ಭಾರತ ಹವಾಮಾನ ಇಲಾಖೆ ಎಚ್ಚರಿಸಿದೆ. ಎರಡು ದಿನಗಳ ಕಾಲ ಗರಿಷ್ಠ ಉಷ್ಣಾಂಶ ದಾಖಲಾದರೂ ಸಾಧಾರಣ ಮಳೆ ಮುಂದುವರಿಯಲಿದೆ. ಮೇ 8ರ ನಂತರ ಬೆಂಗಳೂರು ಸೇರಿದಂತೆ 18 ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ.

ಮೇ 5, 6 ಮತ್ತು 7 ಈ ಮೂರು ದಿನಗಳಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಎರಡರಲ್ಲೂ 30 ರಿಂದ 40 ಕಿ.ಮೀ ವೇಗದ ಗಾಳಿ ಸಹಿತ ಹಗುರದಿಂದ ಮಳೆಯಾಗಲಿದೆ. ಕರಾವಳಿ ಕರ್ನಾಟಕದಲ್ಲಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮೋಡ-ಬಿಸಿಲಿನ ವಾತಾವರಣ ಇರಲಿದ್ದು ಬಹುತೇಕ ಒಣ ಹವೆ ಮುಂದುವರಿಯಲಿದೆ. ಘಟ್ಟ ಪ್ರದೇಶದ ಒಂದೆರಡು ಕಡೆ ಸಣ್ಣ ಮಳೆ ಸಾಧ್ಯ. ಮುಂದಿನ 2-3 ದಿನ ಇದೇ ವಾತಾವರಣ ಮುಂದುವರಿದು ಮೇ ಎರಡನೇ ವಾರದಲ್ಲಿ ಕರಾವಳಿಯಲ್ಲಿ ಉತ್ತಮ ಮಳೆ ಆಗುವ ಮುನ್ಸೂಚನೆ ಇದೆ.

ಕೊಡಗು, ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಕರಾವಳಿಗೆ ಹೊಂದಿಕೊಂಡ ತಾಲ್ಲೂಕುಗಳಲ್ಲಿ ಅಲ್ಲಲ್ಲಿ ಸಣ್ಣ ಪ್ರಮಾಣದ ಮಳೆ ಆಗುವ ಸಾಧ್ಯತೆ ಇದೆ. ವಿಶೇಷವಾಗಿ ವಾರ ಕಾಲ ಕೊಡಗು ಜಿಲ್ಲೆಯಲ್ಲಿ ಮಳೆ ಆಗುವ

ಮುನ್ಸೂಚನೆ ಇದ್ದು, ಕಾಫಿ ತೋಟ ಮತ್ತು ಕೃಷಿ ಚಟುವಟಿಕೆ ನಡೆಸುವವರು ಹವಾಮಾನ ಬದಲಾವಣೆಗೆ ತಕ್ಕಂತೆ ತಮ್ಮ ಯೋಜನೆ ಹಾಕಿಕೊಳ್ಳಬೇಕಿದೆ.

ದಕ್ಷಿಣ ಒಳನಾಡು ಜಿಲ್ಲೆಗಳಾದ ದಾವಣಗೆರೆ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಕೆಲವೆಡೆ ತುಂತುರು ಮಳೆ ಆಗುವ ಸಾಧ್ಯತೆ ಇದೆ. ಮೇ 5 ಮತ್ತು ಮೇ 6 ರಿಂದ 9ರ ನಡುವೆ ಮೈಸೂರು, ಮಂಡ್ಯ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ರಾಮನಗರ, ಚಾಮರಾಜನಗರ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ವಿಜಯನಗರ ಜಿಲ್ಲೆಗಳ ಒಂದೆರಡು ಕಡೆ 64.5 ಮಿ.ಮೀ ಮೀರುವ ಭಾರೀ ಮಳೆ ಆಗುವ ಸಾಧ್ಯತೆ ಇದೆ. ಇದರ ಜೊತೆಗೆ ಗುಡುಗು-ಮಿಂಚು ಮತ್ತು 30-40 ಕಿ.ಮೀ ವೇಗದ ಚಂಡಮಾರುತ ಸಹ ಇರಲಿದ್ದು, ದಕ್ಷಿಣ ಒಳನಾಡಿನ ಒಂದೆರಡು ಕಡೆ ಗುಡುಗು ಸಹಿತ ಮಳೆ ಆಗಲಿದೆ ಎಂದು ರಾಜ್ಯ ಮುನ್ಸೂಚನೆ ವರದಿ ಹೇಳಿದೆ.

ಉತ್ತರ ಒಳನಾಡಿನ ಬಾಗಲಕೋಟೆ, ವಿಜಯಪುರ, ಬೆಳಗಾವಿ, ಬಿದರ, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ ಬಹಳಷ್ಟು ಜಿಲ್ಲೆಗಳಲ್ಲಿ ಈ ವಾರ ಅಧಿಕ ಬಿಸಿಲಿನ ಒಣ ಹವೆ ಮುಂದುವರಿಯಲಿದೆ. ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳ ಕೆಲವೆಡೆ ತುಂತುರು ಮಳೆ ಆಗಬಹುದು. ಉತ್ತರ ಒಳನಾಡಿನಲ್ಲಿ ಮುಂದಿನ 5 ದಿನ ಗರಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆ ಇರುವುದಿಲ್ಲ ಎಂದಿದೆ.

ಶೃಂಗೇರಿ ಶಾಸಕರಾಗಿ ಜೀವರಾಜ್ ಆಯ್ಕೆ

ರಾಜೇಗೌಡ ಆಯ್ಕೆ ಅಸಿಂಧು । ಚುನಾವಣಾಧಿಕಾರಿಯಿಂದ ಪ್ರಮಾಣಪತ್ರ

ಸಂ.ಕ.ಸಮಾಚಾರ ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಡಿ.ಎನ್. ಜೀವರಾಜ್ ಆಯ್ಕೆಯಾದರು. ಚುನಾವಣಾಧಿಕಾರಿ ಗೌತಮ್‌ಕುಮಾರ್ ಶೆಟ್ಟಿ ಅಧಿಕೃತವಾಗಿ ಶಾಸಕ ಸ್ಥಾನದ ಪ್ರಮಾಣಪತ್ರವನ್ನು ಸೋಮವಾರ ಹಸ್ತಾಂತರಿಸಿದರು.

ಶನಿವಾರ ನಡೆದಿದ್ದ ಅಂಚೆ ಮತಗಳ ಮರು ಎಣಿಕೆ ಪ್ರಕ್ರಿಯೆಯಲ್ಲಿ ಅಂತಿಮವಾಗಿ ಡಿ.ಎನ್. ಜೀವರಾಜ್ ಅವರು ಟಿ.ಡಿ.ರಾಜೇಗೌಡಗಿಂತ 52 ಮತಗಳ ಅಂತರದಿಂದ ಬಹುಮತ ಪಡೆದಿದ್ದರು. ಆದರೆ, ಅಂದು ಅಧಿಕೃತ ಘೋಷಣೆ ಮಾಡಿರಲಿಲ್ಲ. ಹೈಕೋರ್ಟ್‌ಗೆ ಮರು ಎಣಿಕೆಯ ವರದಿ ಸಲ್ಲಿಸುವುದಾಗಿ ಚುನಾವಣಾ ಅಧಿಕಾರಿಗಳು ಹೇಳಿಕೆ ನೀಡಿದ್ದರು. ಆದರೆ ಭಾನುವಾರ ತಡರಾತ್ರಿ ಚುನಾವಣಾ ಅಧಿಕಾರಿಗಳು ಡಿ.ಎನ್.ಜೀವರಾಜ್‌ಗೆ ಅಧಿಕೃತ ಘೋಷಣಾ ಪತ್ರವನ್ನು ಇಮೇಲ್ ಮೂಲಕ ಕಳಿಸಿದ್ದರು.

ಈಗ ನ್ಯಾಯ ಸಿಕ್ಕಿದೆ: 2023ರ ಮೇ 13ರಂದು ವಿಧಾನಸಭಾ ಚುನಾವಣೆಯ ಮತ ಎಣಿಕೆ ನಡೆದಿತ್ತು. ಕೌಂಟಿಂಗ್‌ನಲ್ಲಿ ಅಸಿಂಧು ಮತಗಳನ್ನು ಶಾಸಕರಾಗಿದ್ದ ಟಿ.ಡಿ.ರಾಜೇಗೌಡರಿಗೆ ಹಾಕಿದ್ದಾರೆ ಎಂದು ಚುನಾವಣಾ ಏಜೆಂಟರ ಮೂಲಕ ಆರ್‌ಒಗೆ ದೂರು ಸಲ್ಲಿಕೆ ಮಾಡಿದ್ದೆ. ನಾನು ಆ ದಿನವೇ ಗೆದ್ದಿದ್ದೆ. ಆದರೆ, ನನಗೆ ಮೋಸ ಮಾಡಿ ಇವರು ಗೆಲುವನ್ನು ಪಡೆದುಕೊಂಡಿದ್ದರು. ಈಗ ನ್ಯಾಯ ಸಿಕ್ಕಿದೆ ಎಂದು ಡಿ.ಎನ್.ಜೀವರಾಜ್ ಹೇಳಿದರು.

ನ್ಯಾಯಾಲಯ ನಿಖರವಾಗಿ ಮತ ಎಣಿಕೆ ದಿನದಂದೇ ಫಲಿತಾಂಶವನ್ನು ಘೋಷಣೆ ಮಾಡಿ ಎಂದು ಹೇಳಿದ್ದರೂ, ಆರ್‌ಒ ಕೋರ್ಟ್ ಆದೇಶವನ್ನು ಪಾಲಿಸಿರಲಿಲ್ಲ. ಈಗ ನಾನು ಅಧಿಕಾರಿಗಳ ಮೇಲೆ ಯಾವುದೇ ಆರೋಪ ಮಾಡಲು ಇಷ್ಟಪಡಲ್ಲ. ಸರ್ಕಾರದ ಒತ್ತಡ ಈ ರೀತಿ ಇದ್ದಾಗ ಯಾವ ಅಧಿಕಾರಿ ಯಾದರು ಏನು ಮಾಡಲು ಸಾಧ್ಯ? ಈಗ ನಾನು ಪ್ರಮಾಣ ಪತ್ರವನ್ನು ಸ್ವೀಕಾರ ಮಾಡಿದ್ದೇನೆ ಎಂದರು.

ಜಿಲ್ಲೆಯಲ್ಲಿ ಐದರಿಂದ ನಾಲ್ಕಕ್ಕೆ ಇಳಿದ ಕಾಂಗ್ರೆಸ್ ಶಾಸಕರು

2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ ಬಿಜೆಪಿಯನ್ನು ಕ್ಲೀನ್‌ಸ್ವೀಪ್ ಮಾಡಿ ಐದು ಸ್ಥಾನಗಳಲ್ಲಿ ಐದು ಸ್ಥಾನಗಳನ್ನು ಕಾಂಗ್ರೆಸ್ ಪಡೆದುಕೊಂಡಿತ್ತು. ಚಿಕ್ಕಮಗಳೂರು ಕ್ಷೇತ್ರದಿಂದ ಎಚ್.ಡಿ.ತಮ್ಮಯ್ಯ, ಮೂಡಿಗೆರೆ ಕ್ಷೇತ್ರದಿಂದ ನಯನ ಮೋಟಮ್ಮ, ಶೃಂಗೇರಿಯಿಂದ ಟಿ.ಡಿ.ರಾಜೇಗೌಡ, ಕಡೂರು ಕ್ಷೇತ್ರದಿಂದ ಕೆ.ಎಸ್.ಆನಂದ್ ಹಾಗೂ ತರೀಕೆರೆ ಕ್ಷೇತ್ರದಿಂದ ಜಿ.ಎಚ್.ಶ್ರೀನಿವಾಸ್ ಆಯ್ಕೆಯಾಗಿದ್ದರು. ಐದು ಕ್ಷೇತ್ರಗಳಲ್ಲಿ ಸಂಪೂರ್ಣ ಸೋಲು ಅನುಭವಿಸಿತ್ತು. ಆದರೆ, ಡಿ.ಎನ್.ಜೀವರಾಜ್ ಅವರ ಮೂರು ವರ್ಷಗಳ ಕಾನೂನು ಹೋರಾಟದಲ್ಲಿ ಶೃಂಗೇರಿ ಕ್ಷೇತ್ರದ ಶಾಸಕ ಸ್ಥಾನವನ್ನು ಕಾಂಗ್ರೆಸ್ ಪಕ್ಷ ಕಳೆದುಕೊಂಡಿದ್ದು, ಐದು ಕ್ಷೇತ್ರಗಳಲ್ಲಿ ನಾಲ್ಕು ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷ ಕುಸಿದಿದೆ.

ಸುದ್ದಿ ಸಮಾಚಾರ

ಜೈಲಿನಲ್ಲಿ ದರ್ಶನ್‌ಗೆ ಸೌಕರ್ಯ: ರಾಜ್ಯದ ವರದಿ ಕೇಳಿದ 'ಸುಪ್ರೀಂ'

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಸಂಬಂಧ ಜೈಲಿನಲ್ಲಿರುವ ನಟ ದರ್ಶನ್‌ಗೆ ಜೈಲಿನಲ್ಲಿ ಮೂಲಸೌಕರ್ಯ ಒದಗಿಸಲಾಗಿದೆಯೇ ಎಂಬ ಬಗ್ಗೆ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.



ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ದರ್ಶನ್, ಜಾಮೀನು ಕೋರಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದು, ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆಬಿ ಪಾರ್ದಿವಾಲಾ ನೇತೃತ್ವದ ಪೀಠ, ರಾಜ್ಯ ಸರ್ಕಾರಕ್ಕೆ ಹಾಗೂ ವಿಚಾರಣಾಧೀನ ನ್ಯಾಯಾಲಯಕ್ಕೆ 1 ವಾರದೊಳಗೆ ವರದಿ ಸಲ್ಲಿಸಲು ಸೂಚಿಸಿದೆ. ಜೈಲಿನಲ್ಲಿ ಮೂಲಸೌಕರ್ಯ ಒದಗಿಸಲಾಗಿದೆಯೇ ಎಂದು ರಾಜ್ಯ ಸರ್ಕಾರಕ್ಕೆ ಹಾಗೂ ಸಾಕ್ಷಿಗಳ ವಿಚಾರಣೆ ಪ್ರಗತಿ ಬಗ್ಗೆ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.

ದರ್ಶನ್ ಅವರನ್ನು ಬೆಳಕು ಇಲ್ಲದ ಸೆಲ್‌ನಲ್ಲಿ ಇರಿಸಲಾಗಿದೆ ಎಂದು ಹಿರಿಯ ವಕೀಲ ಮುಕುಲ್ ರೋಹಟಗಿ ವಾದಿಸಿದ್ದರು. ವಾದ ಆಲಿಸಿದ ನ್ಯಾಯಾಲಯ ಈವರೆಗೆ ಎಷ್ಟು ಸಾಕ್ಷಿಗಳ ವಿಚಾರಣೆಯಾಗಿದೆ. ಇನ್ನು ಉಳಿದ ಸಾಕ್ಷ್ಯಗಳ ವಿಚಾರಣೆ ಪ್ರಕ್ರಿಯೆಗೆ ಎಷ್ಟು ಸಮಯ ಬೇಕು ಎಂಬುದರ ಬಗ್ಗೆ ವರದಿ ನೀಡುವಂತೆ ಸೂಚನೆ ನೀಡಿದೆ.

ಅಕ್ಷರ, ಕೋಣಂದೂರು ಸೇರಿ 3 ಸಾಧಕರಿಗೆ ಕುವೆಂಪು ವಿವಿ ಗೌಡಾ



ಶಿವಮೊಗ್ಗ: ಮೇ 6ರಂದು ಶಂಕರಘಟ್ಟದಲ್ಲಿ ನಡೆಯುವ ಕುವೆಂಪು ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದಲ್ಲಿ ಖ್ಯಾತ ಸಮಾಜವಾದಿ ನಾಯಕ ಮತ್ತು ಸ್ವಾತಂತ್ರ್ಯ ಹೋರಾಟಗಾರ ಕೋಣಂದೂರು ಲಿಂಗಪ್ಪ, ಹಿರಿಯ ರಂಗಕರ್ಮಿ ಮತ್ತು ನೀನಾಸಂ ನಿರ್ದೇಶಕ ಕೆ.ವಿ.ಅಕ್ಷರ ಮತ್ತು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ಮಾಜಿ ನಿರ್ದೇಶಕ ಪ್ರೊ.ಎಚ್.ಎ.ರಂಗನಾಥ್ ಅವರಿಗೆ ಕುವೆಂಪು ವಿಶ್ವವಿದ್ಯಾ ಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಿದೆ.

ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕುಲಪತಿ ಪ್ರೊ. ಶರತ್ ಅನಂತಮೂರ್ತಿ, ಈ ಬಗ್ಗೆ ರಾಜ್ಯಪಾಲರಿಂದ ಅಧಿಕೃತ ಅನುಮೋದನೆ ದೊರೆತಿದೆ ಎಂದರು.

ಬಾತುಕೋಳಿ ಹಿಡಿಯಲು ಕೆರೆಗೆ ಇಳಿದ 4 ಮಕ್ಕಳು ನೀರುಪಾಲು

ಸಂ.ಕ.ಸಮಾಚಾರ ಚಿಕ್ಕಮಗಳೂರು

ಬಾತುಕೋಳಿಯನ್ನು ಹಿಡಿಯಲು ಕೆರೆಗೆ ಇಳಿದ ನಾಲ್ವರು ಮಕ್ಕಳು ನೀರುಪಾಲಾಗಿರುವ ಹೃದಯವಿದ್ರಾವಕ ಘಟನೆ ಸೋಮವಾರ ಚಿಕ್ಕಮಗಳೂರು ತಾಲೂಕಿನ ಅರಳಗುಪ್ಪೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕಾರಂಜಿ ಕೆರೆಯಲ್ಲಿ ನಡೆದ ಈ ದುರ್ಘಟನೆಯಲ್ಲಿ ಮಹಾದಿಯಾ, ಅರುನುಸ್, ನಾಯುಸ್ ಹಾಗೂ ಅಬ್ದುಲ್ ರೆಹಮಾನ್ ಮೃತಪಟ್ಟ ಮಕ್ಕಳು. ಎಲ್ಲರೂ 5ರಿಂದ 14 ವರ್ಷದೊಳಗಿನವರಾಗಿದ್ದು, ಸಂಬಂಧಿಕರ ಮನೆಗೆ ಬಂದಿದ್ದ ವೇಳೆ ಈ ಅವಘಡ ಸಂಭವಿಸಿದೆ.

ಮಾಹಿತಿಯ ಪ್ರಕಾರ, ಬಾತುಕೋಳಿ ಕೆರೆಯೊಳಗೆ ಹೋಗಿದ್ದರಿಂದ ಅದನ್ನು ಹಿಡಿಯಲು ಮಕ್ಕಳು ನೀರಿಗೆ ಇಳಿದಿದ್ದಾರೆ. ಈ ವೇಳೆ ಆಳವಾದ ನೀರಿನಲ್ಲಿ ಸಿಲುಕಿ ನಾಲ್ವರು ಮಕ್ಕಳು ಮುಳುಗಿ ಸಾವನ್ನಪ್ಪಿದ್ದಾರೆ. ಇನ್ನೊಬ್ಬ ನಾಲ್ಕು ವರ್ಷದ ಅರ್ಮಾನ್ ಪ್ರಾಣಾಪಾಯದಿಂದ ಪಾರಾಗಿದ್ದು, ಅವನ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ.

ಗೆಳೆಯರ ಜೊತೆ ಈಜಲು ಹೋದ ಯುವಕ ಕೆರೆಯಲ್ಲಿ ಮುಳುಗಿ ಸಾವು

ಹೊಸಪೇಟೆ: ಕೆರೆಯಲ್ಲಿ ಈಜಾಡಲು ಹೋದ ಯುವಕ ನೀರು ಪಾಲಾದ ಘಟನೆ ಕೂಡ್ಲಿಗಿ ತಾಲೂಕಿನ ಕಾನಹೊಸಹಳ್ಳಿಯಲ್ಲಿ ಜರುಗಿದೆ.

ಸಿದ್ದಾಪುರ ವಡ್ಡರಹಟ್ಟಿಯ ಅರುಣ್ (19) ಮೃತ ಯುವಕ. ದ್ವಿತೀಯ ಪಿಯುಸಿ ತೇರ್ಗಡೆಯಾಗಿದ್ದ. ಗೆಳೆಯರ ಜತೆ ಕಾನಹೊಸಹಳ್ಳಿ ಕೆರೆಯಲ್ಲಿ ಈಜಾಡಲು ಹೋಗಿದ್ದಾಗ ಈ ದುರ್ಘಟನೆ ನಡೆದಿದೆ. ಹರಿಹರದ ಪೊಲೀಸರು ನಾಲ್ವರು ಈಜು ತಜ್ಞರನ್ನು ಕರೆಸಿ ಮೃತದೇಹ ಹೊರತೆಗೆದರು.

ಜೋಯಿಡಾ ಬಳಿ ಚಿರತೆ ದಾಳಿ: ವೃದ್ಧ ಮಹಿಳೆಗೆ ಗಂಭೀರ ಗಾಯ

ಜೋಯಿಡಾ: ತಾಲೂಕಿನ ನಂದಿಗದ್ದೆ ಗ್ರಾ.ಪಂ. ವ್ಯಾಪ್ತಿಯ ಕಾಳಿ ಹುಲಿ ಸಂರಕ್ಷಿತ ಪಣಸೋಲಿ ವಲಯದ ಅವುರ್ಲಿ ದಾಬೆ ಗ್ರಾಮದಲ್ಲಿ ಸೋಮವಾರ ನಸುಕಿನ ಜಾವ ಮಹಿಳೆಯ ಮೇಲೆ ಚಿರತೆ ದಾಳಿ ನಡೆಸಿದ್ದು, ತಲೆ ಹಾಗೂ ದೇಹಕ್ಕೆ ಗಂಭೀರ ಗಾಯವಾಗಿದೆ. ದಾಳಿಗೊಳಗಾದ ಮಹಿಳೆಯನ್ನು ಸುಶೀಲಾ ದೇವದಾಸ(79) ಎಂದು ಗುರುತಿಸಲಾಗಿದ್ದು ಈಕೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ಸೋಮವಾರ ಮುಂಜಾನೆ ಸುಮಾರು 4 ಗಂಟೆಗೆ ಬಹಿರ್ದೆಸೆಗೆಂದು ಮನೆಯ ಬಾಗಿಲು ತೆರೆಯುತ್ತಿದ್ದಂತೆ ಏಕಾಏಕಿ ಚಿರತೆ ಆಕೆಯ ತಲೆಯ ಮೇಲೆ ಎರಗಿದೆ. ಮಹಿಳೆಯ ತಲೆ ಮತ್ತು ದೇಹದ ಭಾಗಕ್ಕೆ ಹೆಚ್ಚು ಗಾಯವಾಗಿದೆ.

ಪಣಸೋಲಿ ವಲಯದ ಅರಣ್ಯ ಇಲಾಖೆಯಿಂದ ಅವುರ್ಲಿ ದಾಬೆಯ ಸುಶೀಲಾ ಮನೆಯ ಮುಂಭಾಗಕ್ಕೆ ಸಿ.ಸಿ.ಕ್ಯಾಮೆರಾ ಅಳವಡಿಸಿದ್ದು, ಚಿರತೆಯ ಚಲನವಲನದ ಬಗ್ಗೆ ನಿಗಾ ಇಡಲಾಗಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಸಾರ್ವಜನಿಕರಿಗೆ ಸಾಯಂಕಾಲದ ವೇಳೆಯಲ್ಲಿ ಮನೆಯಿಂದ ಹೊರಬರದಂತೆ ಎಚ್ಚರಿಕೆ ನೀಡಿದ್ದಾರೆ.

ವಿಚಾರಣೆಗೆಂದು ಮಹಿಳೆಯರನ್ನು ರಾತ್ರಿ ವೇಳೆ ಠಾಣೆಗೆ ಕರೆತರುವಂತಿಲ್ಲ

ಡಿಜಿ ಮತ್ತು ಐಜಿಪಿ ಕಚೇರಿಯಿಂದ ರಾಜ್ಯ ಪೊಲೀಸರಿಗೆ ಸೂಚನೆ

ಸಂ.ಕ.ಸಮಾಚಾರ, ಬೆಂಗಳೂರು

ಮಹಿಳಾ ಹಕ್ಕುಗಳು ಮತ್ತು ಸುರಕ್ಷತೆಯ ಸಲುವಾಗಿ, ರಾತ್ರಿಯ ವೇಳೆಯಲ್ಲಿ ಮಹಿಳೆಯರನ್ನು ಪೊಲೀಸ್ ಠಾಣೆಗಳಿಗೆ ಕರೆಸದಂತೆ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಕಚೇರಿಯು ನಿರ್ದೇಶನ ನೀಡಿದೆ.

ರೈಲ್ವೆ ಮತ್ತು ಕೆಜಿಎಫ್ ಸೇರಿದಂತೆ ಎಲ್ಲಾ ಪೊಲೀಸ್ ಆಯುಕ್ತರು, ರೇಂಜ್ ಇನ್ಸ್‌ಪೆಕ್ಟರ್ ಜನರಲ್‌ಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹೊರಡಿಸಲಾದ ಸುತ್ತೋಲೆಯಲ್ಲಿ ಯಾವುದೇ ವಿಚಾರಣೆ ಅಥವಾ ತನಿಖೆಗಾಗಿ ಮಹಿಳೆಯರನ್ನು ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯಕ್ಕೂ ಮೊದಲು ಪೊಲೀಸ್ ಠಾಣೆಗಳಿಗೆ ಕರೆಯಬಾರದು ಎಂದು ಇಲಾಖೆ ತಿಳಿಸಿದೆ.

ಈ ನಿರ್ದೇಶನವು ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಆದೇಶದ ಬಳಿಕ ಬಂದಿದೆ. ಮಹಿಳೆಯರನ್ನು ಇಂತಹ ಸಮಯದಲ್ಲಿ ಠಾಣೆಗೆ ಕರೆಯುವುದು ಅನಾಚಾರವಾಗಿದ್ದು, ಅವರ ಸುರಕ್ಷತೆ ಮತ್ತು ಹಕ್ಕುಗಳಿಗೆ ಸಂಬಂಧಿಸಿದ ಗಂಭೀರ ಚಿಂತೆಗಳನ್ನು ಹುಟ್ಟಿಸುತ್ತದೆ ಎಂದು ಆಯೋಗ ಹೇಳಿದೆ. ಆದರೆ, ಅನಿವಾರ್ಯ ಅಥವಾ ತುರ್ತು ಪರಿಸ್ಥಿತಿಗಳಲ್ಲಿ ರಾತ್ರಿ ವೇಳೆ ವಿಚಾರಣೆ ಅಗತ್ಯವಿದ್ದರೆ, ಮಹಿಳಾ ಪೊಲೀಸ್ ಅಧಿಕಾರಿಯ ಹಾಜರಾತಿ ಕಡ್ಡಾಯ ಎಂದು ಸ್ಪಷ್ಟಪಡಿಸಿದೆ.

ಈ ಆದೇಶವು ಜುಲೈ 2024ರಲ್ಲಿ ರಾಣೆಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರಕರಣದ ಹಿನ್ನೆಲೆಯಲ್ಲಿದೆ. ಒಂದು ಮಹಿಳೆ ನೆರೆಹೊರೆಯವರೊಂದಿಗೆ ನಡೆದ ವಿವಾದದ ಸಂದರ್ಭದಲ್ಲಿ ರಾತ್ರಿ ವೇಳೆ ಸುಮಾರು ಎರಡು ಗಂಟೆಗಳ ಕಾಲ ಠಾಣೆಯಲ್ಲಿ ಇರಿಸಲ್ಪಟ್ಟಿದ್ದಾಳೆ ಎಂದು ಆರೋಪಿಸಲಾಗಿದೆ. ಈ ಬಗ್ಗೆ ಆಕೆ ಆಯೋಗವನ್ನು ಸಂಪರ್ಕಿಸಿ, ಇದು ನಿಯಮ ಉಲ್ಲಂಘನೆ ಎಂದು ಹೇಳಿದ್ದಾಳೆ.

ಪೊಲೀಸರು ತಮ್ಮ ಉತ್ತರದಲ್ಲಿ, ದೂರುದಾರರು ಮತ್ತು ಪ್ರತಿದೂರುದಾರರನ್ನು ಪ್ರಕ್ರಿಯೆಯ ಭಾಗವಾಗಿ (ವೈದ್ಯಕೀಯ ಪರೀಕ್ಷೆ ಸೇರಿ) ಕರೆಯಲಾಗಿದೆ ಮತ್ತು ವಿವಾದ ಹೆಚ್ಚಾಗದಂತೆ ತಡೆಯುವುದು ಉದ್ದೇಶವಾಗಿತ್ತು ಎಂದು ತಿಳಿಸಿದ್ದಾರೆ.

ಹಣಕ್ಕಾಗಿ ಬೌದ್ಧ ಬಿಕ್ಕುವಿನ ಕೊಲೆ!

ಸಿಎನ್‌ಜಿ ತುಂಬಿಸ ಹೋಗಿ ಸಿಕ್ಕಿಬಿದ್ದ ಮರಾಠಿ ಹಂತಕರು

ಸಂ.ಕ.ಸಮಾಚಾರ, ಧಾರವಾಡ

ದುಡ್ಡಿನ ಆಸೆಗಾಗಿ ಬೌದ್ಧ ಬಿಕ್ಕುವನ್ನು ಕೊಲೆ ಮಾಡಿ ಎಸೆದು ಹೋದ ಪ್ರಕರಣವನ್ನು ಭೇದಿಸಿರುವ ಗ್ರಾಮೀಣ ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದು, ಇನ್ನೂ ಇಬ್ಬರ ಪತ್ತೆಗೆ ಜಾಲ ಬೀಸಿದ್ದಾರೆ.

ಕಳೆದ ಏ. 29ರಂದು ಮುಂಡಗೋಡದ ತಾಶಿ ಧೊಂದೂಪ(40) ಎಂಬುವವರ ಕೈಕಾಲು ಕಟ್ಟಿ ಕೊಲೆ ಮಾಡಿ ಇಲ್ಲಿಯ ಹಳಿಯಾಳ ರಸ್ತೆಯಲ್ಲಿಯ ಸೇತುವೆ ಬಳಿ ಮೃತ ದೇಹವನ್ನು ಎಸೆದು ಹೋಗಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಗ್ರಾಮೀಣ ಠಾಣೆ ಪೊಲೀಸರು 8 ತಂಡಗಳನ್ನು ರಚಿಸಿ ತನಿಖೆ ನಡೆಸಿದ್ದರು. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆ ಬುದರಗಡ ತಾಲೂಕಿನ ಪಾಂಡಿವರೇ ಗ್ರಾಮದ ಸಂಕೇತ ಸತ್ತಪ್ಪ ಯಾದವ, ವೈಭವ ಮಾರುತಿ ಚವ್ಹಾಣ ಮತ್ತು ಸಿದ್ಧೇಶ ಸುನೀಲ ಬೋಸ್ಲೆ ಎಂಬುವವರನ್ನು ಸೋಮವಾರ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್

ವರಿಷ್ಠಾಧಿಕಾರಿ ಗುಂಜನ್ ಆರ್ಯ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಿಎನ್‌ಜಿ ಕಾರ್ ಮೂಲಕ ಪತ್ತೆ: ಬೌದ್ಧ ಬಿಕ್ಕುವನ್ನು ದೋಚಲು ಈ ಮೂವರು ಸಿಎನ್‌ಜಿ ಕಾರ್ ಬಳಕೆ ಮಾಡಿದ್ದರು. ಮುಂಡಗೋಡ ರಸ್ತೆಯಲ್ಲಿ ಕಾರಿಗೆ ಸಿಎನ್‌ಜಿ ಭರಿಸಲು ನಿಂತಿದ್ದ ಸಂದರ್ಭದಲ್ಲಿ ಎಲ್ಲ ಆರೋಪಿಗಳ ಚಹರೆ ಪತ್ತೆಯಾಗಿದೆ. ಅಲ್ಲದೇ 8 ತಂಡಗಳನ್ನು ರಚನೆ ಮಾಡಿ ಮುಂಡಗೋಡದಿಂದ ಕೊಲ್ಲಾಪೂರ ವರೆಗಿನ ಸುಮಾರು 60ಕ್ಕೂ ಹೆಚ್ಚು ಸಿಸಿ ಕ್ಯಾಮೆರಾಗಳನ್ನು ತಪಾಸಣೆ ಮಾಡಲಾಗಿದ್ದು, ವಾಹನಗಳ ಹೋಲಿಕೆ ಮತ್ತು ಇನ್ನಿತರೆ ಸಾಕ್ಷಿಗಳ ಆಧಾರದ ಮೇಲೆ ಇವರನ್ನು ಸೋಮವಾರ ಮುಂಜಾನೆ ಕೊಲ್ಲಾಪುರದಲ್ಲಿ ವಶಕ್ಕೆ ಪಡೆಯಲಾಗಿದೆ.

ನೀರು ಸರಬರಾಜಿಗೆ ಅಡ್ಡಿ ಮಾಡಿದರೆ ಕೇಸ್

ಅಧಿಕಾರಿಗಳಿಗೆ ಕಡಕ್ ನಿರ್ದೇಶನ ನೀಡಿದ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ

ಸಂ.ಕ.ಸಮಾಚಾರ ಬೀದರ್:ಬೇಸಿಗೆಯ ತಾಪದ ದಿನಗಳಲ್ಲಿ ನೀರಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜಿಗೆ ಯಾವುದೇ ರೀತಿಯ ಅಡ್ಡಿಯನ್ನುಂಟು ಮಾಡುವವರ ವಿರುದ್ಧ ಅಧಿಕಾರಿಗಳು ಕೇಸ್ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಕಡಕ್ ನಿರ್ದೇಶನ ನೀಡಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಕುರಿತು ಸೋಮವಾರ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಅನುದಾನದಿಂದ ಖಾಸಗಿ ಜಮೀನಿನಲ್ಲಿ ಕೊರೆಯಿಸಿದ ಕೊಳವೆಬಾವಿ ಅಥವಾ ತೆರೆದ ಬಾವಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಸಂದರ್ಭದಲ್ಲಿ ಕೆಲವರು ಅಡ್ಡಿಯನ್ನುಂಟು ಮಾಡುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಯಾರು ಎಷ್ಟೇ ಪ್ರಭಾವಿಯಾಗಿರಲಿ, ಶಕ್ತಿಶಾಲಿಯಾಗಿರಲಿ ಕುಡಿಯುವ ನೀರು ಸರಬರಾಜು ಮಾಡಲು ಅಡ್ಡಿಪಡಿಸಿದವರ ವಿರುದ್ಧ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಪ್ರಕರಣ ದಾಖಲಿಸುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಔರಾದ್, ಭಾಲ್ಕಿ, ಬಸವಕಲ್ಯಾಣ, ಕಮಲನಗರ ತಾಲ್ಲೂಕಿನಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಕಂಡುಬಂದಿದೆ. ಔರಾದ್‌ನ 14 ಗ್ರಾಮಗಳು, ಕಮಲನಗರ 11, ಬಸವಕಲ್ಯಾಣ 10, ಭಾಲ್ಕಿ 8 ಗ್ರಾಮ ಸೇರಿದಂತೆ 43 ಗ್ರಾಮಗಳಲ್ಲಿ ಸದ್ಯಕ್ಕೆ ನೀರು ಸಮಸ್ಯೆ ಉಲ್ಬಣಗೊಂಡಿದೆ. ಮೇ ಕೊನೆಯವರೆಗೆ ಸಮಸ್ಯೆ ತೀವ್ರವಾಗಬಹುದಾಗಿದೆ. ಅಧಿಕಾರಿಗಳು ಟ್ಯಾಂಕರ್ ಮೂಲಕ ನೀರು ಸರಬರಾಜು ಮುಂದುವರಿಸಬೇಕು. ತೀರ ಅಗತ್ಯವಿದ್ದಲ್ಲಿ ಮಾತ್ರ ಹೊಸ ಕೊಳವೆಬಾವಿ ಕೊರೆಯಿಸಲು ತಿಳಿಸಿದರು.

ಔರಾದ್‌ನ ತಾಂಡಾಗಳಲ್ಲಿ ಹೆಚ್ಚಿನ ಸಮಸ್ಯೆ ಕಂಡುಬಂದಿದೆ. ನೀರಿನ ಮಟ್ಟ 700 ರಿಂದ 800 ಅಡಿವರೆಗೆ ಕುಸಿದಿದೆ. ಅಧಿಕಾರಿಗಳು ಕೊಳವೆಬಾವಿಯ ಪುನಶ್ಚೇತನ ಕಾರ್ಯ ಕೈಗೊಳ್ಳಬೇಕು. ಫ್ಲಶಿಂಗ್ ಹಾಗೂ ಡೀಪನಿಂಗ್ ಕಾರ್ಯ ಕೈಗೊಳ್ಳಬೇಕು. ಸಮಸ್ಯಾತ್ಮಕ ಗ್ರಾಮಗಳ ವಾರ್ಡ್‌ಗಳಲ್ಲಿ ಸ್ಥಳೀಯ ತಹಸೀಲ್ದಾರರು, ತಾಪಂ ಇಒ, ಪಿಡಿಒ ಹಾಗೂ ಗ್ರಾಮ ಲೆಕ್ಕಾಧಿಕಾರಿ ಬೆಳಿಗ್ಗೆ ಓಡಾಡಿ ನೀರು ಸರಬರಾಜು ಸ್ಥಿತಿಯನ್ನು ನಿಭಾಯಿಸಿ ನೇರವಾಗಿ ಮೋಟಾರ್ ಹಚ್ಚಿಕೊಳ್ಳುವವರ ಸರಬರಾಜು ಕಟ್ ಮಾಡುವಂತೆ ಸೂಚಿಸಿದರು.

ಗ್ರಾಮಗಳ ಅವಶ್ಯಕತೆಗನುಗುಣ ಕಾರ್ಯನಿರ್ವಹಿಸಿ ಟ್ಯಾಂಕರ್ ಸರಬರಾಜು ಮಾಡುವ ಬಿಲ್‌ಗಳನ್ನು ಸಕಾಲದಲ್ಲಿ ಪಾವತಿಸಬೇಕು. ಸದ್ಯಕ್ಕೆ ಮೇವಿನ ಕೊರತೆ ಇರುವುದಿಲ್ಲ. ಮುಂದಿನ 24 ವಾರಗಳಿಗೆ ಆಗುವಷ್ಟು ಮೇವು ದಾಸ್ತಾನು ಇದೆ. ಜಾನುವಾರುಗಳಿಗೆ ನೀರಿನ ಸಮಸ್ಯೆ ಆಗದಂತೆ ಕಾರಂಜಾ ಹಾಗೂ ಚುಳಕಿ ಜಲಾಶಯಗಳಿಂದ ನೀರು ಬಿಡಬೇಕು. ಮುಂಗಾರು ಬಿತ್ತನೆಗೆ ರೈತರಿಗೆ ಬೀಜ, ರಸಗೊಬ್ಬರಗಳ ಕೊರತೆಯಾಗದಂತೆ ಈಗಲೇ ಸಿದ್ಧಪಡಿಸಿಕೊಳ್ಳುವಂತೆ ಹೇಳಿದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಪಂ ಸಿಇಒ ಡಾ.ಗಿರೀಶ ಬದೋಲೆ, ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್, ಎಸ್ಪಿ ಪ್ರದೀಪ ಗುಂಟಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಸೋಮವಾರ ಕುಡಿಯುವ ನೀರಿನ ಸಮಸ್ಯೆ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಡಿಸಿ ಶಿಲ್ಪಾ ಶರ್ಮಾ, ಸಿಇಒ ಡಾ.ಬದೋಲೆ ಇದ್ದರು.

ಸುದ್ದಿ ಮಿಂಚು

ಪಿಡಿಒ ರಕ್ಷಣಾ ನೀತಿ ಜಾರಿಗೊಳಿಸಿ

ಬೀದರ್: ರಾಜ್ಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ರಕ್ಷಣೆಗೆ ಪಿಡಿಒ ವಿಶೇಷ ರಕ್ಷಣಾ ನೀತಿ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಬಿ ಗ್ರೇಡ್) ಹುದ್ದೆ ಉನ್ನತೀಕರಣ ಸಂಘ ಆಗ್ರಹಿಸಿದೆ. ಸಂಘದ ಕಲಬುರಗಿ ವಿಭಾಗೀಯ ಕಾರ್ಯದರ್ಶಿ ಉಮೇಶ ಜಾಬಾ ಈ ಕುರಿತು ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸರಣಿ ಅಸಹಜ ಸಾವು, ಹಲ್ಲೆ ಪ್ರಕರಣಗಳು, ಚುನಾಯಿತ ಪ್ರತಿನಿಧಿಗಳ ಹಣಕಾಸು ಹಿತಾಸಕ್ತಿ ಹಾಗೂ ಮಾನಸಿಕ ಒತ್ತಡದ ಕಾರಣ ಮಧ್ಯಸ್ಥಿಕೆ ವಹಿಸಬೇಕು ಎಂದು ರಾಜ್ಯಪಾಲರಲ್ಲಿ ಕೋರಿದ್ದಾರೆ. ರೋಣ ತಾಲ್ಲೂಕಿನ ಅಸೂಟಿ ಹಾಗೂ ಕೋಟಬಾಳ ಪಿಡಿಒ ಸಾವಿನ ತನಿಖೆ ಸಿಬಿಐ ಇಲ್ಲವೆ ಎಸ್‌ಐಟಿಗೆ ವಹಿಸಬೇಕು. ಮೃತ ಪಂಚಾಯಿತಿ ಅಧಿಕಾರಿಗಳ ಕುಟುಂಬಗಳಿಗೆ ಕನಿಷ್ಠ ರೂ. 50 ಲಕ್ಷ ನೆರವು ಹಾಗೂ ಅನುಕಂಪ ಆಧಾರಿತ ನೇಮಕಾತಿಗಾಗಿ ರಾಜ್ಯ ಆರ್‌ಡಿಪಿಆರ್ ಸಹಾಯ ನಿಧಿ ಸ್ಥಾಪಿಸಬೇಕು. 14 ವರ್ಷಗಳಿಂದ ಬಾಕಿ ಇರುವ ಬಡ್ತಿ ಪ್ರಕ್ರಿಯೆ ತಕ್ಷಣ ಪೂರೈಸಬೇಕು. ಕೆಲಸದ ಒತ್ತಡ ಕಡಿಮೆ ಮಾಡಲು ಸಮಿತಿ ರಚಿಸಿ, ವರದಿ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಮೌಲಿಕ ಸೇವಾ ಮನೋಭಾವ ಅಗತ್ಯ

ಕಮಲನಗರ: ಭಾರತೀಯ ಯೋಧನ ಸೇವೆ ಗಡಿ ಗ್ರಾಮದ ಯುವಕರಿಗೆ ಪ್ರೇರಣೆ ಸೇವಾ ಮನೋಭಾವ ಎನ್ನುವುದು ಮೌಲಿಕವಾದದ್ದು ಅದು ಪ್ರತಿಯೊಬ್ಬರು ಬೆಳೆಸಿ ಕೊಳ್ಳ ಬೇಕು ಎಂದು ಉದಗೀರ ಡೋಣಗಾವ ಹಾವಗಿ ಸ್ವಾಮಿ ಮಠದ ಡಾ ಶಂಭುಲಿಂಗ ಶಿವಾಚಾರ್ಯರು ನುಡಿದರು.

ತಾಲೂಕಿನ ಡೋಣಗಾಂವ [ಎಮ್] ಗ್ರಾಮದ ಹನುಮಾನ ಮಂದಿರದಲ್ಲಿ ನಡೆದ ನಿವೃತ್ತ ಯೋಧ ಮಲ್ಲಿಕಾರ್ಜುನ ಹೊಂಡಾಳೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಯುವಕರಲ್ಲಿ ಸೇವಾ ಪ್ರವರ್ತಿ ಬೆಳೆಸಿ ಕೊಳ್ಳಲು ಪ್ರಯತ್ನಿಸಬೇಕು. ಇಷ್ಟ ಪಟ್ಟು ಮಾಡುವ ದೇಶ ಸೇವೆಯ ಭಕ್ತಿ ಯಾರನ್ನು ಯಾವತ್ತು ಕೈ ಬಿಡುವುದಿಲ್ಲ ಎಂದರು.

ಮುಖಂಡ ಡಾ ಭೀಮಸೇನ ಸಿಂಧೆ ಮಾತನಾಡಿ, ದೇಶ ಸೇವೆಯ ಜೋತೆಗೆ ನಮ್ಮವರನ್ನು ಪ್ರೀತಿಸಿ ಬಾಳುವದನ್ನು ಕಲಿಯ ಬೇಕು ದೇಶ ಮೊದಲು ಉಳಿದೆಲ್ಲವೂ ನಂತರ ಎನ್ನುವ ಮನೋಭಾವ ಪ್ರತಿಯೊಬ್ಬರಲ್ಲಿ ಬೆಳೆಯಬೇಕೆಂದರು.

ಪ್ರಕಾಶ ದೇಸಾಯಿ ಮಾತನಾಡಿ, ಹೊಂಡಾಳೆಯವರ ಸೇವೆಗೆ ಗ್ರಾಮಸ್ಥರ ಎದೆ ಉಬ್ಬಿ ಬಂದಿದೆ, ದೇಶ ಸೇವೆಗಿಂತ ದೊಡ್ಡ ಸೇವೆ ಇನ್ನೊಂದಿಲ್ಲ ಎಂದರು.

ನಿವೃತ್ತ ಮುಖ್ಯಗುರು ಶಾಲಿವಾನ ಗಂದಗೆ ಪ್ರಾಸ್ತಾವಿಕವಾಗಿ ಮಾತನಾಡಿ ಯೋಧನಾದವರು ಸದಾ ಮುಂದೆ ಸಾಗುತ್ತಿರುತ್ತಾನೆ ಜೀವನವೂ ಕೂಡ ಕಷ್ಟ ಸುಖಗಳೆನೆ ಬರಲಿ ಮುಂದೆ ನಡೆಯುವಾತನೆ ಸಂಸಾರ ಸಾಗರ ದಾಟುವಂತೆ ಜೀವನ ಸಮನಾಗಿ ಹಂಚಿಕೊಳ್ಳ ಬೇಕೆಂದರು,

ತಾಪಂ ಎಡಿ ಶಿವಕುಮಾರ ಘಾಟೆ, ಮೌಲಾನಾ ಖಾನ್, ಅಪ್ಪಾಸಾಬ್ ದೇಶಮುಖ, ಶೈಲೇಶ ದೇಶಮುಖ, ಮಹಾಳಪ್ಪ ದೇಶಮುಖ , ವಿಲಾಸ ದೇಶಮುಖ, ಮಹಾದೇವ ಚಾಕೂರೆ, ವಿಜಯಕುಮಾರ ಶೇಗೆದಾರ, ಸಂಗಮೇಶ ಹೊಂಡಾಳೆ, ಮಠಪತಿ ಹಾವಗಿರಾವ ಉತ್ತಮರಾವ ಮಾನೆ ಇದ್ದರು.

ಕಾಂಗ್ರೆಸ್ ಗೆಲುವಿಗೆ ಎಂಎಲ್ಸಿ ಹರ್ಷ

ರಾಯಚೂರು:ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ 21800 ಮತಗಳ ಅಂತರದಿಂದ ಗೆಲವು ಸಾಧಿಸಿರುವದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷದ ಸರಕಾರಕ್ಕೆ ಜನತೆ ನೀಡಿದ ಬೆಂಬಲವಾಗಿದೆ ಎಂದು ಬಾಗಲಕೋಟ ವಿಧಾನಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಎ.ವಸಂತಕುಮಾರ ಹರ್ಷ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರು 97000 ಮತಗಳನ್ನು ಪಡೆದು ಬರ್ಜರಿ ಗೆಲುವು ಸಾಧಿಸಿದ್ದಾರೆ. ಈ ಚುನಾವಣೆಯು ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ಎರಡು ವರ್ಷಗಳ ನಂತರದಲ್ಲಿ ನಡೆಯುವ ರಾಜ್ಯ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಮುನ್ನುಡಿಯಾಗಿದೆ. ರಾಜ್ಯದ ಜನತೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೀಡಿದ ಬೆಂಬಲವಾಗಿದೆ. 2028ರಲ್ಲಿಯೂ ಸಹ ಕಾಂಗ್ರೆಸ್ ಪಕ್ಷದ ಸರಕಾರವೇ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ ಎನ್ನುವದಕ್ಕೆ ಸಾಕ್ಷಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ಗೆ ಹಗಲಿರುಳು ಶ್ರಮಿಸಿದ ಸತೀಶ ಜಾರಕಿಹೊಳಿ, ಉಸ್ತುವಾರಿ ಸಚಿವರಾದ ಆರ್.ಬಿ.ತಿಮ್ಮಾಪುರ, ಮುಖ್ಯ ಮಂತ್ರಿ ಸಿದ್ದರಾಮಯ್ಯನವರು, ಡಿ.ಕೆ.ಶಿವಕುಮಾರ, ಎಲ್ಲ ಸಚಿವರು, ಶಾಸಕರು ಹಾಗೂ ಎಲ್ಲಾ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಲಿಂಗಸುಗೂರ ಸಹಾಯಕ ಆಯುಕ್ತರಿಗೆ ಬೀದಿಬದಿ ಕಂಪ್ಯೂಟರ ಅಂಗಡಿ ವ್ಯಾಪರಸ್ಥರು ಮನವಿ ಪತ್ರ ಸಲ್ಲಿಸಿದರು.

ಅಂಗಡಿಗಳನ್ನು ತೆರವುಗೊಳಿಸದಂತೆ ವ್ಯಾಪಾರಸ್ಥರ ಒತ್ತಾಯ

ಸಂ.ಕ.ಸಮಾಚಾರ ಲಿಂಗಸುಗೂರ : ಪಟ್ಟಣದ ಬೀದಿಬದಿ ಕಂಪ್ಯೂಟರ ಅಂಗಡಿ ಇಟ್ಟುಕೊಂಡು 20-25ವರ್ಷಗಳಿಂದ ನಮ್ಮ ಕುಟುಂಬ ನಿರ್ವಹಣೆಯನ್ನು ಮಾಡುತ್ತಾ ಬಂದಿರುತ್ತೇವೆ ನಾವು ವಿದ್ಯಾವಂತ ನಿರುದ್ಯೋಗಿಗಳಾಗಿದ್ದು ದಿನಾಂಕ 30-04-2026ರಂದು ಜೇಸ್ಕಾಂ ಎಇಇ ಕಾರ್ಯನಿರ್ವಹಿಸುತಿರುವ ಸ್ಥಳದಲ್ಲಿ ವಿದ್ಯುತ್ ಕಡಿತಕ್ಕೆ ನೋಟಿಸ ನೀಡಿದ್ದು ಕಾರಣ ಅಂಗಡಿಗಳನ್ನು ತೆರವುಗೋಳಿಸದಂತೆ ಆದೇಶಿಸಬೇಕು ಎಂದು ಬೀದಿಬದಿ ಕಂಪ್ಯೂಟರ ಅಂಗಡಿ ವ್ಯಾಪರಸ್ಥರು ಸಹಾಯಕ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದರು.

ನಮಗೆ ಪುರಸಭೆಯಿಂದ ಬೀದಿಬದಿ ವ್ಯಾಪಾರಿಗಳ ಗುರುತಿನ ಪತ್ರವನ್ನು ನೀಡಿ ಪುರಸಭೆಯಿಂದ ಕೇಂದ್ರ ಸರಕಾರದಿಂದ ವಿದ್ಯಾವಂತ ನಿರುದ್ಯೋಗಿಗಳಾದ ನಮಗೆ ಬ್ಯಾಂಕಿನಿಂದ ಸಾಲ ಸೌಲಭ್ಯ ಮಂಜೂರು ಮಾಡಿದ್ದು, ಈಗ ನಾವು ಪಡೆದುಕೊಂಡ ಸಾಲವನ್ನು ನಮ್ಮ ದೈನಂದಿನ ವ್ಯವಹಾರದಲ್ಲಿ ಸಾಲದ ಕಂತುಗಳನ್ನು ಪ್ರತಿ ತಿಂಗಳು ತುಂಬಿ ಸಾಲವನ್ನು ಮರುಪಾವತಿ ಮತ್ತು ನಮ್ಮ ಕುಟುಂಬ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದೇವೆ.

ಏಕಾ ಏಕಿ ನಮ್ಮ ಅಂಗಡಿಯ ವಿದ್ಯತ್ ಕಡಿತಗೋಳಿಸುವಂತೆ ನೋಟಿಸ್ ಜಾರಿ ಮಾಡಿದ್ದರಿಂದ ನಮ್ಮ ಕುಟುಂಬ ನಿರ್ವಹಣೆ ಮತ್ತು ತಾವು ನೀಡಿದ ಸಾಲವನ್ನು ಬ್ಯಾಂಕಿಗೆ ಮರು ಪಾವತಿ ಮಾಡುವದು ತುಂಬಾ ಸಮಸ್ಯೆಯಾಗುತ್ತದೆ. ನಮ್ಮ ಅಂಗಡಿಗಳನ್ನು ಇಲ್ಲಿಂದ ತೆರವುಗೊಳಿಸಲು ಮುಂದಾದರೆ ನಮಗೆ ಸರಕಾರದ ತಮ್ಮ ಅಧೀನಲ್ಲಿ ಬರುವ ಜಾಗವನ್ನು ನೀಡಿ ನಮ್ಮ ಕುಟುಂಬ ಮತ್ತು ಬ್ಯಾಂಕಿನಿಂದ ಪಡೆದ ಸಾಲವನ್ನು ಮರು ಪಾವತಿ ಮಾಡಲು ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಸಂಧರ್ಬದಲ್ಲಿ ಬೀದಿಬದಿ ಕಂಪ್ಯೂಟರ ಅಂಗಡಿ ವ್ಯಾಪರಸ್ಥರಾದ ಬಸವರಾಜ ಗುಂಟಿ, ಅಜಾರ, ಪ್ರತಾಪ ಸಿಮಗ, ವಿಜಯ ಸಿಂಗ, ನವೀನ ಕುಮಾರ, ನವಾಬ, ರಜಾಕ, ಸುರೇಶ ಹಾಗೂ ಇತರರು ಇದ್ದರು.

ಜಿಟಿಟಿಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ರಾಯಚೂರು: ಜಿಲ್ಲೆಯ ಲಿಂಗಸುಗೂರಿನ ಕರಡಕಲ್ ರಸ್ತೆಯ ಬಳಿ ಸ್ಥಾಪಿತವಾಗಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ದ ವತಿಯಿಂದ 2026-27ನೇ ಸಾಲಿನಲ್ಲಿ ವಿವಿಧ ಕೋರ್ಸಗಳ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಆಟೋಮೇಷನ್ ಅಂಡ್ ರೊಬೊಟಿಕ್ಸ್, ಡಿಪ್ಲೊಮಾ ಇನ್ ಪ್ರಿಸಿಶನ್ ಮ್ಯಾನುಫ್ಯಾಕ್ಚರಿಂಗ್ 3+1ವರ್ಷದ ಕೋರ್ಸ್‌ಗಳ ಪ್ರವೇಶಾತಿಗಾಗಿ ಮೇ.15ರೊಳಗಾಗಿ ಜಿಟಿಟಿಸಿ ವೆಬ್‌ಸೈಟ್: https://gttc.karnataka.gov.in ನಲ್ಲಿ ಅಥವಾ ನೇರವಾಗಿ ಸಂಸ್ಥೆಗೆ ಅಗತ್ಯ ದಾಖಲಾತಿಗಳೊಂದಿಗೆ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: 9902072101, ಸಂಪರ್ಕಿಸಬಹುದಾಗಿದೆ.

ಕರಾಟೆ ಸಾಧಕಿಗೆ ಶಾಹೀನ್ ಫ್ರೀ ಶಿಕ್ಷಣ

ಸಂ.ಕ.ಸಮಾಚಾರ ಬೀದರ್: ಕಿರಿಯ ವಯಸ್ಸಿನಲ್ಲೇ ಕರಾಟೆಯಲ್ಲಿ ಅಮೋಘ ಸಾಧನೆಗೈದ ಹೈದರಾಬಾದ್ ಕಿಶನ್‌ಬಾಗ್‌ನ ಬಹಾದ್ದೂರಪುರಾದ ಸಬಾ ಮಾಹೀನ್ ಖಾಜಾ ಮೊಯಿನುದ್ದೀನ್‌ಗೆ ಇಲ್ಲಿಯ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹ ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಉಚಿತವಾಗಿ ನೀಡುವುದಾಗಿ ಘೋಷಿಸಿದೆ.

ಇಲ್ಲಿಯ ಶಹಾಪುರ ಗೇಟ್ ಸಮೀಪದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಕಚೇರಿಗೆ ಭಾನುವಾರ ಕುಟುಂಬದ ಸದಸ್ಯರೊಂದಿಗೆ ಭೇಟಿ ನೀಡಿದ ಸಬಾ ಮಾಹೀನ್ ಅವರಿಗೆ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಅವರು ಶೈಕ್ಷಣಿಕ ನೆರವಿನ ಭರವಸೆ ನೀಡಿ, ಪ್ರೋತ್ಸಾಹಿಸಿದರು.

ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಪೂರ್ಣ ಉಚಿತವಾಗಿ ಕೊಡಲಾಗುವುದು. ವೈದ್ಯಳಾಗಲು ಬಯಸಿದ್ದಲ್ಲಿ ನೀಟ್ ತರಬೇತಿಯನ್ನೂ ನೀಡಲಾಗುವುದು ಎಂದು ಡಾ.ಖದೀರ್ ಅಭಯ ನೀಡಿದರು.

ವಿಶ್ವ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಆಯ್ಕೆಯಾದ ಸಬಾ ಮಾಹೀನ್‌ಗೆ ಬೀದರ್ ಶಾಹೀನ್ ಶಿಕ್ಷಣ ಸಂಸ್ಥೆಯಲ್ಲಿ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಸನ್ಮಾನಿಸಿದರು.

- ವಿಶ್ವ ಕರಾಟೆ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾದ 7ನೇ ತರಗತಿಯ ಸಬಾ ಮಾಹೀನ್

ಹೈದರಾಬಾದ್‌ನ ಗ್ರೇಸ್ ಎಕ್ಸೆಲ್ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಅಗ್ರಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಸಬಾ ಮಾಹೀನ್ ತೆಲಂಗಾಣ ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ 22, ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಮೂರು ಚಿನ್ನದ ಪದಕ ಗಳಿಸಿ ಮೇ 8 ರಿಂದ 10 ರವರೆಗೆ ಮಲೇಷ್ಯಾದಲ್ಲಿ ನಡೆಯಲಿರುವ 22ನೇ ವಿಶ್ವ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ. ಈಕೆ ಸಾಧನೆ ಬಾಲಕಿಯರಿಗೆ ಮಾದರಿ ಹಾಗೂ ಪ್ರೇರಣೆಯಾಗಿದೆ ಎಂದು ಹೇಳಿದರು.ವಿದ್ಯಾರ್ಥಿನಿ ತಂದೆ ಖಾಜಾ ಮೊಯಿನುದ್ದೀನ್, ಕೋಚ್ ಮಾಸ್ಟರ್ ಮೊಹಮ್ಮದ್ ಉಮರ್ ಇದ್ದರು.

ಭಗವಂತನ ಮೇಲೆ ಅಚಲ ಭಕ್ತಿಯಿರಲಿ

ಕೆಂಭಾವಿ: ಮಾನವರಾಗಿ ಹುಟ್ಟಿದ ಮೇಲೆ ಮೊದಲು ಉತ್ತಮ ಸಂಸ್ಕಾರ ಪಡೆಯಬೇಕು. ಆಯಾ ಧರ್ಮದ ಆಯಾ ಜಾತಿಗಳ ಅಣತಿಯಂತೆ ಉತ್ತಮ ಸಂಸ್ಕಾರ ದೊರೆತಾಗ ಮಾತ್ರ ಮನುಷ್ಯನ ಜನ್ಮ ಸಾರ್ಥಕ ಪಡೆಯುತ್ತದೆ ಎಂದು ಕೂಡಲಗಿ ಬಾಬಾ ಮಹಾರಾಜ ಮಠದ ಪೀಠಾದಿಪತಿ ಶ್ರೀ ಉಮಾಕಾಂತ ಸಿದ್ಧರಾಜ ಮಹಾರಾಜರು ಹೇಳಿದರು. ಕೂಡಲಗಿ ಗ್ರಾಮದ ಶ್ರೀ ಶಾಂತಾನಂದ ಸರಸ್ವತಿ ಸ್ವಾಮಿ ಬಾಬಾ ಮಹಾರಾಜರ ಮಠದಲ್ಲಿ ನಡೆದ ಸಂಸ್ಕಾರ ಸುಧಾ ಶಿಬಿರವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಸದಾಚಾರ ಸಂಪನ್ನ, ಸದ್ವಿಚಾರ, ಸಹೃದಯಿ ಜೀವನ ನಡೆಸಬೇಕಾದರೆ ಮೊದಲು ನಾವು ತಂದೆ-ತಾಯಿಗಳ, ಗುರುಗಳ, ಭಗವಂತನ ಮೇಲೆ ಅಚಲ ಭಕ್ತಿ ಹೊಂದಬೇಕು, ಅಂತಹ ಭಕ್ತಿ ನಮ್ಮಲ್ಲಿ ಹುಟ್ಟಬೇಕಾದರೆ ಉತ್ತಮ ಸಂಸ್ಕಾರ ಪಡೆಯಬೇಕು ಎಂದು ಹೇಳಿದರು.

ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳ ಆಜ್ಞಾನುಸಾರ ಇಂದಿನಿಂದ ಕೂಡಲಗಿ ಕ್ಷೇತ್ರದಲ್ಲಿ ಸಂಸ್ಕಾರ ಸುಧಾ ಎಂಬ ವಿಶೇಷ ಶಿಬಿರವನ್ನು 14 ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ. ಈ ಶಿಬಿರದಲ್ಲಿ ಯಾವುದೆ ಜಾತಿ, ಪಂಥ, ಮತಭೆದ ಇಲ್ಲದೆ ಎಲ್ಲ ಮಕ್ಕಳಿಗೆ ಉತ್ತಮ ಸಂಸ್ಕಾರಯುತವಾದ ದೈನಂದಿನ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಂಸ್ಕೃತ ಭಾಷೆಯ ಜ್ಞಾನ ಹೇಳಿ ಕೊಡಲಾಗುವುದು. ವಿಶ್ವಂಬರ ಜೋಶಿ ಅವರು ನಿತ್ಯ ಈ ಕುರಿತು ಮಕ್ಕಳಿಗೆ ಪಾಠ ಮಾಡಲಿದ್ದು ಎಲ್ಲ ಮಕ್ಕಳು ಇದರ ಲಾಭ ಪಡೆಯಬೇಕೆಂದು ಕರೆ ನೀಡಿದರು. ಮಠದವಕ್ತಾರ ಮೃತ್ಯುಂಜಯ ಮಹಾರಾಜ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಶ್ವಂಬರ ಜೋಷಿ, ಶಾಂತಾನಂದ ಇನಾಮದಾರ, ಮಾನಪ್ಪ ಬೆನಕನಳ್ಳಿ, ಮಲ್ಲಯ್ಯ ಕಲಾಲ ಸೇರಿ ಹಲವರಿದ್ದರು.

ಪಶ್ಚಿಮ ಬಂಗಾಲ ಮತ್ತು ಆಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿ ಅಧಿಕಾರ ಪಡೆದಿರುವದಕ್ಕೆ ಮುದಗಲ್ಲ ಬಿಜೆಪಿ ಘಟಕದ ವತಿಯಿಂದ ಸಂಭ್ರಮಾಚರಣೆ ನಡೆಸಿದರು. ಪಟಾಕಿ ಸಿಡಿಸಿ ಪಕ್ಷದ ಪರವಾಗಿ ಜೈಕಾರ ಹಾಕಿ, ಸಿಹಿ ವಿತರಿಸುವ ಮೂಲಕ ಸಂಭ್ರಮಸಿದರು. ಈ ಸಂದರ್ಭದಲ್ಲಿ ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಸಂತೋಷ ಸುರಪೂರ, ನಾಗರಾಜ ತಳವಾರ, ಮಂಜುನಾಥ, ಚಂದಾವಲಿಸಾಬ, ರಾಮಜೀ, ಪಾಶಾ ಜಂಬಾಳಿ, ವೆಂಕಟೇಶ ಹಿರೇಮನಿ, ಗದ್ದೆಪ್ಪ, ರವೀ ವಿಶ್ವಕರ್ಮ ಸೇರಿದಂತೆ ಮುಂತಾದವರಿದ್ದರು.

ವಿದ್ಯಾರ್ಥಿ ಸಂಘಟನೆಗಳ ಒತ್ತಾಯ । ಕೊಡದಿದ್ದರೆ ಇಲಾಖೆ ಎದುರು ಧರಣಿಗೆ ನಿರ್ಧಾರ

ಗೈರಾಣಿ ಭೂಮಿ ಶಾಲೆಗೆ ಮಂಜೂರು ಮಾಡಲು ಮನವಿ

ಸಂ.ಕ.ಸಮಾಚಾರ ಅರಕೇರಾ : ತಾಲೂಕಿನ ಹಾಲಜಾಡಲದಿನ್ನಿ ಗ್ರಾಮದಲ್ಲಿ ಗೈರಾಣಿ ಭೂಮಿ ಹೊತ್ತುವರಿ ಆಗಿದ್ದು ಕೂಡಲೇ ತಹಶೀಲ್ದಾರ ಬೇಟಿ ನೀಡಿ ಭೂಮಿಯನ್ನು ಹದ್ದಸ್ತ ಮಾಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸರಕಾರಿ ಗೈರಾಣಿ ಭೂಮಿಯನ್ನು ಮಂಜೂರು ಮಾಡುವಂತೆ ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್ ಎಫ್ ಐ ದೇವದುರ್ಗ ತಾಲೂಕು ಸಮಿತಿ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ ಡಿವೈ ಎಫ್ ಐ ಹಾಳಜಾಡಲದಿನ್ನಿ ಗ್ರಾಮ ಸಮಿತಿಯ ಮುಖಂಡರು ಸೋಮವಾರ ಅರಕೇರಾ ತಹಶೀಲ್ದಾರ ಅವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದ್ದಾರೆ.

ಎಸ್ ಎಫ್ ಐ ತಾಲೂಕು ಅಧ್ಯಕ್ಷ ಮಹಾಲಿಂಗ ದೊಡ್ಡಮನಿ ಮಾತನಾಡಿ ಹಾಳಜಾಡಲದಿನ್ನಿ ಗ್ರಾಮದಲ್ಲಿರುವ . ಶಾಲೆ ಎಲ್ ಕೆಜಿ ಯಿಂದ 7ನೇತರಗತಿಯವರಗೆ ಸುಮಾರು 180 ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು. ಪ್ರಸ್ತುತ ಹಳೆಯ ಮತ್ತು ಅಪಾಯಕರ ಕಟ್ಟಡದಲ್ಲೇ ತರಗತಿಗಳು ನಡೆಯುತ್ತಿವೆ. ಶಾಲೆಗೆ ಯಾವುದೇ ತಡೆಗೋಡೆ ಇಲ್ಲದೇ ಇರುವದರಿಂದ ಮಕ್ಕಳು ನೇರವಾಗಿ ಮುಖ್ಯ ರಸ್ತೆಗೆ ಸಂಪರ್ಕ ಹೊಂದಿದ್ದು ಅಪಘಾತ ಸಂಭವಿಸುವ ಭೀತಿ ದಿನೇ ದಿನೇ ಹೆಚ್ಚುತ್ತಿದೆ ಎಂದು ಸಂಘಟನೆಗಳು ಆಂತಕ ವ್ಯಕ್ತಪಡಿಸಿವೆ. ಇನ್ನು ಶಾಲೆ ಕಾರ್ಯನಿರ್ವಹಿಸುತ್ತಿರುವ ಜಾಗ ಖಾಸಗಿ ವ್ಯಕ್ತಿಗಳ ಸ್ವತ್ತಾಗಿದ್ದು ಶಾಲೆಯ ಅಭಿವೃದ್ಧಿಗೆ ಅಗತ್ಯವಾದ ಜಾಗವನ್ನು ನೀಡಲು ಅವರು ನಿರಾಕರಿಸುತ್ತಿದ್ದಾರೆ ಎನ್ನಲಾಗಿದೆ.ಇದರಿಂದ ಶಾಳೆಯ ವಿಸ್ತರಣೆ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ತೊಂದರೆ ಉಂಟಾಗಿದೆ. ಈ ಹಿನ್ನೆಯಲ್ಲಿ ಹಾಳಜಾಡಲದಿನ್ನಿ ಗ್ರಾಮದ ಸರ್ವೆ ನಂಬರ 4,5,7,75 ರಲ್ಲಿ ಇರುವ ಸರಕಾರಿ ಗೈರಾಣಿ ಭೂಮಿಯನ್ನು ಶಾಲೆಗೆ ಮಂಜೂರು ಮಾಡಬೇಕು.ಇದರಿಂದ ಹೊಸ ಕಟ್ಟಡ ತಡೆಗೊಡೆ ಆಟದ ಮೈದಾನ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ನಿರ್ಮಿಸಲು ಅನುಕೂಲವಾಗಲಿದೆ ಎಂದು ಸಂಘಟನೆಗಳು ಮನವಿ ಮಾಡಿದೆ.

ಮಕ್ಕಳ ಸುರಕ್ಷತೆ ಹಾಗೂ ಉತ್ತಮ ಶಿಕ್ಷಣದ ದೃಷ್ಟಿಯಿಂದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು.ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಹಾಗೂ ಪಾಲಕರೊಂದಿಗೆ.ಸೇರಿ ಇಲಾಖೆ ಎದುರು ಉಗ್ರವಾದ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.ಇದೇ ಸಂದರ್ಭದಲ್ಲಿ ಎಸ್ ಎಫ್ ಐ ತಾಲೂಕು ಮುಖಂಡರಾದ ಸಂತೋಷ ತ್ಯಾಪ್ಲಿ,ಡಿವೈಎಫ್ಐ ಹಾಳಜಾಡಲ ದಿನ್ನಿ ಇದ್ದರು.

ಅರಕೇರಾ ತಹಶೀಲ್ದಾರ ಅವರಿಗೆ ಮನವಿ ಪತ್ರ ಸಲ್ಲಿಸುತ್ತಿರುವದು.

ಉಪ ಚುನಾವಣೆಯಲ್ಲಿ ಗೆಲುವಿಗೆ ಕಾಂಗ್ರೆಸ್ ನಿಂದ ಸಿಹಿ ಹಂಚಿಕೆ

ಅರಕೇರಾ : ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಕ್ಷೇತ್ರಗಳಲ್ಲಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿದ್ದು ಎರಡು ಕಡೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ವಿಜಯ ಪತಾಕೆ ಹಾರಿಸಿದ್ದಾರೆಂದು ಎಂದು ಪರಿಶಿಷ್ಟ ಪಂಗಡ ಅರಕೇರಾ ತಾಲೂಕು ಕಾಂಗ್ರೆಸ್ ಅಧ್ಯಕ್ಷರ ಬಸವರಾಜ ಪೂಜಾರಿಯವರು ಹೇಳಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಸಮರ್ಥ ಶಾಮನೂರು ಅಂತರದಿಂದ ಕಾಂಗ್ರೆಸ್ ಜಯಬೇರಿ ಭಾರಿಸಿದೆ.ಬಾಗಲಕೋಟೆಯಲ್ಲಿ ಉಮೇಶ ಮೇಟಿಯವರು ಗೆಲುವು ಸಾಧಿಸಿದ್ದಾರೆ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಆಯ್ಕೆಯಾಗುವ ಮೂಲಕ ಕ್ಷೇತ್ರದಲ್ಲಿ ತನ್ನ ಬಲವನ್ನು ಮತ್ತೊಮ್ಮೆ ಸಾಭಿತಪಡಿಸಿದೆ. ಉಪಚುನಾವಣೆ ಫಲಿತಾಂಶ ಹಿನ್ನೆಯಲ್ಲಿ ಅರಕೇರಾ ಪಟ್ಟಣದಲ್ಲಿ ಅರಕೇರಾ ಬಾಕ್ಲ ಕಾಂಗ್ರೆಸ್ ಪಕ್ಷದವತಿಯಿಂದ ವಿಜಯೋತ್ಸವವನ್ನು ಸಿಹಿ ಹಂಚುವ ಮೂಲಕ ಆಚರಣೆ ಮಾಡಲಾಯಿತು ಎಂದು ಬಸವರಾಜ ಪೂಜಾರಿ ಹೇಳಿದರು. ಈ ಸಂದರ್ಭದಲ್ಲಿ ಅರಕೇರಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ವಿರೇಶಶಾಖೆ ಹೆಮನೂರು, ಪ್ರಚಾರ ಸಮಿತಿ ಅಧ್ಯಕ್ಷ ಹನುಮಂತ್ರಾಯ ನಾಯಕ ಆಕಳಕುಂಪಿ, ಕಾಂಗ್ರೆಸ್ ವಕ್ತಾರ ರಾಜುನಾಯಕ, ಯುವಮೋರ್ಚಾ ಅಧ್ಯಕ್ಷ ರಾಜುಗೌಡ ಗೆಜ್ಜೆಭಾವಿ, ಸಿದ್ದಪ್ಪಕಬ್ಬೇರ, ಹನುಮಂತ್ರಾಯ ಸಾತಲ್, ಹನುಮಂತ್ರಾಯಗೌರ್ನಮೆಂಟ್,ಸಿದ್ದಯ್ಯಮಠಪತಿ, ರಾಘವೇಂದ್ರಪೂಜಾರಿ ಮುಂತಾದವರು ಉಪಸ್ಥಿತರಿದ್ದರು.

ಹಟ್ಟಿ ಸಂಪರ್ಕ ರಸ್ತೆ ಅಭಿವೃದ್ಧಿಗೆ ಆಗ್ರಹ

ಹಟ್ಟಿಚಿನ್ನದಗಣಿ : ಸಮೀಪದ ಗುಡದನಾಳದಿಂದ ಹಟ್ಟಿ ಪಟ್ಟಣಕ್ಕೆ ಹಾಗೂ ಲಿಂಗಸಗೂರು ಪಟ್ಟಣಕ್ಕೆ ಸಂಪರ್ಕ ಹೊಂದಿದ ರಸ್ತೆಯು ತೀವ್ರ ಹದಗೆಟ್ಟು ಹೋಗಿದ್ದು, ಈ ರಸ್ತೆ ಅಭಿವೃದ್ಧಿಗೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹಟ್ಟಿ ಪಟ್ಟಣದಿಂದ ಗುಡದನಾಳ ಮಾರ್ಗವಾಗಿ ಲಿಂಗಸಗೂರು ಪಟ್ಟಣಕ್ಕೆ ತೆರಳುವ ರಸ್ತೆಯು ತೀವ್ರ ಹಾಳಾಗಿ ಹೋಗಿದ್ದರಿಂದ ಕಾರ್ಮಿಕರು, ಕೂಲಿಕಾರ್ಮಿಕರು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಪ್ರಯಾಣಿಕರಿಗೆ, ವಾಹನ ಸವಾರರಿಗೆ ಓಡಾಡಲು ತೀವ್ರ ಹರಸಾಹಸ ಪಡುತ್ತಿರುವದು ಕಾಣಲಾಗುತ್ತಿದೆ. ಹಟ್ಟಿ ಪಟ್ಟಣದಿಂದ ಗುಡದನಾಳ ಮಾರ್ಗವಾಗಿ ಲಿಂಗಸಗೂರು ಪಟ್ಟಣಕ್ಕೆ ತೆರಳಲು 15 ಕಿ.ಮೀ ರಸ್ತೆಯಿದ್ದು ಇದರಲ್ಲಿ ಇತ್ತೀಚಿಗೆ ಮಧ್ಯದ 4 ಕಿ.ಮೀ ರಸ್ತೆ ಶಾಸಕರಾದ ಮಾನಪ್ಪ ವಜ್ಜಲ್‌ರು ನೀಡಿದ ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಮಾಡಲಾಗಿದೆ, ಇನ್ನುಳಿಗೆ ಗುಡದನಾಳದಿಂದ ಹಟ್ಟಿವರೆಗೆ ಹಾಗೂ ಗುಡದನಾಳದಿಂದ ಲಿಂಗಸಗೂರು ಪಟ್ಟಣದವರೆಗೆ ರಸ್ತೆಯು ತೀವ್ರ ಹದಗೆಟ್ಟು ಹೋಗಿದ್ದು ಸದರಿ ರಸ್ತೆಯನ್ನು ಇದಕ್ಕೆ ಸಂಬಂಧಿಸಿದ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿ ಆದಷ್ಟು ಬೇಗನೆ ರಸ್ತೆ ಅಭಿವೃದ್ಧಿಪಡಿಸಿ ಈ ಮಾರ್ಗವಾಗಿ ಸಂಚಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹಟ್ಟಿಚಿನ್ನದಗಣಿ ಸಮೀಪದ ಹಟ್ಟಿ-ಗುಡದನಾಳ-ಲಿಂಗಸಗೂರು ರಸ್ತೆಯುವ ತೀವ್ರ ಹದಗೆಟ್ಟು ಹೋಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವದು.

ಕೆರೆಗಳ ರಕ್ಷಣೆಗೆ ರೈತ ಹೋರಾಟಗಾರರಿಗೆ ಬೆಂಬಲಿಸಿ

ಅಮರಣ್ಣ ಗುಡಿಹಾಳ ನುಡಿನಮನ । ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಭಾಗಿ

ಸಂ.ಕ. ಸಮಾಚಾರ, ಮುದಗಲ್ಲ : ರೈತ ಮುಖಂಡರ ದೀರ್ಘ ಕಾಲದ ಹೋರಾಟಗಳಿಂದ ನ್ಯಾಯವನ್ನು ಪಡೆಯುತ್ತಿದ್ದೇವೆ. ಅವರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ನಾವು ಗಟ್ಟಿಯಾಗಿ ರೈತರು ಸಂಘಟಿಸಿ ದಿಟ್ಟ ಹೋರಾಟಗಳಿಗೆ ಮುಂದಾಗಬೇಕಿದೆ. ನಾವುಗಳು ಪರಿಸರ ರಕ್ಷಣೆ ಮಾಡಿದರೆ ಮಾತ್ರ ಉತ್ತಮ ಮಳೆ, ಬೆಳೆ ಪಡೆಯುದರ ಜತೆಗೆ ಕೆರೆಗಳ ರಕ್ಷಣೆ ಕೂಡಾ ಅಷ್ಟೇ ಸಹಾಯಕವಾಗುತ್ತದೆ ಎಂದು ರೈತ ಹೋರಾಟಗಾರ, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಸೋಮವಾರ ಅಭಿಪ್ರಾಯ ವ್ಯಕ್ತ ಪಡಿಸಿದರು.

ಸಮೀಪದ ಗುಡಿಹಾಳ ಗ್ರಾಮದ ರೈತ ಹೋರಾಟಗಾರ ಅಮರಣ್ಣ ಗುಡಿಹಾಳ ಅವರ ನುಡಿನಮನ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಕಳೆದ ನಾಲ್ಕು ದಶಕಗಳ ಕಾಲ ರೈತ ಪರ ಹೋರಾಟ ಮಾಡಿದವರು. ಅವರ ನಿಧನ ರೈತ ಹೋರಾಟಗಾರರಿಗೆ, ರೈತ ಸಂಘಗಳಿಗೆ ಸಂಕಷ್ಟ ತಂದಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ. ಅವರಂತೆ ನಾವು ಕೂಡಾ ಹೋರಾಟದ ಹಾದಿಯಲ್ಲಿ ಭಾಗಿಯಾಗಿ ರೈತರ ಹಿತ ಕಾಪಾಡಲು ಮುಂದಾಗಬೇಕು. ರೈತರು ಒಗ್ಗಟ್ಟಾಗಿದ್ದರೆ ಮಾತ್ರ ಹೋರಾಟಕ್ಕೆ ಬೆಲೆ ಬರುತ್ತದೆ. ನಾವು ಬೆಳೆದ ನಮ್ಮ ಬೆಳೆಗೆ ನಾವೇ ದರ ನಿಗದಿಮಾಡುವ ಕಾನೂನು ತರಬೇಕು. ಬಂಡವಾಳ ಶಾಹಿಗಳ ಹಿಡಿತಕ್ಕೆ ನಾವೆಲ್ಲರೂ ಬಲಿಯಾಗಿರುವುದು ದುರದೃಷ್ಟಕರ ವಿಷಯ. ಇವರಿಂದ ನಾವು ಹೊರಗಡೆ ಬರಬೇಕು. ಗ್ರಾಮೀಣ ಮಟ್ಟದಲ್ಲಿ ಕೆರೆಗಳ ರಕ್ಷಣೆ ಕುರಿತು ಚರ್ಚಿಸಲಾಗುವುದು ಎಂದರು. ಈ ವೇಳೆ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ, ಮಸ್ಕಿ ಶಾಸಕ ಬಸನಗೌಡ ಪಾಟಿಲ್ ತುರವಿಹಾಳ, ರೈತ ಸಂಘದ ಗೌರವಾದ್ಯಕ್ಷ ಚಾಮರಸ ಮಾಲೀಪಾಟಿಲ್, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ನಾಗರತ್ನ, ವೀರಭದ್ರಗೌಡ ಪಾಟೀಲ್, ರಾಜ್ಯ ರೈತ ಸಂಘದ ರಾಜ್ಯ ಅದ್ಯಕ್ಷ ಬಡಗಲಪುರ ನಾಗೇಂದ್ರ, ಹೆಚ್.ಬಿ.ಮುರಾರಿ, ಮಲ್ಲಿಕಾರ್ಜುನ, ಪಂಪಾಪತಿ ಗುಡಿಹಾಳ, ಈರಣ್ಣ ಅಂಕಶದೊಡ್ಡಿ ಸೇರಿದಂತೆ ಇತರಿದ್ದರು.



ಮುದಗಲ್ಲ ಸಮೀಪದ ಗುಡಿಹಾಳ ಗ್ರಾಮದ ರೈತ ಹೋರಾಟಗಾರ ಅಮರಣ್ಣ ಗುಡಿಹಾಳ ಅವರ ನುಡಿನಮನ ಕಾರ್ಯಕ್ರಮದಲ್ಲಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣಯ್ಯ ಮಾತನಾಡಿದರು.

ಹುಟ್ಟು ಹೋರಾಟಗಾರ ಅಮರಣ್ಣ ಗುಡಿಹಾಳ, ತನ್ನ ಇಡೀ ಜೀವನವನ್ನೆ ರೈತರ ಸಾಮಾಜಿಕ ನ್ಯಾಯಗಳಿಗಾಗಿ ಹೋರಾಟ ಮಾಡಿದ ವ್ಯಕ್ತಿ. ಸಹಾಯ ಸ್ವೀಕರಿಸಿದ್ದರೂ ಕೂಡ ಅನ್ಯಾಯದ ವಿರುದ್ಧ ಹೋರಾಟ ಮಾಡಿದ ವ್ಯಕ್ತಿ. ರಾಜಕೀಯ ವ್ಯವಸ್ಥೆಗಿಂತ ಸಂಘದ ಹೋರಾಟ ಅತ್ಯಂತ ಪ್ರಭಲ. ದೊಡ್ಡಿಗಳಲ್ಲಿ ಅರಣ್ಯ ಪ್ರದೇಶ ಜಮೀನು ರೈತರ ಪರವಾಗಿ ಮಾಡುವಲ್ಲಿ ನಿಷ್ಠೂರತೆಯ ಹೋರಾಟ ಮಾಡಿ ರೈತರಿಗೆ ನ್ಯಾಯ ಕೊಡಿಸುವಲ್ಲಿ ನಿರಂತರ ಮುಂದಾಳು ವಹಿಸಿರುವದು ಸ್ಮರಿಸಿದರು.

- ಅಮರೇಗೌಡ ಬಯ್ಯಾಪೂರ, ಮಾಜಿ ಸಚಿವರು, ಕುಷ್ಟಗಿ ಕ್ಷೇತ್ರ.

ಸುದ್ದಿ ಮಿಂಚು

ಬಂಗಾಳದ ಗೆಲುವಿಗೆ ಮೋದಿಗೆ ಜೈಕಾರ

ಜಿಲ್ಲಾದ್ಯಂತ ವಿಜಯೋತ್ಸವ | ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮ | ದೀದಿ ಆಡಳಿತಕ್ಕೆ ಅಂತ್ಯ

ದುರಾಡಳಿತಕ್ಕೆ ಸೋಲು, ಜನಸಾಮಾನ್ಯನಿಗೆ ಜಯ

ಬೀದರ್: ಪಂಚ ರಾಜ್ಯಗಳ ಚುನಾವಣೆ ಫಲಿತಾಂಶ ದುರಾಡಳಿತಕ್ಕೆ ಸೋಲು, ಜನಸಾಮಾನ್ಯನಿಗೆ ಗೆಲುವು ಎಂಬ ಸ್ಪಷ್ಟ ಸಂದೇಶ ನೀಡಿದೆ ಎಂದು ಮಾಜಿ ಸಚಿವ, ಔರಾದ್ ಶಾಸಕ ಪ್ರಭು ಚವ್ಹಾಣ್ ಹೇಳಿದ್ದಾರೆ. ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ, ಪರಿಣಾಮಕಾರಿ ಆಡಳಿತ ಮತ್ತು ಜನಪರ ಯೋಜನೆಗಳಿಗೆ ಸಿಕ್ಕ ಗೆಲುವಾಗಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಘಟನಾ ಶಕ್ತಿ, ರಾಜಕೀಯ ಕಾರ್ಯಯೋಜನೆ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಸಮರ್ಥ ಕೆಲಸವು ಮಹತ್ವದ ಪಾತ್ರ ವಹಿಸಿದೆ ಎಂದಿದ್ದಾರೆ. ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರ 15 ವರ್ಷದ ದುರಾಡಳಿತ, ದಬ್ಬಾಳಿಕೆ ಆಡಳಿತಕ್ಕೆ ಮತದಾರರು ತಿಲಾಂಜಲಿ ನೀಡಿದ್ದಾರೆ. ಜನ ವಿರೋಧಿ ನಿಲುವು ತಾಳಿದವರಿಗೆ ಇದೇ ಗತಿಯಾಗಲಿದೆ. ದೇಶದೆಲ್ಲೆಡೆ ಬಿಜೆಪಿ ಉತ್ತಮ ಸ್ಥಿತಿಯಲ್ಲಿದೆ. ಮುಂದಿನ ದಿನಗಳಲ್ಲಿ ಕರ್ನಾಟಕ ಒಳಗೊಂಡು ದೇಶದಿಂದ ಕಾಂಗ್ರೆಸ್ ನಿರ್ಮೂಲನೆಯಾಗಲಿದೆ ಎಂದು ಹೇಳಿದ್ದಾರೆ.

ಚಿಟಗುಪ್ಪ ಪಟ್ಟಣದಲ್ಲಿ ಪಶ್ಚಿಮ ಬಂಗಾಳ ಪುದುಚೇರಿ ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ ಪ್ರಯುಕ್ತ ಬಿಜೆಪಿ ಮುಖಂಡರು ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಜಿಲ್ಲಾ ವಕೀಲರ ಸಂಘಕ್ಕೆ ಆಯ್ಕೆಯಾದ ಅಧ್ಯಕ್ಷ ಸಂಜಯ್ ಮಠಪತಿ ಸೇರಿದಂತೆ ನೂತನ ಪದಾಧಿಕಾರಿಗಳನ್ನು ಬೀದರ್‌ನಲ್ಲಿ ಸನ್ಮಾನಿಸಲಾಯಿತು

ಜಿಲ್ಲಾ ವಕೀಲರ ಸಂಘಕ್ಕೆ ಆಯ್ಕೆ

ಬೀದರ್: ಜಿಲ್ಲಾ ವಕೀಲರ ಸಂಘದ 2026–27ನೇ ಸಾಲಿನ ಪದಾಧಿಕಾರಿಗಳ ಚುನಾವಣೆ ನಗರದಲ್ಲಿ ಶನಿವಾರ ನಡೆಯಿತು. ಸಂಘದ ನೂತನ ಅಧ್ಯಕ್ಷರಾಗಿ ಸಂಜಯ್ ಮಠಪತಿ, ಉಪಾಧ್ಯಕ್ಷರಾಗಿ ಸಂಜೀವಕುಮಾರ ಬಾಬಶೆಟ್ಟಿ, ಅಹಿಲ್ಯ ಸೂರ್ಯವಂಶಿ, ಪ್ರಧಾನ ಕಾರ್ಯದರ್ಶಿಯಾಗಿ ಜಗನ್ನಾಥ ಬೋರಾಳೆ ಆಣದೂರು, ಜಂಟಿ ಕಾರ್ಯದರ್ಶಿಯಾಗಿ ಉದಯಕುಮಾರ ಮೂಲಗೆ ಹಲಬರ್ಗಾ ಹಾಗೂ ಖಜಾಂಚಿಯಾಗಿ ಶಿವಲೀಲಾ ಕೋಡಗೆ ಆಯ್ಕೆಯಾದರು.

ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸಂಜೀವಕುಮಾರ ಬಾಬಶೆಟ್ಟಿ ಹಾಗೂ ಅಹಿಲ್ಯ ಸೂರ್ಯವಂಶಿ ಅವರಿಗೆ ಸಮಾನ ಮತಗಳು ಬಂದ ಕಾರಣ ಇಬ್ಬರನ್ನೂ ವಿಜೇತರೆಂದು ಘೋಷಿಸಲಾಯಿತು. ಒಂದು ವರ್ಷದ ಅವಧಿಯಲ್ಲಿ ಇಬ್ಬರ ಮಧ್ಯೆ ತಲಾ ಆರು ತಿಂಗಳ ಒಪ್ಪಂದ ಆಗಿದ್ದು, ಮೊದಲ ಆರು ತಿಂಗಳು ಸಂಜೀವಕುಮಾರ ಬಾಬಶೆಟ್ಟಿ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಚುನಾವಣಾಧಿಕಾರಿಯಾಗಿದ್ದ ಉಮಾಕಾಂತ ಜವಳೆ ಆಯ್ಕೆಯನ್ನು ಅಧಿಕೃತವಾಗಿ ಪ್ರಕಟಿಸಿ, ಪ್ರಮಾಣ ಪತ್ರ ವಿತರಿಸಿದರು. ನೂತನ ಪದಾಧಿಕಾರಿಗಳನ್ನು ನಿಕಟಪೂರ್ವ ಪದಾಧಿಕಾರಿಗಳು ಹಾಗೂ ವಕೀಲರು ಶಾಲು ಹೊದಿಸಿ, ಹೂಮಾಲೆ ಹಾಕಿ ಸನ್ಮಾನಿಸಿದರು.

ಮಕ್ಕಳ ಆಧಾರ್ ಬಯೋಮೆಟ್ರಿಕ್ ಫ್ರೀ ಅಪ್ಡೇಟ್ ಮಾಡಲು ಸೂಚನೆ

ಬೀದರ್:ಜಿಲ್ಲೆಯಾದ್ಯಂತ 5 ರಿಂದ 7 ಹಾಗೂ 15 ರಿಂದ 17 ವಯೋಮಿತಿಯ ಮಕ್ಕಳ ಆಧಾರ್ ಸಂಖ್ಯೆಗೆ ಕಡ್ಡಾಯ ಬೈಯೋಮೆಟ್ರಿಕ್ ಅಪ್ಡೇಟ್‌ಗಾಗಿ ಜಿಲ್ಲೆಯ ಎಲ್ಲಾ ಆಧಾರ್ ಕೇಂದ್ರಗಳಲ್ಲಿ ಉಚಿತವಾಗಿ ಅವಕಾಶ ಕಲ್ಪಿಸಲಾಗಿದೆ. ಈ ಪ್ರಕ್ರಿಯೆ ಪೂರ್ಣಗೊಳಿಸಲು 2026ನೇ ಸೆಪ್ಟೆಂಬರ್ 30ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದ್ದಾರೆ. ಪೋಷಕರು ತಮ್ಮ ಮಕ್ಕಳ ಆಧಾರ್ ಕಾರ್ಡ್ ಹಾಗೂ ಸಂಬಂಧಿಸಿದ ದಾಖಲೆಗಳೊಂದಿಗೆ ತಮ್ಮ ಹತ್ತಿರದ ಆಧಾರ್ ಕೇಂದ್ರಗಳಿಗೆ ಭೇಟಿ ನೀಡಿ ನವೀಕರಿಸಿಕೊಳ್ಳಬಹುದಾಗಿದೆ. ಇದರಿಂದಾಗಿ ಮಕ್ಕಳ ಶಾಲೆಯ ದಾಖಲಾತಿ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳು, ಸರ್ಕಾರದ ವಿವಿಧ ಯೋಜನೆಗಳು, ವಿದ್ಯಾರ್ಥಿ ವೇತನ, ತರಬೇತಿ ಸೇರಿದಂತೆ ಇತ್ಯಾದಿ ಯೋಜನೆಗಳ ಲಾಭ ಪಡೆಯಲು ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ಜಿಲ್ಲೆಯ ಎಲ್ಲಾ ಪೋಷಕರು ಈ ಪ್ರಕ್ರಿಯೆಯನ್ನು ಜವಾಬ್ದಾರಿಯಿಂದ ನಿರ್ವಹಿಸಿ ತಮ್ಮ ಮಕ್ಕಳಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕು. ಆಧಾರ್ ನಲ್ಲಿ ಜನನ ದಿನಾಂಕವನ್ನು ಒಂದು ಬಾರಿ ಮಾತ್ರ ತಿದ್ದುಪಡಿಗೆ ಹಾಗೂ ಹೆಸರು ತಿದ್ದುಪಡಿ ಕೂಡ ಎರಡು ಬಾರಿ ಮಾತ್ರ ತಿದ್ದುಪಡಿಗೆ ಅವಕಾಶ ಇರುವುದರಿಂದ ಪೋಷಕರು ಸದರಿ ತಿದ್ದುಪಡಿಗಳನ್ನು ಗಮನದಲ್ಲಿ ಇಟ್ಟುಕೊಂಡು ತಿದ್ದುಪಡಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಜಯಭೇರಿ: ಸಂತಸ

ಯಾದಗಿರಿ: ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ವಿಜಯಕ್ಕೆ ಕಾರಣರಾದ ಪಕ್ಷದ ಅಭ್ಯರ್ಥಿಗಳಿಗೆ ಹಾಗೂ ಮತ ಚಲಾಯಿಸಿದ ಮತದಾರ ಪ್ರಭುಗಳ ನಿರ್ಣಯಕ್ಕೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಡಾ.ಶರಣಭೂಪಾಲರೆಡ್ಡಿ ನಾಯ್ಕಲ್ ಸಂತಸ ವ್ಯಕ್ತಪಡಿಸಿದ್ದಾರೆ.

ಸಂ.ಕ.ಸಮಾಚಾರ ಬೀದರ್ :ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಭರ್ಜರಿ ಜಯ ಗಳಿಸಿದ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಕೇಸರಿ ಪಡೆ ವಿಜಯೋತ್ಸವ ಆಚರಿಸಿದೆ. ಮೊದಲ ಬಾರಿ ಪಶ್ಚಿಮ ಬಂಗಾಳದಲ್ಲಿ ಪಕ್ಷ ನಿಚ್ಚಳ ಬಹುಮತದಿಂದ ಗದ್ದುಗೆ ಹಿಡಿಯುತ್ತಿರುವುದು ಕೇಸರಿ ಪಡೆ ಉತ್ಸಾಹ ಇಮ್ಮಡಿಗೊಳಿಸಿದೆ.

ಪಂಚ ರಾಜ್ಯಗಳ ಪೈಕಿ ಎಲ್ಲರ ಚಿತ್ತ ಪಶ್ಚಿಮ ಬಂಗಾಳದ ಫಲಿತಾಂಶದತ್ತ ನೆಟ್ಟಿತ್ತು. ಮತದಾನೋತ್ತರ ಸಮೀಕ್ಷೆಗಳಲ್ಲಿ ಬಂಗಾಳದಲ್ಲಿ ಕಮಲ ಅರಳಲಿದೆ ಎಂಬ ಅಂಶ ಸ್ಪಷ್ಟವಾದ ಕಾರಣಕ್ಕೆ ಫಲಿತಾಂಶ ಮತ್ತಷ್ಟು ಕುತೂಹಲವಾಗಿತ್ತು. ಹೀಗಾಗಿ ಸೋಮವಾರ ಬೆಳಗ್ಗೆಯಿಂದ ಬಹುತೇಕರು ಚುನಾವಣಾ ರಿಸಲ್ಟ್ ನೋಡುವುದಕ್ಕೆ ಸಮಯ ಮೀಸಲಿಟ್ಟರು. ಬಂಗಾಳದಲ್ಲಿ ಬಿಜೆಪಿಯ ಕ್ಲೀನ್‌ಸ್ವೀಪ್ ಜಯ ದಾಖಲಿಸುವ ಮೂಲಕ 15 ವರ್ಷದ ಟಿಎಂಸಿಯ ಮಮತಾ ಬ್ಯಾನರ್ಜಿ ಆಡಳಿತಕ್ಕೆ ಇತಿಶ್ರೀ ಹಾಡಿರುವುದು ಅಧಿಕೃತವಾದಂತೆ ಎಲ್ಲೆಡೆ ಸಂಭ್ರಮಾಚರಣೆ ನಡೆದವು.

ಮಧ್ಯಾಹ್ನ ಬೀದರ್ ನಗರ ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕು ಕೇಂದ್ರ, ಹೋಬಳಿ ಕೇಂದ್ರ ಹಾಗೂ ಅನೇಕ ಗ್ರಾಮಗಳಲ್ಲಿಯೂ ಬಂಗಾಳದ ಗೆಲುವಿನ ವಿಜಯೋತ್ಸವ ನಡೆದವು. ದೀದಿ ಬಗ್ಗುಬಡಿದ ಮೋದಿಗೆ ಜೈಕಾರದ ಘೋಷಣೆಗಳು ಮೊಳಗಿದವು. ಭಾರತದ ಸುರಕ್ಷತೆಗೆ ಧಕ್ಕೆ ತರುವ ದೀದಿ ಆಡಳಿತ ಈಗ ಯುಗಾಂತ್ಯವಾಗಿದೆ. ಸನಾತನ ವಿರೋಧಿಗಳು, ಹಿಂದುತ್ವ ವಿರೋಧಿಗಳು ಮಣ್ಣು ಮುಕ್ಕಿದ್ದಾರೆ ಎಂಬಿತ್ಯಾದಿ ಉದ್ಘೋಷ ಮಾರ್ದನಿಸಿದವು.

ಬಿಜೆಪಿ ಹಾಗೂ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಬೀದರ್ ನಗರದ ಮನ್ನಳ್ಳಿ ರಸ್ತೆಯ ರಾಮ ಚೌಕ್‌ನಲ್ಲಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು. ಈ ವೇಳೆ ಯುವಕರು ಜೈ ಶ್ರೀರಾಮ್, ಜೈ ಮೋದಿ ಉದ್ಘೋಷ ಹಾಕುತ್ತ, ಕೈಯಲ್ಲಿ ಭಗ್ವಾ ಧ್ವಜ ಹಿಡಿದು ಕುಣಿದು ಕುಪ್ಪಳಿಸಿದರು.

ಬಿಜೆಪಿ ಮುಖಂಡ ರೇವಣಸಿದ್ದಪ್ಪ ಜಲಾದೆ ಮಾತನಾಡಿ, ಪಶ್ಚಿಮ ಬಂಗಾಳದ ಜಯ ಐತಿಹಾಸಿಕವಾಗಿದೆ. ಮುಕ್ತ, ನ್ಯಾಯಸಮ್ಮತ ಚುನಾವಣೆ ಹಾಗೂ ಹಿಂದೂಗಳ ಸಂಘಟಿತ ಪ್ರಯತ್ನದ ಪ್ರತಿಫಲವೇ ಇದಾಗಿದೆ. ಅನೇಕ ಕಾರ್ಯಕರ್ತರು ತಮ್ಮ ಪ್ರಾಣ ತ್ಯಾಗ ಮಾಡಿ ಪಕ್ಷ ಕಟ್ಟಿದ್ದರಿಂದಲೇ ಇಂದು ಬಂಗಾಳ ಕೇಸರಿಮಯವಾಗಿದೆ. ಡಿ. ಶ್ಯಾಮಪ್ರಸಾದ ಮುಖರ್ಜಿಯವರ ಆತ್ಮಕ್ಕೆ ಶಾಂತಿ ಕೊಟ್ಟ ದಿನವಿದು ಎಂದರೂ ತಪ್ಪಾಗಲಾರದು.

ಪ್ರಮುಖರಾದ ಶ್ರೀರಾಮ ಅಂಬುರೆ, ರಾಜಕುಮಾರ ಬಿಜ್ಜಾ, ಶಿವು ಫುಲಸೆ, ಸಂಗಮೇಶ ನಾಸಿಗಾರ, ವಿಲಾಸ ಪಾಟೀಲ್ ಹಕ್ಯಾಳ, ಜಾಧವ್, ಬಸವರಾಜ ಸ್ವಾಮಿ, ಶಿವಕಾಂತ ಪಾಟೀಲ್ ಇತರರಿದ್ದರು.

ಬಿಜೆಪಿ ಜಿಲ್ಲಾ ಘಟಕದಿಂದ ಬೀದರ್ ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್ ನೇತೃತ್ವದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಪ್ರಮುಖರಾದ ಈಶ್ವರಸಿಂಗ್ ಠಾಕೂರ್, ಬಾಬು ವಾಲಿ, ಶಶಿ ಹೊಸಳ್ಳಿ, ರಾಜಶೇಖರ ನಾಗಮೂರ್ತಿ, ನಾಗರಾಜ ಕರ್ಪೂರ್, ರಾಜಕುಮಾರ ಚಿದ್ರಿ, ಗಣೇಶ ಭೋಸ್ಲೆ, ಹಣಮಂತ ಬುಳ್ಳಾ, ಬಸವರಾಜ ಬಂಬಳಗಿ, ವಿರೂ ದಿಗ್ವಾಲ್, ದೀಪಕ್ ಗಾದಗೆ ಅಲಿಯಂಬರ್, ಸುಭಾಷ ಮಡಿವಾಳ, ಚಂದ್ರಶೇಖರ ಗಾದಾ, ಸಂಜಯ ಜೀರ್ಗೆ, ಚಂದ್ರಶೇಖರ ಶೇಖಾಪುರೆ, ರಾಜಕುಮಾರ ನೇಮತಾಬಾದೆ, ಗೋಪಿಕೃಷ್ಣ, ವೀರೇಶ್ ಸ್ವಾಮಿ ಇತರರಿದ್ದರು.

ಬೀದರ್ ನಗರದ ಡಾ.ಅಂಬೇಡ್ಕರ್ ವೃತ್ತದ ಹತ್ತಿರ ಜಿಲ್ಲಾ ಬಿಜೆಪಿಯಿಂದ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಇತರರಿದ್ದರು.

ಮನ್ನಾಎಖ್ಖೇಳ್ಳಿಯಲ್ಲಿ ವಿಜಯೋತ್ಸವ

ಬೀದರ್:ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಜಯಭೇರಿ ಹಿನ್ನೆಲೆಯಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಮನ್ನಾಎಖ್ಖೇಳ್ಳಿಯಲ್ಲಿ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ನೇತೃತ್ವದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಡಾ.ಅಂಬೇಡ್ಕರ್ ವೃತ್ತದ ಬಳಿ ಜಮಾಯಿಸಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಿಸಲಾಯಿತು. ಈ ವೇಳೆ ಮಾತನಾಡಿದ ಶಾಸಕ ಬೆಲ್ದಾಳೆ, ಕರ್ನಾಟಕದಲ್ಲಿ ಮುಂದೆ ಕಮಲ ಅರಳಲು ಈ ಫಲಿತಾಂಶ ದಿಕ್ಸೂಚಿಯಾಗಿದೆ. ಬಿಜೆಪಿಯ ಉತ್ತಮ ಆಡಳಿತ, ಜನಸೇವೆಗೆ ಸಿಕ್ಕಿರುವ ಗೆಲುವು ಇದಾಗಿದೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶ ವಿಶ್ವದ ವೇದಿಕೆಯಲ್ಲಿ ಎತ್ತರಕ್ಕೇರುತ್ತಿದೆ. ಗೃಹ ಸಚಿವ ಅಮಿತ್ ಶಾ ಅವರ ಸಂಘಟನೆ ಶಕ್ತಿಯಿಂದ ಪಕ್ಷ ಇನ್ನಷ್ಟು ಬಲಿಷ್ಠವಾಗಿದೆ. ಇದು ರಾಷ್ಟ್ರ ಹಿತದ ಜಯವಾಗಿದೆ ಎಂದು ಬಣ್ಣಿಸಿದರು. ದಕ್ಷಿಣ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರಾ ಬಗದಲ್, ಪ್ರಮುಖರಾದ ರಾಜರೆಡ್ಡಿ ಶಾಬಾದ್, ಝುರೆಪ್ಪಾ ಹಂದಿಕೇರಾ, ಬಸವರಾಜ ಬೋರಾಳ, ರವಿ ಬಾಲೆಬಾಯಿ, ರಾಜಕುಮಾರ ಪಾಂಚಾಳ, ಜಗನಾಥ ಮಜಗೆ, ಹೇಮಾ ತುಕ್ಕಾರೆಡ್ಡಿ, ಸಂತೋಷಿ ನಿಡವಂಚಾ, ತಾಜೋದ್ದಿನ್, ವಿನೋದ ಕೋಟೆ ಇತರರಿದ್ದರು.

ಪಶ್ಚಿಮ ಬಂಗಾಳದ ಮತದಾರರು ಬಿಜೆಪಿಗೆ ಗೆಲ್ಲಿಸುವ ಮೂಲಕ ಸಶಕ್ತ ಭಾರತಕ್ಕೆ ದೊಡ್ಡ ಶಕ್ತಿ ತುಂಬಿದ್ದಾರೆ. ಬಂಗಾಳದ ಮಮತಾ ಬ್ಯಾನರ್ಜಿ ಆಡಳಿತ ದೇಶದ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ರೀತಿಯಲ್ಲಿ ಕೆಲಸ ಮಾಡುತ್ತಿತ್ತು. ಅಕ್ರಮ ನುಸುಳುಕೋರರಿಗೆ ದೇಶದೊಳಗೆ ಸೇರಿಸಿ ಡೆಮಾಗ್ರಫಿ ಬದಲಿಸುವ ದೊಡ್ಡ ಹುನ್ನಾರವೇ ನಡೆದಿತ್ತು. ಇದಕ್ಕೆಲ್ಲ ಈ ಗೆಲುವು ಬ್ರೇಕ್ ಹಾಕಲಿದೆ.

■ ಸೋಮನಾಥ ಪಾಟೀಲ್
ಬಿಜೆಪಿ ಜಿಲ್ಲಾಧ್ಯಕ್ಷ

ದೇಶದ್ರೋಹಿ ಹಾಗೂ ಸಮಾಜಘಾತುಕ ಚಟುವಟಿಕೆಗಳ ಕಾರಣ ಪಶ್ಚಿಮ ಬಂಗಾಳ ಸರ್ಕಾರ ದೇಶಕ್ಕೆ ಅಪಾಯಕಾರಿಯಾಗಿ ಪರಿಣಮಿಸಿತ್ತು. ಒಂದು ಜಾತಿಗೆ ಎತ್ತಿ ಕಟ್ಟಿ ಇನ್ನೊಂದಿಗೆ ಜಾತಿ, ಧರ್ಮದವರ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಗುಂಡಾಗರ್ದಿ ಆಡಳಿತಕ್ಕೆ ಜನ ಬೇಸತ್ತಿದ್ದರು. ಟಿಎಂಸಿಗೆ ಕಿತ್ತೊಗೆಯುವ ಮೂಲಕ ಬಂಗಾಳದ ಜನರಿಗೆ ಈಗ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ.

■ ರೇವಣಸಿದ್ದಪ್ಪ ಜಲಾದೆ
ಬಿಜೆಪಿ ಹಿರಿಯ ಮುಖಂಡ

ದೇಶದ ಸುರಕ್ಷತೆಗಾಗಿ ಬಿಜೆಪಿ ಕೈ ಹಿಡಿದ ಬಂಗಾಳ ಮತದಾರರು

ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿ ಬಿಜೆಪಿ ಭರ್ಜರಿ ಜಯ ಬಾರಿಸಿದೆ. ಬಂಗಾಳ ಮಾತ್ರವಲ್ಲ, ದೇಶದ ಆಂತರಿಕ ಹಾಗೂ ಬಾಹ್ಯ ಸುರಕ್ಷತೆ ದೃಷ್ಟಿಯಿಂದ ಮತದಾರರು ಬಿಜೆಪಿ ಕೈ ಹಿಡಿದಿದ್ದಾರೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ, ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹೇಳಿದ್ದಾರೆ.

ಪಂಚ ರಾಜ್ಯಗಳ ಪೈಕಿ ಮೂರರಲ್ಲಿ ಮತದಾರರು ಬಿಜೆಪಿಗೆ ಭರಪೂರ ಸಾಥ್ ನೀಡಿ, ಪಕ್ಷದ ಮೇಲಿನ ವಿಶ್ವಾಸ ಮತ್ತಷ್ಟು ಗಟ್ಟಿಗೊಳಿಸಿದ್ದಾರೆ. 15 ವರ್ಷದಿಂದ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಜಾತಿ ಆಧಾರದಲ್ಲಿ ದಬ್ಬಾಳಿಕೆ, ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದರು. ವೋಟಿನ ಆಸೆಗಾಗಿ ಅಕ್ರಮ ಬಾಂಗ್ಲಾ ನುಸುಳುಕೋರರಿಗೆ ರೆಡ್ ಕಾರ್ಪೆಟ್ ಹಾಕಿದ್ದರು. ಇಡೀ ವ್ಯವಸ್ಥೆಯನ್ನೇ ಹಾಳು ಮಾಡಿದ್ದರು. ಮತದಾರರು ಇದರ ವಿರುದ್ಧ ಎಚ್ಚೆತ್ತುಕೊಂಡು ಬಿಜೆಪಿಗೆ ಗೆಲ್ಲಿಸಿ ಟಿಎಂಸಿಗೆ ಮಣ್ಣು ಮುಕ್ಕಿಸಿದ್ದಾರೆ. ಇದು ಬಿಜೆಪಿ ಗೆಲುವಲ್ಲ, ರಾಷ್ಟ್ರದ ಹಾಗೂ ಹಿಂದುತ್ವದ ನೆಲೆಯಲ್ಲಿ ಸುದೀರ್ಘ ಅವಧಿಯಿಂದ ಸಂಘರ್ಷ ನಡೆಸುತ್ತಿರುವ ಕಾರ್ಯಕರ್ತರ ಗೆಲುವಾಗಿದೆ ಎಂದು ವ್ಯಾಖ್ಯಾನಿಸಿದ್ದಾರೆ.

ಮಮತಾ ಆಡಳಿತದಿಂದ ಬಂಗಾಳದ ಜನರು ರೋಸಿ ಹೋಗಿದ್ದರು. ಇವರಿಗೆ ಮತ್ತೆ ಅಧಿಕಾರ ಕೊಟ್ಟರೆ ನಮ್ಮ ಉಳಿಗಾಲವಿಲ್ಲ ಎಂದರಿತ ಮತದಾರರು ಟಿಎಂಸಿಗೆ ತಕ್ಕ ಪಾಠ ಕಲಿಸಿ ಹದಿನೈದು ವರ್ಷದ ದುರಾಡಳಿತಕ್ಕೆ ಅಂತ್ಯ ಹಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಬಿಜೆಪಿ ಟೀಮ್ ಕಳೆದ ಹಲವು ವರ್ಷಗಳಿಂದ ನಡೆಸುತ್ತಿದ್ದ ವ್ಯವಸ್ಥಿತ ಪ್ರಯತ್ನ, ತಂತ್ರಗಾರಿಕೆ ಈಗ ಫಲ ನೀಡಿವೆ. ದೀದಿ ಬೇಡ ಮೋದಿ ಬೇಕು ಎಂದು ಮತದಾರರು ದೃಢ ನಿಶ್ಚಯ ಕೈಗೊಂಡು ಬಿಜೆಪಿಗೆ ಅಭೂತಪೂರ್ವ ಜಯ ಕೊಟ್ಟಿದ್ದಾರೆ. ಬಂಗಾಳದ ಜಯ ಭಾರತದ ಆಂತರಿಕ ಹಾಗೂ ಬಾಹ್ಯ ಸುರಕ್ಷತೆ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದ್ದಾರೆ.

ಅಸ್ಸಾಂನಲ್ಲಿ ಬಿಜೆಪಿ ಸತತ ಮೂರನೇ ಸಲ ಗೆದ್ದು ದಾಖಲೆ ಮಾಡಿದೆ. ಅಸ್ಸಾಂ ಸಿಎಂ ಹಿಮಂತ್ ಬಿಸ್ವಾ ಸರ್ಮಾ ಎರಡು ಅವಧಿಯಿಂದ ಅತ್ಯುತ್ತಮ ಕೆಲಸ ಮಾಡಿದ್ದಕ್ಕೆ ಅಲ್ಲಿನ ಜನ ಮೂರನೇ ಬಾರಿಗೆ ಮತ್ತಷ್ಟು ಹೆಚ್ಚು ಸ್ಥಾನ ಕೊಟ್ಟು ಭರ್ಜರಿ ವಿಜಯ ನೀಡಿದ್ದಾರೆ. ಪುದುಚೇರಿಯಲ್ಲಿ ಸಹ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರುತ್ತಿದೆ. ಪಂಚ ರಾಜ್ಯಗಳ ಫಲಿತಾಂಶ ಬಿಜೆಪಿ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದ್ದು, ಬರುವ ಚುನಾವಣೆಗಳಲ್ಲಿ ಬಿಜೆಪಿ ಭರ್ಜರಿ ಜಯಕ್ಕೆ ದಿಕ್ಸೂಚಿಯಾಗಿದೆ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳ ಸೇರಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಜಯ ಗಳಿಸಿದ ಹಿನ್ನೆಲೆಯಲ್ಲಿ ಸೋಮವಾರ ಬೀದರ್ ನಗರದ ಮನ್ನಳ್ಳಿ ರಸ್ತೆಯ ರಾಮ ಚೌಕ್‌ನಲ್ಲಿ ಬಿಜೆಪಿ ಹಾಗೂ ಹಿಂದು ಪರ ಸಂಘಟನೆ ಪ್ರಮುಖರು ವಿಜಯೋತ್ಸವ ಆಚರಿಸಿದರು.

ದೇಶವಿರೋಧಿ ಶಕ್ತಿಗಳಿಗೆ ಪಾಠ

ಬೀದರ್: ಪಶ್ಚಿಮ ಬಂಗಾಳ ಸೇರಿ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ಜನತೆ ಬಿಜೆಪಿಗೆ ಅಭೂತಪೂರ್ವವಾದ ಬೆಂಬಲ ನೀಡಿ, ಪಾಕಿಸ್ತಾನ, ಬಾಂಗ್ಲಾದೇಶಿಯವರಿಗೆ ಸಹಕರಿಸುತ್ತಿದ್ದ ದೇಶ ವಿರೋಧಿ ಶಕ್ತಿಗಳಿಗೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಹೇಳಿದ್ದಾರೆ. ಶೇ.33 ಮಹಿಳಾ ಮೀಸಲಾತಿಗೆ ವಿರೋಧಿಸಿದ್ದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳಿಗೆ ಜನರು ಬುದ್ಧಿ ಕಲಿಸಿದ್ದಾರೆ. ದೇಶದ ಜನರು ಮೋದಿ ಅವರ ನಾಯಕತ್ವ ಮೇಲೆ ಗಟ್ಟಿಯಾದ ವಿಶ್ವಾಸವಿಟ್ಟಿದ್ದು, ಮುಂದೆ ಕರ್ನಾಟಕ ಸೇರಿದಂತೆ ದೇಶದೆಲ್ಲೆಡೆ ತನ್ನ ಸಾಮರ್ಥ್ಯ ತೋರಿಸಲಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. ದೇಶದ ಸುರಕ್ಷತೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವು ಅಗತ್ಯವಾಗಿತ್ತು. ಬಾಂಗ್ಲಾದೇಶಿಯರಿಂದ, ರೋಹಿಂಗ್ಯಾಗಳಿಂದ ಅಮಾಯಕ ಪಶ್ಚಿಮ ಬಂಗಾಳಿಯರನ್ನು ರಕ್ಷಿಸಬೇಕಾಗಿತ್ತು. ಇದಕ್ಕೆ ಪೂರಕವಾಗಿ ಬಿಜೆಪಿ ಗೆದ್ದಿದ್ದು, ಹೊಸ ಅಧ್ಯಾಯ ಆರಂಭವಾದಂತಾಗಿದೆ. ಬಿಜೆಪಿ ಸಂಸ್ಥಾಪಕರಲ್ಲಿ ಒಬ್ಬರಾದ ಡಾ.ಶ್ಯಾಮಪ್ರಸಾದ ಮುಖರ್ಜಿ ಹುಟ್ಟಿ ಬೆಳೆದ ನಾಡಿನಲ್ಲಿ ಮೊದಲ ಬಾರಿ ಪಕ್ಷ ಅಧಿಕಾರಕ್ಕೆ ಬಂದಿದ್ದು ಚರಿತ್ರಾರ್ಹವಾಗಿದೆ ಎಂದಿದ್ದಾರೆ.

ಪಕ್ಷಿಗಳಿಗೆ ಕುಡಿಯುವ ನೀರಿನ ಅಭಿಯಾನ

ಪಕ್ಷಿಗಳಿಗೆ ಕುಡಿಯುವ ನೀರಿನ ಅಭಿಯಾನಕ್ಕೆ ಬರೀದ್‌ಶಾಹಿ ಉದ್ಯಾನದಲ್ಲಿ ಡಾ.ಗಂಗಾಂಬಿಕಾ ಅಕ್ಕ ಚಾಲನೆ ನೀಡಿದರು. ವೀರಭದ್ರಪ್ಪ ಉಪ್ಪಿನ್, ಗಂಗಪ್ಪ ಸಾವಳೆ ಇತರರಿದ್ದರು.

ಸಂ.ಕ.ಸಮಾಚಾರ ಬೀದರ್:ಹೆಚ್ಚುತ್ತಿರುವ ಬಿಸಿಲು ಹಾಗೂ ತಾಪಮಾನದಿಂದ ಪಶು–ಪಕ್ಷಿಗಳಿಗೆ ಉಂಟಾಗುತ್ತಿರುವ ತೊಂದರೆ ಹಿನ್ನೆಲೆಯಲ್ಲಿ ನಗರದ ಬರೀದ್‌ಶಾಹಿ ಉದ್ಯಾನದಲ್ಲಿ ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಅಭಿಯಾನ ಕೈಗೊಳ್ಳಲಾಯಿತು.

ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಪೂಜ್ಯ ಡಾ.ಗಂಗಾಂಬಿಕಾ ಅಕ್ಕ ಅವರು ಮಾತನಾಡಿ, ಪಕ್ಷಿಗಳ ಮೇಲೆ ದಯೆ ತೋರಿಸಿ, ಅವುಗಳಿಗೆ ನೀರು ಒದಗಿಸುವುದು ನಮ್ಮ ಸಾಮಾಜಿಕ ಜವಾಬ್ದಾರಿ. ಪಕ್ಷಿಗಳು ತಮ್ಮ ಬಾಯಾರಿಕೆಯನ್ನು ಹೇಳಿಕೊಳ್ಳುವುದಿಲ್ಲ. ಆದ್ದರಿಂದ ಮನೆ ಆವರಣಗಳಲ್ಲಿ, ಗಿಡ–ಮರಗಳ ಕೆಳಗೆ ಸಾಧ್ಯವಾದ ಸ್ಥಳಗಳಲ್ಲಿ ನೀರಿನ ಪಾತ್ರೆಗಳನ್ನು ಇಡುವುದು ಅಗತ್ಯ ಎಂದು ಸಾರ್ವಜನಿಕರಿಗೆ ಕರೆ ನೀಡಿದರು.

ರಾಜ್ಯ ಹಿರಿಯ ನಾಗರಿಕರ ಪ್ರಶಸ್ತಿ ಪುರಸ್ಕೃತರಾದ ವೀರಭದ್ರಪ್ಪ ಉಪ್ಪಿನ್ ಮಾತನಾಡಿ, ಪಕ್ಷಿಗಳು ಮತ್ತು ಪರಿಸರ ಪರಸ್ಪರ ಅವಲಂಬಿತವಾಗಿವೆ. ಪರಿಸರ ಸಮತೋಲನ ಕಾಪಾಡುವಲ್ಲಿ ಪಕ್ಷಿಗಳ ಪಾತ್ರ ಮಹತ್ವದ್ದಾಗಿದೆ. ಕಳೆದ ಹತ್ತು ವರ್ಷಗಳಿಂದ ನಗರದ ವಿವಿಧ ಸ್ಥಳಗಳಲ್ಲಿ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಲಾಗುತ್ತಿದ್ದು, ಈ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದು ಹೇಳಿದರು.

ಈ ವೇಳೆ ಯೋಗ ತಂಡದಿಂದ ಡಾ. ಗಂಗಾಂಬಿಕಾ ಅಕ್ಕ ಅವರಿಗೆ ಗೌರವಿಸಲಾಯಿತು. ಗಂಗಪ್ಪ ಸಾವಳೆ ಅಧ್ಯಕ್ಷತೆ ವಹಿಸಿದ್ದರು. ಡಾ.ನಂದಕುಮಾರ ತಾಂದಳೆ, ಈಶ್ವರ ಕನೇರಿ, ಮೋಹನ ಏಳನೂರಕರ್, ನೀಲಮ್ಮ ರೂಗನ್, ಯೋಗೇಂದ್ರ ಯದಲಾಪುರೆ, ಪುಷ್ಪಾ ಕಪಲಾಪುರ, ಅರುಣಾ ಪಾಟೀಲ್, ಮಲ್ಲಿಕಾರ್ಜುನ ಹಂಡೆ, ಗುರುಸ್ವಾಮಿ, ಸಂಜು ಪಾಟೀಲ್, ಮಲ್ಲಿಕಾರ್ಜುನ ಪಾಟೀಲ್, ಅಶೋಕ, ಸಂಜು ಶೀಲವಂತ, ವೀರಶೆಟ್ಟಿ, ಅಂತೇಶ್ವರ ಶೆಟಕಾರ್, ನಂದಕುಮಾರ ಕಾವಡಿ, ಚಂದ್ರಪ್ಪ ಬಿರಾದಾರ, ಮಹಾಲಿಂಗಪ್ಪ ಬೆಲ್ದಾಳೆ, ಪ್ರಭುಶೆಟ್ಟಿ ಮುಲಗೆ, ಪುಣ್ಯಾವತಿ ವಿಸಾಜಿ, ಮಲ್ಲಿಕಾರ್ಜುನ ಪಂಚಾಕ್ಷರ, ಎಸ್.ಬಿ.ಬಿರಾದಾರ, ಸಿದ್ದಯ್ಯ ಕಾವಡಿಮಠ, ಜ್ಞಾನೇಶ್ವರ, ರಾಚಯ್ಯ ಸ್ವಾಮಿ, ಶಂಕರ್ ಚಿದ್ರಿ ಇತರರಿದ್ದರು.

ಮುಖ್ಯರಸ್ತೆಯಲ್ಲಿ ಬೃಹತ್ ಗುಂಡಿಗಳ ದರ್ಬಾರ್

ಟೀಚರ್ಸ್ ಕಾಲೋನಿಯ ಅವಾಂತರ | ರಸ್ತೆ ಮೇಲೆ ನಿಲ್ಲುವ ಚರಂಡಿ ನೀರು

■ ಶಶಿಕಾಂತ ಭಗೋಜಿ

ಸಂ.ಕ.ಸಮಾಚಾರ ಹುಮನಾಬಾದ್ : ನಗರದ ಟೀಚರ್ಸ್ ಕಾಲೋನಿಗೆ ತೆರಳುವ ಮುಖ್ಯರಸ್ತೆ ತಗ್ಗು ಗುಂಡಿಗಳಿಂದ ಆವೃತವಾಗಿದ್ದು, ಜನ, ವಾಹನ ಸಂಚಾರ ಕಷ್ಟವಾಗಿದ್ದು, ಪುರಸಭೆ ಚುನಾಯಿತ ಪ್ರತಿನಿಧಿಗಳು, ಸದ್ಯ ಪುರಸಭೆಯಲ್ಲಿರುವ ವಿವಿಧ ಹಂತದ ಅಧಿಕಾರಿಗಳಿಗೆ ಈ ವಿಷಯ ಗೊತ್ತೇ ಇಲ್ಲವೆಂದೇನಲ್ಲ. ಎಲ್ಲರಿಗೂ ಗೊತ್ತಿದ್ದರೂ ಅದನ್ನು ಸರಿ ಪಡಿಸುವುದಕ್ಕೆ ಆಸಕ್ತಿ ತೋರದ ಏಕೈಕ ಕಾರಣ ಹದಗೆಟ್ಟ ರಸ್ತೆಗೆ ಈವರೆಗೆ ದುರುಸ್ತಿ ಯೋಗ ಮಾತ್ರ ಕೂಡಿಬಂದಿಲ್ಲ ಅನ್ನೋದು ಜನರ ಗಂಭೀರ ಆರೋಪವಾಗಿದೆ.

ಇಡೀ ಬಡಾವಣೆಯಲ್ಲಿ ಸಮರ್ಪಕ ಚರಂಡಿ ಸೌಲಭ್ಯವಿಲ್ಲದ ಕಾರಣ, ಬಡಾವಣೆಯ ತ್ಯಾಜ್ಯ ನೀರು ರಸ್ತೆಮಧ್ಯ ಸೇರುತ್ತದೆ. ರಸ್ತೆ ಚನ್ನಾಗಿದ್ದರೆ ನೀರು ಒಂದು ಕಡೆ ಸರಾಗವಾಗಿ ಹೋಗಬಹುದಾಗಿದೆ. ಆದರೆ ಗುಂಡಿಮಧ್ಯ ರಸ್ತೆ ನಿರ್ಮಿಸಿದಂತೆ ಭಾಸವಾಗುತ್ತದೆ. ಸಣ್ಣಪುಟ್ಟ ಗುಂಡಿಗಳಾಗಿದ್ರೆ ಹೇಗೋ ಅಲ್ಲಿಂದ ದಾಟಕೊಂಡು ಹೋಗಬಹುದು. ಅಡಿ ಆಳ ಗಾತ್ರದ ಗುಂಡಿಗಳಾದ ಕಾರಣ ನಿತ್ಯ ನಾಲ್ಕಾರು ಜನ ವಾಹನ ಸವಾರರು ಬಿದ್ದು ಗಾಯಗೊಳ್ಳುವುದು ಇಲ್ಲಿ ಸಾಮಾನ್ಯವಾಗಿದೆ. ಬೇಸಿಗೆ ಅವಧಿಯಲ್ಲೇ ಪರಿಸ್ಥಿತಿ ಹೀಗಿರಬೇಕಾದರೆ, ಮಳೆಗಾಲದಲ್ಲಿ ಪರಿಸ್ಥಿತಿ ಊಹಿಸಲು ಸಾಧ್ಯವಿಲ್ಲ. ನಿತ್ಯ ಶಾಲೆಗೆ ಹೋಗುವ ಮಕ್ಕಳು, ಶಿಕ್ಷಕರು ಹಾಗೂ ಪಾಲಕರು ಕೆಂಪು ರಾಡಿ ಬಟ್ಟೆಗಳ ಮೇಲೆ ಸಿಡಿಸಿಕೊಂಡು ಪರಸ್ಪರ ಕಚ್ಚಾಡುವುದು ಕೂಡ ಇಲ್ಲಿ ಕಾಮನ್ ಆಗಿದೆ. ಇನ್ನು ಮುಂದಾದರೂ ಸಂಬಂಧಿತರು ಅಭಿವೃದ್ಧಿಪಡಿಸುವ ಮೂಲಕ ಸಾರ್ವಜನಿಕ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು ಎಂಬುದು ಸಾರ್ವಜನಿಕರ ಒತ್ತಾಸೆ.

ಹುಮನಾಬಾದ್ ಟೀಚರ್ಸ್ ಕಾಲೋನಿ ಮುಖ್ಯ ರಸ್ತೆಯಲ್ಲಿ ಬೃಹತ್ ಗಾತ್ರದ ಗುಂಡಿಗಳು ಬಿದ್ದಿರುವುದು.

ಹಣ ದುರ್ಬಳಕೆ ಕುರಿತು ಸಾರ್ವಜನಿಕ ವಲಯದಲ್ಲಿ ನಡೆಯುತ್ತಿರುವ ಚರ್ಚೆ ಗಂಭೀರ ಪರಿಗಣಿಸಿ, ತಪ್ಪಿತಸ್ತರು ಯಾರಾದರೂ ಸರಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವುದುರ ಜೊತೆಗೆ ಮಳೆಗಾಲ ಒಳಗಾಗಿ ರಸ್ತೆ ಕಾಮಗಾರಿ ಪೂರ್ಣಗೊಳಿಸಬೇಕು.

■ ಗುಂಡಾರೆಡ್ಡಿ ಪುಟ್ಕಲ್, ಸಾಮಾಜಿಕ ಕಾರ್ಯಕರ್ತ

ಕಲ್ಯಾಣದಲ್ಲಿ ವಿಶ್ವದ ಅತಿ ಎತ್ತರದ ಇಷ್ಟಲಿಂಗ

ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿಕೆ | ಅನುಭವ ಮಂಟಪ ಕಾಮಗಾರಿ ಪರಿಶೀಲನೆ

ಸಂ.ಕ.ಸಮಾಚಾರ ಬಸವಕಲ್ಯಾಣ: ಇಲ್ಲಿನ ನೂತನ ಅನುಭವ ಮಂಟಪದಲ್ಲಿ ನಿರ್ಮಾಣವಾಗುತ್ತಿರುವ ವಿಶ್ವದ ಅತೀ ಎತ್ತರದ (55 ಮೀಟರ್) ಇಷ್ಟಲಿಂಗ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಸೋಮವಾರ ಪೂಜೆ ಸಲ್ಲಿಸಿದರು.

ಬಳಿಕ ಅನುಭವ ಮಂಟಪದ ಕಾಮಗಾರಿಯನ್ನು ಪರಿಶೀಲಿಸಿ ಮಾತನಾಡಿದ ಅವರು, ಬಸವಾದಿ ಶರಣರು ಜಗತ್ತಿನ ಸರ್ವಶ್ರೇಷ್ಠ ದಾರ್ಶನಿಕರು, ಮಹಾ ಮಾನವತಾವಾದಿಗಳು. ಕಾಯಕವೇ ಕೈಲಾಸ ತತ್ವವನ್ನು ಅಳವಡಿಸಿಕೊಂಡು ಜಗತ್ತಿಗೆ ಪ್ರಥಮ ಬಾರಿಗೆ ಅನುಭವ ಮಂಟಪ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆ ನೀಡಿದ್ದರು. ಇಲ್ಲಿನ ಅನುಭವ ಮಂಟಪ ಕಾಮಗಾರಿ ಈವರೆಗೆ ಶೇ.75ಕ್ಕೂ ಹೆಚ್ಚು ಮುಗಿದಿದೆ. ಬರುವ ಮಾರ್ಚ್ ಅಂತ್ಯದೊಳಗೆ ಕಾಮಗಾರಿ ಮುಗಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ಹೇಳಿದರು.

770 ಕಂಬಗಳ ಮೇಲೆ 770 ಶರಣರ ವಚನ ಕೆತ್ತಲಾಗುತ್ತಿದೆ. ವೈಜ್ಞಾನಿಕವಾಗಿ ನೆಮ್ಮದಿ ನೀಡುವಂಥ ಇಷ್ಟಲಿಂಗ ತರಬೇತಿ ಕೇಂದ್ರ ನಿರ್ಮಿಸಲಾಗುತ್ತಿದೆ. ಬದುಕನ್ನು ಹಸನಗೊಳಿಸಿಕೊಳ್ಳಲು ವೈಚಾರಿಕ ವಚನಗಳು ಸಹ ಆಧುನಿಕ ವಿಜ್ಞಾನ, ತಂತ್ರಜ್ಞಾನ ಮೂಲಕ ಐಟಿ ವಿಜ್ಞಾನಿಗಳ ಮೂಲಕವಾಗಿ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಕಾಯಕವೇ ಕೈಲಾಸ ಎಂದು ಹೇಳಿರುವ ಶರಣರ ಜೀವನವನ್ನು ಬಿಂಬಿಸುವ ಶರಣ ಗ್ರಾಮ ನಿರ್ಮಾಣಗೊಳ್ಳುತ್ತಿದೆ. ಈಗಿನ ಯುವಕರಿಗೆ ಅಗತ್ಯವಾದ ಕೌಶಲ್ಯ ತರಬೇತಿ ನೀಡುವ ಕೇಂದ್ರ ಆರಂಭಿಸಲಾಗುವುದು. ವೃತ್ತಿಯಲ್ಲಿ ಯಾವುದೂ ಮೇಲು–ಕೀಳಿಲ್ಲ. ಶರಣರ ಚಿಂತನೆಗಳು ಜಾಗತಿಕ ಮೌಲ್ಯ ಹೊಂದಿವೆ. ಅನುಭವ ಮಂಟಪ ಕೆಲಸ ಮುಗಿದ ಬಳಿಕ ಇದು ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಹಾಗೂ ಪ್ರವಾಸಿ ತಾಣವಾಗಲಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಅನುಭವ ಮಂಟಪ ಸಂಯೋಜಕ ಡಾ.ಬಾಬಾಸಾಹೇಬ್ ಗಡ್ಡೆ, ಶಶಿಕಾಂತ ದುರ್ಗೆ, ನೀಲಕಂಠ ರಾಠೋಡ್ ಇತರರಿದ್ದರು. ಕಟ್ಟಡ ಕಾಮಗಾರಿ ವಹಿಸಿಕೊಂಡ ಶಿರ್ಕೆ ಕನ್ಸಟ್ರಕ್ಷನ್ ಸಂಸ್ಥೆ ಪ್ರಮುಖರು ಈವರೆಗಿನ ಕಾಮಗಾರಿ ಕುರಿತು ಸಚಿವರಿಗೆ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸೋಮವಾರ ಇಲ್ಲಿನ ಅನುಭವ ಮಂಟಪ ಕಾಮಗಾರಿ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಇತರರಿದ್ದರು.

ಅನುಭವ ಮಂಟಪಕ್ಕೆ ಹಣದ ಕೊರತೆ ಇಲ್ಲ. ಇದುವರೆಗೂ 480 ಕೋಟಿ ರೂ. ಖರ್ಚಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಈ ಪೈಕಿ 280 ಕೋಟಿ ರೂ. ಅನುದಾನ ನೀಡಿದ್ದಾರೆ. ಉಳಿದ ಹಣವನ್ನು ಸಹ ಶೀಘ್ರವೇ ಬಿಡುಗಡೆ ಮಾಡಲಿದ್ದಾರೆ. ಕಾಲಮಿತಿಯಲ್ಲಿ ಕಾಮಗಾತಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಇಲ್ಲಿಯ ಕೆಲಸ ಯೋಜನಾಬದ್ಧವಾಗಿ ನಡೆದಿವೆ.

■ ಈಶ್ವರ ಖಂಡ್ರೆ, ಸಚಿವ

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ–ಬೆಂಗಳೂರು–ಕಲಬುರಗಿ
ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ
: ನೂತನ ವಿಳಾಸ :
ನಂ. 1–94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆಠ್ ಬಂಗ್ಲೋ
ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ – 585 102
ಮೊ: 9449985695-9481000249

ಸುದ್ದಿ ಮಿಂಚು

ಆಳಂದ: 5ರಿಂದ ಮೂರು ದಿನಗಳ ಕಾಲ ನಡೆಯುವ ಡಾ. ಅಂಬೇಡ್ಕರ್ ಜಯಂತಿ ಉತ್ಸವ ಕುರಿತಾಗಿ ಪ್ರಚಾರ ಸಮಿತಿ ಅಧ್ಯಕ್ಷ ಶಿವಪುತ್ರ ನಡಗೇರಿ, ಅಧ್ಯಕ್ಷ ಸೂರ್ಯಕಾಂತ ಸಾಲೇಗಾಂವ ಇತರರು ವಾಲ್‌ಪೋಸ್ಟರ್ ಬಿಡುಗಡೆ ಮಾಡಿದರು.

ಇಂದು ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಗೆ ಚಾಲನೆ

ನಾಳೆ ಶ್ರೀರಾಮ ಮಾರುಕಟ್ಟೆಯಲ್ಲಿ ಸಭೆ: ನಾಡಿದ್ದು ಮೆರವಣಿಗೆ

ಸಂ.ಕ. ಸಮಾಚಾರ ಆಳಂದ: ಡಾ. ಅಂಬೇಡ್ಕರ್ ಜಯಂತಿ ಅಂಗವಾಗಿ ಪಟ್ಟಣದಲ್ಲಿ 5ರಿಂದ ಮೂರು ದಿನಗಳ ಕಾಲ ಉತ್ಸವ ಆಚರಿಸಲಾಗುತ್ತಿದೆ ಎಂದು ಉತ್ಸವದ ಪ್ರಚಾರ ಸಮಿತಿ ಅಧ್ಯಕ್ಷ ಶಿವಪುತ್ರ ನಡಗೇರಿ, ಅಧ್ಯಕ್ಷ ಸೂರ್ಯಕಾಂತ ಸಾಲೇಗಾಂವ ಹೇಳಿದರು.

ಪಟ್ಟಣದಲ್ಲಿ ಈ ಕುರಿತು ಕಾರ್ಯಕ್ರಮದ ಪ್ರಚಾರದ ವಾಲ್‌ಪೋಸ್ಟ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಥಮ ಬಾರಿಗೆ ಸ್ಥಳೀಯ ಭೀಮನಗರದ ತಾಲೂಕು ಮಟ್ಟದ ಸಮಿತಿಯ ಆಶ್ರಯದಲ್ಲಿ ಈ ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

5ರಂದು ಸಂಜೆ 7ಗಂಟೆಗೆ ಪಟ್ಟಣದ ಭೀಮನಗರದಲ್ಲಿ ಅಂಬೇಡ್ಕರ್ ಅವರ ಜೀವನ ಮತ್ತು ಸಂದೇಶ ಕುರಿತಾದ ನಾಟಕ ಪ್ರದರ್ಶನ ನಡೆಯುವುದು. 6ರಂದು ಸಂಜೆ 5ಗಂಟೆಗೆ ಪಟ್ಟಣದ ಶ್ರೀರಾಮ ಮಾರುಕಟ್ಟೆಯಲ್ಲಿ ಬಹಿರಂಗ ಸಮಾರಂಭ ನಡೆಯಲಿದೆ. ಸಾನ್ನಿಧ್ಯವನ್ನು ಮೈಸೂರು ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಅಣದೂರ ಬುದ್ಧ ವಿಹಾರದ ಬಂತೇ ವರಜ್ಯೋತಿ ಥೆರೋ ನೇತೃತ್ವ ವಹಿಸುವರು. ನಿರಗುಡಿಯ ಹವಾ ಮಲ್ಲಯ್ಯ ಮುತ್ಯಾ, ಶಾಸಕ ಬಿ.ಆರ್. ಪಾಟೀಲ, ಮಾಜಿ ಶಾಸಕ ಸುಭಾಷ ಗುತ್ತೇದಾರ ಆಗಮಿಸುವರು, ಸಮಾರಂಭ ಉದ್ಘಾಟನೆಯನ್ನು ಮಾಜಿ ಸಚಿವ ಎನ್. ಮಹೇಶ ನೆರವೇರಿಸುವರು. ಅಧ್ಯಕ್ಷತೆ ಸಮಿತಿ ಗೌರವ ಅಧ್ಯಕ್ಷ ಪಾಂಡುರಂಗ ಮೊದಲೆ ಸೇರಿ ಅಧಿಕಾರಿಗಳು, ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

7ರಂದು ಬುದ್ಧ, ಬಸವ ಮತ್ತು ಡಾ. ಅಂಬೇಡ್ಕರ್ ಅವರ ಭಾವಚಿತ್ರಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ದಿನವಿಡಿ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಈ ಮುನ್ನದಿನವಾದ 6ರಂದು ನಡೆಯುವ ಭಾರಿ ಬಹಿರಂಗ ಸಮಾರಂಭ ಜರುಗಲಿದೆ. ಉಪಾಧ್ಯಕ್ಷ ಗಂಗಾರಾಮ ಮುದಗಲೆ, ನಾಗರಾಜ ದೇವನೂರ, ಲಕ್ಷ್ಮಣ ಝುಳಕಿಕರ್, ದಯಾನಂದ ಸಾಲೇಗಾಂವ, ಮುತ್ತಣ್ಣಾ ಜಂಗಲೆ, ಮತ್ತಿತರರು ಇದ್ದರು.

ರಾಜ್ಯಾಧ್ಯಕ್ಷೆಯಾಗಿ ರೇಷ್ಮಾ ಆಯ್ಕೆ

ಜೇವರ್ಗಿ: ಸಮಗ್ರ ಕರ್ನಾಟಕ ಉಪಾಧ್ಯಾಯರ ಪ್ರಗತಿಪರ ಸಂಘದ ಪೂರ್ವ ಪ್ರಾಥಮಿಕ ವಿಭಾಗಕ್ಕೆ ರಾಜ್ಯ ಪದಾಧಿಕಾರಿಗಳ ಆಯ್ಕೆ ನಡೆಸಲಾಯಿತು. ನೂತನ ರಾಜ್ಯಾಧ್ಯಕ್ಷೆಯಾಗಿ ರೇಷ್ಮಾ ಪಟೇಲ್ ಆಯ್ಕೆಯಾಗಿದ್ದಾರೆ ಎಂದು ಎಸ್‌ಕೆಯುಪಿಎಸ್ ಸಂಸ್ಥಾಪಕ ಹಾಗೂ ರಾಜ್ಯಾಧ್ಯಕ್ಷ ಗುರುಪಾದಪ್ಪ ಕೋಗನೂರ ತಿಳಿಸಿದ್ದಾರೆ.

ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಮಟ್ಟದ ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿರುವ ಸಮಗ್ರ ಕರ್ನಾಟಕ ಉಪಾಧ್ಯಾಯರ ಪ್ರಗತಿಪರ ಸಂಘ (ಎಸ್ ಕೆ ಯು ಪಿ ಎಸ್) ರಾಜ್ಯ ಘಟಕವು ಪೂರ್ವ ಪ್ರಾಥಮಿಕ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ.

ರಾಜ್ಯದ ಪೂರ್ವ ಪ್ರಾಥಮಿಕ ಶಾಲೆಗಳ ರಾಜ್ಯಾಧ್ಯಕ್ಷೆಯಾಗಿ ರೇಷ್ಮಾ ಪಟೇಲ್(ಅಂಗನವಾಡಿ ಕೇಂದ್ರ, ವಡ್ಡರಗಲ್ಲಿ, ಜೇವರ್ಗಿ ತಾಲೂಕು), ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಮಂಜುಳಾ ಗುಂದಗಿಮಠ (ಅಂಗನವಾಡಿ ಕೇಂದ್ರ ಸಂಖ್ಯೆ-07, ಯಡ್ರಾಮಿ ತಾಲೂಕು) ಅವರನ್ನು ನೇಮಕ ಮಾಡಲಾಗಿದೆ. ಇವರಿಬ್ಬರ ಜತೆಗೆ ಪೂರ್ವ ಪ್ರಾಥಮಿಕದಿಂದ 37 ಶಿಕ್ಷಕಿಯರು ರಾಜ್ಯ ಪದಾಧಿಕಾರಿಗಳಾಗಿ ನೇಮಕಾತಿ ಹೊಂದಿದ್ದಾರೆ ಎಂದು ಕೋಗನೂರ ತಿಳಿಸಿದ್ದಾರೆ.

ಕೂಡಲ ಸಂಗಮದವರೆಗೆ ಪಾದಯಾತ್ರೆ

ಕಲಬುರಗಿ: ಎತ್ತಿನ ರೈತರು ಉಳಿಯದಿದ್ದರೆ ಭಾರತದ ಸಂವಿಧಾನ ಉಳಿಯಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ ಪಡೆಯಲು ಬಸವಣ್ಣನವರು ನ್ಯಾಯ ಪಂಚಾಯತಿ ನಡೆಸುತ್ತಿದ್ದ ಬಸವಕಲ್ಯಾಣದ ಪರುಷ ಕಟ್ಟೆಯಿಂದ ಕೂಡಲಸಂಗಮದವರೆಗೆ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ನಂದಿಕೂಗು ಅಭಿಯಾನದ ಸ್ವಯಂ ಸೇವಕ ಬಸವರಾಜ ಬಿರಾದಾರ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪಾದಯಾತ್ರೆ ಏಪ್ರಿಲ್ 30 ರಂದು ಬಸವಣ್ಣನವರ ಜನ್ಮ ಸ್ಥಳವಾದ ಬಸವನ ಬಾಗೇವಾಡಿಯಲ್ಲಿ ಒಂದು ಸಾವಿರ ಎತ್ತಿನ ಬಂಡಿಗಳೊಂದಿಗೆ ಪಾದಯಾತ್ರೆಗೆ ಚಾಲನೆ ನೀಡಲಾಗಿದ್ದು, ಮೇ 13 ರಂದು ಬಸವಕಲ್ಯಾಣ ಕೂಡಲ ಸಂಗಮಲ್ಲಿ ಸಂಪನ್ನಗೊಳ್ಳಲಿದೆ ಎಂದರು.

ಸಮಾರೋಪ ಸಮಾರಂಭದಲ್ಲಿ ನಾಡಿನ ಹಲವಾರು ಮಠಾಧೀಶರು, ಗಣ್ಯರು ಭಾಗವಹಿಸಿ ಈ ವಿಷಯ ಕುರಿತು ಚಿಂತನ ಮಂಥನ ನಡೆಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಪತ್ರ ಸಲ್ಲಿಸಿ ಈ ಕುರಿತು ಕಾನೂನು ರೂಪಿಸಲು ಹಕ್ಕೊತ್ತಾಯ ಮಂಡಿಸಲಾಗುವುದು ಎಂದರು.

ಪಾದಯಾತ್ರೆಯ ನೇತೃತ್ವವನ್ನು ಪೂಜ್ಯ ಗುರುಬಸವ ಪಟ್ಟದ್ದೇವರು ವಹಿಸಲಿದ್ದು, ಶ್ರೀಗಳ ಸಹೋದರ ಮತ್ತು ನಂದಿ ಕೂಗು ಅಭಿಯಾನದ ಮಾರ್ಗದರ್ಶಕ ಸೋಮಲಿಂಗ ಪಾಟೀಲ ಭಾಗವಹಿಸಲಿದ್ದಾರೆಂದು ತಿಳಿಸಿದರು.

ಪಾದಯಾತ್ರೆಯ ಮೂಲಕ ಕೃಷಿಕರನ್ನು ಪ್ರತಿ ತಿಂಗಳು 11 ಸಾವಿರ ಪ್ರೋತ್ಸಾಹಧನ ನೀಡುವ ಯೋಜನೆ ಜಾರಿಗೆ ತರಬೇಕು, ನಂದಿಯನ್ನು ರಾಷ್ಟ್ರೀಯ ಶಕ್ತಿ ಎಂದು ಘೋಷಿಸಿ ರಾಜ್ಯವಾರು 10 ಪ್ರತಿಶತ ಬಜೆಟ್ ಮೀಸಲಿಡುವ ಕಾನೂನು ಜಾರಿಗೆ ತರಬೇಕೆಂದು ಒತ್ತಾಯಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಆಕಾಶ ಮೋಳಕೇರಿ ಇದ್ದರು.

ವಿಮಾನ ಸೇವೆಗೆ ಅನುದಾನ: ಕೆಕೆಸಿಸಿಐ ಹರ್ಷ

ಕಲಬುರಗಿ: ಕಲಬುರಗಿ ಮತ್ತು ಬೆಂಗಳೂರು ನಡುವಿನ ವಿಮಾನ ಸೇವೆಯನ್ನು ಪುನರಾರಂಭಿಸಲು ರಾಜ್ಯ ಸರ್ಕಾರ 28.47 ಕೋಟಿ ವಿಜಿಎಫ್ (ವಿಜಿಎಫ್) ಅನುದಾನ ಮಂಜೂರು ಮಾಡಿರುವುದನ್ನು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಕೆಕೆಸಿಸಿಐ) ಅಧ್ಯಕ್ಷ ಶರಣಬಸಪ್ಪ ಎಮ್. ಪಪ್ಪಾ ಹಾಗೂ ಗೌರವ ಕಾರ್ಯದರ್ಶಿ ಶಿವರಾಜ್ ಇಂಗಿನಶೆಟ್ಟಿ ಸ್ವಾಗತಿಸಿದ್ದಾರೆ.

ಕಳೆದ ಅಕ್ಟೋಬರ್ 15ರಿಂದ ಸ್ಥಗಿತಗೊಂಡಿದ್ದ ವಿಮಾನ ಸೇವೆಯಿಂದಾಗಿ ಈ ಭಾಗದ ಉದ್ಯಮಿಗಳು ಹಾಗೂ ಸಾರ್ವಜನಿಕರಿಗೆ ದೊಡ್ಡ ಮಟ್ಟದ ತೊಂದರೆಯಾಗಿತ್ತು. ಇದೀಗ ಸ್ಟಾರ್ ಏರ್ ಸಂಸ್ಥೆಯ ಮೂಲಕ ಸೇವೆ ಆರಂಭಿಸಲು ಸರ್ಕಾರ ಮುಂದಾಗಿರುವುದು ಸರಿಯಾದ ಕ್ರಮವಾಗಿದೆ ಎಂದಿದ್ದಾರೆ.

ಅನುದಾನ ಘೋಷಣೆಯಾಗಿದ್ದರೂ ಸ್ಟಾರ್ ಏರ್ ಇನ್ನೂ ಸೇವೆ ಆರಂಭಿಸಿಲ್ಲ. ವಿಳಂಬ ಮಾಡದೆ ಕೂಡಲೇ ವಿಮಾನ ಹಾರಾಟ ಶುರು ಮಾಡಬೇಕು. ಪ್ರಯಾಣಿಕರಿಗೆ ಅನುಕೂಲವಾಗುವಂತೆ ಬೆಳಿಗ್ಗೆ ಮತ್ತು ಸಂಜೆ ವೇಳಾಪಟ್ಟಿ ಇರಬೇಕು. ಅಸಮರ್ಪಕ ಸಮಯವನ್ನು ನಿಗದಿಪಡಿಸಬಾರದು. ಸರ್ಕಾರದ ನೆರವು ಇರುವುದರಿಂದ ಟಿಕೆಟ್ ದರವು 5,000 ಮೀರದಂತೆ ಕ್ರಮ ವಹಿಸಬೇಕು. ರಾಜ್ಯ ಸರ್ಕಾರದ ಈಗಿನ ನೆರವು ತಾತ್ಕಾಲಿಕವಾಗಿದ್ದು, ಕಲಬುರಗಿಗೆ ಶಾಶ್ವತ ವಿಮಾನ ಸಂಪರ್ಕಕ್ಕಾಗಿ ಉಡಾನ್ 2.0 ಯೋಜನೆಯಡಿ ಸೇರ್ಪಡೆಗೊಳಿಸುವುದು ಅತ್ಯಗತ್ಯ. ಕೇಂದ್ರ ಸರ್ಕಾರವು ಕೂಡಲೇ ಇದರ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಬೇಕು ಎಂದು ಒತ್ತಾಯಿಸಿದ್ದಾರೆ.

ಬೆಂಗಳೂರು ಮಾತ್ರವಲ್ಲದೆ ಮುಂಬೈ, ದೆಹಲಿ, ಹೈದರಾಬಾದ್, ಮಂಗಳೂರು, ತಿರುಪತಿ ಹಾಗೂ ಅಹಮದಾಬಾದ್ ನಗರಗಳಿಗೂ ಕಲಬುರಗಿಯಿಂದ ವಿಮಾನ ಸಂಪರ್ಕ ಕಲ್ಪಿಸಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದ್ದಾರೆ.

ಉಷ್ಣಾಂಶ ಏರಿಳಿತ: ಜನ ಹೈರಾಣ

ಸೋಲಾಪುರ: ಕಳೆದ 2-3 ದಿನಗಳಿಂದ ಸತತವಾಗಿ ತಾಪಮಾನದಲ್ಲಿ ಏರಿಳಿತವಾಗುತ್ತಿದ್ದು. 40.8 ಡಿಗ್ರಿ ಸೆಲ್ಸಿಯಸ್‌ವಿದ್ದ ತಾಪಮಾನ ಒಮ್ಮೆಲೆ 42.8ಕ್ಕೆ ಏರಿದೆ. ಉಷ್ಣಾಂಶ ಏರಿಳಿತ ಆಗುತ್ತಿರುವುದರಿಂದ. ನಾಗರಿಕರು ಆರೋಗ್ಯದ ಕಾಳಜಿ ವಹಿಸಬೇಕೆಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಸಿಲಿಂಡರ್ ಅಭಾವವಿಲ್ಲದಿದ್ದರೂ ತಪ್ಪದ ಪರದಾಟ

ಅಡುಗೆ ಅನಿಲ ಹೊಸ ಸಂಪರ್ಕ ಬಂದ್‌ಗೆ ಸಾರ್ವಜನಿಕರ ಆಕ್ರೋಶ | ಸಾವಿರಾರು ಕುಟುಂಬಗಳ ಸಂಕಷ್ಟ ಹೇಳತೀರದು

■ ರಾಯಪ್ಪ ಕಮರವಾಡಿ

ಚಿತ್ತಾಪುರ: ಇರಾನ್ ಮತ್ತು ಅಮೆರಿಕ ನಡುವಿನ ಯುದ್ಧ ಘೋಷಣೆ ಪರಿಣಾಮ ಅಡುಗೆ ಅನಿಲ ಸರಬರಾಜಿನ ಮೇಲೆ ಭಾರಿ ಹೊಡೆತ ಬಿದ್ದಿದ್ದು, ಗ್ಯಾಸ್ ಸಿಲಿಂಡರ್ ಪಡೆಯಲು ಗ್ರಾಹಕರು ಪರದಾಡುವಂತಾಗಿದೆ.

ಎರಡು ತಿಂಗಳಿಂದ ಚಿತ್ತಾಪುರ ತಾಲೂಕಿನಾದ್ಯಂತ ಗ್ಯಾಸ್ ಸಿಲೆಂಡರ್ ಅಭಾವ ಉಂಟಾಗಿದ್ದು ಗ್ರಾಹಕರು ಕಂಗಾಲಾಗಿದ್ದಾರೆ. ಅಡುಗೆ ಅನಿಲಕ್ಕಾಗಿ ಮುಂಗಡ ನೋಂದಣಿ ಮಾಡಿದ ಗ್ರಾಹಕರಿಗೆ ಸರಿಯಾಗಿ ಸಿಲಿಂಡರ್ ತಲುಪಿಸಲು ಸಾಧ್ಯವಾಗದೆ ಗ್ಯಾಸ್ ಏಜೆನ್ಸಿದಾರರು ಬಿಕ್ಕಟ್ಟು ದೃಷ್ಟಿಗೆ ಕಾರಣವಾಗಿದ್ದಾರೆ. ಸಿಲಿಂಡರ್ ಅಭಾವ ಇಲ್ಲ ಎನ್ನುತ್ತಲೇ ಜನರ ಪರದಾಟಕ್ಕೆ ಏಜೆನ್ಸಿಯವರೇ ಮುನ್ನುಡಿ ಬರೆದಿದ್ದಾರೆ. ಅಡುಗೆ ಅನಿಲದ ಮೇಲೆ ಅವಲಂಬಿತವಾದ ಸಾವಿರಾರು ಕುಟುಂಬಗಳು ಭಾರಿ ಸಂಕಷ್ಟ ಎದುರಿಸುವಂತಾಗಿದೆ.

ಚಿತ್ತಾಪುರ ತಾಲೂಕಿನ ವಿವಿಧ ಹಳ್ಳಿಗಳಿಗೆ ಹಾಗೂ ನಗರ ಪ್ರದೇಶಗಳಿಗೆ ಸರಬರಾಜು ಮಾಡಲು ಹೊರಟಿರುವ ಗ್ಯಾಸ್ ಹೊತ್ತ ವಾಹನಗಳು.

ಚಿತ್ತಾಪುರ, ವಾಡಿ, ನಾಲವಾರ ಯಾಗಾಪೂರ, ದಿಗ್ಗಾಂವ, ಅಳ್ಳೊಳ್ಳಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಸಾವಿರಾರು ಜನ ಗ್ರಾಹಕರನ್ನು ಹೊಂದಿರುವ ಇಂಧಾನೆ ಗ್ಯಾಸ್ ಏಜೆನ್ಸಿ ಸಾರ್ವಜನಿಕರ ಬೇಡಿಕೆಗೆ ತಕ್ಕಂತೆ ಅಡುಗೆ ಅನಿಲ ಒದಗಿಸುವಲ್ಲಿ ವಿಫಲವಾಗಿದೆ. ಗ್ಯಾಸ್ ಪಡೆಯಲು ಮುಂಗಡ ನೋಂದಣಿ ಮಾಡಿ ಹತ್ತು ದಿನಗಳು ಕಳೆದರೂ ಸಿಲೆಂಡರ್ ತಲುಪಿಸಲು ಸಾಧ್ಯವಾಗುತ್ತಿಲ್ಲ. ಪರಿಣಾಮ ಗ್ರಾಹಕರು ಖಾಲಿ ಸಿಲಿಂಡರ್‌ಗಳನ್ನು ಪಾಳಿಗೆ ಇಟ್ಟು ದಿನವಿಡೀ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಗ್ರಾಹಕರ ಆಕ್ರೋಶಕ್ಕೆ ಕಾರಣವಾಗಿದೆ.

ಹೊಸ ಸಂಪರ್ಕ ಕೈಬಿಟ್ಟ ಏಜೆನ್ಸಿ

ಅಡುಗೆ ಅನಿಲಕ್ಕಾಗಿ ಪರದಾಡುವ ನೋಂದಣಿದಾರ ಗ್ರಾಹಕರು ಒಂದೆಡೆಯಾದರೆ, ಹೊಸ ಸಿಲೆಂಡರ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಲಾಗದೆ ತೊಂದರೆ ಅನುಭವಿಸುತ್ತಿರುವ ಕುಟುಂಬಗಳು ಇನ್ನೊಂದೆಡೆ. ನಮಗೆ ಹೊಸ ಸಂಪರ್ಕ ನೀಡುವಂತೆ ಕೋರಿ ಅರ್ಜಿ ಸಲ್ಲಿಸಲು ಗ್ಯಾಸ್ ಏಜೆನ್ಸಿಗೆ ಬರುತ್ತಿರುವ ಸಾರ್ವಜನಿಕರು ನೋಂದಣಿ ಸಾಧ್ಯವಾಗದೆ ನಿರಾಸೆಗೊಳ್ಳುತ್ತಿದ್ದಾರೆ.

ಹೇಗಾದರೂ ಮಾಡಿ ನಮಗೆ ಅನಿಲ ಸಂಪರ್ಕ ಕೊಡಿ ಎಂದು ಗ್ರಾಹಕರು ಅಲವತ್ತುಕೊಳ್ಳುತ್ತಿರುವ ಪ್ರಸಂಗಗಳು ಚಿತ್ತಾಪುರದಲ್ಲಿ ಕಂಡುಬರುತ್ತಿವೆ. ಹೊಸ ಸಂಪರ್ಕದ ಅರ್ಜಿಗಳನ್ನು ಸ್ವೀಕರಿಸಲು ಹಿಂದೇಟು ಹಾಕುತ್ತಿರುವ ಏಜೆನ್ಸಿದಾರರು ಹಲವು ನೆಪಗಳನ್ನು ಮುಂದಿಡುತ್ತಿದ್ದಾರೆ. ಕೆಲವರಿಗೆ ಸರ್ವರ್ ಸಮಸ್ಯೆ ಎಂದು ಹೇಳಿ ಕಳಿಸುತ್ತಿದ್ದರೆ, ಇನ್ನೂ ಹಲವರಿಗೆ ಹೊಸ ಸಂಪರ್ಕ ನೀಡುವ ವ್ಯವಸ್ಥೆ ಮೇಲಿನಿಂದಲೇ ಬಂದ್ ಆಗಿದೆ. ಎರಡು ತಿಂಗಳ ನಂತರ ಬನ್ನಿ ಎಂದು ಹೊರ ಹಾಕುತ್ತಿದ್ದಾರೆ ಎಂಬ ಆರೋಪ ಜನರಿಂದ ಕೇಳಿ ಬಂದಿದೆ.

ಕೃತಕ ಅಭಾವ ದೃಷ್ಟಿ ಮಾಡುವ ಮೂಲಕ ಕಾಳಸಂತೆಯಲ್ಲಿ ಗ್ಯಾಸ್ ಮಾರಾಟವಾಗುತ್ತಿದೆ ಎಂಬ ಗಂಭೀರ ಆರೋಪ ಗ್ರಾಹಕರಿಂದಲೇ ವ್ಯಕ್ತವಾಗಿದೆ. ಆದ್ದರಿಂದ ಸಂಬಂಧಿಸಿದ ಮೇಲಾಧಿಕಾರಿಗಳು ಮಧ್ಯ ಪ್ರವೇಶಿಸುವ ಮೂಲಕ ಚಿತ್ತಾಪುರ ತಾಲೂಕಿನಲ್ಲಿ ಸೃಷ್ಟಿಯಾಗಿರುವ ಗ್ಯಾಸ್ ಸಿಲಿಂಡರ್ ಸಮಸ್ಯೆಯನ್ನು ಬಗೆಹರಿಸಬೇಕಿದೆ. ಅಡುಗೆ ಅನಿಲ ಹೊಸ ಸಂಪರ್ಕ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

> **ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಉಜ್ವಲ ಗ್ಯಾಸ್ ಯೋಜನೆ ಅಡಿಯಲ್ಲಿ ಈಗಾಗಲೆ ತಾಲೂಕಿನಲ್ಲಿ 1330 ಹೊಸ ಸಂಪರ್ಕಗಳನ್ನು ನೀಡಲಾಗಿದೆ. ಇನ್ನು 200 ಅರ್ಜಿಗಳು ಮಾತ್ರ ಬಾಕಿ ಉಳಿದುಕೊಂಡಿವೆ. ಹೊಸ ಸಂಪರ್ಕ ಬಂದ್ ಆಗಿಲ್ಲ, ಸರ್ವರ್ ಸಮಸ್ಯೆ ಉಂಟಾಗಿದೆ ಎನ್ನುತ್ತಾರೆ ಚಿತ್ತಾಪುರ ಗುರು ಗ್ಯಾಸ್ ಏಜೆನ್ಸಿ ಸಿಬ್ಬಂದಿ.**

ಕಲಬುರಗಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಶಾಸಕರು, ಮುಖಂಡರು ಇದ್ದರು.

ಬಿಎಸ್‌ವೈ ಅಭಿಮಾನೋತ್ಸವ ಸಂಭ್ರಮ 9ರಂದು

ಸಂ.ಕ.ಸಮಾಚಾರ ಕಲಬುರಗಿ: ಮಾಜಿ ಮುಖ್ಯಮಂತ್ರಿ, ಬಿಜೆಪಿ ಮಾರ್ಗದರ್ಶಕರಾದ ಬಿ.ಎಸ್.ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನಲೆಯಲ್ಲಿ ಅಭಿಮಾನಿಗಳಿಂದ ಅಭಿಮಾನೋತ್ಸವ ಕಾರ್ಯಕ್ರಮವನ್ನು ಚಿತ್ರದುರ್ಗದ ಹೊರವಲಯದ ಮಾದರ ಚನ್ನಯ್ಯರವರ ಆವರಣದಲ್ಲಿ 9ರಂದು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಗ್ರಾಮೀಣ ಜಿಲ್ಲಾಧ್ಯಕ್ಷ ಅಶೋಕ ಬಗಲಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೃಹತ್ ಅಭಿಮಾನೋತ್ಸವ ಕಾರ್ಯಕ್ರಮವೂ ಪಕ್ಷಾತೀತವಾಗಿ ನಡೆಯಲಿದ್ದು, 10 ಲಕ್ಷಕ್ಕೂ ಅಧಿಕ ಜನ ಭಾಗವಹಿಸುವ ನಿರೀಕ್ಷೆ ಇದೆ. ಕಲ್ಯಾಣ ಕರ್ನಾಟಕದಿಂದ ಸುಮಾರು 40 ಸಾವಿರಕ್ಕೂ ಅಧಿಕ ಜನ ಭಾಗವಹಿಸಲಿದ್ದಾರೆ ಎಂದರು.

ಕಲಬುರಗಿ ಸೇರಿ ಕಲ್ಯಾಣ ಕರ್ನಾಟಕದ ಪ್ರಗತಿಗೆ ಬಹುದೊಡ್ಡ ಕೊಡುಗೆ ನೀಡಿರುವ ಬಿ.ಎಸ್.ಯಡಿಯೂರಪ್ಪ ಅವರನ್ನು ಅಭಿಮಾನದಿಂದ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಲಬುರಗಿ ಜಿಲ್ಲೆಯಿಂದಲೂ ಸಹಸ್ರಾರು ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದರು.

ಬಿಎಸ್ ಯಡಿಯೂರಪ್ಪನವರಿಗೆ ರಾಜಕೀಯ ಜೀವನದ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಸಮಯ ತೆಗೆದುಕೊಂಡು ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಭಿನಂದನಾ ಕಾರ್ಯಕ್ರಮ ಆಯೋಜನೆಗೆ ಯೋಜನೆ ತಯಾರಿಸಲಾಗುತ್ತಿದೆ ಎಂದು ಮಾಜಿ ಶಾಸಕ ದತ್ತಾತ್ರೆಯ ಪಾಟೀಲ್ ರೇವೂರ ಹೇಳಿದರು.

ಶಾಸಕರಾದ ಬಸವರಾಜ ಮತ್ತಿಮಡು, ಡಾ.ಅವಿನಾಶ ಜಾಧವ, ಮಾಜಿ ಸಂಸದ ಡಾ.ಉಮೇಶ ಜಾಧವ, ವಿಧಾನ ಪರಿಷತ್ ಸದಸ್ಯರಾದ ಡಾ.ಬಿ.ಜಿ.ಪಾಟೀಲ್, ಶಶೀಲ ನಮೋಶಿ, ಮುಖಂಡರಾದ ಅಮರನಾಥ ಪಾಟೀಲ್, ಅವ್ವಣ್ಣ ಮ್ಯಾಕೇರಿ, ಶಿವರಾಜ ರದ್ದೇವಾಡಗಿ, ಶರಣಪ್ಪ ತಳವಾರ, ಚಂದ್ರಶೇಖರ ಪರಸರೆಡ್ಡಿ, ಉಮೇಶ ಪಾಟೀಲ್, ಗಿರಿರಾಜ ಎಳಮೇಲಿ, ಲಿಂಗರಾಜ ಬಿರಾದಾರ, ಬಾಬುರಾವ ಹಾಗರಗುಂಡಗಿ, ಆನಂದ ಪಾಟೀಲ್ ಸೇರಿ ಇತರರಿದ್ದರು.

> **ಅಮಿತ್ ಶಾ ಉದ್ಘಾಟನೆ**
>
> **ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೇಂದ್ರದ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ರಾಜ್ಯ ನಾಯಕರಾದ ಡಿ.ವಿ.ಸದಾನಂದಗೌಡ, ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಚಲವಾದಿ ನಾರಾಯಣಸ್ವಾಮಿ ಆಗಮಿಸಲಿದ್ದು, ಗೋವಿಂದ ಕಾರಜೋಳ ಅಧ್ಯಕ್ಷತೆ ವಹಿಸಲಿದ್ದಾರೆ.**
>
> ■ **ಬಸವರಾಜ ಮತ್ತಿಮಡು, ಶಾಸಕ.**

ಕರ್ಮವೀರ ಓದಿರಿ

ಕೊನೆಗೂ ಸುಧಾರಣೆ ಕಂಡ ಚಿತ್ತಾಪುರ-ರಾವೂರ ರಸ್ತೆ

ಸಂ.ಕ. ಸಮಾಚಾರ ಚಿತ್ತಾಪುರ: ವಿಪರೀತ ಹದಗೆಟ್ಟಿದ್ದ ಚಿತ್ತಾಪುರ-ರಾವೂರ ನಡುವಿನ ರಸ್ತೆ ಮರು ಡಾಂಬರೀಕರಣಗೊಂಡಿದ್ದು, ವಾಹನ ಸವಾರರು ನಿಟ್ಟುಸಿರುಬಿಟ್ಟಿದ್ದಾರೆ. ಸಿಮೆಂಟ್ ಸಾಗಾಣಿಕೆಯ ಭಾರಿ ವಾಹನಗಳ ಸಂಚಾರದಿಂದ ಸಂಪೂರ್ಣ ಹದಗೆಟ್ಟಿದ್ದ ಚಿತ್ತಾಪುರ-ರಾವೂರ ರಸ್ತೆಯನ್ನು ಅಭಿವೃದ್ಧಿಪಡಿಸುವಲ್ಲಿ ಲೋಕೋಪಯೋಗಿ ಇಲಾಖೆ ಯಶಸ್ವಿಯಾಗಿದ್ದು, ಪ್ರಯಾಣಿಕರಲ್ಲಿ ಹರ್ಷ ಮೂಡಿಸಿದೆ.

ಮೂರು ವರ್ಷಗಳ ಹಿಂದೆ ಅಭಿವೃದ್ಧಿಪಡಿಸಲಾಗಿದ್ದ ಈ ಡಾಂಬರೀಕರಣ ರಸ್ತೆ ಸಂಪೂರ್ಣ ಹದಗೆಟ್ಟು ಹೋಗಿತ್ತು. ರಸ್ತೆಯುದ್ದಕ್ಕೂ ಕಂದಕಗಳು ಬಿದ್ದು ವಾಹನ ಅಪಘಾತಗಳಿಗೆ ಕಾರಣವಾಗಿತ್ತು. ಸಿಮೆಂಟ್ ಲಾರಿಗಳ ಓಡಾಟದಿಂದ ರಸ್ತೆಯ ಡಾಂಬರ್ ಕಿತ್ತು ಹೋಗಿ ರಸ್ತೆ ಪುಡಿಪುಡಿಯಾಗಿತ್ತು. ಚಿತ್ತಾಪುರ-ರಾವೂರ ಮಧ್ಯೆ ಸಂಚರಿಸುವ ಬೈಕ್ ಸವಾರರು, ಕಾರು ಚಾಲಕರು, ಬಸ್ ಪ್ರಯಾಣಿಕರು ನರಕಮಯ ರಸ್ತೆಯಿಂದ ತೀವ್ರ ತೊಂದರೆ ಅನುಭವಿಸುವಂತಾಗಿತ್ತು. ತಾಲೂಕು ಕೇಂದ್ರಕ್ಕೆ ಬಂದು ಹೋಗುವ ಈ ಭಾಗದ ವಿವಿಧ ಗ್ರಾಮಗಳ ಜನರು ಹದಗೆಟ್ಟ ರಸ್ತೆಯಿಂದ ಬೇಸತ್ತು ಹೋಗಿದ್ದರು. ರಸ್ತೆ ಅಭಿವೃದ್ಧಿಪಡಿಸದ ಅಧಿಕಾರಿಗಳಿಗೆ ಶಾಪ ಹಾಕಿ ಆಕ್ರೋಶ ವ್ಯಕ್ತಪಡಿಸುತ್ತಿದ್ದರು.

ಸಾರ್ವಜನಿಕರ ಟೀಕೆಯಿಂದ ಎಚ್ಚೆತ್ತ ಲೋಕೋಪಯೋಗಿ ಇಲಾಖೆಯು, ಕೊನೆಗೂ ರಸ್ತೆ ಸುಧಾರಣೆ ಕೈಗೆತ್ತಿಕೊಂಡು ಮರು ಡಾಂಬರೀಕರಣ ಮಾಡಿದ್ದು, ಸುಗಮ ಸಂಚಾರಕ್ಕೆ ಅನುಕೂಲಕರವಾಗಿದೆ. ಹದಗೆಟ್ಟ ರಸ್ತೆಯ ಸುಧಾರಣೆಗೆ 1 ಕೋಟಿ ರೂ. ಅನುದಾನ ಖರ್ಚು ಮಾಡಿರುವ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಉತ್ತಮ ಡಾಂಬರೀಕರಣ ರಸ್ತೆ ನಿರ್ಮಾಣ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ದುರ್ಗಮ ರಸ್ತೆಯಲ್ಲಿ ಸಂಚರಿಸಿ ಧೂಳಿನ ಕಿರಿಕಿರಿಗೆ ಬೇಸತ್ತಿದ್ದ ವಾಹನ ಸವಾರರು ಈಗ ಸುಖಕರ ಪ್ರಯಾಣ ಅನುಭವಿಸುತ್ತಿದ್ದಾರೆ. ತಡವಾಗಿಯಾದರೂ ಎಚ್ಚೆತ್ತುಕೊಂಡ ಲೋಕೋಪಯೋಗಿ ಇಲಾಖೆ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಸ್ತೆಯ ಸಾಮರ್ಥ್ಯಕಿಂತ ಅಧಿಕ ಭಾರದ ಗೂಡ್ಸ್ ವಾಹನಗಳು ಸಂಚರಿಸಿದರೆ ಪುನಃ ರಸ್ತೆ ಹದಗೆಟ್ಟು "ಅದೇ ರಾಗ ಅದೇ ತಾಳ" ಎಂಬಂತಾಗಬಾರದು ಎಂಬುದು ಜನರ ಅಭಿಪ್ರಾಯವಾಗಿದೆ.

ಚಿತ್ತಾಪುರ: ತೀವ್ರ ಹದಗೆಟ್ಟು ವಾಹನ ಸವಾರರಿಗೆ ಸಂಕಷ್ಟ ತಂದೊಡ್ಡಿದ್ದ ಚಿತ್ತಾಪುರ-ರಾವೂರ ಮಾರ್ಗದ ರಸ್ತೆ ಕಡೆಗೂ ಡಾಂಬರು ಕಂಡಿದ್ದು, ಸುಗಮ ಸಂಚಾರಕ್ಕೆ ಅನುಕೂಲವಾಗಿದೆ.

> **ರಸ್ತೆ ಅಭಿವೃದ್ಧಿಪಡಿಸುವುದು ಲೋಕೋಪಯೋಗಿ ಇಲಾಖೆಯ ಕರ್ತವ್ಯವಾಗಿದೆ. ಹೀಗೆ ಅಭಿವೃದ್ಧಿಯಾದ ರಸ್ತೆ ಹದಗೆಟ್ಟರೆ ಪುನಹಃ ಸುಧಾರಣೆ ಮಾಡುವ ಜವಾಬ್ದಾರಿಯೂ ನಮಗಿದೆ. ಕಾಮಗಾರಿ ಕೈಗೆತ್ತಿಕೊಂಡ ಸಂಬಂಧಿಸಿದ ಗುತ್ತಿಗೆದಾರ ಉತ್ತಮ ರಸ್ತೆ ಸುಧಾರಣೆ ಮಾಡಿದ್ದಾರೆ.**
>
> ■ **ಮೊಹ್ಮದ್ ಸಲೀಂ,**
> ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಚಿತ್ತಾಪುರ.

ವಿದ್ಯುತ್ ಸಮಯ ಬದಲಾಯಿಸಿ

ಚಿಂಚೋಳಿ: ಬೇಸಿಗೆ ಪ್ರಖರ ಬಿಸಿಲಿನ ಪರಿಣಾಮವಾಗಿ ತಾಪಮಾನ ಗರಿಷ್ಠ ಮಟ್ಟಕ್ಕೆ ಏರಿಕೆಯಾಗುತ್ತಿದ್ದು, ಕೃಷಿ ಚಟುವಟಿಕೆ ನಡೆಸುವ ರೈತರಿಗೆ ತೊಂದರೆ ಉಂಟಾಗಿದೆ. ಐಪಿ ಸೆಟ್‌ಗಳಿಗೆ ಮಧ್ಯಾಹ್ನ ವೇಳೆಯಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿರುವುದರಿಂದ ರೈತರು ಹೀಟ್‌ವೇವ್ ಅಪಾಯಕ್ಕೆ ತುತ್ತಾಗುವ ಭೀತಿ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರೈತ ಸಂಘ ತಾಲೂಕು ಘಟಕದ ಅಧ್ಯಕ್ಷ ವೀರಣ್ಣ ಗಂಗಾಣಿ, ವಿದ್ಯುತ್ ಪೂರೈಕೆಯ ಸಮಯ ತಕ್ಷಣ ಬದಲಾಯಿಸುವಂತೆ ಒತ್ತಾಯಿಸಿದ್ದಾರೆ. ಜಿಲ್ಲಾಧಿಕಾರಿ ಹೀಟ್‌ವೇವ್ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದ್ದು, ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ಹೊರಗೆ ಹೋಗುವುದನ್ನು ತಪ್ಪಿಸಿ ಮನೆಯಲ್ಲಿ ಉಳಿಯಲು ಸಲಹೆ ನೀಡಿದ್ದಾರೆ. ಆದರೆ, ಅವಳಿ ತಾಲೂಕುಗಳಲ್ಲಿ ಐಪಿ ಸೆಟ್‌ಗಳಿಗೆ ತ್ರಿಫೇಸ್ ವಿದ್ಯುತ್ ಪೂರೈಕೆ ಮಧ್ಯಾಹ್ನ ವೇಳೆಯಲ್ಲೇ ನಡೆಯುತ್ತಿರುವುದರಿಂದ ರೈತರು ಬಿಸಿಲನ್ನು ಲೆಕ್ಕಿಸದೇ ಹೊಲಗಳಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ಅವರು ಎಚ್ಚರಿಸಿದ್ದಾರೆ. ಹೀಗಾಗಿ, ರೈತರ ಹಿತದೃಷ್ಟಿಯಿಂದ ತ್ರಿಫೇಸ್ ವಿದ್ಯುತ್ ಪೂರೈಕೆ ಸಮಯ ಬೆಳಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ಬದಲಾಯಿಸಿ ರೈತರಿಗೆ ಅನುಕೂಲ ಕಲ್ಪಿಸಬೇಕು ಎಂದು ರೈತ ಸಂಘದ ವತಿಯಿಂದ ಸರ್ಕಾರ ಹಾಗೂ ಸಂಬಂಧಿತ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ.

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-2. ರ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ಬಸವಂತಪ್ಪ ಬಿ.ಎಂ. ಅವರು ಶನಿವಾರ ಅಧಿಕಾರ ಸ್ವೀಕರಿಸಿದರು. ಶಾರದಾ ದೇವಿ, ರಾಜಕುಮಾರ ಯಂಕಚಿ, ಶಂಕ್ರಪ್ಪ ವಿ, ಶಾಖಾ ಮಾರುತಿರಾವ, ಶಿವರಾಜ, ವಿದ್ಯಾ, ರಾಮಕೃಷ್ಣ, ದೇವರಾಜ ಚೌರ ಸೇರಿ ಅಧಿಕಾರಿಗಳು, ಸಿಬ್ಬಂದಿ ಸನ್ಮಾನಿಸಿದರು.

ಸ್ಥಳೀಯ ಅಬಕಾರಿ ಕಚೇರಿಗೆ ಬಂಜಾರಾ ಕ್ರಾಂತಿದಳ ಅಧ್ಯಕ್ಷ ರಾಜು ಚವ್ಹಾಣ ನೇತೃತ್ವದಲ್ಲಿ ಕಾರ್ಯಕರ್ತರು ಒತ್ತಾಯಿಸಿದರು.

ಅಬಕಾರಿ ಕಚೇರಿಗೆ ಮುತ್ತಿಗೆ

ಸಂ.ಕ.ಸಮಾಚಾರ ಆಳಂದ: ತಾಲೂಕಿನ ವಿವಿಧ ತಾಂಡಾಗಳಲ್ಲಿ ಅಕ್ರಮ ಸಾರಾಯಿ ಮಾರಾಟ ನಿರ್ಬಂಧಿಸುವಂತೆ ಹಲವು ಬಾರಿ ಮೌಖಿಕ ಹಾಗೂ ಲಿಖಿತವಾಗಿ ದೂರು ಸಲ್ಲಿಸಿದರೂ ಸಂಬಂಧಿತ ಅಧಿಕಾರಿಗಳು ಕ್ರಮ ಕೈಗೊಳ್ಳದ ಹಿನ್ನೆಲೆ ಆಕ್ರೋಶಗೊಂಡ ಬಂಜಾರಾ ಕ್ರಾಂತಿದಳ ಕಾರ್ಯಕರ್ತರು ಪಟ್ಟಣದ ಅಬಕಾರಿ ಇಲಾಖೆಯ ಕಚೇರಿಗೆ ಹಠಾತ್ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟಕ್ಕೆ ಮುಂದಾಗುವುದಾಗಿ ಕ್ರಾಂತಿದಳ ರಾಜ್ಯಾಧ್ಯಕ್ಷ ರಾಜು ಚವ್ಹಾಣ ಎಚ್ಚರಿಸಿದರು. ನಿಂಬರಗಾ ತಾಂಡಾದಲ್ಲಿ ಒಂಬತ್ತು ಅಕ್ರಮ ಸಾರಾಯಿ ಅಂಗಡಿಗಳು ನಿರ್ಬಂಧವಿಲ್ಲದೆ ಕಾರ್ಯನಿರ್ವಹಿಸುತ್ತಿದ್ದರೂ ಅಧಿಕಾರಿಗಳು ಮೌನ ವಹಿಸಿರುವುದು ಏಕೆ ಎಂದು ಪ್ರಶ್ನಿಸಿದರು. ತಾಂಡಾಗಳಲ್ಲಿ ಅಕ್ರಮ ಮದ್ಯ ಮಾರಾಟದಿಂದ ಅನೇಕ ಕುಟುಂಬಗಳು ಸಂಕಷ್ಟಕ್ಕೆ ಸಿಲುಕುತ್ತಿದ್ದು, ಮಹಿಳೆಯರು ಹಾಗೂ ಮಕ್ಕಳ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಕುಡಿತದ ಚಟದಿಂದ ಕುಟುಂಬಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಹದಗೆಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಹಲವು ಬಾರಿ ಗಮನಕ್ಕೆ ತಂದರೂ ಪರಿಣಾಮಕಾರಿ ಕ್ರಮ ಕೈಗೊಳ್ಳದಿರುವುದು ಖಂಡನೀಯ. ತಕ್ಷಣ ದಾಳಿ ನಡೆಸಿ ಅಕ್ರಮ ಅಂಗಡಿಗಳನ್ನು ಮುಚ್ಚಬೇಕು ಎಂದು ಒತ್ತಾಯಿಸಿದರು. ಕಚೇರಿಯಲ್ಲಿ ಹಾಜರಿದ್ದ ಅಬಕಾರಿ ಅಧಿಕಾರಿಗಳ ವಿರುದ್ಧ ಉದ್ರಿಕ್ತರು ಆಕ್ರೋಶ ಹೊರಹಾಕಿ ಮಿಂಚಿನ ಪ್ರತಿಭಟನೆ ನಡೆಸಿ ತಾಲೂಕು ಆಡಳಿತಕ್ಕೆ ಎಚ್ಚರಿಕೆ ನೀಡಿದರು.

ಅಬಕಾರಿ ಅಧಿಕಾರಿಗಳು ಮಾತನಾಡಿ,"ದೂರು ನೀಡಿದರೆ ವಿಚಾರಣೆ ಮಾಡುತ್ತೇವೆ" ಎಂದು ಪ್ರತಿಕ್ರಿಯಿಸಿದಾಗ, ಈಗಾಗಲೇ ದೂರು ನೀಡಲಾಗಿದೆ. ಆದರೂ ಕ್ರಮ ಕೈಗೊಳ್ಳದಿರುವುದು ಏಕೆ ಎಂದು ಪ್ರತಿಭಟನಾಕಾರರು ಪ್ರಶ್ನಿಸಿ ತಕ್ಷಣ ಕಾರ್ಯಾಚರಣೆ ನಡೆಸುವಂತೆ ಪಟ್ಟು ಹಿಡಿದರು. ಸಂತೋಷ ಪವಾರ, ಕೋಟೇಶ ರಾಠೋಡ, ಸದಾನಂದ ಪವಾರ, ಅನಿಲ ರಾಠೋಡ, ವೆಂಕಟೇಶ ರಾಠೋಡ ಸೇರಿ ಅನೇಕರಿದ್ದರು.

ಶುಭ ವಿವಾಹ

ವಿಜಯಲಕ್ಷ್ಮೀ- ಮಹೇಶ

ಕಲಬುರಗಿ: ಚಿತ್ತಾಪುರದ ಸಂಗೀತಾ ಮತ್ತು ದಿ. ಬಸವರಾಜ ಕೊಲ್ಲೂರ ಅವರ ಪುತ್ರಿ ವಿಜಯಲಕ್ಷ್ಮೀ ವಿವಾಹವು, ಕಲಬುರಗಿಯ ತಾರಾಬಾಯಿ ಮತ್ತು ಶಶಿಕಾಂತ ಬುಳ್ಳಾ ಅವರ ಪುತ್ರ ಮಹೇಶ ಜತೆ ಕಲಬುರಗಿಯ ಜಗತ್ ಪ್ರದೇಶದ ಶ್ರೀ ಮೈಲಾರಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ 4ರಂದು ಜರುಗಿತು.

ಸೃಷ್ಠಿ- ಶಿವಶಾಂತ

ಕಲಬುರಗಿ: ಇಲ್ಲಿಯ ಕರುಣೇಶ್ವರ ನಗರದ ಸುಧಾ ಮತ್ತು ಮಲ್ಲಿಕಾರ್ಜುನ ಹೊಸಮಠ ಅವರ ಪುತ್ರಿ ಕೃಷ್ಣಾ ಗ್ರಾಮೀಣ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕಿ ಸೃಷ್ಠಿ ವಿವಾಹವು, ಕೊಪ್ಪಳದ ಮಲ್ಲಮ್ಮ ಮತ್ತು ಪಂಪಯ್ಯಾ ಹಿರೇಮಠ ಅವರ ಪುತ್ರ ಹಾಗೂ ಕೃಷಿ ಇಲಾಖೆಯ ಶಿವಶಾಂತ ಜತೆ ಕೊಪ್ಪಳದ ಶ್ರೀ ಮಹಾಂತಯ್ಯನಮಠ ಕಲ್ಯಾಣ ಮಂಟಪದಲ್ಲಿ 3ರಂದು ಜರುಗಿತು.

ಅಂಕವೀರರಿಗೆ ಸತ್ಕಾರ ಇಂದು

ಕಮಲಾಪುರ: ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ನಿಮಿತ್ತ ಹಿರಿಯ ಸದಸ್ಯರಿಗೆ, ಹತ್ತನೇ ಮತ್ತು ಪಿಯುಸಿ ದ್ವಿತೀಯ ವರ್ಷದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಂಗಳವಾರ ಸತ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕಮಲಾಪುರ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷ ಸುರೇಶ ಲೇಂಗಟಿ ತಿಳಿಸಿದ್ದಾರೆ. ತಾಲೂಕಿನ ಮಹಾಗಾಂವ್ ಕ್ರಾಸ್‌ನಲ್ಲಿರುವ ವಚನ ಕೋಚಿಂಗ್ ಸೆಂಟರ್ ನಲ್ಲಿ ಮಧ್ಯಾಹ್ನ 1ಗಂಟೆಗೆ ತಹಸೀಲ್ದಾರ್ ಮಹ್ಮದ್ ಮೋಹಸಿನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಸಾಪ ತಾಲೂಕು ಅಧ್ಯಕ್ಷ ಸುರೇಶ್ ಲೇಂಗಟಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖಾಮುಖಿ ಡಿಕ್ಕಿ. ಇಬ್ಬರ ಸಾವು

ಸೋಲಾಪುರ: ಸೋಲಾಪುರ-ಅಕ್ಕಲಕೋಟ ರಾಷ್ಟ್ರೀಯ ಹೆದ್ದಾರಿಯಲ್ಲಿನ ರುದ್ದೇವಾಡಿ ಬಸ್ ನಿಲ್ದಾಣದ ಸಮೀಪ ಬಸ್ ಮತ್ತು ಡಂಪರ್ ನಡುವೆ ಅಪಘಾತ ಸಂಭವಿಸಿ ಬಸ್‌ನಲ್ಲಿದ್ದ ಇಬ್ಬರು ಪ್ರವಾಸಿಗರು ಮೃತಪಟ್ಟಿದ್ದಾರೆ.

ಡಂಪರ್‌ಗೆ ಬೆಂಕಿ ಹತ್ತಿಕೊಂಡಿತು. ಅಕ್ಕಲಕೋಟದಿಂದ ಗಾಣಗಾಪುರದತ್ತ ಬಸ್ ಹೊರಟಿದ್ದು ಮುರುಮ್ ತುಂಬಿಕೊಂಡು ಡಂಪರ್‌ವೊಂದು ಅತಿ ವೇಗವಾಗಿ ಬಂದು ಬಸ್ಸಿಗೆ ಮುಖಾಮುಖಿಯಾಗಿ ಡಿಕ್ಕಿ ಹೊಡೆಯಿತು. ಬಸ್ಸಿನಲ್ಲಿದ್ದ ಪ್ರವಾಸಿಗರಿಗೆ ಗಾಯಗಳಾಗಿವೆ. ಗಾಯಗೊಂಡ ಪ್ರವಾಸಿಗರನ್ನು ಆಸ್ಪತ್ರೆಗೆ ಸಾಗಿಸಲು ಗ್ರಾಮಸ್ಥರು ಸಹಾಯ ಮಾಡಿದರು.

ನಿಧನ ವಾರ್ತೆ

ಶರಣಮ್ಮ ಪಾಟೀಲ್

ಕಲಬುರಗಿ:ನಗರದ ಆಂಜನೇಯ ನಗರ ಹಳೆಥಿ ಆರ್ ಟಿ ಓ ಆಫೀಸ್ ಎದುರುಗಡೆ ನಿವಾಸಿ ಶರಣಮ್ಮ ಪಾಟೀಲ್ (78) ರವಿವಾರ ರಾತ್ರಿ ನಿಧನ ಹೊಂದಿದರು. ಮೃತರು ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ.

ಲಕ್ಷ್ಮಿಬಾಯಿ ಮಂದೇವಾಲ್

ಜೇವರ್ಗಿ: ತಾಲೂಕಿನ ನೆಲೋಗಿ ಗ್ರಾಮದ ಜಾನಪದ ಕಲಾವಿದೆ ಲಕ್ಷ್ಮಿಬಾಯಿ ಮಂದೇವಾಲ್ (67) ಭಾನುವಾರ ನಿಧನ ಹೊಂದಿದರು. ಮೃತರು ಜನಪದ ಕಲಾವಿದ ಪುತ್ರ ಕಲಾವಿದ ಬಲಭೀಮ್ ನೆಲೋಗಿ ಅವರನ್ನು ಅಗಲಿದ್ದಾರೆ.

ಹಾಳಾಗಿದ್ದ ಮಾರುಕಟ್ಟೆ ಮೂತ್ರಾಲಯ ನವೀಕರಣ

ಎಸ್‌ಕೆ ವರದಿ ಫಲಶ್ರುತಿ

ಸಂ.ಕ.ಸಮಾಚಾರ ಚಿತ್ತಾಪುರ: ಗೋಡೆಗಳು ಬಿದ್ದು ಗಬ್ಬೆದ್ದು ನಾರುತ್ತಿದ್ದ ಪಟ್ಟಣದ ತರಕಾರಿ ಮಾರುಕಟ್ಟೆಯ ಸಾರ್ವಜನಿಕ ಮೂತ್ರಾಲಯ ನವೀಕರಣಗೊಂಡಿದೆ.ತಾಲೂಕು ಕೇಂದ್ರದ ಮಾರುಕಟ್ಟೆಯ ನೂರಾರು ವರ್ತಕರಿಗೆ ಹಾಗೂ ಸಾವಿರಾರು ಗ್ರಾಹಕರಿಗೆ ಅನುಕೂಲವಾಗಿದ್ದ ಸಾರ್ವಜನಿಕ ಮೂತ್ರಾಲಯ ದುರಸ್ತಿಗೊಳಿಸುವ ಮೂಲಕ ಪುರಸಭೆ ಆಡಳಿತ ಜವಾಬ್ದಾರಿ ಮೆರೆದಿದೆ.

30 ವರ್ಷಗಳ ಹಿಂದೆ ಮಾರುಕಟ್ಟೆಯ ಮಧ್ಯೆ ಪುರಸಭೆ ಆಡಳಿತ ಮಹಿಳೆಯರಿಗಾಗಿ ಮತ್ತು ಪುರುಷರಿಗಾಗಿ ಮೂತ್ರಾಲಯ ಸೌಲಭ್ಯ ಒದಗಿಸಿತ್ತು. ನಿರ್ವಹಣೆ ಕೊರತೆಯಿಂದ ಗೋಡೆಗಳು ಬಿದ್ದು ಶೌಚಾಲಯದ ಸ್ಥಿತಿ ಹದಗೆಟ್ಟಿತ್ತು. ನೀರಿನ ಸೌಲಭ್ಯವಿಲ್ಲದ ಕಾರಣ ಮೂತ್ರ ವಾಸನೆಯಿಂದ ಮಾರುಕಟ್ಟೆ ಪರಿಸರ ದುರ್ವಾಸನೆಯಿಂದ ಕೂಡಿತ್ತು. ಗೋಡೆಗಳ ಆಸರೆ ಇಲ್ಲದ ಕಾರಣ ಮಹಿಳೆಯರು ಮೂತ್ರಾಲಯ ಬಳಸಲು ಹಿಂದೇಟು ಹಾಕುತ್ತಿದ್ದರು. ನೈಸರ್ಗಿಕ ಕ್ರಿಯೆ ತೀರಿಸಿಕೊಳ್ಳಲಾಗದೆ ಜನರು ತೀವ್ರ ತೊಂದರೆ ಅನುಭವಿಸುವಂತಾಗಿತ್ತು. ಈ ಕುರಿತು ಮಾ.24ರಂದು ಸಂಯುಕ್ತ ಕರ್ನಾಟಕ "ಮೂಗು ಮುಚ್ಚದೆ ಈ ಮೂತ್ರಾಲಯ ಬಳಸುವಂತಿಲ್ಲ" ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಶೇಷ ಲೇಖನ ಪ್ರಕಟಿಸಿತು. ವರದಿಯಿಂದ ಎಚ್ಚೆತ್ತ ಪುರಸಭೆ ಮುಖ್ಯ ಅಧಿಕಾರಿ ಭಾರತಿ ದಂಡೋತಿ ಅವರು ಮೂತ್ರಾಲಯ ದುರಸ್ತಿಗೆ ಕ್ರಮ ಕೈಗೊಂಡು ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ.

ಮೂತ್ರಾಲಯದ ಗೋಡೆಗಳು ದುರಸ್ತಿಗೊಂಡಿವೆ. ಟೈಲ್ಸ್ ಅಳವಡಿಕೆ ಮಾಡಲಾಗಿದೆ.

ಸಿಂಟೆಕ್ಸ್ ಅಳವಡಿಸಿ ನೀರಿನ ಸೌಲಭ್ಯ ಒದಗಿಸಲಾಗಿದೆ. ಮೂಗು ಮುಚ್ಚಿಕೊಂಡು ಮೂತ್ರಾಲಯ ಬಳಸುತ್ತಿದ್ದ ಸಾರ್ವಜನಿಕರು ಈಗ ಸುಲಭವಾಗಿ ಮೂತ್ರಾಲಯ ಬಳಸುತ್ತಿದ್ದಾರೆ. ಮಹಿಳೆಯರು ಹಾಗೂ ಪುರುಷರಿಗಾಗಿ ಈ ಮೂತ್ರಾಲಯ ಮೀಸಲಿದ್ದು ಸದ್ಬಳಕೆಯಾಗುತ್ತಿದೆ.



ಚಿತ್ತಾಪುರದ ಹೃದಯ ಭಾಗದಲ್ಲಿರುವ ಮಾರುಕಟ್ಟೆ ಬಡಾವಣೆಯಲ್ಲಿ ಹದಗೆಟ್ಟು ದುರ್ವಾಸನೆ ಬೀರುತ್ತಿದ್ದ ಮೂತ್ರಾಲಯ ದುರಸ್ತಿಗೊಂಡಿದೆ.

> **ನಾನು ಇತ್ತೀಚಿಗಷ್ಟೇ ಪುರಸಭೆ ಮುಖ್ಯಾಧಿಕಾರಿ ಯಾಗಿ ಅಧಿಕಾರ ಸ್ವೀಕರಿಸಿದ್ದೇನೆ. ಮಾರುಕಟ್ಟೆಯ ಮೂತ್ರಾಲಯ ಹದಗೆಟ್ಟಿದೆ ಎಂಬ ಮಾಹಿತಿ ಬಂದ ತಕ್ಷಣ ಕ್ರಮಕ್ಕೆ ಮುಂದಾಗಿದ್ದೇನೆ. ಶೌಚಾಲಯ ದುರಸ್ತಿಗೊಳಿಸಿ ಅಗತ್ಯ ಸೌಲಭ್ಯವನ್ನು ಒದಗಿಸಿದ್ದೇನೆ. ಸಾರ್ವಜನಿಕರು ಮೂತ್ರಾಲಯದ ಶುಚಿತ್ವ ಕಾಪಾಡಬೇಕು.**
>
> ■ **ಭಾರತಿ ದಂಡೋತಿ,**
> **ಮುಖ್ಯಾಧಿಕಾರಿ, ಪುರಸಭೆ, ಚಿತ್ತಾಪುರ.**

ಸಿಬ್ಬಂದಿ ಕುಟುಂಬದ ಆರ್ಥಿಕ ಭದ್ರತೆಗೆ ಆದ್ಯತೆ

ಅರುಣಕುಮಾರ ಪಾಟೀಲ್ ಅಭಿಮತ | ಎರಡು ಕುಟುಂಬಕ್ಕೆ ತಲಾ 1 ಕೋಟಿ ವಿಮೆ ವಿತರಣೆ

ಸಂ.ಕ.ಸಮಾಚಾರ ಕಲಬುರಗಿ: ಅಪಘಾತದಲ್ಲಿ ಮೃತಪಟ್ಟ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ (ಕೆಕೆಆರ್‌ಟಿಸಿ) ಇಬ್ಬರು ನೌಕರರ ಕುಟುಂಬಗಳಿಗೆ ತಲಾ 1 ಕೋಟಿ ಪರಿಹಾರದ ಚೆಕ್‌ಗಳನ್ನು ಸೋಮವಾರ ವಿತರಿಸಲಾಯಿತು.

ಸೋಮವಾರ ನಗರದ ಕೆಕೆಆರ್‌ಟಿಸಿ ನಿಗಮದ ಕೇಂದ್ರ ಕಚೇರಿಯಲ್ಲಿ ಸಭಾಂಗಣದಲ್ಲಿ ಸಂಸ್ಥೆಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜೊತೆಗಿನ ಒಪ್ಪಂದನ್ವಯ ಅಪಘಾಣದಲ್ಲಿ ನಿಧನಗೊಂಡ ನಿಗಮದ ಕೊಪ್ಪಳ ವಿಭಾಗದ ಕುಕನೂರನಲ್ಲಿ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದ ನೌಕರ ಉಮೇಶ ಮತ್ತು ಯಾದಗಿರಿ ವಿಭಾಗದ ಯಾದಗಿರಿಯಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ರವಿ ಅವರ ಕುಟುಂಬಸ್ಥರಾದ ಕ್ರಮವಾಗಿ ವಿಜಯಲಕ್ಷ್ಮಿ ಮತ್ತು ಪಾರ್ವತಿ ಅವರಿಗೆ ತಲಾ 1 ಕೋಟಿ ರೂ. ಗಳ ಪರಿಹಾರ ಮೊತ್ತ ವಿತರಣೆ ಮಾಡಲಾಯಿತು.

ಇದಲ್ಲದೆ ಸಂಸ್ಥೆಯ ಆಂತರಿಕ ಗುಂಪು ವಿಮಾ ಯೋಜನೆ ಅಡಿಯಲ್ಲಿ ಮೃತಪಟ್ಟ 7 ನೌಕರರ ಅವಲಂಬಿತರಿಗೂ ತಲಾ 10 ರಿಂದ 12.50 ಲಕ್ಷ ರೂ. ವರೆಗೆ ಪರಿಹಾರ ಮೊತ್ತ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅರುಣ–ಕುಮಾರ ಪಾಟೀಲ, ಮೃತಪಟ್ಟವರ ಜೀವ ಅಮೂಲ್ಯವಾದದ್ದು. ಅದನ್ನು ಮರಳಿ ತರಲಾಗುವುದಿಲ್ಲ. ಆದರೆ, ಅವರ ಕುಟುಂಬದ ಆರ್ಥಿಕ ಸ್ವಾವಲಂಬನೆ ಹಾಗೂ ಮಕ್ಕಳ ವಿದ್ಯಾಭ್ಯಾಸಕಾಗಿ ನಿಗಮವು ರೂಪಿಸಿರುವ 1 ಕೋಟಿ ರೂ. ವಿಮೆ ಯೋಜನೆ ದೂರದೃಷ್ಟಿಯನ್ನು ಹೊಂದಿದೆ. ಅಪಘಾತದಲ್ಲಿ ಮೃತಪಟ್ಟ 2 ಕುಟುಂಬಕ್ಕೆ ಈ ವಿಮೆ ನೀಡಲಾಗಿದೆ ಎಂದರು.

ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕಿ ಡಾ.ಬಿ.ಸುಶೀಲಾ ಮಾತನಾಡಿ, ಅಪಘಾತದಲ್ಲಿ ಮೃತ ನೌಕರರ ಕುಟುಂಬಗಳಿಗೆ ಬ್ಯಾಂಕಿನೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಆರ್ಥಿಕ ನೆರವನ್ನು ಒದಗಿಸಲಾಗಿದೆ. ನಿಗಮದಲ್ಲಿ ಸಿಬ್ಬಂದಿ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಅವರಿಗೆ ನೀಡಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕಾದ್ದು ಸಂಸ್ಥೆಯ ಜವಾಬ್ದಾ–ರಿಯಾಗಿದ್ದು, ಅದನ್ನು ಕೆಕೆಆರ್‌ಟಿಸಿ ಸಮರ್ಥವಾಗಿ ಮಾಡುತ್ತಿದೆ. ಪರಿಹಾರ ಮೊತ್ತ ಪಡೆದ ಕುಟುಂಬಸ್ಥರು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ತೆಗೆದಿಡಬೇಕು ಎಂದು ಕುಟುಂಬಸ್ಥರಿಗೆ ಸಲಹೆ ನೀಡಿದರು. ಎಸ್‌ಬಿಐ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಅನಿಲ ಬಿಹಾರಿ ಮಾತನಾಡಿ, ಅಪಘಾತಕ್ಕೊಳಗಾಗುವ ಸಿಬ್ಬಂದಿಗೆ ತುರ್ತು ನೆರವು ಒದಗಿಸುವ ಪ್ರಕ್ರಿಯೆಯನ್ನು ಬ್ಯಾಂಕ್‌ನಲ್ಲಿ ಸರಳೀಕರಿಸಲಾಗಿದೆ ಎಂದರು.

ಎಸ್.ಬಿ.ಐ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ರಾಹುಲ್ ಮಿತ್ತಲ್, ಬ್ಯಾಂಕ್ ಮುಖ್ಯ ಪ್ರಬಂಧಕ ರಾಜೇಶ ಕುಮಾರ್ ನಾಯ್ಕ, ವಿಜಯನಗರ ಶಾಖಾ ಮುಖ್ಯಸ್ಥ ಶರಣಕುಮಾರ, ಮುಖ್ಯ ಲೇಖಾಧಿಕಾರಿ ಬಸವರಾಜ ಬೆಳಗಾವಿ, ಮುಖ್ಯ ಭದ್ರತಾ ಮತ್ತು ಕಾನೂನು ಅಧಿಕಾರಿ ಎಸ್.ಭಾವಿಕಟ್ಟಿ, ವಿಭಾಗದ ಕಾರ್ಮಿಕ ಕಲ್ಯಾಣಾಧಿಕಾರಿ ಮಹಿಪಾಲ ಬೇಗಾರ, ಮುಖ್ಯ ತಾಂತ್ರಿಕ ಶಿಲ್ಪಿ ಸಂತೋಷ ಗೋಗೇರಿ ಉಪಸ್ಥಿತರಿದ್ದರು.

ಕಲಬುರಗಿಯ ಕೆಕೆಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಇಬ್ಬರು ನೌಕರರ ಕುಟುಂಬಗಳಿಗೆ ತಲಾ 1 ಕೋಟಿ ಪರಿಹಾರದ ಚೆಕ್‌ಗಳನ್ನು ವಿತರಿಸಲಾಯಿತು.

> **ಸಂಸ್ಥೆಯಲ್ಲಿ ಕಳೆದ 2022 ರಿಂದ 2026 ರವರೆಗೆ ಸೇವಾವಧಿಯಲ್ಲಿ ನಿಧನರಾದ ನೌಕರರ ಅವಲಂಬಿತರಿಗೆ ಆಂತರಿಕ ಗುಂಪು ವಿಮಾ ಯೋಜನೆಯಡಿ ಇದೂವರೆಗೆ ತಲಾ 10 ಲಕ್ಷ ರೂ. ಗಳಂತೆ 380 ಪ್ರಕರಣಗಳಲ್ಲಿ ಒಟ್ಟು 38 ಕೋಟಿ ರೂ. ಪರಿಹಾರ ನೀಡಲಾಗಿದೆ.**
> ■ ಡಾ.ಬಿ.ಸುಶೀಲಾ, ವ್ಯವಸ್ಥಾಪಕ ನಿರ್ದೇಶಕಿ, ಕೆಕೆಆರ್‌ಟಿಸಿ.

ಡಿಸಿಪಿ ಶಾಲೂ ಅಧಿಕಾರ ಸ್ವೀಕಾರ

ಕಲಬುರಗಿ: ನಗರದ ನೂತನ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರಾಗಿ ಶಾಲೂ ಸೋಮವಾರ ಅಧಿಕಾರ ಸ್ವೀಕರಿಸಿದರು. ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ವಹಿಸಿಕೊಂಡರು.

ಇಲಾಖೆಯ ಹಿರಿಯ ಅಧಿಕಾ–ರಿಗಳು ನೂತನ ಡಿಸಿಪಿ ಅವ–ರಿಗೆ ಶುಭ ಕೋರಿದರು. ಅಧಿಕಾರ ವಹಿಸಿಕೊಂಡ ಬಳಿಕ ಮಾತನಾಡಿದ ಶಾಲೂ ಅವರು, ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಹಾಗೂ ಅಪರಾಧ ಚಟುವಟಿ–ಕೆಗಳಿಗೆ ಲಗಾಮು ಹಾಕುವುದು ತಮ್ಮ ಮೊದಲ ಆದ್ಯತೆ ಎಂದು ತಿಳಿಸಿದರು. ಶಾಂತಿ ಕಾಪಾಡುವಲ್ಲಿ ಸಾರ್ವಜನಿಕರು ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಢಗೆ ಇತರರಿದ್ದರು.

ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಹುಬ್ಬಳ್ಳಿ–ಬೆಂಗಳೂರು–ಕಲಬುರಗಿ
ನಮ್ಮ ಕಲಬುರಗಿ ಆವೃತ್ತಿಯ ಕಚೇರಿ ಸ್ಥಳಾಂತರಗೊಂಡಿದೆ
: ನೂತನ ವಿಳಾಸ :
ನಂ. 1–94, 'ಶ್ರೀಕುಂಜ'
ಮಿನಿ ವಿಧಾನಸೌಧದ ಎದುರು, ಆರ್ ಬಂಗ್ಲೋ
ಸ್ಟೇಷನ್ ಏರಿಯಾ, ಮುಖ್ಯ ರಸ್ತೆ,
ಕಲಬುರಗಿ – 585 102
ಮೊ: 9449985695-9481000249

ಸುದ್ದಿ ಮಿಂಚು

ಸತ್ಯವಾದ ಶರಣರ ಭವಿಷ್ಯ

ಶಹಾಬಾದ: ತಾಲೂಕಿನ ಮಾಲಗತ್ತಿಯ ಶ್ರೀ ಹಿರೋಡೇಶ್ವರ ದೇವಸ್ಥಾನದ ಪೂಜ್ಯರಾದ ಡಾ.ಚನ್ನಬಸವ ಶರಣರು ಪಂಚ ರಾಜ್ಯಗಳ ಚುನಾವಣೆ ಫಲಿತಾಂಶ ಕುರಿತು ಶನಿವಾರ ರಾತ್ರಿ ಹೇಳಿದ ಭವಿಷ್ಯ ಸತ್ಯವಾಗಿದೆ.

ಶನಿವಾರ ರಾತ್ರಿ ಸುಮಾರು 10.35 ಕ್ಕೆ ಲಿಂಗ ಪೂಜೆ ಮುಗಿಸಿ, ಪೂಜೆ ಸಂದರ್ಭದಲ್ಲಿ ಆದ ಅನುಭೂತಿಯನ್ನು ಪತ್ರಿಕೆಗೆ ತಿಳಿಸಿದ್ದರು. ಪಂಚ ರಾಜ್ಯಗಳ ಚುನಾವಣೆಯಲ್ಲಿ ಮುಖ್ಯವಾಗಿ ಹೈವೋಲ್ಟೇಜ್‌ನ ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆಯಲಿದ್ದು, 172 ಕ್ಕೂ ಹೆಚ್ಚು ಸ್ಥಾನ ಪಡೆಯುವದೆಂದು ಹೇಳಿ, ಅಸ್ಸಾಂನಲ್ಲಿಯೂ ಸ್ಪಷ್ಟ ಬಹುಮತ ಪಡೆಯಲಿದ್ದು 90 ಕ್ಕೂ ಹೆಚ್ಚು ಸ್ಥಾನ ಪಡೆಯಲಿದೆ, ಪುದುಚೇರಿಯಲ್ಲಿ ಮಿತ್ರ ಪಕ್ಷಗಳೊಂದಿಗೆ ಅಧಿಕಾರಿ ಪಡೆಯಲಿದೆ ಎಂದು ಹೇಳಿ, ತಮಿಳುನಾಡು, ಕೇರಳದಲ್ಲಿ ಪಕ್ಷದ ಶಕ್ತಿ ಸುಧಾರಿಸಲಿದೆ ಎಂದು ಮಾಹಿತಿ ನೀಡಿದ್ದರು. ಪೂಜ್ಯರ ಭವಿಷ್ಯ ಭಾನುವಾರ ಮಧ್ಯಾಹ್ನ ಫಲಿಂತಾಂಶ ಬಂದ ನಂತರ ಸತ್ಯವಾಗಿದೆ. ಅದೇ ರೀತಿ ಹಲವಾರು ಬಾರಿ ಚುನಾವಣೆ ಭವಿಷ್ಯಗಳನ್ನು ಹೇಳಿದ ಇತಿಹಾಸವಿದೆ.

ಬಿಜೆಪಿ ಜಯಭೇರಿಗೆ ಮಹಾಜನ್ ಹರ್ಷ



ಕಲಬುರಗಿ: ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೆರಿ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಎನ್‌ಡಿಎ ಮೈತ್ರಿಕೂಟ ಭರ್ಜರಿ ಜಯ ಗಳಿಸಿರುವುದಕ್ಕೆ ಹಿರಿಯ ಬಿಜೆಪಿ ಮುಖಂಡ ಹಾಗೂ ಉದ್ಯಮಿ ಶಿವಕಾಂತ್ ಮಹಾಜನ್ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಜಯವು ದೇಶದ ಅಭಿವೃದ್ಧಿ, ಉತ್ತಮ ಆಡಳಿತ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದ ಮೇಲೆ ಜನತೆ ಇಟ್ಟಿರುವ ವಿಶ್ವಾಸದ ಪ್ರತೀಕವಾಗಿದೆ. ಮತದಾರರು ಅಭಿವೃದ್ಧಿಯ ಮಾರ್ಗವನ್ನು ಆರಿಸಿಕೊಂಡಿದ್ದು, ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟದ ನೀತಿಗಳಿಗೆ ಸ್ಪಷ್ಟ ಬೆಂಬಲ ನೀಡಿದ್ದಾರೆ. ಈ ಫಲಿತಾಂಶಗಳು ದೇಶದ ಜನತೆ ಪರಿವರ್ತನೆಗೆ ಬೆಂಬಲಿಸುತ್ತಿರುವುದನ್ನು ತೋರಿಸುತ್ತವೆ. ಬಡವರು, ರೈತರು, ಯುವಕರು ಮತ್ತು ಮಹಿಳೆಯರ ಹಿತಕ್ಕಾಗಿ ನಮ್ಮ ಬಿಜೆಪಿ ಸರ್ಕಾರಗಳು ಬದ್ಧವಾಗಿವೆ. ಈ ಗೆಲುವು ಪಕ್ಷದ ಕಾರ್ಯಕರ್ತರ ನಿರಂತರ ಪರಿಶ್ರಮ ಮತ್ತು ಜನರ ಆಶೀರ್ವಾದದ ಫಲವಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಬಿಜೆಪಿ ಜಯಭೇರಿ ಬಾರಿಸಿ ಅಧಿಕಾರಕ್ಕೆ ಬರಲಿದೆ ಎಂದು ಮಹಾಜನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಉಪ ಚುನಾವಣೆ ಕಾಂಗ್ರೆಸ್‌ಗೆ ಜಯಬೇರಿ

ಕಲಬುರಗಿ: ರಾಜ್ಯದಲ್ಲಿ ನಡೆದ ಬಾಗಲಕೋಟೆ ಹಾಗೂ ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಬ್ಬರೂ ಜಯಗಳಿಸಿರುವದಕ್ಕೆ ಸಂತಸ ಹೊರಹಾಕಿರುವ ಶಾಸಕ ಅಲ್ಲಮಪ್ರಭು ಪಾಟೀಲ ರಾಜ್ಯ ಸರ್ಕಾರದ 3 ವರ್ಷದ ಸಾಧನೆಗಳಿಗೆ ಜನ ಬೆಂಬಲ ದೊರಕಿದೆ. ರಾಜ್ಯ ಸರ್ಕಾರ ತನ್ನ ಕಲ್ಯಾಣ ಯೋಜನೆಗಳಿಂದ 3 ವರ್ಷದ ಟೆಸ್ಟ್‌ನಲ್ಲಿ ಭಾರಿ ಅಂಕದೊಂದಿಗೆ ಪಾಸಾಗಿದೆ ಎಂದು ಹೇಳಿದ್ದಾರೆ. ಚುನಾವಣೆ ಪ್ರಚಾರದಲ್ಲೇ ಭಾರಿ ಜನ ಬೆಂಬಲ ಕಾಂಗ್ರೆಸ್ ಪಕ್ಷಕ್ಕೆ ವ್ಯಕ್ತವಾಗಿತ್ತು. ಪಂಚ ಗ್ಯಾರಂಟಿ ಯೋಜನೆಗಳಿಗೆ ಜನ ಬೆಬಂಲಿಸಿದ್ದಾರೆ. ಆ ಮೂಲಕ ವಿರೋಧ ಪಕ್ಷಗಳಿಗೆ ತಕ್ಕ ಸಂದೇಶ ರವಾನಿಸಿದ್ದಾರೆಂದೂ ಪಾಟೀಲ ಹೇಳಿದ್ದಾರೆ. ಬಾಗಲಕೋಟೆ ಮತ್ತು ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಪಕ್ಷದ ಶಾಸಕರಾದ ರಿಜ್ವಾನ್ ಅರ್ಷದ್ ಮತ್ತು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರು ನನ್ನನ್ನು ಭೇಟಿಯಾಗಿ ಅಭಿನಂದಿಸಿದರು.

ಸಂವಿಧಾನಕ್ಕೆ ಸಿಕ್ಕ ಐತಿಹಾಸಿಕ ಜಯ

ಕಲಬುರಗಿ : ಪಂಚ ರಾಜ್ಯಗಳ ಚುನಾವಣೆ ಭಾರತ ಇತಿ–ಹಾಸದಲ್ಲಿ ಒಂದು ಐತಿಹಾಸಿಕ ದಿನವಾಗಿದ್ದು ಮೋದಿ ಆಡಳಿತಕ್ಕೆ ಹಾಗೂ ಸಂವಿಧಾನಕ್ಕೆ ಸಿಕ್ಕ ಜಯ ಎಂದು ಮಾಜಿ ಲೋಕಸಭಾ ಸದಸ್ಯ ಡಾ. ಉಮೇಶ್ ಜಾಧವ್ ಅಭಿನಂದನೆ ವ್ಯಕ್ತಪಡಿಸಿದ್ದಾರೆ. ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಆಡಳಿತ ಹಾಗೂ ತಮಿಳುನಾಡು ಮತ್ತು ಕೇರಳಂ ರಾಜ್ಯಗಳಲ್ಲಿ ಬಿಜೆಪಿ ಗಣನೀಯವಾಗಿ ಶೇಕಡಾವಾರು ಮತ ಹೆಚ್ಚಿಸಿ ತನ್ನ ಪಾರಮ್ಯ ಮೆರೆದಿದೆ.

ತಮಿಳು ನಾಡಿನಲ್ಲಿ ಸನಾತನ ವಿರೋಧಿ ನಿಲುವಿನ ಮುಖ್ಯಮಂತ್ರಿ ಪರಾಭಾವದ ಜೊತೆಗೆ ಡಿಎಂಕೆಯನ್ನು ಜನತೆ ತಿರಸ್ಕರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅಮಿತ್ ಶಾ ,ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನಬಿನ್ ಸೇರಿ ಎಲ್ಲ ನಾಯಕರ ಹಾಗೂ ತಳಮಟ್ಟದ ಬಿಜೆಪಿ ಕಾರ್ಯಕರ್ತರ ಅವಿರತ ಶ್ರಮಕ್ಕೆ ಸಂದ ಜಯ ಇದಾಗಿದೆ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಸಂವಿಧಾನ ವಿರೋಧಿ ರಕ್ತ ತರ್ಪಣದ ರಾಜ–ಕೀಯ ಅಂತ್ಯಗೊಂಡು ಶಾಂತಿ ವಿಶ್ವಾಸದ ಅಭಿವೃದ್ಧಿಯ ಹೊಸ ಇತಿಹಾಸ ಸೃಷ್ಟಿಯಾಗುವ ಶುಭ ದಿನ ಆರಂಭವಾಗಲಿದೆ.ಪಶ್ಚಿಮ ಬಂಗಾಳದ ಗೆಲುವು ರಾಷ್ಟ್ರೀಯ ಸಮಗ್ರತೆಗೆ ಸಿಕ್ಕ ಜಯದೊಂದಿಗೆ ನವಮನ್ವಂತರ ಆರಂಭವಾಗಲಿದೆ. ಸಂವಿಧಾನ ವಿರೋಧಿ ಶಕ್ತಿಗಳಿಗೆ ಮತದಾರ ಈ ಚುನಾವಣೆಯಲ್ಲಿ ತಕ್ಕ ಉತ್ತರ ಕೊಟ್ಟ ಮತಾದೇಶವಾಗಿದೆ ಎಂದಿದ್ದಾರೆ.

ರಾಜ್ಯದ ಉಪ ಚುನಾವಣೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ಬಿಜೆಪಿ ವೀರೋಚಿತ ಸೋಲು ಕಂಡಿದೆ. ಆಡಳಿತಾರೂಢ ಕಾಂಗ್ರೆಸ್ ಸರಕಾರ ಹಣ ಮತ್ತು ಅಧಿಕಾರ ಬಳಸಿ ವಾಮಮಾರ್ಗದಲ್ಲಿ ಜಯ ಸಾಧಿಸಿದೆ ಎಂದು ಡಾ.ಜಾಧವ್ ದೂರಿದರು.

ಡಿಇಎಲ್‌ಇಡಿ ಪರೀಕ್ಷೆ: ನಿಷೇಧಾಜ್ಞೆ

ಕಲಬುರಗಿ: ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ(ಡಯಟ) ವತಿಯಿಂದ 12ರಿಂದ 18ರವರೆಗೆ ಡಿ.ಇಎಲ್.ಇಡಿ ಪ್ರಥಮ ಹಾಗೂ ದ್ವಿತೀಯ ವರ್ಷದ ಪೂರಕ ಪರೀಕ್ಷೆಗಳು ನಿಗದಿಪಡಿಸಿದ್ದು, ಈ ಪರೀಕ್ಷೆಯು ನಗರದ ದರ್ಗಾ ರಸ್ತೆಯಲ್ಲಿರುವ ಪ್ರಜ್ಞಾ ಪ್ರಾಢಶಾಲೆ (ಇಂಗ್ಲೀಷ ಮಾಧ್ಯಮ) ಪರೀಕ್ಷಾ ಕೇಂದ್ರದಲ್ಲಿ ನಡೆಯುತ್ತವೆ. ಪರೀಕ್ಷಾ ಅವಧಿಯಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡದಂತೆ ಕ್ರಮವಹಿಸಲಾಗಿದೆ. ಪರೀಕ್ಷಾ ಮಂಡಳಿಯ ನಿರ್ದೇಶನದಂತೆ ಪರೀಕ್ಷೆಗಳು ಸುಗಮವಾಗಿ ಮತ್ತು ಪಾರದರ್ಶಕವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ಸುತ್ತಲೂ ಸೆಕ್ಷನ್ 144 ಕಲಂ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ ಪರಿಸರದಲ್ಲಿ ಶಾಂತಿ ಕಾಪಾಡಲು ಮತ್ತು ಪರೀಕ್ಷಾ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ನಡೆಸಲು ಈ ಕ್ರಮ ಅನಿವಾರ್ಯವಾಗಿದೆ, ಎಂದು ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ(ಡಯಟ) ಪ್ರಾಂಶುಪಾಲರು/ಉಪನಿರ್ದೇಶಕರು(ಅ) ತಿಳಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಗರದ ಕಾಂಗ್ರೆಸ್ ಕಚೇರಿಯ ಮುಂಭಾಗದಲ್ಲಿ ವಿಜಯೋತ್ಸವ ನಡೆಸಲಾಯಿತು.

ಉಪಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ: ವಿಜಯೋತ್ಸವ

ಸಂ.ಕ.ಸಮಾಚಾರ ಕಲಬುರಗಿ: ಕರ್ನಾಟಕದ ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ವತಿಯಿಂದ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯ ಮುಂಭಾಗದಲ್ಲಿ ಸೋಮವಾರ ಸಂಜೆ ಸಂಭ್ರಮಾಚರಣೆ ನಡೆಸಲಾಯಿತು.

ಚುನಾವಣಾ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಸಂಭ್ರಮದ ಅಲೆಯಲ್ಲಿ ತೇಲಿದ ಕಾರ್ಯಕರ್ತರು, ಪಟಾಕಿ ಸಿಡಿಸಿ, ಸಿಹಿ ಹಂಚಿ ಜಯಘೋಷಗಳನ್ನು ಹಾಕುವ ಮೂಲಕ ಗೆಲುವನ್ನು ಸಂಭ್ರಮಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯರಾದ ಜಗದೇವ ಗುತ್ತೇದಾರ ಕಾಳಗಿ ಮಾತನಾಡಿ, ಈ ಗೆಲುವು ಜನಸಾಮಾನ್ಯರ ಗೆಲುವಾಗಿದೆ. ಸರ್ಕಾರದ ಜನಪರ ಯೋಜನೆಗಳು ಹಾಗೂ ಕಾರ್ಯಕರ್ತರ ಶ್ರಮಕ್ಕೆ ಸಂದ ಜಯವಿದು ಎಂದು ಹರ್ಷ ವ್ಯಕ್ತಪಡಿಸಿ, ಈ ಗೆಲುವು ಮುಂಬರುವ ದಿನಗಳಲ್ಲಿ ಪಕ್ಷಕ್ಕೆ ಮತ್ತಷ್ಟು ಶಕ್ತಿ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದು ನಮ್ಮ ಸರ್ಕಾರದ ಸಾಧನೆಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಸಿಕ್ಕ ಜಯವಾಗಿದೆ. ವಿರೋಧ ಪಕ್ಷಗಳ ಅಪಪ್ರಚಾರ ಮತ್ತು ಹಣದ ಪ್ರಭಾವದ ಹೊರತಾಗಿಯೂ ಎರಡೂ ಕ್ಷೇತ್ರಗಳ ಮತದಾರರು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಸರ್ಕಾರದ ಮೇಲೆ ನಂಬಿಕೆ ಇಟ್ಟು ಮತ ಚಲಾಯಿಸಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿಯೂ ರಾಜ್ಯದ ಮತದಾರರು ಇದೇ ರೀತಿ ನಮ್ಮನ್ನು ಹರಸುತ್ತಾರೆ ಎಂಬ ನಂಬಿಕೆ ನಮಗೆ ಇದೆ ಎಂದು ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ವಿಜಯೋತ್ಸವದಲ್ಲಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರೇಣುಕಾ ಸಿಂಗ್, ಮುಖಂಡರಾದ ಶಾಮ ನಾಟೀಕರ್, ಅಶೋಕ ವೀರನಾಯಕ, ಮಲ್ಲಪ್ಪ ಹೊಸಮನಿ, ರಾಜೀವ ಜಾನೆ, ಸೇರಿ ಹಲವು ಮುಖಂಡರು ಹಾಗೂ ನೂರಾರು ಕಾರ್ಯಕರ್ತರು ಪಾಲ್ಗೊಂಡರು.

ಬಿಜೆಪಿಯಿಂದ ವಿಜಯೋತ್ಸವ

ಕಲಬುರಗಿ: ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೆರಿ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ, ಎನ್‌ಡಿಎ ಮೈತ್ರಿಕೂಟ ಭರ್ಜರಿ ಜಯ ಗಳಿಸಿರುವುದಕ್ಕೆ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ನಗರದ ಸರದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಬಿಜೆಪಿ ಗ್ರಾಮೀಣ ಜಿಲ್ಲಾಧ್ಯಕ್ಷ ಅಶೋಕ ಬಗಲಿ, ಶಾಸಕರಾದ ಬಸವರಾಜ ಮತ್ತಿಮಡು, ಡಾ.ಅವಿನಾಶ ಜಾಧವ, ಮಾಜಿ ಸಂಸದ ಡಾ.ಉಮೇಶ ಜಾಧವ, ವಿಧಾನ ಪರಿಷತ್ ಸದಸ್ಯರಾದ ಡಾ.ಬಿ.ಜಿ.ಪಾಟೀಲ್, ಶಶೀಲ ನಮೋಶಿ, ಮುಖಂಡರಾದ ಅಮರನಾಥ ಪಾಟೀಲ್, ಅಂಬಾರಾಯ ಅಷ್ಟಗಿ, ಅವ್ವಣ್ಣ ಮ್ಯಾಕೇರಿ, ಶಿವರಾಜ ರದ್ದೇವಾಡಗಿ, ಶರಣಪ್ಪ ತಳವಾರ, ಚಂದ್ರಶೇಖರ ಪರಸರೆಡ್ಡಿ, ಉಮೇಶ ಪಾಟೀಲ್, ಗಿರಿರಾಜ ಎಳಮೇಲಿ, ಲಿಂಗರಾಜ ಬಿರಾದಾರ, ಬಾಬುರಾವ ಹಾಗರಗುಂಡಗಿ, ಆನಂದ ಪಾಟೀಲ್, ಡಾ.ಸುಧಾ ಹಾಲಕಾಯಿ, ಶಿವುಯೋಗಿ ನಾಗನಳ್ಳಿ, ಧರ್ಮಣ್ಣ ಇಟಗಾ, ರಾಜು ನಾಗನಳ್ಳಿ, ಶರಣು ಸಜ್ಜನ್, ಮಹೇಶ್ ರೆಡ್ಡಿ, ಅಣವೀರ್ ಪಾಟೀಲ್, ಶಿವ ಕಾಳಗಿ, ಮಹೇಶ್ ಚವ್ಹಾಣ್, ಚನ್ನು ಬಂಗಿ, ರಾನೊಂಜಿ, ದೊಡ್ಡಮನಿ ಅನಿಲ್ ಜಾದವ್ ರವಿಕಾಂತ್ ಕಾಂತಿಕರ್ ಸಂತೋಷ ಹಾದಿಮನಿ ಬಾಬುರಾವ ಹಾಗರಗುಂಡಿ, ನಾಗರಾಜ್ ಮಹಾಗಾವಕರ್, ಸಂತೋಷ ಹಾದಿಮನಿ ಸೇರಿ ಇತರರಿದ್ದರು.

ಫಲಿತಾಂಶ ದೇಶದ ದಿಕ್ಸೂಚಿ ಸಂಕೇತ

ಆಳಂದ: ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ದೇಶದ ದಿಕ್ಸೂಚಿ ಸಂಕೇತವಾಗಿದೆ ಎಂದು ಜಿಪಂ ಮಾಜಿ ಉಪಾಧ್ಯಕ್ಷ ಹರ್ಷಾ ಗುತ್ತೇದಾರ ಅಭಿಪ್ರಾಯಪಟ್ಟಿದ್ದಾರೆ. ಪಂಚರಾಜ್ಯ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ಫಲಿತಾಂಶವು ದೇಶದ ಜನತೆಯ ಗತಿ ತಿಳಿಸುತ್ತಿದೆ. ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಪಕ್ಷದ ನೆಲೆ ಮತ್ತಷ್ಟು ವಿಸ್ತಾರಗೊಂಡಿದೆ. ಈ ಫಲಿತಾಂಶವು ಬಿಜೆಪಿಯ ಶಕ್ತಿಯನ್ನು ಮತ್ತಷ್ಟು ವೃದ್ಧಿಸಿದೆ. ದೇಶದ ಮತ್ತು ಚುನಾವಣೆ ನಡೆದ ರಾಜ್ಯದ ಜನತೆ ಭಾರತೀಯ ಜನತಾ ಪಕ್ಷ ಹಾಗೂ ಎನ್‌ಡಿಎ ಜತೆ ಇದ್ದಾರೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವಕ್ಕೆ ಸಿಕ್ಕ ಮನ್ನಣೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.


ವಾಡಿಯಲ್ಲಿ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

ವಾಡಿಯಲ್ಲಿ ಕಾರ್ಯಕರ್ತರ ಸಂಭ್ರಮ

ವಾಡಿ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡರು ಪಟ್ಟಣದ ಡಾ ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ಡಾ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

ವಾಡಿ ಘಟಕದ ಅಧ್ಯಕ್ಷ ವೀರಣ್ಣ ಯಾರಿ, ಜಿಲ್ಲಾ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಬಸವರಾಜ ಪಂಚಾಳ ಹಾಗೂ ಜಿಲ್ಲಾ ಎಸ್ ಸಿ ಮೂರ್ಚಾ ಉಪಾಧ್ಯಕ್ಷ ರಾಜು ಮುಕ್ಕಣ್ಣ ಅವರು ಮಾತನಾಡಿ, ಹಿಂದಿನ ಸರಕಾರದ ಕಾನೂನು ಅವ್ಯವಸ್ಥೆ, ದೇಶದ್ರೋಹಿ ಹಾಗೂ ಸಮಾಜಘಾತುಕ ಚಟುವಟಿಕೆಗಳಿಂದ ಪಶ್ಚಿಮ ಬಂಗಾಳದ ಜನತೆ ಬಿಚ್ಚಿ ಬಿದ್ದಿತ್ತು. ಭ್ರಷ್ಟಾಚಾರ, ದಬ್ಬಾಳಿಕೆ ಸೇರಿ ಜನ ವಿರೋಧಿ ಆಡಳಿತದಿಂದ ಅಲ್ಲಿಯ ಜನ ಬೇಸತ್ತಿದ್ದರು. ಟಿಎಂಸಿಯನ್ನು ಕಿತ್ತೊಗೆದಿದ್ದರಿಂದ ಈಗ ಅವರಿಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ. 3 ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ದೇಶದ ಜನ ಬಿಜೆಪಿ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಿದರ್ಶನವಾಗಿದೆ ಎಂದರು.

ಯುವ ಮುಖಂಡ ವಿಠಲ ವಾಲ್ಮೀಕ ನಾಯಕ, ಎಸ್ ಸಿ ಮೂರ್ಚಾ ಅಧ್ಯಕ್ಷ ದೌಲತರಾವ ಚಿತ್ತಾಪುರಕರ,ಶಕ್ತಿ ಕೇಂದ್ರ ಪ್ರಧಾನ ಕಾರ್ಯದರ್ಶಿ ರವಿ ನಾಯಕ,ಇಂಗಳಗಿ ಅಧ್ಯಕ್ಷ ಸೋಮು ಚವ್ಹಾಣ, ಮುಖಂಡರಾದ ಭಗವತ ಸುಳೆ,ರಾಮು ರಾಠೋಡ, ಅಶೋಕ ಪವಾರ,ಭೀಮರಾವ ದೊರೆ,ಗಿರಿಮಲ್ಲಪ್ಪ ಕಟ್ಟಿಮನಿ,ಅಶೋಕ ಹರನಾಳ, ಪೊಮಾ ರಾಠೋಡ,ಹರಿ ಗಲಾಂಡೆ,ಶಿವಶಂಕರ ಕಾಶೆಟ್ಟಿ,–ಅಯ್ಯಣ್ಣ ದಂಡೋತಿ,ಮಲ್ಲಿಕಾರ್ಜುನ ಸಾತಖೇಡ,–ರಿಚರ್ಡ್ ಮಾರೆಡ್ಡಿ,ಆನಂದ ಇಂಗಳಗಿ,ಯಂಕಮ್ಮ ಗೌಡಗಾಂವ,ನಿರ್ಮಲ ಇಂಡಿ,ಉಮಾಭಾಯಿ ಗೌಳಿ,ಶಿವಕುಮಾರ ಹೂಗಾರ,ಚಂದ್ರಶೇಖರ ಬೆಣ್ಣೂರ,ಚಂದ್ರು ಹೂಗಾರ ಸೇರಿ ನೂರಾರು ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

ಮಹಾನ್ ಸೂಫಿ ಸಂತ ಬಂದಾ ನವಾಜರ ಕೃತಿಗಳಲ್ಲಿನ ಸೂಫಿಯಾನಾ ವ್ಯಾಖ್ಯಾನ

ಹದೀಸ್ ಕುರಿತು ವಾರ್ಷಿಕ ವಿಚಾರ ಸಂಕಿರಣ

ಕಲಬುರಗಿ : ಉಪಖಂಡದ ಮಹಾನ್ ಸೂಫಿ ಸಂತ Khwaja Banda Nawaz ಅವರ 622ನೇ ವಾರ್ಷಿಕ ಉರ್ಸ್ ಶರೀಫ್ ಅಂಗವಾಗಿ ಮೇ 04 ರಂದು ವಾರ್ಷಿಕ ಸೆಮಿನಾರ್ ಆಯೋಜಿಸಲಾಯಿತು

ಈ ಸೆಮಿನಾರ್‌ಗೆ ದರ್ಗಾ ಹಜ್ರತ್ ಖ್ವಾಜಾ ಬಂದಾ ನವಾಜ್ ಅವರ ಸಜ್ಜಾದಾ ನಶೀನ್ ಆಗಿರುವ ಪವಿತ್ರ ವ್ಯಕ್ತಿತ್ವದ His Holiness Dr. Hafiz Syed Muhammad Ali Al-Hussaini Saheb, Sajjada Nashin of the Dargah Shareef ಅವರು ಅಧ್ಯಕ್ಷತೆ ವಹಿಸಿದರು.

ಸಮಾಅ ಖಾನಾದಲ್ಲಿ ನಡೆದ ಈ ಸೆಮಿನಾರ್‌ನಲ್ಲಿ "ಬಂದಾ ನವಾಜ್ ಅವರ ಕೃತಿಗಳಲ್ಲಿ ಹದೀಸ್‌ಗಳ ಸೂಫಿಯಾನಾ ವ್ಯಾಖ್ಯಾನ" ಎಂಬ ವಿಷಯದ ಮೇಲೆ ಪ್ರೊಫೆಸರ್ ಮುಸ್ತಫಾ ಶರೀಫ್, ಆಲ್ ಇಂಡಿಯಾ ಸಯ್ಯದ್ ಮೊಹಮ್ಮದ್ ಗೀಸು ದರಾಜ್ ರಿಸರ್ಚ್ ಅಕಾಡೆಮಿ, ಕಲಬುರಗಿ ಶರೀಫ್‌ನ ನಿರ್ದೇಶಕರಾಗಿದ್ದು, ಹಾಗೂ ಒಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್‌ನ ಮಾಜಿ ಅರೇಬಿಕ್ ವಿಭಾಗದ ಮುಖ್ಯಸ್ಥರು ತಮ್ಮ ಪ್ರಬಂಧವನ್ನು ಮಂಡಿಸಿದರು.

ಜೊತೆಗೆ "ಹಜ್ರತ್ ಸಯ್ಯದ್ ಶಾ ಅಕ್ಬರ್ ಹುಸೈನೀ ಅವರ 'ಕಿತಾಬ್ ಅಲ್–ಅಕಾಇದ್' ಕೃತಿಯ ಪರಿಚಯ" ಎಂಬ ವಿಷಯದ ಮೇಲೆ ಖ್ವಾಜಾ ಬಂದಾ ನವಾಜ್ ವಿಶ್ವವಿದ್ಯಾಲಯ, ಕಲಬುರಗಿಯಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿರುವ ಪ್ರೊಫೆಸರ್ ಮೊಹಮ್ಮದ್ ಅಬ್ದುಲ್ ಹಮೀದ್ ಅಕ್ಬರ್ ಅವರು ತಮ್ಮ ಪ್ರಬಂಧವನ್ನು ಮಂಡಿಸಿದರು.

E.P.01/2026
IN THE COURT OF THE ADDL.SENIOR CIVIL JUDGE & J.M.F.C.AT: SINDAGI
1) Suresh S/o Bapuji Inamdar ...Decree holder
V/s
1) Ravindra S/o Hanamantraya Inamdar and others .....Judgment Debtors
To,
8. Ambadas alias Ambadasrao S/o Hanamantrao Inamdar alias Chinivar,
Since deceased by L.Rs
8A. Shobha W/o Ambadas @ Ambadasrao Inamdar @ Chinivar, Age: 73 years, Occ: Household work, R/o: Near Malendra Math, Post: Afazalapur, Tq: Afazalapur, Dist: Kalaburagi PIN – 585301 M.No.9945838172
8B. Raghavendra S/o Ambadas @ Ambadasrao Inamdar @Chinivar, Age: 45 years, Occ:Medical shop R/o: Near Malendra Math, Post: Afazalapur, Tq: Afazalapur, Dist: Kalaburagi PIN – 585301 M.No.9945838172
8C Jagannath S/o Ambadas @ Ambadasrao Inamdar @ Chinivar, Age: 41 years, Occ: Working at Renuka Sugar Factory, Hawalaga, Tq: Afazalapur, Dist: Kalaburagi PIN – 585301 M.No.9945838172
8D Vijayalaxmi W/o Umakant Vijayalaxmi D/o Ambadas @ Ambadasrao Inamdar @ Chinivar, Age: 50 years, Occ: Household work, R/o: Nabi Garden, Afazalapur, Tq: Afazalapur, Dist: Kalaburagi PIN – 585301 M.No.9945838172
8E Veena W/o Chandrakant Veena D/o Ambadas @ Ambadasrao Inamdar @ Chinivar, Age: 48 years, Occ: Household work, R/o: At Post: Madan Hipparaga, Tq: Aland, Dist: Kalaburagi, PIN- 585236 M.No.9945838172
....Opponents/Proposed J.Dr Nos.8A to 8E
NOTICE U/O.5 RULE 20 (1A) OF CPC
That you above named J.Dr.No.8A to 8E, have been issued with execution notice in the above mentioned execution through Court bailiff as well as by RPAD, the said notices are not served on you. That, the decree holder have filed execution of judgment and decree passed in O.S.No.17/2016 dated 22.04.2021 passed by Addl.Senior Civil Judge & J.M.F.C Sindgi, R.A.No.68/2022 and R.A. No.69/2022 before the Hon'be Addl.District and Sessions Judge, FSTC – I, Vijayapura, which came to be decreed modifying the Trial Court decree in R.A.No.68/2022, dated 22.03.2024.FDP No.01/2022 and FDP No.08/2021**dated 14.10.2025** passed byAddl. Senior Civil Judge & J.M.F, Sindgi.
Therefore, please take execution notice of the above matter and you are called upon to appear before Hon'ble Court on **dated 15/06/2026 at 10.30 a.m.** duly instructed through a counsel, or on your own.
Failing which the court shall proceed in the above said matter placing you ex-parte.
Place: Sindgi By order of the Court
Date: 02/05/2026 Sd/- Sherastidhar
Pri Senior Civil Judge & J.M.F, Sindgi
Sd/- (S.T.Dharwadkar)
Advocate for D.Hr

ಕಸ್ತೂರಿ ತಪ್ಪದೆ ಓದಿ

CITATION
IN THE COURT OF I ADDL. JUNIOR CIVIL JUDGE, AT KALABURAGI
O.S. No: 493 of 2015
Shaik Iqbal Ahmed S/o Late Shaik Sadar Ali Aged about: 51 years, Occ: Business, R/o H. No: 5-843/A and 5-844/8, Hussaini Alam, Roza-K, Kalaburagi
PLAINTIFF'S
V/S
1) Abdul Rasheed S/o Shaik Awaliya Sab, Since deceased Per LRs
1(a) Noor Ahmed Nawab S/o Late Abdul Rasheed Aged about: 55 years, Occ: Business, R/o Plot No. 3 Firdous Colony, Near Masjid-E-Anwar, Azadpur, Kalaburagi
1(b) Abdul Hameed S/o Late Abdul Rasheed Aged about: 53 years, Oce: Business, R/o Plot No: 3, Firdous Colony, Near Masjid-E-Anwar, Azadpur, Kalaburagi
1(c) Khaja Miyan S/o Late Abdul Rasheed Aged about: 51 years, Oce: Business, R/o Plot No: 5, Firdous Colony, Near Masjid-E-Anwar, Azadpur, Kalaburagi
1(d)Smt. Shahenaz Begum D/o Late Abdul Rasheed Who Abdul Quadeer Aged about: 50 years, Occ: Household, /o Kala Pathar, Hyderabad (T.S)
1(e) Smt. Shakeera Begum D/o Late Abdul Rasheed W/o Shaikh Khaja Miyan Aged about: 48 years, Oce: Household, R/o Natepute. Sholapur (Maharashtra)
2) Shaik Nizamuddin S/o Shaik Ahmed Ali Aged about: 65 years, Occ: Business, R/o H. No: 5-844/A, Hussaini Alam, Roza-K, Kalaburagi
3) Shaik Sadiq Ali s/o Shaik Ahmed Ali Aged about: 70 years, Pensioner, R/o H. No: 5-844, Hussaini Alam, Roza-K, Kalaburagi, now residing at H. No: 5-993/61D, Ring Road, Opp: Moghal Function Hall, Kalaburagi
DEFENDANTS
To, Defendants No: 1 (d) and (e)
1(d) Smt. Shahenaz Begum D/o Abdul Rasheed W/o Abdul Quadeer, Aged about: 50 years, Occ: Housewife, R/o Kalapathar, Hyderabad (Telangana State)
1(e) Smt. Shakeera Begum D/o Abdul Rasheed W/o Shaikh Khaja Miyan Aged about: 48 years, Occ: Housewife, R/o Natepute, Solapur Dist (Maharashtra)
Whereas the suit summons issued to you defendants No. 1(d) and 1(e) in ordinary course, as well as by RPAD are returned unserved for one or the other reason. That you defendants No. 1(d) and 1(e) are intentionally avoiding the service of suit summons.
Therefore by this publication you defendants No. 1(d) and 1(e) are hereby directed to appear in person or through a pleader duly instructed and able to answer the material questions on 23.06.2026 at 11-00 am, on failure the suit will be heard and decided as per law.
Given under my hand and seal of this Court on this the 2nd day of May-2026, at Kalaburagi
BY ORDER OF THE COURT
CHIEF MINISTERIAL OFFICER
PRL. CIVIL JUDGE & JMFC
COURT KALABURAGI

CITATION
IN THE COURT OF THE I ADDL. SENIOR CIVIL JUDGE AT KALABURAGI
OS No. 140/2024
Smt. Gouramma and Ors.
-V/s- Beeranna and Ors.
1) Gouramma D/o Late. Mallappa, W/o Shivalingappa Kanni, Age: 67 years, Occ: Household,
2) Dyavamma, D/o Late. Mallappa, W/o Mallappa, Age: 64 years, Occ: Household.
3) Sharanamma D/o Late. Mallappa, W/o Annappa Gulali Age: 47 years, Occ: Household, All R/o Village Sharan Sirasagi, Tq & Dist. Kalaburagi
PLAINTIFF'S
V/S
1) Beeranna S/o Late. Mallappa, Age: 62 years, Oce: Agriculture
2) Ningappa S/o Late. Mallappa, Age: 42 years, Occ: Agriculture
3) Mallikarjun S/o Siddappa Waggi Age: 42 years, Occ: Coolie
4) Chandru S/o Shivanna Ghar Age: 40 years, Occ: Business
5) Shivalingappa S/o Erappa Panegaon Age: 37 years, Occ: Agriculture
6) Shivasharan S/o Ambanna Subedar, Age: 67 years, Occ: Agriculture
7) Shivasharan S/o Mallappa Waggi
Age: 67 years, Occ: Coolie
8) Mailari S/o Sharanabasappa Waggi, Age: 62 years, Occ: Agriculture
9) Siddappa S/o Sharanappa, Age: 57 years, Oce: Watchman All R/o Village Sharan Sirasagi, Tq & Dist. Kalaburagi
DEFENDANT'S
Proposed Defendant no.14
14) Bhimashankar S/o Sidramappa Age: Major, Occ: Agriculture R/o Village Sharan Sirasagi, Tq. and Dist. Kalaburagi.
SUIT FOR PARTITION. SEPARATE POSSESSION AND INJUNCTION
To.
Proposed Defendant no.14
1) Please take notice that the plaintiffs have filed the above suit for partition, separate possession and Injunction in respect of agriculture lands bearing Sy.no 95/1 measuring 4acre 29 guntas, Sy.no 149/1 measuring 38 guntas and Sy.no 150/2 measuring 2 acre 14 guntas, all three lands situated at village Sharansirasagi Tq. and Dist. Kalaburagi.
2) Whereas, several times notices were issued to you by this Court in ordinary course as well as by RPAD but they have return unserved either not found or on some other grounds, it appears that you are avoiding services of notice of the court.
3) Therefore, you are hereby summoned to appear in this court in person or through pleader duly instructed and able to answer all the material question relating to the above case on 30/6/2026 11:00 AM. Take notice that in default of your appearance on the above-mentioned date the case will be heard and determined in your absence as per law.
Given under my hand and seal of the court on this the 4th day of May 2026 at Kalaburagi.
G.A. DESHPANDE
Advocate
BY ORDER OF THE COURT
CHIEF MINISTERIAL OFFICER
SENIOR CIVIL JUDGE & CJM
KALABURAGI